ಬುಧವಾರ, ಡಿಸೆಂಬರ್ 29, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 360 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ತಂತ್ರಜ್ಞಾನ**
ಕೀಟಗಳನ್ನು ತಿನ್ನುವ ಮೂಲಕ ತೋಟ–ಗದ್ದೆಗಳಲ್ಲಿ ಪರಿಸರ ನಿಯಂತ್ರಣ ವ್ಯವಸ್ಥೆಯ ಪ್ರಮುಖ ಪಾತ್ರಧಾರಿಗಳಾದ ಕಪ್ಪೆಗಳ ಭವಿಷ್ಯ ಇಂದು ಅಪಾಯದಲ್ಲಿದೆ

**ಆಳ-ಅಗಲ**
ಎಎಪಿ, ಟಿಎಂಸಿ ನೆಲೆ ವಿಸ್ತರಣೆ ಕಾಂಗ್ರೆಸ್‌ಗೆ ಬವಣೆ

'ನವ ಭಾರತ ನಿರ್ಮಾಣಕ್ಕೆ ಸಜ್ಜಾಗಿ' 10

**ಜೆಎನ್‌ಯು ಸುತ್ತೋಲೆಗೆ ಆಕ್ಷೇಪ** 10

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 57,897 ▲ | 17,233 ▲ | ₹49,780 (ಬೆಂಗಳೂರು) | ₹64,100 (ಬೆಂಗಳೂರು) | 74.70 ▲ |

## ಶಮಿಗೆ 5 ವಿಕೆಟ್: ಭಾರತಕ್ಕೆ ಮುನ್ನಡೆ



ಸೆಂಚುರಿಯನ್(ಎಎಫ್‌ಪಿ/ಪಿಟಿಐ): ಮೊಹಮ್ಮದ್ ಶಮಿ (44ಕ್ಕೆ5) ಅಮೋಘ ಬೌಲಿಂಗ್ ಬಲದಿಂದ ಭಾರತ ತಂಡವು ದಕ್ಷಿಣ ಆಫ್ರಿಕಾ ಎದುರು ನಡೆಯುತ್ತಿರುವ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ 130 ರನ್‌ಗಳ ಮುನ್ನಡೆ ಸಾಧಿಸಿತು. ಶಮಿ ಟೆಸ್ಟ್ ಕ್ರಿಕೆಟ್‌ನಲ್ಲಿ 200 ವಿಕೆಟ್‌ಗಳನ್ನು ಗಳಿಸಿದ ಸಾಧನೆಯನ್ನೂ ಮಾಡಿದರು.

ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ 105.3 ಓವರ್‌ಗಳಲ್ಲಿ 327 ರನ್ ಗಳಿಸಿತು. ಅದಕ್ಕುತ್ತರ-ವಾಗಿ ದಕ್ಷಿಣ ಆಫ್ರಿಕಾ ತಂಡಕ್ಕೆ 62.3 ಓವರ್‌ಗಳಲ್ಲಿ 197 ರನ್ ಗಳಿಸಲು ಮಾತ್ರ ಸಾಧ್ಯವಾಯಿತು.

ಎರಡನೇ ಇನಿಂಗ್ಸ್ ಆರಂಭಿಸಿದ ಭಾರತವು 6 ಓವರ್‌ಗಳಲ್ಲಿ 1 ವಿಕೆಟ್‌ಗೆ 16 ರನ್ ಗಳಿಸಿತು. 12

ತೆರಿಗೆ ನಿಯಮಗಳ ಪರಿಣಾಮಕಾರಿ ಅನುಷ್ಠಾನದ ಫಲ

# ಗುರಿ ಮೀರಲಿದೆ ತೆರಿಗೆ ಸಂಗ್ರಹ

• ಅನ್ನಪೂರ್ಣಾ ಸಿಂಗ್

ನವದೆಹಲಿ: ಕೇಂದ್ರ ಸರ್ಕಾರದ ತೆರಿಗೆ ಸಂಗ್ರಹವು ಪ್ರಸಕ್ತ ಆರ್ಥಿಕ ವರ್ಷದಲ್ಲಿ ನಿಗದಿತ ಗುರಿಗಿಂತ ಭಾರಿ ಪ್ರಮಾಣದಲ್ಲಿ ಹೆಚ್ಚಳವಾಗುವ ಸಾಧ್ಯತೆ ಇದೆ. ಇದರಿಂದಾಗಿ, ಕೇಂದ್ರದ ವಿತ್ತೀಯ ಕೊರತೆ ಪ್ರಮಾಣವು ಕಡಿಮೆ ಆಗುವ ನಿರೀಕ್ಷೆ ಇದೆ.

ಕೋವಿಡ್ ಅಪ್ಪಳಿಸುವುದಕ್ಕೂ ಮೊದಲಿನ 2019–20ನೇ ಹಣಕಾಸು ವರ್ಷದಲ್ಲಿ ಆಗಿದ್ದಕ್ಕಿಂತ ಹೆಚ್ಚಿನ ಮೊತ್ತದ ತೆರಿಗೆ ಸಂಗ್ರಹವು ಪ್ರಸಕ್ತ ವರ್ಷದಲ್ಲಿ ಆಗಬಹುದು ಎಂದು ಅಂದಾಜು ಮಾಡಲಾಗಿದೆ.

2022ರ ಮಾರ್ಚ್ 31ಕ್ಕೆ ಕೊನೆಗೊಳ್ಳಲಿರುವ ಆರ್ಥಿಕ ವರ್ಷದಲ್ಲಿ ತೆರಿಗೆ ಮೂಲಕ ₹ 22.2 ಲಕ್ಷ ಕೋಟಿ ವರಮಾನ ಸಂಗ್ರಹಿಸುವ ಗುರಿ ಇರಿಸಿ-ಕೊಳ್ಳಲಾಗಿದೆ. ಇದುವರೆಗೆ ನೇರ ಹಾಗೂ ಪರೋಕ್ಷ ತೆರಿಗೆಗಳ ಮೂಲಕ ಸರಿಸುಮಾರು ₹ 19 ಲಕ್ಷ ಕೋಟಿ ತೆರಿಗೆ ಸಂಗ್ರಹ ಆಗಿದೆ ಎಂದು ಅಂಕಿ–ಅಂಶಗಳು ಹೇಳುತ್ತಿವೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ತೆರಿಗೆ ಮೂಲಕ ಇನ್ನಷ್ಟು ವರಮಾನ ಸಂಗ್ರಹಿಸಲು ಇನ್ನೂ ಕಾಲಾವಕಾಶ ಇದೆ.

**ಅಂಕಿ-ಅಂಶಗಳು**

- ₹22.2 ಲಕ್ಷ ಕೋಟಿ — ತೆರಿಗೆ ಮೂಲಕ ವರಮಾನ ಸಂಗ್ರಹ ಗುರಿ
- ₹19 ಲಕ್ಷ ಕೋಟಿ — ಇದುವರೆಗೆ ಆಗಿರುವ ತೆರಿಗೆ ವರಮಾನ ಸಂಗ್ರಹ ಮೊತ್ತ
- 60.8% — ನೇರ ತೆರಿಗೆ ಸಂಗ್ರಹದಲ್ಲಿ 2021–22ರಲ್ಲಿ ಈವರೆಗಿನ ಹೆಚ್ಚಳ
- ₹9.35 ಲಕ್ಷ ಕೋಟಿ — ಜಿಎಸ್‌ಟಿ ವ್ಯವಸ್ಥೆಯ ಅಡಿ ನವೆಂಬರ್ ಅಂತ್ಯದವರೆಗೆ ಆಗಿರುವ ತೆರಿಗೆ ಸಂಗ್ರಹ

ಪ್ರಜಾವಾಣಿ ವಿಶೇಷ

ಹೀಗಾಗಿ, ತೆರಿಗೆ ವರಮಾನವು ನಿಗದಿ ಮಾಡಿಕೊಂಡಿದ್ದ ಗುರಿಗಿಂತಲೂ ದೊಡ್ಡ ಪ್ರಮಾಣದಲ್ಲಿ ಜಾಸ್ತಿ ಇರುವ ಸಾಧ್ಯತೆ ಇದೆ. ಏಪ್ರಿಲ್‌ನಿಂದ ಡಿಸೆಂಬರ್ ಮಧ್ಯ ಭಾಗದವರೆಗೆ ಆಗಿರುವ ನಿವ್ವಳ ನೇರ ತೆರಿಗೆ ಸಂಗ್ರಹವು ₹ 9.45 ಲಕ್ಷ ಕೋಟಿಗಿಂತ ಹೆಚ್ಚು. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 5.88 ಲಕ್ಷ ಕೋಟಿ ನಿವ್ವಳ ನೇರ ತೆರಿಗೆ ಸಂಗ್ರಹ ಆಗಿತ್ತು. ಅಂದರೆ, ಈ ವರ್ಷದಲ್ಲಿ ನಿವ್ವಳ ನೇರ ತೆರಿಗೆ ಸಂಗ್ರಹದಲ್ಲಿ ಇದುವರೆಗೆ ಆಗಿರುವ ಹೆಚ್ಚಳವು ಶೇಕಡ 60.8ರಷ್ಟಾಗಿದೆ.

ಅಷ್ಟೇ ಅಲ್ಲ, ಕೋವಿಡ್‌ಗೂ ಮೊದಲಿನ 2019–20ನೆಯ ಆರ್ಥಿಕ ವರ್ಷದಲ್ಲಿ ಆಗಿದ್ದ ನೇರ ತೆರಿಗೆ ಸಂಗ್ರಹದ ಪ್ರಮಾಣಕ್ಕಿಂತ ಈ ವರ್ಷದಲ್ಲಿ ಶೇಕಡ 40ರಷ್ಟು ಹೆಚ್ಚು ನೇರ ತೆರಿಗೆ ಸಂಗ್ರಹ ಆಗಿದೆ.

ಪ್ರಸಕ್ತ ಹಣಕಾಸು ವರ್ಷದ ಎಂಟು ತಿಂಗಳುಗಳಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆ ಮೂಲಕ ಆಗಿರುವ ವರಮಾನ ಸಂಗ್ರಹವು ₹ 9.35 ಲಕ್ಷ ಕೋಟಿಗಿಂತ ಹೆಚ್ಚು. ಇದು ನವೆಂಬರ್ 30ರವರೆಗಿನ ಮೊತ್ತ. 2021–22ರಲ್ಲಿ ತೆರಿಗೆ ವರಮಾನ ಸಂಗ್ರಹವು ಶೇ 9.5ರಷ್ಟು ಹೆಚ್ಚಳ ಆಗಿ, ₹ 22.2 ಲಕ್ಷ ಕೋಟಿಗೆ ತಲುಪಲಿದೆ ಎಂದು ಕೇಂದ್ರ ಸರ್ಕಾರವು ಅಂದಾಜಿಸಿತ್ತು.

'ತೆರಿಗೆ ಸಂಗ್ರಹ ವ್ಯವಸ್ಥೆಯ-ನ್ನು ಉತ್ತಮವಾಗಿ ಅನುಷ್ಠಾನಕ್ಕೆ ತಂದಿದ್ದು ಮತ್ತು ತೆರಿಗೆ ಪಾವತಿದಾರರು ನಿಯಮಗಳನ್ನು ಪಾಲಿಸಿದ್ದರಿಂದಾಗಿ ಈ ಮಟ್ಟದ ತೆರಿಗೆ ಸಂಗ್ರಹ ಸಾಧ್ಯವಾಗಿದೆ' ಎಂದು ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ತೆರಿಗೆಯೇತರ ವರಮಾನ ಮೂಲವಾದ ಹೂಡಿಕೆ ಹಿಂತೆಗೆತವು ಗುರಿಯನ್ನು ತಲುಪದೆ ಇದ್ದರೂ, ಕೇಂದ್ರದ ವಿತ್ತೀಯ ಕೊರತೆಯು ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಶೇಕಡ 6.5ಕ್ಕೆ ಮಿತಿಯಾಗಬಹುದು ಎಂದು ಅವರು ಅಂದಾಜಿಸಿದರು. ಈ ಮೊದಲು ವಿತ್ತೀಯ ಕೊರತೆಯು ಶೇ 6.8ರಷ್ಟು ಇರಲಿದೆ ಎಂದು ಅಂದಾಜು ಮಾಡಲಾಗಿತ್ತು.

**ಹೆಚ್ಚಳದ ಸೂಚನೆ ನೀಡಿದ್ದ ಬಜಾಜ್**

'ಪ್ರಸಕ್ತ ಹಣಕಾಸು ವರ್ಷದಲ್ಲಿ ಮಾಸಿಕ ಸರಾಸರಿ ಜಿಎಸ್‌ಟಿ ಸಂಗ್ರಹವು ₹ 1.15 ಲಕ್ಷ ಕೋಟಿ ಇರಲಿದೆ ಎಂದು ಅಂದಾಜು ಮಾಡಲಾಗಿದೆ. ಹೀಗಾಗಿ, 2021–22ರಲ್ಲಿ ಕೇಂದ್ರ ಸರ್ಕಾರದ ತೆರಿಗೆ ಸಂಗ್ರಹ ಪ್ರಮಾಣವು ಬಜೆಟ್ ಅಂದಾಜನ್ನು ಮೀರಲಿದೆ' ಎಂದು ಕೇಂದ್ರ ರೆವಿನ್ಯು ಕಾರ್ಯದರ್ಶಿ ತರುಣ್ ಬಜಾಜ್ ಅವರು ಕೂಡ ನವೆಂಬರ್ ತಿಂಗಳಿನಲ್ಲಿ ಹೇಳಿದ್ದರು.

## 11 ಸಂಸದರಿಂದ ಆದರ್ಶ ಗ್ರಾಮಕ್ಕೆ ಎಳ್ಳುನೀರು

ಚಿಕ್ಕಬಳ್ಳಾಪುರ: ಕಳೆದ ಮೂರು ವರ್ಷಗಳಿಂದ ರಾಜ್ಯದ 11 ಸಂಸದರು 'ಸಂಸದರ ಆದರ್ಶ ಗ್ರಾಮ' ಯೋಜನೆಗೆ ಎಳ್ಳುನೀರು ಬಿಟ್ಟಿದ್ದಾರೆ! 2019–20ರಿಂದ ಇಲ್ಲಿಯವರೆಗೆ ಈ ಯೋಜನೆಯಡಿ ಗ್ರಾಮಗಳನ್ನು ಆಯ್ಕೆಯೇ ಮಾಡಿಲ್ಲ. 4

## ಮತ್ತೆರಡು ಲಸಿಕೆಗಳ ಬಳಕೆಗೆ ಅನುಮತಿ

ನವದೆಹಲಿ: ಕೋವಿಡ್ ತಡೆಯ 'ಕೋವೊವ್ಯಾಕ್ಸ್' ಮತ್ತು 'ಕಾರ್ಬಿವ್ಯಾಕ್ಸ್' ಲಸಿಕೆಗಳ ತುರ್ತು ಬಳಕೆಗೆ ಭಾರತೀಯ ಔಷಧ ನಿಯಂತ್ರಕರು ಮಂಗಳವಾರ ಅನುಮೋದನೆ ನೀಡಿದ್ದಾರೆ. ಜೊತೆಗೆ 'ಮೊಲ್ನುಪಿರವಿರ್' ಔಷಧದ ತುರ್ತು ಬಳಕೆಗೂ ಅನುಮತಿ ನೀಡಲಾಗಿದೆ. 6

## ಕಟ್ಟಡ ಮಾಲೀಕನೇ ಮಾನವ ಗುರಾಣಿ!

ಶ್ರೀನಗರ: ಇಲ್ಲಿನ ಹೈದರ್‌ಪೋರಾದಲ್ಲಿ ನ.15ರಂದು ನಡೆದ ಎನ್‌ಕೌಂಟರ್‌ನಲ್ಲಿ ನಾಲ್ವರು ಹತ್ಯೆಯಾದ ಪ್ರಕರಣ ಕುರಿತು ತನಿಖೆಯನ್ನು ಪೂರ್ಣಗೊ-ಳಿಸಿರುವ ಪೊಲೀಸ್ ವಿಶೇಷ ತನಿಖಾ ತಂಡವು(ಎಸ್‌ಐಟಿ), ಹತ್ಯೆಯಾದ ಕಟ್ಟಡ ಮಾಲೀಕನನ್ನು ಮಾನವ ಗುರಾಣಿಯಾಗಿ ವಿದೇಶಿ ಉಗ್ರ ಬಳಸಿಕೊಂಡಿದ್ದ ಎಂದು ತಿಳಿಸಿದೆ. 10

**ಒಳ ಪುಟ**

'ಆರ್‌ಎಸ್‌ಎಸ್ ಮುಖಂಡರ ಹೆಸರು ಹೇಳುವಂತೆ ಬೆದರಿಕೆ' 10

**ಚಿನಕುರಳಿ**

ಪ್ರಕಾಶ್ ಶೆಟ್ಟಿ

ಕೆಐಎಎಲ್‌ನಿಂದ ವಿಮಾನಗಳಲ್ಲಿ ರವಾನೆ • 3,293 ಕೆ.ಜಿ. ರಕ್ತಚಂದನ ವಶ

# ಕಳ್ಳಸಾಗಣೆಗೆ ಕಸ್ಟಮ್ಸ್ ಅಧಿಕಾರಿಗಳ ಸಹಕಾರ!

ಪ್ರಜಾವಾಣಿ ವಾರ್ತೆ

–ಸಂಗ್ರಹ ಚಿತ್ರ

ಬೆಂಗಳೂರು: ಅಳಿವಿನಂಚಿನಲ್ಲಿ-ರುವ ರಕ್ತಚಂದನದ ದಿಮ್ಮಿಗಳನ್ನು ಕಸ್ಟಮ್ಸ್ ಅಧಿಕಾರಿಗಳ ನೆರವಿನಲ್ಲೇ ದೇವನಹಳ್ಳಿಯ ಕೆಂಪೇಗೌಡ ಅಂತ-ರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ವಿದೇಶಗಳಿಗೆ ಕಳ್ಳಸಾಗಣೆ ಮಾಡುತ್ತಿರುವುದು ಪತ್ತೆಯಾಗಿದೆ.

ಈ ಸಂಬಂಧ ಕಸ್ಟಮ್ಸ್‌ನ ಇಬ್ಬರು ಸೂಪರಿಂಟೆಂಡ್‌ಗಳು, ಒಬ್ಬ ಇನ್‌ಸ್ಪೆಕ್ಟರ್ ಮತ್ತು ಕಳ್ಳಸಾಗಣೆ ಜಾಲದ ಇಬ್ಬರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿರುವ ಸಿಬಿಐ, ತನಿಖೆ ಆರಂಭಿಸಿದೆ. ಈ ವರ್ಷದ ಜೂನ್ ಮತ್ತು ಜುಲೈ ತಿಂಗಳಿನಲ್ಲಿ ಏಳು ಬಾರಿ ಸರಕು ಸಾಗಣೆ ವಿಮಾನಗಳ ಮೂಲಕ ಬೃಹತ್ ಪ್ರಮಾಣದ ರಕ್ತಚಂದನದ ದಿಮ್ಮಿಗಳನ್ನು ಕಳ್ಳಸಾಗಣೆ ಮಾಡಿರುವುದು ಪ್ರಾಥಮಿಕ ತನಿಖೆಯಲ್ಲಿ ದೃಢಪಟ್ಟಿದೆ.

ಕಂದಾಯ ಗುಪ್ತಚರ ನಿರ್ದೇಶ-ನಾಲಯದ ಅಧಿಕಾರಿಗಳು ನೀಡಿದ್ದ ದೂರನ್ನು ಆಧರಿಸಿ ಸಿಬಿಐನ ಭ್ರಷ್ಟಾಚಾರ ನಿಗ್ರಹ ದಳದ ಬೆಂಗಳೂರು ಘಟಕ ಪ್ರಾಥಮಿಕ ತನಿಖೆ ನಡೆಸಿತ್ತು. ಈ ಸಂದರ್ಭದಲ್ಲಿ ಲಭಿಸಿರುವ ಸಾಕ್ಷ್ಯಗಳ ಆಧಾರದಲ್ಲಿ ಡಿಸೆಂಬರ್ 22ರಂದು ಎಫ್‌ಐಆರ್ ದಾಖಲು ಮಾಡಲಾಗಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಏರ್ ಕಾರ್ಗೋ ಕಾಂಪ್ಲೆಕ್ಸ್‌ನಲ್ಲಿ ಕರ್ತವ್ಯದಲ್ಲಿದ್ದ ಕಸ್ಟಮ್ಸ್ ಸೂಪರಿಂಟೆಂಡೆಂಟ್‌ಗಳಾದ ಎಂ.ಸಿ. ವೆಂಕಟೇಶ್, ಅನಂತ ಪದ್ಮನಾಭ ರಾವ್, ಇನ್‌ಸ್ಪೆಕ್ಟರ್ ರವಿಂದರ್ ಪವಾರ್, ಕಳ್ಳ-ಸಾಗಣೆದಾರರಾದ ಸತೀಶ್ ಕುಮಾರ್ ಟಿ. ಮತ್ತು ನಝೀಬ್ ಜೆಡ್ ಎಂಬುವವರ ವಿರುದ್ಧ ತನಿಖೆ ಆರಂಭಿಸಲಾಗಿದೆ.

ಕಂದಾಯ ಗುಪ್ತಚರ ನಿರ್ದೇ-ಶನಾಲಯದ ಅಧಿಕಾರಿಗಳು ಜುಲೈ 29ರಂದು ಕೆಐಎಎಲ್ ಏರ್ ಕಾರ್ಗೋ ಕಾಂಪ್ಲೆಕ್ಸ್ ಮೇಲೆ ದಾಳಿಮಾಡಿ, 3,293 ಕೆ.ಜಿ. ತೂಕದ ರಕ್ತ ಚಂದನದ ದಿಮ್ಮಿಗಳನ್ನು ವಶಪಡಿಸಿ ಕೊಂಡಿದ್ದರು. ಅಂತರರಾಷ್ಟ್ರೀಯ ವ್ಯಾಪಾರ ಮಹಾನಿರ್ದೇಶನಾಲಯದ (ಡಿಜಿಎಫ್‌ಟಿ) ಪರವಾನಗಿ ಮತ್ತು ಸೂಕ್ತ ದಾಖಲೆಗಳಿಲ್ಲದೆ ಈ ದಿಮ್ಮಿಗಳನ್ನು ಕಳ್ಳಸಾಗಣೆ ಮಾಡುತ್ತಿರುವುದು ಪತ್ತೆಯಾಗಿತ್ತು.

ಸತೀಶ್ ಕುಮಾರ್ ಮತ್ತು ನಝೀಬ್ ಸೇರಿಕೊಂಡು 'ಕೈಗಾರಿಕೆಗಳಲ್ಲಿ ಬಳಸುವ ಕೊಳವೆ' ಎಂಬುದಾಗಿ ದಾಖಲೆ ಸೃಷ್ಟಿಸಿ ರಕ್ತಚಂದನದ ದಿಮ್ಮಿಗಳನ್ನು ವಿಮಾನ ನಿಲ್ದಾಣಕ್ಕೆ ತರುತ್ತಿದ್ದರು. ಕಸ್ಟಮ್ಸ್ ಅಧಿಕಾರಿಗಳು ಅದನ್ನು ದೃಢೀಕರಿಸಿ ಸಾಗಣೆಗೆ ಅನುಮತಿ ನೀಡುತ್ತಿದ್ದರು. ಜೂನ್ 3ರಿಂದ ಜುಲೈ 26ರ ಅವಧಿಯಲ್ಲಿ ಏಳು ಬಾರಿ ಈ ರೀತಿ ರಕ್ತಚಂದನವನ್ನು ರಫ್ತು ಮಾಡಲಾಗಿದೆ ಎಂಬ ಉಲ್ಲೇಖ ಎಫ್‌ಐಆರ್‌ನಲ್ಲಿದೆ.

'ದಾಖಲೆಗಳ ದೃಢೀಕರಣ, ರಕ್ತಚಂದನದ ಕಳ್ಳಸಾಗಣೆಗೆ ಅನುಮತಿ ನೀಡಲು ಕೆಲವರು ವೆಂಕಟೇಶ್, ಅನಂತ ಪದ್ಮನಾಭ ರಾವ್ ಮತ್ತು ರವಿಂದರ್ ಪವಾರ್ ಅವರಿಗೆ ದೊಡ್ಡ ಮೊತ್ತದ ಲಂಚ ನೀಡುತ್ತಿದ್ದರು. ಜೂನ್ ಮತ್ತು ಜುಲೈ ತಿಂಗಳಿನಲ್ಲಿ ಈ ಮೂವರಿಗೆ ₹ 15 ಲಕ್ಷಕ್ಕೂ ಹೆಚ್ಚು ಲಂಚ ನೀಡಿರುವುದಕ್ಕೆ ಪ್ರಾಥಮಿಕ ತನಿಖೆಯಲ್ಲಿ ಸಾಕ್ಷ್ಯಗಳು ಲಭಿಸಿವೆ' ಎಂದು ಸಿಬಿಐ ತಿಳಿಸಿದೆ.

ಹಲವು ಕಂಪನಿಗಳ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ರಕ್ತಚಂದನ ಕಳ್ಳಸಾಗಣೆ ಮಾಡಲಾಗಿದೆ. ಸತೀಶ್ ಕುಮಾರ್ ಮತ್ತು ನಝೀಬ್ ಸಾಗಣೆ ಮಾಡಿದ ಸರಕುಗಳನ್ನು ತೆರೆದ ತಪಾಸಣೆ ಅಥವಾ ಸ್ಕ್ಯಾನಿಂಗ್‌ಗೆ ಒಳಪಡಿಸದೇ ಕಸ್ಟಮ್ಸ್ ಅಧಿಕಾರಿಗಳು ಕಳ್ಳಸಾಗಣೆಗೆ ನೆರವು ನೀಡಿದ್ದಾರೆ ಎಂಬ ಆರೋಪ ಎಫ್‌ಐಆರ್‌ನಲ್ಲಿದೆ.


**ಪುಣ್ಯಸ್ಮರಣೆ**



**ಶ್ರೀ ಆರ್.ಎಲ್.ಜಾಲಪ್ಪ** ರವರು

19.10.1925 - 17.12.2021

**ಜಾಲಪ್ಪನವರು ಬದುಕಿದ ರೀತಿಯೇ ನಮಗೆ ದಾರಿದೀಪ**

ರಾಜ್ಯ ರಾಜಕಾರಣದಲ್ಲಿ ಪ್ರಬಲ ಪ್ರಭಾವದಿಂದ ಹಿಂದುಳಿದ, ದಲಿತರ, ಅಲ್ಪಸಂಖ್ಯಾತರ ಹಾಗೂ ದುರ್ಬಲ ವರ್ಗದವರ ಆಶಾಂಕುರ ಎನಿಸಿಕೊಂಡು, ಐದು ದಶಕಗಳ ಕಾಲ ಅವರ ಕ್ಷೇಮಕ್ಕಾಗಿ ಹೋರಾಡಿದ ಶ್ರೀ ಆರ್.ಎಲ್.ಜಾಲಪ್ಪನವರು ಮಾಜಿ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿ, ಶ್ರೀ ದೇವರಾಜ ಅರಸು, ಶ್ರೀ ಅಜೀಜ್ ಸೇಟ್, ಶ್ರೀ ಎಚ್.ಎಂ.ಚನ್ನಬಸಪ್ಪ, ಶ್ರೀ ಬಸವಲಿಂಗಪ್ಪ, ಶ್ರೀ ಎನ್.ರಾಚಯ್ಯ, ಶ್ರೀ ಜಿ.ರಾಮೇಗೌಡ, ಜೊತೆ ಸೇರಿ ಕೆಲಸ ಮಾಡಿದ ಅತಿ ಪ್ರಮುಖರಲ್ಲಿ ಜಾಲಪ್ಪನವರು ಒಬ್ಬರು. ಶ್ರೀ ಜಾಲಪ್ಪನವರ ಮಾರ್ಗದರ್ಶನದಲ್ಲಿ ನಾವೆಲ್ಲಾ ಮುಂದುವರೆಯೋಣ. ದುರ್ಬಲ, ಹಿಂದುಳಿದ ವರ್ಗಗಳ ಕ್ಷೇಮಾಭಿವೃದ್ಧಿಗೆ ಹೋರಾಡುವ ಸಂಕಲ್ಪವೇ ನಾವು ಅವರಿಗೆ ಸಲ್ಲಿಸುವ ನಿಜವಾದ ಕೃತಜ್ಞತೆ. ಶ್ರೀ ಜಾಲಪ್ಪನವರ ಮಾರ್ಗದಲ್ಲಿಯೇ ಹಿಂದುಳಿದ ಸಮುದಾಯಗಳ ಜನಪ್ರಿಯ ನಾಯಕ ಶ್ರೀ ಸಿದ್ದರಾಮಯ್ಯನವರು ಸಹ ಹೆಜ್ಜೆ ಹಾಕುತ್ತಿದ್ದಾರೆ. ಜನರ ಕಷ್ಟಕ್ಕೆ ಸ್ಪಂದಿಸುವ ನಾಯಕರೊಂದಿಗೆ ನಾವೂ ಜೊತೆಗೂಡಿ ಮುನ್ನಡೆಯೋಣ, ಸಮಾಜವನ್ನೂ ಮುನ್ನಡೆಸೋಣ, ಎಂದು ನಾವು ಇಂದು ಪ್ರತಿಜ್ಞೆ ಮಾಡೋಣ.

ಶ್ರೀ ಆರ್.ಎಲ್.ಜಾಲಪ್ಪನವರ ಪುಣ್ಯತಿಥಿ ದಿನಾಂಕ: : 29.12.2021

ಇಂತಿ

**ಶ್ರೀ ಎಂ.ಆರ್.ಸೀತಾರಾಮ್**
ಮಾಜಿ ಸಚಿವರು, ಕರ್ನಾಟಕ ಸರ್ಕಾರ

**ಶ್ರೀ ರಕ್ಷಾ ರಾಮಯ್ಯ**
ಅಧ್ಯಕ್ಷರು, ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್


## ದಣಿವರಿಯದೇ ಕೆಲಸ ಮಾಡುವ ಶಕ್ತಿ ಇದೆ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ವರ್ಷದ 365 ದಿನಗಳೂ ದಣಿವರಿಯದೇ ಕೆಲಸ ಮಾಡುವ ಶಕ್ತಿ ಮತ್ತು ಸ್ಫೂರ್ತಿ ನನ್ನಲ್ಲಿದೆ. ದಿನದ 15 ಗಂಟೆ ಕೆಲಸ ಮಾಡುವ ಸಂಕಲ್ಪ ಮಾಡಿದ್ದೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಬೊಮ್ಮಾಯಿ ಅವರು 20 ದಿನ ವಿಶ್ರಾಂತಿ ಪಡೆಯಬೇಕು' ಎಂಬ ಬಿಜೆಪಿ ಶಾಸಕ ಎಂ.ಪಿ. ಕುಮಾರಸ್ವಾಮಿ ಅವರ ಸಲಹೆಗೆ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಪ್ರತಿಕ್ರಿಯಿಸಿದ ಅವರು, 'ಅವಿಶ್ರಾಂತವಾಗಿ ಕಾರ್ಯನಿರ್ವಹಿಸುವ ಶಕ್ತಿ ನನ್ನಲ್ಲಿದೆ' ಎಂದರು.

'2023ರ ಚುನಾವಣೆಯಲ್ಲಿ ಮತ್ತೊಮ್ಮೆ ಬಿಜೆಪಿಯನ್ನು ಅಧಿಕಾರಕ್ಕೆ ತರುವುದು ನನ್ನ ಗುರಿ. ಈ ನಿಟ್ಟಿನಲ್ಲಿ ತಯಾರಿ ನಡೆಸುತ್ತೇವೆ. ಬಿಜೆಪಿ ರಾಜ್ಯ ಕಾರ್ಯಕಾರಿಣಿಯಲ್ಲಿ ಪಕ್ಷದ ಸಂಘಟನೆ ಹಾಗೂ ರಾಜಕೀಯ ನಡೆಗಳ ಬಗ್ಗೆ ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾ-ಗುವುದು' ಎಂದರು.

5ನೇ ಪುಟ ನೋಡಿ

**'ಮುಖ್ಯಮಂತ್ರಿ ವಿಶ್ರಾಂತಿ ಪಡೆಯಲಿ'**

ಬೆಂಗಳೂರು: ಕಾಲು ನೋವಿನಿಂದ ಬಳಲುತ್ತಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 20 ದಿನಗಳ ಕಾಲ ವಿಶ್ರಾಂತಿ ಪಡೆದು, ಮನೆಯಿಂದಲೇ ಕಾರ್ಯನಿರ್ವಹಿಸಬೇಕು ಎಂದು ಮೂಡಿಗೆರೆ ಕ್ಷೇತ್ರದ ಬಿಜೆಪಿ ಶಾಸಕ ಎಂ.ಪಿ. ಕುಮಾರಸ್ವಾಮಿ ಸಲಹೆ ನೀಡಿದ್ದಾರೆ.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಮುಖ್ಯಮಂತ್ರಿಯವರು ಹೊರಗಡೆ ಓಡಾಡಬಾರದು. ಈ ಅವಧಿಯಲ್ಲಿ ಸಾರ್ವಜನಿಕರು ಮತ್ತು ಅಧಿಕಾರಿಗಳು ಮುಖ್ಯಮಂತ್ರಿಯವ-ರನ್ನು ಕಾರ್ಯಕ್ರಮಗಳಿಗೆ ಆಹ್ವಾನಿಸ-ಬಾರದು. ಇದರಿಂದ ಅವರ ಕಾಲು ನೋವು ಗುಣವಾಗುತ್ತದೆ' ಎಂದಿದ್ದಾರೆ.

5ನೇ ಪುಟ ನೋಡಿ

## ಹೋಟೆಲ್ ವಾಸ್ತವ್ಯಕ್ಕೆ ಶೇ 50ರ ಮಿತಿ ಇಲ್ಲ: ಪರಿಷ್ಕೃತ ಆದೇಶ

ಬೆಂಗಳೂರು: ಹೋಟೆಲ್ ಕೊಠಡಿಗಳಲ್ಲಿ ವಾಸ್ತವ್ಯ ಮತ್ತು ಆತಿಥ್ಯಕ್ಕೆ ಶೇ 50ರ ನಿರ್ಬಂಧ ಅನ್ವಯಿಸುವುದಿಲ್ಲ ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ತಿಳಿಸಿದ್ದಾರೆ.

ಶುಕ್ರವಾರದಿಂದ ಜನವರಿ 2ರವರೆಗೆ ಹೋಟೆಲ್, ರೆಸ್ಟೋರೆಂಟ್, ಪಬ್ ಮತ್ತು ಕ್ಲಬ್‌ಗಳಲ್ಲಿ ಸಾಮರ್ಥ್ಯದ ಶೇಕಡ 50ರಷ್ಟು ಜನರಿಗೆ ಮಾತ್ರ ಅವಕಾಶ ಕಲ್ಪಿಸಬೇಕೆಂಬ ನಿರ್ಬಂಧ ಇದೆ.

ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಭಾನುವಾರ ಹೊರಡಿಸಿರುವ ಆದೇಶದ ಕುರಿತು ಸ್ಪಷ್ಟನೆ ನೀಡಿ ಮಂಗಳವಾರ ಪರಿಷ್ಕೃತ ಆದೇಶವನ್ನು ಸರ್ಕಾರ ಹೊರಡಿಸಿದೆ.

'ಶೇ 50ರ ಮಿತಿಯು ಹೋಟೆಲ್‌ಗಳಲ್ಲಿ ಗ್ರಾಹಕರಿಗೆ ಆಹಾರ, ಪಾನೀಯ ಪೂರೈಸುವ ಸ್ಥಳಗಳಿಗೆ ಮಾತ್ರ ಅನ್ವಯ. ಕೊಠಡಿಗಳಲ್ಲಿ ವಾಸ್ತವ್ಯಕ್ಕೆ ಯಾವುದೇ ನಿರ್ಬಂಧ ಇರುವುದಿಲ್ಲ', ಎಂದು ಹೇಳಿದ್ದಾರೆ.


**ಡಾ|| ಎಂ.ಎಸ್. ರಾಮಯ್ಯನವರ ಇಪ್ಪತ್ನಾಲ್ಕನೆಯ ಪುಣ್ಯತಿಥಿ**

ನಮ್ಮ ಪೂಜ್ಯ ತಂದೆಯವರಾದ

**ಡಾ|| ಎಂ.ಎಸ್. ರಾಮಯ್ಯ**

ರವರ ಪುಣ್ಯತಿಥಿಯನ್ನು

ಇದೇ ಶ್ರೀ ಪ್ಲವನಾಮ ಸಂವತ್ಸರದ ಮಾರ್ಗಶಿರ ಬಹುಳ ಏಕಾದಶಿ ದಿನಾಂಕ: 29–12–2021 ನೇ ಬುಧವಾರ, ನಮ್ಮ ಸ್ವಗೃಹವಾದ "ಗೋಕುಲದಲ್ಲಿ" ಏರ್ಪಡಿಸಲಾಗಿದೆ. ತಾವುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ದಿವಂಗತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಡಾ|| ಎಂ.ಆರ್. ಜಯರಾಮ್**
ಮತ್ತು ಸಹೋದರರು ಹಾಗೂ ಅವರ ಕುಟುಂಬ ವರ್ಗದವರು

ಕಾರ್ಯಕ್ರಮ : ಪುಣ್ಯಾಹ ವಾಚನ: ಬೆಳಿಗ್ಗೆ 11.30 ರಿಂದ । ಭೋಜನ : ಮಧ್ಯಾಹ್ನ 12.30 ಗಂಟೆಗೆ

ಬುಧವಾರದ ಉಷ್ಣಾಂಶ 28° ಗರಿಷ್ಠ 16° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಮಂಜು ಮುಸುಕಿದ ವಾತಾವರಣ. ಬಳಿಕ ಬಿಸಿಲು ಇರಲಿದೆ

| ಹವಾಮಾನ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|
| | 29° 17° | 29° 17° | 29° 16° |

ಸೂರ್ಯೋದಯ: 6:40 ಸೂರ್ಯಾಸ್ತ : 6:01 ಚಂದ್ರೋದಯ: ರಾ. 12:57 ಚಂದ್ರಾಸ್ತ: ಮ. 1:12

ಮಂಗಳವಾರದ ಹವಾಮಾನ : ಗರಿಷ್ಠ 27° ಕನಿಷ್ಠ 16°



ಹೊರಗೆ ಹೋಗುವಾಗ ಮುಖಗವಸು ಧರಿಸಿ


**Government of Madhya Pradesh**
**Office of the Engineer-in-Chief Water Resources Department,**
Jal Sansadhan Bhawan, Tulsi Nagar, Bhopal (MP.)
Email Id: ceproc.encwrd.bpl@nic.in
Tel: 0755-2767635 Fax: 0755-2552406

**N.I.T. No. 853/2021-22/E-in-C/e-tendering Bhopal,** **Dated 23.12.2021**

Bids for following works are invited on website https://www.mptenders.gov.in Last Date of purchase/download of Bid Document and submission of bid is 13.01.2022, 17:30 hrs. Any amendment/modification can be seen only on the website. Detailed N.I.T. and other details can be viewed on above mentioned website.

| Sl. No. | Tender No. | Work | District | Amount (Lakhs) |
|---|---|---|---|---|
| 1 | 2021_WRD_174474 | Construction of Connecting WBM road from village New Pureniya to Budera. | Tikamgarh | 49.28 |
| 2 | 2021_WRD_174476 | Repair and Construction of lining work at 1L To 4RC and 6L To 16L minor and its sub minors damaged due to heavy rain fall with Management, Operation and maintenance (MOM for 2 Years) | Morena | 962.30 |
| 3 | 2021_WRD_174482 | Rehabilitation and Resettlement work of village Kuwarpur affected under submergence of Majhgaon Irrigation Project. | Panna | 989.52 |
| 4 | 2021_WRD_174484 | Repair and Maintenance work of Kuwari Aqueduct damaged due to heavy rain fall RD 17.115 KM of LMC with Management, Operation and maintenance (MOM for 2 Years) | Morena | 468.11 |
| 5 | 2021_WRD_174487 | Annual Repair and Maintenance work of Lower Main Canal From KM 0 To 50 damaged due to heavy rain fall with management, Operation and maintenance (MOM for 2 Years) | Morena | 27.87 |
| 6 | 2021_WRD_174489 | Repair work of Jaunsil Stop Dam and Salai Stop Dam. | Morena | 25.67 |
| 7 | 2021_WRD_174490 | Repair work of (Under SDMF) Raising height, width and Pitching work of Akodiya Tank. | Shajapur | 82.72 |
| 8 | 2021_WRD_174491 | Repair work of damaged portion of Barhana Nalla escape channel at (Ambah Branch Canal at R.D. 0 to 4600 m. due to heavy rains and flood including maintainance (MOM) for 2 Years. | Morena | 76.19 |
| 9 | 2021_WRD_174668 | Construction of flood protection wall & wire fencing at left side of D/s of kundalia dam at distance of 97 m. from the wing wall of spillway. | Rajgarh | 162.07 |
| 10 | 2021_WRD_174669 | Repair of breached key wall of Rampur Ghat Stop dam damaged due to heavy rain fall with Management, Operation and maintenance. (MOM) for 2 Years. | Morena | 191.44 |
| 11 | 2021_WRD_174671 | Repair of protection work on Kuno river right bank, repair and renovation of Kuno Syphon pipes and left side repair of approach damaged road due to heavy rain fall with management, Operation and maintenance. (MOM for 2 Years) | Morena | 416.03 |
| 12 | 2021_WRD_174674 | Repair and Renovation of Quarters and construction of boundary wall around Chambal Colony Birpur. | Morena | 46.18 |

G-20716/21 **Chief Engineer (Procurement)**

पहला डोज़ रक्षा - दूसरा डोज़ सुरक्षा ।


## ವೋಲ್ವೊ ಬಸ್ ಪಾಸ್ ದರ ಕಡಿತ

ಬೆಂಗಳೂರು: ಬಿಎಂಟಿಸಿ ವೋಲ್ವೊ ಬಸ್‌ಗಳಲ್ಲಿ ಪ್ರಯಾಣಿಸಲು ಉತ್ತೇಜನ ನೀಡಲು ವಜ್ರ ಬಸ್‌ಗಳ ಮಾಸಿಕ ಪಾಸ್ ದರವನ್ನು ₹2 ಸಾವಿರದಿಂದ ₹1,500ಕ್ಕೆ ಬಿಎಂಟಿಸಿ ಇಳಿಕೆ ಮಾಡಿದೆ.

ಮಾಸಿಕ ಪಾಸ್‌ಗಳನ್ನು ನಿರ್ವಾಹಕರು ಮತ್ತು ಬಿಎಂಟಿಸಿ ಪ್ರಮುಖ ನಿಲ್ದಾಣಗಳಲ್ಲಿ ಡಿ.28ರಿಂದಲೇ ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ಬಿಎಂಟಿಸಿ ತಿಳಿಸಿದೆ.


**ಸಾರ್ವಜನಿಕ ಎಚ್ಚರಿಕೆ ಸೂಚನೆ**

ಶ್ರೀಮತಿ. ರಾಜೇಶ್ವರಿ ಕೋಂ. ವಸಂತ ಸಾಲಗಟ್ಟಿ ಆದ ನಾನು ಈ ಕೆಳಗಿನಂತೆ ಸಾಮಾನ್ಯ ಸಾರ್ವಜನಿಕರಿಗೆ ಎಚ್ಚರಿಕೆ ಸೂಚನೆ ನೀಡಬಯಸುತ್ತಿದ್ದೇನೆ;

ಅದಾಗ್ಯೂ, ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಮಾಚೋಹಳ್ಳಿ ಗ್ರಾಮದ ಸರ್ವೆ ನಂ. 161 ರಲ್ಲಿರುವ ಹೌಸ್ ಲಿಸ್ಟ್ ನಂ. 170 ಹೊಂದಿರುವ ಸ್ಥಿರಾಸ್ತಿಗೆ ನಾನು ಸಂಪೂರ್ಣ ಮಾಲಿಕಳಾದ್ದರಿಂದ, ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರದಲ್ಲಿ ಪಾಲ್ಗೊಳ್ಳಕೂಡದು ಎಂದು (ಸಾಲ, ಚಾರ್ಜ್, ಉಡುಗೊರೆ ಇತ್ಯಾದಿ) ಈ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ಜಾಗ್ರತೆ ತಿಳಿಸಬಯಸುತ್ತೇನೆ. ಅದಾಗ್ಯೂ ಯಾರಾದರೂ ಸದರಿ ಸ್ವತ್ತಿನೊಂದಿಗೆ ವ್ಯವಹಾರಕ್ಕೆ ಭಾಗಿಯಾದಲ್ಲಿ, ಅಂತಹುದು ನನ್ನ ಹಕ್ಕು, ಬಾಧ್ಯತೆ ಮತ್ತು ಹಿತಾಸಕ್ತಿಗಳ ಮೇಲೆ ಯಾವುದೇ ರೀತಿಯ ನಿರ್ಬಂಧವನ್ನು ರೂಪಿಸುವುದಿಲ್ಲ ಹಾಗೂ ಅಂತಹ ವ್ಯವಹಾರದಾರರು ಕಾನೂನು ರಿತ್ಯ ಕ್ರಮಗಳನ್ನು ಎದುರಿಸಬೇಕಾಗುತ್ತದೆ.

ಸಹಿ/– ವಿಶ್ವನಾಥ ಎಸ್.ಬಿಚ್ಚಗಟ್ಟಿ
ವಕೀಲರು & ಅಸೋಸಿಯೇಟ್
KAR 3034/07
Off:F3:313 Wali Nirvana Trade Winds
Hosur, Hubballi, Mob: 9108361481

**ಅಬಕಾರಿ ಉಪ ಆಯುಕ್ತರ ಕಛೇರಿ**
ರಾಮನಗರ ಜಿಲ್ಲೆ, ರಾಮನಗರ
ದೂರವಾಣಿ ಸಂಖ್ಯೆ: 27271055, 27271059 E-mail Id: dceramanagara@gmail.com

ಸಂಖ್ಯೆ: ಇಎಕ್ಸ್‌ಇ/ಆರ್‌ಎನ್‌ಆರ್/ಬೆರಳಚ್ಚುನೌಕರರು/24/2021–22 ದಿನಾಂಕ: 24.12.2021

**ಅಲ್ಪಾವಧಿ ಟೆಂಡರ್ ಪ್ರಕಟಣೆ**
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ ಲಕೋಟೆ ಪದ್ಧತಿ)

ಈ ಕೆಳಗೆ ನಮೂದಿಸಿದ ಅಬಕಾರಿ ಉಪ ಆಯುಕ್ತರ ಕಛೇರಿಯಲ್ಲಿ ಕಾರ್ಯನಿರ್ವಹಿಸಲು ಬಾಹ್ಯ ಮೂಲಗಳಿಂದ 02 ಡಾಟಾ ಎಂಟ್ರಿ ಆಪರೇಟರ್, 01 ಸ್ಕಿಲ್ಡ್ ಕಂಪ್ಯೂಟರ್ ಆಪರೇಟರ್ ಮತ್ತು 03 ವಾಹನ ಚಾಲಕರನ್ನು ಹೊರಗುತ್ತಿಗೆ ಮಾನವ ಸಂಪನ್ಮೂಲ ಸಂಸ್ಥೆಯಿಂದ ಸೇವೆಯನ್ನು ಪಡೆಯಲು ಕರ್ನಾಟಕ ಪಾರದರ್ಶಕ ಅಧಿನಿಯಮ 1999 ನಿಯಮಗಳು 2000 ಮೇರೆಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವಿಳಾಸ **https://eproc.karnataka.gov.in** ರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಕಾಣಿಸಿದ ಷರತ್ತು ಮತ್ತು ನಿಬಂಧನೆಗಳು ಹಾಗೂ ಇತರೆ ವಿವರಗಳನ್ನು ಗಮನಿಸಿ ಅರ್ಜಿ ಸಲ್ಲಿಸುವುದು.

ಸಹಿ/– ಅಬಕಾರಿ ಉಪ ಆಯುಕ್ತರು,
ರಾಮನಗರ ಜಿಲ್ಲೆ, ರಾಮನಗರ

ವಾಸಾಸಂಇ/ರಾನ/ಬ್ರಾಂಜ್./382/2021–22


### ಕೆಲ ತರಕಾರಿಗಳ ದರ ಕೆ.ಜಿ.ಗೆ ₹80ರಿಂದ ₹100ರವರೆಗೆ ಏರಿಕೆ

# ಶತಕದಂಚಿನಲ್ಲಿ ತರಕಾರಿ ದರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವಾರದಿಂದ ತರಕಾರಿ ದರಗಳು ಏರಿವೆ. ಕೆಲ ತರಕಾರಿಗಳ ದರ ಕೆ.ಜಿ.ಗೆ ₹80ರಿಂದ ₹100ರವರೆಗೆ ತಲುಪಿದೆ.

ದಪ್ಪ ಮೆಣಸಿನಕಾಯಿ (ಕ್ಯಾಪ್ಸಿಕಂ), ಬದನೆಕಾಯಿ ದರ ಪ್ರತಿ ಕೆ.ಜಿ.ಗೆ ₹100ಕ್ಕೆ ಏರಿದೆ. ಕ್ಯಾರೆಟ್, ಬೆಂಡೆಕಾಯಿ, ಹಾಗಲಕಾಯಿ, ತೊಂಡೆಕಾಯಿ, ತೊಗರಿಕಾಯಿ, ಅವರೆಕಾಯಿ ದರಗಳೂ ಗಣನೀಯ ಏರಿಕೆ ಕಂಡಿದ್ದು, ಚಿಲ್ಲರೆ ಮಳಿಗೆಗಳಲ್ಲಿ ತಲಾ ₹80ರಂತೆ ಮಂಗಳವಾರ ಮಾರಾಟ ಆಗಿವೆ.

ನಗರದ ವಿವಿಧ ಬಡಾವಣೆಗಳಲ್ಲಿರುವ ಚಿಲ್ಲರೆ ಅಂಗಡಿಗಳಲ್ಲಿ ಇನ್ನೂ ಹೆಚ್ಚಿನ ದರಕ್ಕೆ ತರಕಾರಿಗಳನ್ನು ಮಾರಾಟ ಮಾಡಲಾಗುತ್ತಿದ್ದು, ಕೆ.ಆರ್.ಮಾರುಕಟ್ಟೆಯ ತರಕಾರಿ ಮಳಿಗೆಗಳಲ್ಲಿ ದರಗಳು ತುಸು ಕಡಿಮೆ ಇವೆ. ಕಳೆದ ವಾರ ದುಬಾರಿಯಾಗಿದ್ದ ಸೊಪ್ಪುಗಳ ದರಗಳೂ ಕಡಿಮೆಯಾಗಿವೆ.

‘ತಿಂಗಳ ಹಿಂದೆ ಮಳೆಯ ಆರ್ಭಟದಿಂದ ಮಾರುಕಟ್ಟೆಗಳಲ್ಲಿ ತರಕಾರಿಗಳ ಕೊರತೆ ಉಂಟಾಗಿತ್ತು. ಆವಕ ಪ್ರಮಾಣ ದಿಢೀರ್ ಕುಸಿದಿದ್ದರಿಂದ ಬೆಲೆಗಳೂ ಏರಿದ್ದವು. ಅದು ಈವರೆಗೆ ತಗ್ಗಿಲ್ಲ. ಬೆಳೆ ಹಾನಿ ನಂತರ ರೈತರು ಬೆಳೆದಿರುವ ತರಕಾರಿಗಳು ಮಾರುಕಟ್ಟೆಗೆ ಬರಲು ತಿಂಗಳುಗಟ್ಟಲೆ ಸಮಯ ಬೇಕು. ಅಲ್ಲಿಯವರೆಗೆ ತರಕಾರಿಗಳ ದರ ಕಡಿಮೆಯಾಗುವುದು ಅನುಮಾನ’ ಎಂದು ಕೆ.ಆರ್.ಮಾರುಕಟ್ಟೆಯ ತರಕಾರಿ ವ್ಯಾಪಾರಿ ವೆಂಕಟೇಶ್ ತಿಳಿಸಿದರು. ‘ಎರಡು ವಾರದ ಹಿಂದೆ ಬದನೆ, ಬೆಂಡೆಕಾಯಿ, ಕ್ಯಾರೆಟ್ ದರಗಳೆಲ್ಲ ಕಡಿಮೆ ಇತ್ತು. ಈಗ ಗುಣಮಟ್ಟದ ತರಕಾರಿಗಳು ಕೆ.ಜಿಗೆ ₹100ರಂತೆ ಮಾರಾಟವಾಗುತ್ತಿದೆ. ಸಾಧಾರಣ ಗುಣಮಟ್ಟದ ತರಕಾರಿಗಳನ್ನು ₹70ರಿಂದ ₹80ರಂತೆಯೂ ಮಾರಾಟ ಮಾಡಲಾಗುತ್ತಿದೆ’ ಎಂದರು.

‘ತರಕಾರಿ ಸಗಟು ದರಗಳೂ ಒಂದು ತಿಂಗಳಿನಿಂದ ಕಡಿಮೆಯಾಗಿಲ್ಲ. ಪ್ರತಿ ವಾರವೂ ಕೆಲವು ತರಕಾರಿಗಳ ಬೆಲೆ ದಿಢೀರ್ ಏರಿಕೆಯಾಗುತ್ತಿವೆ. ಸಾಮಾನ್ಯವಾಗಿ ವರ್ಷದ ಈ ಅವಧಿಯಲ್ಲಿ ತರಕಾರಿ ದರ ಕಡಿಮೆ ಇರುತ್ತಿತ್ತು’ ಎಂದು ದಾಸನಪುರ ಎಪಿಎಂಸಿ ಪ್ರಾಂಗಣದ ತರಕಾರಿ ಮತ್ತು ಸೊಪ್ಪು ವ್ಯಾಪಾರಿ ಕುಮಾರ್ ಹೇಳಿದರು.

**ತಗ್ಗದ ನುಗ್ಗೆ ದರ:** ಡಿಸೆಂಬರ್ ಮೊದಲ ವಾರದಲ್ಲಿ ಏರಿದ್ದ ನುಗ್ಗೇಕಾಯಿ ದರ ಈವರೆಗೆ ಕಡಿಮೆಯಾಗಿಲ್ಲ. ಆರಂಭದಲ್ಲಿ ಕೆ.ಜಿ.ಗೆ ₹200ಕ್ಕೇರಿದ್ದ ದರ ಈಗ ₹270ರವರೆಗೂ ತಲುಪಿದೆ. ಕಳೆದ ತಿಂಗಳಲ್ಲಿ ನುಗ್ಗೇಕಾಯಿ ದರ ₹30ರಿಂದ ₹50ರಷ್ಟಿತ್ತು.

‘ನುಗ್ಗೇಕಾಯಿ ದರ ಏರಿದ ಕೂಡಲೇ ರೈತರು ಇದ್ದ ನುಗ್ಗೇಕಾಯಿಗಳನ್ನೆಲ್ಲ ಮಾರುಕಟ್ಟೆಗೆ ತಂದು, ಲಾಭ ಮಾಡಿಕೊಂಡರು. ಕೆಲವೇ ವಾರಗಳಲ್ಲಿ ನುಗ್ಗೇಕಾಯಿಯ ಆವಕ ಪ್ರಮಾಣ ತಗ್ಗಿತ್ತು. ಹಾಗಾಗಿ, ದರ ಏರುತ್ತಲೇ ಇದೆ’ ಎಂದು ತರಕಾರಿ ವರ್ತಕ ಹನುಮೇಶ್ ತಿಳಿಸಿದರು.

ತರಕಾರಿ ಖರೀದಿಸಲು ಕೆ.ಆರ್.ಮಾರುಕಟ್ಟೆಗೆ ಮಂಗಳವಾರ ಬಂದಿದ್ದ ಜನ
—ಪ್ರಜಾವಾಣಿ ಚಿತ್ರ

**ದರಪಟ್ಟಿ** (ಪ್ರತಿ ಕೆ.ಜಿ.ಗೆ ₹ಗಳಲ್ಲಿ)

| ತರಕಾರಿ | ಹಾಪ್‌ಕಾಮ್ಸ್ ದರ | ಚಿಲ್ಲರೆ ದರ |
|---|---|---|
| ನುಗ್ಗೇಕಾಯಿ | 274 | 230 |
| ದಪ್ಪ ಮೆಣಸಿನಕಾಯಿ | 120 | 100 |
| ಬದನೆಕಾಯಿ | 119 | 100 |
| ಕ್ಯಾರೆಟ್ | 90 | 80 |
| ಬೆಂಡೆಕಾಯಿ | 97 | 80 |
| ತೊಂಡೆಕಾಯಿ | 89 | 80 |
| ತೊಗರಿಕಾಯಿ | 80 | 80 |
| ಅವರೆಕಾಯಿ | 84 | 80 |
| ಎಲೆಕೋಸು | 86 | 70 |
| ಹಾಗಲಕಾಯಿ | 75 | 70 |
| ಬೀಟ್‌ರೂಟ್ | 99 | 60 |
| ಬೆಳ್ಳುಳ್ಳಿ | 116 | 60 |
| ಟೊಮೆಟೊ | 68 | 60 |
| ಹೂಕೋಸು | 60 | 60 |
| ಬಟಾಣಿ | 107 | 50 |
| ಬೀನ್ಸ್ | 76 | 50 |
| ಮೂಲಂಗಿ | 43 | 43 |
| ಸೋರೆಕಾಯಿ | 49 | 40 |
| ಈರುಳ್ಳಿ | 50 | 40 |
| ಶುಂಠಿ | 44 | 30 |
| ಆಲೂಗಡ್ಡೆ | 43 | 30 |
| ಸೌತೆಕಾಯಿ | 28 | 25 |

# ‘ಬಿಜೆಪಿ ಅಂಗಳದಲ್ಲೇ ಮತಾಂತರಿಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿಯಲ್ಲಿರುವ ಅನೇಕರು ಅನ್ಯ ಧರ್ಮಗಳಿಗೆ ಮತಾಂತರಗೊಂಡಿದ್ದರೂ, ಅಧಿಕಾರಕ್ಕಾಗಿ ತಾವು ಹಿಂದೂಗಳೆಂದು ನಂಬಿಸಿ ವಿವಿಧ ಆಯಕಟ್ಟಿನ ಸ್ಥಳಗಳಿಗೆ ನೇಮಕಗೊಂಡಿದ್ದಾರೆ. ಅವರನ್ನು ಗುರುತಿಸಿ ಪಕ್ಷದಿಂದ ಹೊರ ಹಾಕಬೇಕು’ ಎಂದು ಕೊಳದ ಮಠದ ಶಾಂತವೀರ ಸ್ವಾಮೀಜಿ ಆಗ್ರಹಿಸಿದ್ದಾರೆ.

‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವು ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಮಸೂದೆ ತರಲು ಹೊರಟಿರುವುದು ಸ್ವಾಗತಾರ್ಹ. ಇದಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ. ಆದರೆ, ಮತಾಂತರ ಪಿಡುಗು ಬಿಜೆಪಿ ಅಂಗಳದಲ್ಲೇ ಇರುವುದು ಆಘಾತಕಾರಿ. ಹಿಂದೂಗಳ ಸೋಗಿನಲ್ಲಿ ಸರ್ಕಾರದ ಸವಲತ್ತುಗಳನ್ನು ಪಡೆಯುತ್ತಿರುವ ಮತಾಂತರಿಗಳಿಗೆ ಕಡಿವಾಣ ಹಾಕಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

‘ಇಂತಹವರು ಸಾವಿರಾರು ಹಿಂದೂಗಳು ಮತಾಂತರಗೊಳ್ಳಲು ಕಾರಣವಾಗಿರುವ ಅಂಶ ನಮ್ಮ ಗಮನಕ್ಕೆ ಬಂದಿದೆ. ಇವರನ್ನು ಪತ್ತೆ ಹಚ್ಚಲು ಆಂತರಿಕ ಸತ್ಯಶೋಧನಾ ಸಮಿತಿಯೊಂದನ್ನು ರಚಿಸಿ, ಮತಾಂತರಿಗಳನ್ನು ತೊಲಗಿಸಬೇಕು. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್.ಸಂತೋಷ್, ರಾಜ್ಯ ಘಟಕದ ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹಾಗೂ ಬಸವರಾಜ ಬೊಮ್ಮಾಯಿ ಅವರು ಈ ಬಗ್ಗೆ ವಿಶೇಷ ಗಮನಹರಿಸಬೇಕು’ ಎಂದೂ ಅವರು ಹೇಳಿದ್ದಾರೆ.


ಪ್ರಜಾವಾಣಿ

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

## JOB OPPORTUNITIES

### Accounts & Finance

**REQUIRED MALE** Accountant cum Cashier with Tally Knowledge aged between 30 to 50 years old for Pobbathi silks, Gandhibazaar. Working time 10 am to 8.30 pm, Salary 15k to 18k. Call: 9886636599

**NEED EXPERIENCED** Female ACCOUNTANT/ SALES CO-ORDINATOR. Residing around Basavanagudi. Qualification B.Com/ B.Sc. Email: sridhar@vinayaka-Plumbing.com. Contact: 99807-99996

### Engg/ Production Technical

**WANTED ITI** Electrical with 2 / 3 years experience in Service field & Machine panel work. Contact 9844037844 / 080-25587728 / 25583648 Mail: sudhakar@singhal.co.in

**WANTED CYLINDRICAL** Grinding Operates Part-Time or Full- Time at Peenya Contact: 9900091154

**NEED TRAINEE** OPERATORS- (Male) QUALITY CONTROLLER (Female) for Factory near Kadabagere Magadi Road. Diploma ITI, PUC, Degree. Candidates residing close by preferred. Permanent Placement Contact: 9448377851

### General

**WANTED:- BSC/** BCom/ BBA/ Diploma graduates for Electronic company, domains: Accounts/ Sales/ Digital Marketing Apply info@siricomindia.com -whatsApp: 9900733844

**REQUIRED ADVOCATES** for Documentation, Work- Non Litigation, with Typing/ Computer Knowledge, Kannada Reading and Writing, for a Reputed Law Firm in HSR Layout, Bangalore, Contact- 080-49595965, 9945688974, 9844092992, 9164150690

**REQUIRED OFFICE** BOYS/ DELIVERY BOYS/ PLUMBERS/ DRIVERS. Candidates Residing in and around Hanumanthhnagar Contact: 99807-99996

### Multiple Vacancy

**WANTED TEAM** leaders, Sales Executives, Office Assistatnts (Female), Delivery Executive and Telecallers across Bangalore. 9901180658

### Part-Time Jobs

**WANTED 10TH/PUC** Passed for City Career Agency in LIC, Age: 18-60, House Wives/ Retired/ Working, Stipend 7000/- PM, Commission , Gratuity & other Benefits: 9901995554/ 8217293244

### Receptionist/ Secretary

**REQUIRE A** Female Receptionist with English, Kannada, Basic Computer Knowledge for a Clinic in Malleshwaram. Contact 9845825616

### Teachers/ Professors

**VIKAS HIGH** SCHOOL, BSK 3rd Stage, Bangalore-85 Require M.A./ B.A./ B.Ed TEACHERS to teach 1st Language English & Higher Primary & COMPUTER TEACHER. Attend Interview between 10- 1 pm. 26797652/ 9448110651

**WANTED FACULTY** for Economics, History, Polity, Geography, Ethics, Mathematics and Aptitude for IAS Coaching Classes at Chandra Layout. Contact: 9980883950

**ST CHARLES HIGH SCHOOL (ICSE)**
Lingarajapuram
Bangalore-560 084
REQUIRES TEACHERS
PGT and TGT - English, History, Geography, Maths, Physics, Kannada.
PRT - For Classes I to IV.
Eligible candidates can apply with C.V and testimonials to **schsban@gmail.com** within 10 days from the date of the advertisement.
Only short-listed candidates will be called for the interview.

**THE REGENCY** PUBLIC SCHOOL Vidyaranyapura, Bangalore-97. Invites Applications of PGT, TGT with B.Ed in Maths and Physics Secondary and Higher Secondary Levels. Candidates with experience & fluency in English will be preferred. Apply to: careers22regency@gmail.com or drop your resume at the School Office.

**NIRMANINTERNATIONAL PUBLIC** SCHOOL, Near Automated RTO,7th Block, Vishweshwaraiah Layout, Bangalore-91 Requires Qualified TEACHERS for all the subjects from Nursery to Grade-X. Walk In- Interview between 10:00 am to 02:00 pm from 03.01.2022 onwards. Contact: 8123030731. Email: nirmanorganisation@gmail.com

### Walk-in

**REQUIRED (1)** HR, 8- 10 years experience with Software IT Industries, Good in recruitment, Drafting, communication skills. qualification HR, MBA/ MSW, 8 Lacs CTC. (2) HR RECRUITERS, minimum 3+ years, having experience with software IT /HR consultancy staffing, 4 to 5 Lac CTC. WALK-IN INTERVIEW: 9380430060, 8050822534. email: accounts@vapstech.com

### Wanted

**URGENTLY REQUIRED** an Advocate with Computer literacy for non- litigation lawyer's office at Rajajinagar Contact: 9845347437

**WANTED FEMALE** Office Assistant Qualification any Degree, Good Communication Skills: Kannada, English, Hindi, in around Rajajinagar Contact: 23384085/ 9108458798

## RENTAL PROPERTIES

### Accommodation Available

#### Flats

**JAYANAGAR 4TH** 'T' Block Beautiful 3 Bedroom Flat For Immediate Occupation, Carpark. Contact: 'OWNER'- 9880202470

## REAL ESTATE SELLING

### Flat

#### J P Nagar

**NEW FLATS** for sale, J.P.Nagar 9th Phase, 2 &.3 BHK, now 20% less Price, possession 3 Months,Contact- 8867255121/ 9902673417.

#### Vasanth Nagar

**2 BHK** Flat for Sale at Palace Cross Road, Vasanthnagar. 1262 sqft including covered car park. Contact: 9845493251/ 9449009325

### Sites

#### Kanakapura Road

**BANK OFFICERS** Layout,Narayananagar 1st Block, 30x40, S/F,Site For Sale Good Location : 9880668789/8884707773

## OTHERS

### Auction Sale

**JANATHA EDUCATION SOCIETY**
**Auction Sale Notice of College Buses**
Sealed Quotations are invited for auction sale of the following vehicles on AS IS WHERE IS BASIS. Interested parties may contact Sri. Joseph, Transport Supervisor for details and inspection between 9am to 4pm on weekdays - **Ph : 7625013738| 7625013637 |080-23371952.** The last date for submission of offer : **10-01-2022 up to 4.00 pm.**
1. KA-41-A-4338 Eicher 40 Seater, Model 2012
2. KA-41-A-5304 Eicher 40 Seater, Model 2012
3. KA-41-9383 - Tata Marco Polo 40 seater -Model -2010
4. KA-41-9386 -Tata Marco Polo 40 seater -Model-2010
5. KA-41-7171 - Swaraj Mazda 40 seater - Model 2009

**Address:**
Janatha Education Society, Vivekananda College Premises,Dr.Rajkumar Road, Next to Orion Mall, Rajajinagar 2nd Stage, Bengaluru - 560 055.

H.C. Balakrishna, Hon'ble President
Dr. C.N. Manche Gowda, Hon. Secretary

## BUSINESS

### Business to Business

#### Business

**ZENITH LOANS** available @4% yearly interest Business Project Takeover Property Mortgage NPA 8447587173 Agents Welcome

#### Financial Services

**NRI'S INVESTMENT** And Finance Available On Low Interest Against Properties, Land & Building, Sites, Flats, Converted & Agriculture Lands Call: 7411265189

## PERSONAL

### Change of Name

**I, MR.** Damodaran Shanmugam, also known as Damodaran Arcot Shanmugam and also known as A. S. Damodaran S/o. Mr. Shanmugam, residing at No. 25/6, Damodar Mudaliar Street, 1st cross, Halasuru, Bengaluru 560008, affirm and declare that all the three names 'A.S.Damodaran', 'Damodaran Shanmugam' and 'Damodaran Arcot Shanmugam' refer to me. Vide affidavit dated: 17.12.2021 Sworn before notary: N. Nagappa, Bangalore

**I, HANNA** MOHAMMED residing at No. 680, Corner Redeg Apartment, 5th Floor, Flat No. 9, 8th Cross, 6th Main, 3rd Block HBR Layout, Bangalore-43 have changed my minor Son's name from OMAR MOHAMED ABDALLA MOHAMED to OMAR MOHAMED ABDALLA MOHAMED ELSAYED vide affidavit dated 28-12-2021 before Notary C. Sharasa, Bangalore.

**I, 14276773** Rank.Ex: L/NK Name: B DENIS PINTO, S/o Benjamin Pinto R/a Sanjan Sadana, 13th Cross, SIT Extension, Tumkur, Karnataka-572102 here by declare that my wife correct name is STEPHANIE D' SOUZA and DOB is 10.01.1950 affidavit dated 28.12.2021 notary D. Gunashekar, Bangalore-05.

**I, SYEDA** NIBHA HASHIMI D/O MIR TAQI ABBAS, Residing at Alipur Village, Gowribidanur Taluk, Chikkaballapur Dist, Karnataka State, have changed my name to SYEDA NABHA HASHIMI Vide affidavit dated 28/12/2021 before notary H.M Adinarayana Gowda, Gowribidanur

**I, DILIP** Kumar. R S/o. Raja Shekar Ravi residing at #234, PKR Nagar main, Vannarpet, Viveknagar Post, Bengaluru- 560047 have changed my name to DILIP CHRISTOPHER. R vide affidavit dated 28/12/2021 before notary D. Guna Shekar, Bangalore

**I, SRIDHAR** Perianayagam, residing at Route de la feuillere 11, 1010 Lausanne, Switzerland have changed my name to Jon Sridhar vide affidavit no. 1229/21, dated 20.Dec.2021, sworn before Nagendra Kumar, Consular, Embassy of India, Berne, Switzerland

DH Deccan Herald | ಪ್ರಜಾವಾಣಿ

**BOOK YOUR REAL ESTATE**
Classified Advertisement In Deccan Herald & Prajavani
**SATURDAY & SUNDAY COMBO OFFER**

| Ordinary Per word | Bold Per word | Ordinary Semi Display Per word | Bold Semi Display Per word | Single Col CD Per sqcm |
|---|---|---|---|---|
| 80 | 125 | 95 | 155 | 570 |

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

**HEALTH SPECIAL**

ಶ್ರವಣ ಸಮಸ್ಯೆಯೇ?
ಹಬ್ಬದ ಕೊಡುಗೆ
25% ವರೆಗೆ ಕಡಿತ
ಎಲ್ಲಾ ಶ್ರವಣ ಸಾಧನಗಳ ಮೇಲೆ

T & C Apply
ಅಗೋಚರ ಶ್ರವಣ ಸಾಧನಗಳು ಲಭ್ಯ
ಹಿರಿಯ ನಾಗರಿಕರಿಗಾಗಿ ಮನೆ ಭೇಟಿ

ಬೆಂಗಳೂರು ಮತ್ತು ಕರ್ನಾಟಕದಾದ್ಯಂತ ಶಾಖೆಗಳಿವೆ.
ನಿಮ್ಮ ಸಮೀಪದ ಕೇಂದ್ರ ತಿಳಿಯಲು ಸಂಪರ್ಕಿಸಿ
ಹಿಯರಿಂಗ್ ಹೆಲ್ತ್ ಕೇರ್ ಕ್ಲಿನಿಕ್ as
99456 11100
www.hearingc.com
OREVA RS CHAIN OF HEARING CLINICS
HHCC HEARING HEALTH CARE CLINIC as

**ASTRO YATRA**

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು–04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು–84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

**EDUCATION**
To Place your Classified Ads Contact:
9845114560

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

## ಸಾರಿಗೆ ಸಂಸ್ಥೆಗಳ ಸ್ಥಿತಿಗತಿ ಅಧ್ಯಯನ

ಬೆಂಗಳೂರು: ಸಾರಿಗೆ ಸಂಸ್ಥೆಗಳ ಸ್ವಾವಲಂಬನೆ ಮತ್ತು ಸಂಪನ್ಮೂಲ ಕ್ರೋಡೀಕರಣಗಳ ಸಂಪೂರ್ಣ ಅಧ್ಯಯನಕ್ಕೆ ರಾಜ್ಯ ಸರ್ಕಾರ ನೇಮಿಸಿರುವ ನಿವೃತ್ತ ಐಎಎಸ್ ಅಧಿಕಾರಿ ಎಂ.ಆರ್. ಶ್ರೀನಿವಾಸಮೂರ್ತಿ ನೇತೃತ್ವದ ಸಮಿತಿಯು ಕಾರ್ಯ ಚಟುವಟಿಕೆ ಆರಂಭಿಸಿದ್ದು, ಮಂಗಳವಾರ ಮೊದಲ ಸಭೆ ನಡೆಸಿತು.

ಸಾರಿಗೆ ಇಲಾಖೆ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಯಶವಂತ್ ವಿ. ಗುರುಕರ್ ಮತ್ತು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಗುರುದತ್ತ ಹೆಗಡೆ ಅವರ ಜೊತೆ ಶ್ರೀನಿವಾಸಮೂರ್ತಿ ಸಭೆ ನಡೆಸಿದರು. ನಿಗಮದಲ್ಲಿರುವ ಬಸ್‌ಗಳ ಸಂಖ್ಯೆ, ನಿಗಮಗಳ ಸಂಖ್ಯೆ, ಸಿಬ್ಬಂದಿ ಸಂಖ್ಯೆ, ಸಂಗ್ರಹವಾಗುತ್ತಿರುವ ವರಮಾನದ ಬಗ್ಗೆ ನಾಲ್ಕೂ ವ್ಯವಸ್ಥಾಪಕ ನಿರ್ದೇಶಕರು ವಿವರಿಸಿದರು.

### ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಗೌರವ ಪ್ರಶಸ್ತಿ, ಪುಸ್ತಕ ಬಹುಮಾನ ಪ್ರದಾನ

# ಅನುವಾದವೂ ಶ್ರೇಷ್ಠ ಸೃಜನಶೀಲ ಸಾಹಿತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನುವಾದವೂ ಶ್ರೇಷ್ಠ ಸೃಜನಶೀಲ ಸಾಹಿತ್ಯವಾಗಿದ್ದು, ಅಲ್ಲಿ ಸ್ವಂತಿಕೆಯ ಮುದ್ರೆ ಒತ್ತಬೇಕು' ಎಂದು ಕವಿ ದೊಡ್ಡರಂಗೇಗೌಡ ಹೇಳಿದರು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ 2021ನೇ ಸಾಲಿನ ಗೌರವ ಪ್ರಶಸ್ತಿ ಹಾಗೂ 2020ನೇ ಸಾಲಿನ ಪುಸ್ತಕ ಬಹುಮಾನ ಪ್ರದಾನ ಮಾಡಿ, ಮಾತನಾಡಿದರು.

'ಕೊಡುಕೊಳ್ಳುವಿಕೆ ಪ್ರಕ್ರಿಯೆ ನಿಸರ್ಗದಲ್ಲಿಯೇ ಇದೆ. ಅನುವಾದ ಕೃತಿ ಅಂದೊಡನೆ ಕೆಲವರು ಮೂಗು ಮುರಿಯುತ್ತಾರೆ. ಅನುವಾದ ಸುಲಭದ ಕಾಯಕವಲ್ಲ. ಮೂಲ ಕೃತಿಯನ್ನು ನಮ್ಮ ಭಾಷೆಯ ಜಾಯಮಾನಕ್ಕೆ ತಕ್ಕಂತೆ ಹೊಂದಿಸಿಕೊಳ್ಳಬೇಕು. ಆ ವೇಳೆ ಮೂಲದ ಸತ್ವ ಕಳೆದು ಹೋಗಬಾರದು. ಜ್ಞಾನದ ಆಳ ತಿಳಿಯಲು ಸಾಹಿತ್ಯ ಸಾಗರದಲ್ಲಿ ಈಜಬೇಕು. ಅನುವಾದ ಎನ್ನುವುದು ದೊಡ್ಡದಾದ ವ್ರತ' ಎಂದರು.

ಪುಸ್ತಕ ಬಹುಮಾನ ಪುರಸ್ಕೃತ ಪ್ರೊ.ಟಿ.ಎಸ್. ನಾಗರಾಜ ಶೆಟ್ಟಿ, 'ಭಾಷಾ ವೈಶಿಷ್ಟ್ಯ, ಸಂಸ್ಕೃತಿ, ಜನರ ಜೀವನದ ಮಜಲುಗಳನ್ನು ತಿಳಿಯಲು ಭಾಷಾಂತರ ಸಹಕಾರಿ. ಅನುವಾದ ಕಾರ್ಯ ಎಷ್ಟು ಮಾಡಿದರೂ ಸಾಲದು. ಎಲ್ಲ ಕನ್ನಡಿಗರಿಗೆ ಬೇರೆ ಭಾಷೆಯ ವಿಷಯಗಳು ತಿಳಿಯುವಂತಾಗಬೇಕು' ಎಂದು ತಿಳಿಸಿದರು.

ವಿದ್ವಾಂಸ ಶತಾವಧಾನಿ ಆರ್. ಗಣೇಶ್, 'ಅನುವಾದಕರು ಕೃತಿಯ ಮೂಲದ ಶೈಲಿ ಮತ್ತು ಗತಿಯನ್ನು ಇರಿಸಿಕೊಂಡು ಅನುವಾದ ಮಾಡಬೇಕು. ಮೂಲ ಕೃತಿಯಲ್ಲಿ ಬಳಸಿದ ತಂತ್ರ, ಆಶಯಗಳನ್ನು ಉಳಿಸಿಕೊಳ್ಳಬೇಕು' ಎಂದರು.

ಪ್ರಾಧಿಕಾರದ ಅಧ್ಯಕ್ಷ ಅಜಕ್ಕಳ ಗಿರೀಶ್ ಭಟ್, 'ಪ್ರಾಧಿಕಾರದಿಂದ ಅನುವಾದಗೊಂಡಿರುವ 40 ಪುಸ್ತಕಗಳು ಮುದ್ರಣಕ್ಕೆ ಸಿದ್ಧಗೊಂಡಿವೆ. ಸಾಮಾನ್ಯವಾಗಿ ಸರ್ಕಾರಿ ಸಂಸ್ಥೆಗಳು ಪ್ರಕಟಿಸಿದ ಪುಸ್ತಕಗಳು ಅಷ್ಟಾಗಿ ಮಾರಾಟವಾಗುವುದಿಲ್ಲ. ನಮ್ಮ ಪ್ರಾಧಿಕಾರ ಮುದ್ರಿಸಿದ ಪುಸ್ತಕಗಳ ಪೈಕಿ ಮೂರನೇ ಎರಡರಷ್ಟು ಪುಸ್ತಕಗಳು ಮಾರಾಟ ಆಗಿವೆ' ಎಂದು ಹೇಳಿದರು.

(ಕುಳಿತವರು ಎಡದಿಂದ) ಡಾ. ರಾಜಾರಾಮ ಹೆಗಡೆ, ಡಾ. ಗೀತಾ ಶೆಣೈ, ಪ್ರೊ.ಟಿ.ಆರ್. ಅನಂತರಾಮು, ಈಶ್ವರಚಂದ್ರ ಮತ್ತು ಡಾ.ಟಿ.ಜಿ ಪ್ರಭಾಶಂಕರ 'ಪ್ರೇಮಿ' ಅವರಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ 2021ನೇ ಸಾಲಿನ 'ಗೌರವ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಪ್ರಾಧಿಕಾರದ ಸದಸ್ಯ ಎಂ.ಎಸ್. ಚೈತ್ರ, ಪ್ರಾಧಿಕಾರದ ಅಧ್ಯಕ್ಷ ಅಜಕ್ಕಳ ಗಿರೀಶ್ ಭಟ್, ದೊಡ್ಡರಂಗೇಗೌಡ ಮತ್ತು ಪ್ರಾಧಿಕಾರದ ರಿಜಿಸ್ಟ್ರಾರ್ ಈಶ್ವರ್ ಕು.ಮಿರ್ಜಿ ಇದ್ದಾರೆ –ಪ್ರಜಾವಾಣಿ ಚಿತ್ರ

### ಐವರಿಗೆ ಗೌರವ ಪ್ರಶಸ್ತಿ

ಪ್ರಾಧಿಕಾರದ 2021ನೇ ಸಾಲಿನ 'ಗೌರವ ಪ್ರಶಸ್ತಿ'ಯನ್ನು ವಿಜ್ಞಾನ ಲೇಖಕ ಪ್ರೊ.ಟಿ.ಆರ್.ಅನಂತರಾಮು, ಲೇಖಕಿ ಡಾ.ಗೀತಾ ಶೆಣೈ, ವಿದ್ವಾಂಸ ಡಾ.ಟಿ. ಜಿ. ಪ್ರಭಾಶಂಕರ 'ಪ್ರೇಮಿ', ಅನುವಾದಕ ಈಶ್ವರಚಂದ್ರ ಹಾಗೂ ಲೇಖಕ ಡಾ. ರಾಜಾರಾಮ್ ಹೆಗಡೆ ಅವರಿಗೆ ಪ್ರದಾನ ಮಾಡಲಾಯಿತು. ಪ್ರಶಸ್ತಿಯು ತಲಾ ₹ 50 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ಡಾ.ನಾಗ ಎಚ್.ಹುಬ್ಳಿ, ಪ್ರೊ.ಟಿ.ಎಸ್. ನಾಗರಾಜ ಶೆಟ್ಟಿ ಹಾಗೂ ನಾಗರತ್ನಾ ಹೆಗಡೆ ಅವರು 'ಪುಸ್ತಕ ಬಹುಮಾನ' ಸ್ವೀಕರಿಸಿದರು. ಪ್ರಾಧಿಕಾರ ಹೊರ ತಂದ 20 ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.

### 'ಅನುವಾದಕ್ಕೆ ಪ್ರತ್ಯೇಕ ಸಂಸ್ಥೆ ಅಗತ್ಯ'

'ಅನುವಾದವು ಇಡೀ ಜಗತ್ತಿನಲ್ಲಿ ವಿಶೇಷ ಸ್ಥಾನ ಪಡೆದಿದೆ. ಜಗತ್ತಿನ ಶ್ರೇಷ್ಠ ಸಾಹಿತ್ಯ ಕೃತಿಗಳು ಕನ್ನಡಕ್ಕೆ ಬರಬೇಕು. ಇಲ್ಲಿನ ಸಾಹಿತ್ಯ, ಸಂಸ್ಕೃತಿ ಬೇರೆ ಭಾಷೆಗೆ ತಲುಪಬೇಕು. ಈ ಕಾರ್ಯಕ್ಕೆ ಅನುವಾದವೇ ಸೇತುವೆ. ಕನ್ನಡದ ಬಹುತೇಕ ಜನಪ್ರಿಯ ಕೃತಿಗಳು ಹಿಂದಿಗೆ ಅನುವಾದಗೊಂಡಿವೆ. ಇದರಿಂದ ಕನ್ನಡದ ಸಾಹಿತಿಗಳು ಉತ್ತರ ಭಾರತಕ್ಕೆ ಪರಿಚಯ ಆಗಿದ್ದಾರೆ. ಇದು ಅನುವಾದದ ಯುಗವಾಗಿದ್ದು, ಅನುವಾದಕ್ಕೆ ಪ್ರತ್ಯೇಕ ಸಂಸ್ಥೆ ಆಗಬೇಕು. ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳಬೇಕು. ವಿಜ್ಞಾನ ಸಾಹಿತ್ಯ ಕನ್ನಡಕ್ಕೆ ಬಂದರೆ ಮಾತ್ರ ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ಅನುಷ್ಠಾನ ಸಾಧ್ಯ' ಎಂದು ಗೌರವ ಪ್ರಶಸ್ತಿ ಪುರಸ್ಕೃತ ಟಿ.ಜಿ. ಪ್ರಭಾಶಂಕರ 'ಪ್ರೇಮಿ' ಹೇಳಿದರು.





15-18 ವರ್ಷದೊಳಗಿನ ಮಕ್ಕಳಿಗೆ ಕೋವ್ಯಾಕ್ಸಿನ್

## ಪಿಎಸಿ ಅಧ್ಯಕ್ಷರಾಗಿ ರಮೇಶ್ ಕುಮಾರ್

ಬೆಂಗಳೂರು: ವಿಧಾನಮಂಡಲದ ಜಂಟಿ ಸ್ಥಾಯಿ ಸಮಿತಿಗಳು ಹಾಗೂ ವಿಧಾನಸಭೆಯ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡಿ ಸೋಮವಾರ ಆದೇಶ ಹೊರಡಿಸಿದ್ದು, ಕಾಂಗ್ರೆಸ್ ಶಾಸಕ ಕೆ.ಆರ್. ರಮೇಶ್ ಕುಮಾರ್ ಅವರನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಜಂಟಿ ಸಮಿತಿಗಳ ಪೈಕಿ ಗ್ರಂಥಾಲಯ ಸಮಿತಿಗೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಧ್ಯಕ್ಷರಾಗಿರುತ್ತಾರೆ. ವಿಧಾನಸಭೆಯ ಖಾಸಗಿ ಸದಸ್ಯರುಗಳ ವಿಧೇಯಕ ಮತ್ತು ನಿರ್ಣಯಗಳ ಸಮಿತಿ, ಅರ್ಜಿಗಳ ಸಮಿತಿ ಮತ್ತು ವಸತಿ ಸೌಕರ್ಯ ಸಮಿತಿಗಳಿಗೆ ವಿಧಾನಸಭೆಯ ಉಪಾಧ್ಯಕ್ಷ ಆನಂದ ಮಾಮನಿ ಅಧ್ಯಕ್ಷರಾಗಿರುತ್ತಾರೆ.

**ಇತರ ಜಂಟಿ ಸಮಿತಿಗಳ ಅಧ್ಯಕ್ಷರು:** ಸಾರ್ವಜನಿಕ ಉದ್ದಿಮೆಗಳ ಸಮಿತಿ- ಜಿ.ಎಚ್. ತಿಪ್ಪಾರೆಡ್ಡಿ,; ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿ- ಎಂ.ಪಿ. ಕುಮಾರಸ್ವಾಮಿ; ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ- ಎಸ್. ಕುಮಾರ್ ಬಂಗಾರಪ್ಪ; ಅಧೀನ ಶಾಸನ ರಚನಾ ಸಮಿತಿ- ಎಲ್.ಎ. ರವಿ ಸುಬ್ರಹ್ಮಣ್ಯ; ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಸಮಿತಿ- ಸಾ.ರಾ. ಮಹೇಶ್; ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ- ಕೆ. ಪೂರ್ಣಿಮಾ ಹಾಗೂ ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಮಿತಿ- ಜಿ. ಸೋಮಶೇಖರ ರೆಡ್ಡಿ.

**ವಿಧಾನಸಭೆಯ ಸಮಿತಿಗಳು:** ಅಂದಾಜುಗಳ ಸಮಿತಿ- ಅಭಯ ಪಾಟೀಲ; ಸರ್ಕಾರಿ ಭರವಸೆಗಳ ಸಮಿತಿ- ಕೆ. ರಘುಪತಿ ಭಟ್; ಹಕ್ಕುಬಾಧ್ಯತೆಗಳ ಸಮಿತಿ- ಬಸನಗೌಡ ಆರ್. ಪಾಟೀಲ ಯತ್ನಾಳ.

## ತನಿಖೆಗೆ ತ್ವರಿತ ಅನುಮತಿ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧಿಕಾರಿಗಳು ಮತ್ತು ನೌಕರರ ವಿರುದ್ಧ ತನಿಖೆ ನಡೆಸಲು ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ತ್ವರಿತವಾಗಿ ಅನುಮತಿ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

'ಪ್ರಜಾವಾಣಿ'ಯ ಮಂಗಳವಾರದ ಸಂಚಿಕೆಯಲ್ಲಿ ಪ್ರಕಟವಾದ 'ಬಿಡಿಎ ಅಕ್ರಮ: ತನಿಖೆಗೆ ಅಡ್ಡಗಾಲು' ವಿಶೇಷ ವರದಿ ಕುರಿತು ಹುಬ್ಬಳ್ಳಿಯಲ್ಲಿ ಪ್ರತಿಕ್ರಿಯೆ ನೀಡಿದ ಅವರು, 'ಬಿಡಿಎ ಕಚೇರಿಗಳ ಮೇಲೆ ದಾಳಿ ಮಾಡಿದ್ದ ಎಸಿಬಿ ಅಧಿಕಾರಿಗಳು, ಎಫ್‌ಐಆರ್ ದಾಖಲಿಸಲು ಅನುಮತಿ ಕೋರಿದ್ದಾರೆ. ಈ ಪ್ರಸ್ತಾವಗಳನ್ನು ಬಿಡಿಎ ಆಂತರಿಕ ಜಾಗೃತ ಕೋಶಕ್ಕೆ ಕಳುಹಿಸಿದ್ದು, ವರದಿ ಬಂದ ತಕ್ಷಣ ತಡಮಾಡದೇ ತನಿಖೆಗೆ ಅನುಮತಿ ನೀಡಲಾಗುವುದು' ಎಂದು ಹೇಳಿದ್ದಾರೆ.

ವರದಿ ಪರಿಣಾಮ

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿರುವ ನಗರಾಭಿವೃದ್ಧಿ ಇಲಾಖೆಯ ಹಿರಿಯ ಅಧಿಕಾರಿಗಳು, 'ನವೆಂಬರ್ ತಿಂಗಳಿನಲ್ಲಿ ಬಿಡಿಎ ಕಚೇರಿ ಮೇಲೆ ನಡೆದ ದಾಳಿಯ ಆಧಾರದಲ್ಲಿ ಪ್ರಕರಣ ದಾಖಲಿಸಲು ಅನುಮತಿ ಕೋರಿ ಡಿಸೆಂಬರ್ ಮೊದಲ ವಾರ ತನಿಖಾಧಿಕಾರಿಗಳು ಪತ್ರ ಬರೆದಿದ್ದರು. ಆಂತರಿಕ ಪರಿಶೀಲನೆಗಾಗಿ ಈ ಪ್ರಕರಣಗಳನ್ನು ಬಿಡಿಎ ಜಾಗೃತ ಕೋಶ ಹಾಗೂ ಆಯುಕ್ತರಿಗೆ ಕಳುಹಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ಬಿಡಿಎ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ತನಿಖೆಗೆ ಅನುಮತಿ ಕೋರಿ ಎಸಿಬಿ ಸಲ್ಲಿಸಿರುವ 47 ಪ್ರಸ್ತಾವಗಳು ಬಾಕಿ ಇವೆ. ಬಿಡಿಎ ನೌಕರರ ವಿರುದ್ಧ ಪ್ರಾಧಿಕಾರದ ಆಯುಕ್ತರು ಮತ್ತು ಎರವಲು ಸೇವೆಯ ಮೇಲೆ ನಿಯೋಜನೆಯಲ್ಲಿರುವ ನೌಕರರ ವಿರುದ್ಧ ಸರ್ಕಾರದ ಹಂತದಲ್ಲಿ ಅನುಮತಿ ನೀಡಲಾಗುವುದು ಎಂದು ತಿಳಿಸಿದ್ದಾರೆ.

## ಸಾಫ್ಟ್‌ವೇರ್ ಉತ್ಪನ್ನ ಬಿಡುಗಡೆ

ಬೆಂಗಳೂರು: ಕ್ಲೌಡ್ ಕಂಪ್ಯೂಟಿಂಗ್, ಸಾಫ್ಟ್‌ವೇರ್ ತಂತ್ರಜ್ಞಾನ ಕ್ಷೇತ್ರದ 'ಸಿಂಕ್ರೋನಾಟ್' ಸಂಸ್ಥೆಯು ಕ್ಲೌಡ್ ಕಂಪ್ಯೂಟಿಂಗ್, ಎಡ್ಜ್ ಕಂಪ್ಯೂಟಿಂಗ್, ಡಾಟಾ ಸೆಂಟರ್ ಮತ್ತು ಐಒಟಿಗಳನ್ನು ಗ್ರಹಿಸುವ ಮತ್ತು ಅವುಗಳ ಅನುಷ್ಠಾನದಲ್ಲಿ ಪ್ರಮುಖ ಮಾದರಿ ಬದಲಾವಣೆಯ ಖಾತರಿ ನೀಡಲಿರುವ ನೂತನ ಸಾಫ್ಟ್‌ವೇರ್ ಉತ್ಪನ್ನ ಬಿಡುಗಡೆ ಮಾಡಿದೆ. ವರ್ಚುವಲ್ ಸಿಸ್ಟಮ್ ಆಫ್ ಚಿಪ್ ಎಂದು ಕರೆಯಲಾಗುವ ಈ ಸಾಫ್ಟ್‌ವೇರ್ ಡಾಟಾ ಸೆಂಟರ್ ಹಾರ್ಡ್‌ವೇರ್ ಮೂಲಸೌಕರ್ಯ, ಕೂಲಿಂಗ್ ಹಾಗೂ ಸಾಫ್ಟ್‌ವೇರ್ ಪರವಾನಗಿ ಪ್ರಕ್ರಿಯೆಗಳಲ್ಲಿನ ವೆಚ್ಚವನ್ನು ಕಡಿಮೆ ಮಾಡಲಿದೆ ಎಂದು ಸಿಂಕ್ರೋನಾಟ್‌ನ ಸ್ಥಾಪಕ ಮೆಹುಲ್ ಶರ್ಮಾ ತಿಳಿಸಿದ್ದಾರೆ.

### ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಸ್ಥಳಕ್ಕೆ ಭೇಟಿ

## ಮೆಟ್ರೊ ಮಾರ್ಗದ ಕಂಬಕ್ಕೆ ಹಾನಿ: ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯಿಂದ ಹಲಸೂರಿನಲ್ಲಿ ರಾಜಕಾಲುವೆ ಹೂಳು ತೆಗೆಯುವ ಸಂದರ್ಭದಲ್ಲಿ ಮೆಟ್ರೊ ರೈಲು ಮಾರ್ಗದ ಕಂಬಕ್ಕೆ ಸ್ವಲ್ಪ ಹಾನಿಯಾಗಿದ್ದು, ಸ್ಥಳೀಯರಲ್ಲಿ ಕೆಲಕಾಲ ಆತಂಕ ಸೃಷ್ಟಿಯಾಗಿತ್ತು.

ರಾಜಕಾಲುವೆ ಹೊಂದಿಕೊಂಡಂತೆ ಇರುವ ಮೆಟ್ರೊ ಮಾರ್ಗದ ಕಂಬದ ಅಡಿಪಾಯ ಕಾಣುವಂತೆ ಜೆಸಿಬಿ ಮೂಲಕ ಮಣ್ಣು ತೆಗೆಯಲಾಗಿತ್ತು. ಇದು ಸ್ಥಳೀಯರ ಆತಂಕಕ್ಕೆ ಕಾರಣವಾಯಿತು. ಹೂಳು ತೆಗೆಯುವಾಗ ಅಡಿಪಾಯಕ್ಕೂ ಸ್ವಲ್ಪ ಹಾನಿಯಾಗಿತ್ತು.

ಸ್ಥಳೀಯರು ಮೆಟ್ರೊ ರೈಲು ನಿಗಮದ ಅಧಿಕಾರಿಗಳಿಗೆ ಸುದ್ದಿ ಮುಟ್ಟಿಸಿದ ಕೂಡಲೇ ಬಿಬಿಎಂಪಿ ಅಧಿಕಾರಿಗಳ ಜೊತೆ ಬೆಂಗಳೂರು ಮೆಟ್ರೊ ರೈಲು ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಗಂಟೆಗೆ 35 ಕಿಲೋ ಮೀಟರ್ ವೇಗದಲ್ಲಿ ಸಂಚರಿಸುವ ಮೆಟ್ರೊ ರೈಲುಗಳ ವೇಗವನ್ನು ಕಾಮಗಾರಿ ನಿರ್ವಹಿಸುತ್ತಿರುವ ಸ್ಥಳದಲ್ಲಿ 25 ಕಿಲೋ ಮೀಟರ್‌ಗೆ ಇಳಿಸಲು ಸೂಚನೆ ನೀಡಲಾಯಿತು.

'ಮೆಟ್ರೊ ಕಂಬಕ್ಕೆ ಯಾವುದೇ ಹಾನಿ ಆಗಿಲ್ಲ. ಬಿಬಿಎಂಪಿ ಅಧಿಕಾರಿಗಳ ತಂಡದ ಜೊತೆ ನಾನೇ ಖುದ್ದು ಪರಿಶೀಲನೆ ನಡೆಸಿದ್ದೇನೆ. ಸುರಕ್ಷತೆಯ ದೃಷ್ಟಿಯಿಂದ ಅಡಿಪಾಯಕ್ಕೆ ತಡೆಗೋಡೆಯಂತೆ ಇನ್ನೊಂದು ಸುತ್ತಿನ ಕಾಂಕ್ರಿಟ್ ಹಾಕಲಾಗಿದೆ. ಯಾವುದೇ ಅಪಾಯ ಇಲ್ಲ. ಸಾರ್ವಜನಿಕರಿಗೆ ಆತಂಕ ಬೇಡ' ಎಂದು ಅಂಜುಂ ಪರ್ವೇಜ್ 'ಪ್ರಜಾವಾಣಿ'ಗೆ ಸ್ಪಷ್ಟಪಡಿಸಿದರು.

'ಕಾಮಗಾರಿ ನಡೆಯುವಾಗ ಕಂಬದಲ್ಲಿ ಕಂಪನ ಆಗಬಾರದು ಎಂಬ ಕಾರಣಕ್ಕೆ ರೈಲುಗಳ ವೇಗ ಕಡಿಮೆ ಮಾಡಲಾಗಿದೆ. ರಾಜಕಾಲುವೆ ಪಕ್ಕದಲ್ಲೇ ಮೆಟ್ರೊ ಕಂಬ ನಿರ್ಮಾಣ ಮಾಡುವ ಸಂದರ್ಭದಲ್ಲಿ ಎಲ್ಲ ರೀತಿಯ ಅನುಮತಿಗಳನ್ನು ಬಿಬಿಎಂಪಿಯಿಂದ ಪಡೆಯಲಾಗಿದೆ' ಎಂದು ಅವರು ತಿಳಿಸಿದರು.

ಮೆಟ್ರೊ ಮಾರ್ಗದ ಕಂಬದ ಅಡಿಪಾಯದಲ್ಲಿ ಆಗಿರುವ ಹಾನಿ ಸರಿಪಡಿಸುವ ಕಾಮಗಾರಿ ನಿರ್ವಹಿಸುತ್ತಿರುವುದು –ಪ್ರಜಾವಾಣಿ ಚಿತ್ರ

## ಒಳ ಉಡುಪಿನಲ್ಲಿ ಚಿನ್ನ ಬಚ್ಚಿಟ್ಟಿದ್ದವನ ಬಂಧನ

ಬೆಂಗಳೂರು: ಒಳ ಉಡುಪು ಹಾಗೂ ಗುದನಾಳದಲ್ಲಿ ಚಿನ್ನ ಅಡಗಿಸಿಕೊಂಡು ವಿದೇಶಗಳಿಂದ ವಿಮಾನದ ಮೂಲಕ ನಗರಕ್ಕೆ ಬಂದಿದ್ದ ಇಬ್ಬರು ಆರೋಪಿಗಳನ್ನು ಕಸ್ಟಮ್ಸ್ ಅಧಿಕಾರಿಗಳು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದಾರೆ. ಬಂಧಿತರಿಂದ ₹72.4 ಲಕ್ಷ ಮೌಲ್ಯದ ಚಿನ್ನ ಜಪ್ತಿ ಮಾಡಿದ್ದಾರೆ.

'ಬಂಧಿತರಿಬ್ಬರೂ ತಮಿಳುನಾಡಿನವರು. ಆರೋಪಿಯೊಬ್ಬ ಇದೇ 25 ರಂದು ಶಾರ್ಜಾದಿಂದ ಏರ್ ಅರೇಬಿಯಾ ಜಿ9-496 ವಿಮಾನದಲ್ಲಿ ನಗರಕ್ಕೆ ಬಂದಿದ್ದ. ಪರಿಶೀಲನೆ ವೇಳೆ ಚಿನ್ನ ಕಳ್ಳಸಾಗಣೆ ವಿಷಯ ಬಾಯ್ಬಿಟ್ಟಿದ್ದ. ಆತ ತನ್ನ ಒಳ ಉಡುಪಿನಲ್ಲಿ ₹52.5 ಲಕ್ಷ ಮೌಲ್ಯದ 1.1ಕೆ.ಜಿ. ಚಿನ್ನ ಅವಿತಿಟ್ಟುಕೊಂಡಿದ್ದ' ಎಂದು ಕಸ್ಟಮ್ಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'25 ವರ್ಷದ ಮತ್ತೊಬ್ಬ ಯುವಕ ಇದೇ ವಿಮಾನದಲ್ಲಿ ನಗರಕ್ಕೆ ಬಂದಿದ್ದ. ಆತ ದ್ರವರೂಪದ ಚಿನ್ನವನ್ನೊಳಗೊಂಡ ಉದ್ದನೆಯ ಮಾತ್ರೆಗಳನ್ನು ಗುದನಾಳದಲ್ಲಿ ಅಡಗಿಸಿಟ್ಟುಕೊಂಡಿದ್ದ. ಆತನಿಂದ ₹19.9 ಲಕ್ಷ ಮೌಲ್ಯದ 421 ಗ್ರಾಂ ಚಿನ್ನ ಜಪ್ತಿ ಮಾಡಲಾಗಿದೆ' ಎಂದು ಹೇಳಿದರು.

## 'ಶಿಕ್ಷಣದಲ್ಲಿ ಸ್ಥಳೀಯ ಭಾಷೆಗೆ ಹೆಚ್ಚು ಮಹತ್ವ ಸಿಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳಿಗೆ ಸ್ಥಳೀಯ ಭಾಷೆಯಲ್ಲಿ ಶಿಕ್ಷಣ ದೊರೆಯುವಂತಾಗಬೇಕು. ಪೋಷಕರ ಆಂಗ್ಲ ಭಾಷಾ ಪ್ರೀತಿ ಕಡಿಮೆಯಾಗಬೇಕು. ನಮ್ಮ ಸಾಂಸ್ಕೃತಿಕ ಅಖಂಡತೆ ಅರಿಯಲು ಮಾತೃ ಭಾಷಾ ಶಿಕ್ಷಣ ಬೇಕು' ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಹೇಳಿದರು.

ಬೋರಗಿಯ ನಬಿರೋಷನ್ ಪ್ರಕಾಶನ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 'ನಾವು ಭಾರತೀಯರು' ಶಿಶುಗೀತೆ ಪುಸ್ತಕ ಬಿಡುಗಡೆ ಹಾಗೂ ಆರಕ್ಷಕ ಸೇವಾರತ್ನ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಗೀತ ರಚನೆಕಾರ ವಿ. ನಾಗೇಂದ್ರ ಪ್ರಸಾದ್ ಮಾತನಾಡಿ, 'ಪುಸ್ತಕ ಖರೀದಿಸಿ ಓದಿ ಮನದಲ್ಲಿ ಇಟ್ಟುಕೊಳ್ಳಿ. ಅದು ಆರದ ದೀಪ ಎಲ್ಲಾ ಕಡೆ ಕತ್ತಲು ತುಂಬಿದಾಗ ಪುಸ್ತಕದ ಬೆಳಕು ದಾರಿ ತೋರುತ್ತದೆ' ಎಂದು ಅವರು ಹೇಳಿದರು.

ಚಂದ್ರಶೇಖರ ಕಂಬಾರ ಅವರು 'ನಾವು ಭಾರತೀಯರು' ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ಪತ್ರಕರ್ತ ರಾಘವ ಸೂರ್ಯ, ವಿ.ನಾಗೇಂದ್ರ ಪ್ರಸಾದ್, ಮೌಲಾಲಿ ಕೆ. ಆಲಗೂರ, ಶ್ರೀಶೈಲ್ ಎಸ್.ಮೇಟಿ ಹಾಗೂ ಎಸಿಪಿ ಆರ್.ಎನ್. ನಿಖಿಲ್ ಕುಮಾರ್ ಇದ್ದಾರೆ. –ಪ್ರಜಾವಾಣಿ ಚಿತ್ರ

## 'ಮಸೀದಿ ಧ್ವನಿವರ್ಧಕ ಗೊಂದಲ ನಿವಾರಿಸಿ'

ಬೆಂಗಳೂರು: ಮಸೀದಿಗಳಲ್ಲಿ ಧ್ವನಿ ವರ್ಧಕ ಬಳಸುತ್ತಿರುವುದರ ವಿರುದ್ಧ ನೋಟಿಸ್ ನೀಡುತ್ತಿರುವುದನ್ನು ನಿಲ್ಲಿಸಿ, ಈ ಬಗ್ಗೆ ಮೂಡಿರುವ ಗೊಂದಲವನ್ನು ಬಗೆಹರಿಸಬೇಕು ಎಂದು ಕಾಂಗ್ರೆಸ್ ಶಾಸಕ ಬಿ.ಝಡ್. ಜಮೀರ್ ಅಹಮದ್ ಖಾನ್ ಅವರು ಪೊಲೀಸ್ ಮಹಾ ನಿರ್ದೇಶಕರಿಗೆ ಮನವಿ ಮಾಡಿದ್ದಾರೆ.

ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರನ್ನು ಮಂಗಳವಾರ ಭೇಟಿ ಮಾಡಿದ ಜಮೀರ್, ಈ ಕುರಿತು ಮನವಿ ಪತ್ರ ಸಲ್ಲಿಸಿದ್ದಾರೆ.

ಶಬ್ದ ಮಾಲಿನ್ಯ ಆಗದಂತೆ ಮಸೀದಿಗಳಲ್ಲಿ ಧ್ವನಿವರ್ಧಕಗಳನ್ನು ಬಳಸಲಾಗುತ್ತಿದೆ.ಅನುಮತಿ ಪಡೆದು ಸಾರ್ವಜನಿಕರಿಗೆ ತೊಂದರೆಯಾಗದಂತೆ ಧ್ವನಿವರ್ಧಕ ಅಳವಡಿಸಲಾಗಿದೆ. ಆದರೂ ನೋಟಿಸ್ ನೀಡಿರುವುದು ಸರಿಯಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

## ಫ್ಲ್ಯಾಟ್ ನೋಂದಣಿಗೆ ಲಂಚ: ಬಂಧನ

ಬೆಂಗಳೂರು: ಫ್ಲ್ಯಾಟ್ ಒಂದನ್ನು ನೋಂದಣಿ ಮಾಡಲು ಆನೇಕಲ್ ಉಪ ನೋಂದಣಾಧಿಕಾರಿ ಕಚೇರಿಯ ಅಧಿಕಾರಿ ಮತ್ತು ಸಿಬ್ಬಂದಿ ಪರವಾಗಿ ₹ 25,000 ಲಂಚ ಪಡೆದ ಐಕಾನ್ ಹೋಮ್ಸ್ ಎಂಬ ಖಾಸಗಿ ರಿಯಲ್ ಎಸ್ಟೇಟ್ ಉದ್ಯಮದ ಇಬ್ಬರನ್ನು ಎಸಿಬಿ ಮಂಗಳವಾರ ಬಂಧಿಸಿದೆ.

'ಆನೇಕಲ್ ಸಮೀಪ ನಿರ್ಮಿಸಿರುವ ವಸತಿ ಸಮುಚ್ಚಯದಲ್ಲಿ ಗಂಗಾನಗರದ ನಿವಾಸಿಯೊಬ್ಬರು ಫ್ಲ್ಯಾಟ್ ಖರೀದಿಸಿದ್ದರು. ಅದರ ನೋಂದಣಿಗೆ ಉಪ ನೋಂದಣಾಧಿಕಾರಿ ಕಚೇರಿಯ ಅಧಿಕಾರಿ ಮತ್ತು ಸಿಬ್ಬಂದಿಗೆ ₹25,000 ಲಂಚ ನೀಡುವಂತೆ ಐಕಾನ್ ಹೋಮ್ಸ್‌ನ ಗ್ರಾಹಕ ಸಂಪರ್ಕ ವ್ಯವಸ್ಥಾಪಕಿ ಶಿರೀಶಾ ಬೇಡಿಕೆ ಇಟ್ಟಿದ್ದರು. ಹಣವನ್ನು ಕಂಪನಿಯ ಕೋ-ಆರ್ಡಿನೇಟರ್ ಭರತ ಎಂಬುವವರಿಗೆ ತಲುಪಿಸುವಂತೆ ಸೂಚಿಸಲಾಗಿತ್ತು. ಈ ಕುರಿತು ಖರೀದಿದಾರರು ದೂರು ನೀಡಿದ್ದರು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## 'ಮತ್ತೊಮ್ಮೆ ಎನ್‌ಇಟಿ ಪರೀಕ್ಷೆ ನಡೆಸಿ'

ಬೆಂಗಳೂರು: 'ಎನ್‌ಇಟಿ' ಪರೀಕ್ಷೆಯ ಕನ್ನಡ ಐಚ್ಛಿಕ ಭಾಷೆ ಪತ್ರಿಕೆಯಲ್ಲಿ ಪ್ರಶ್ನೆಗಳನ್ನು ಹಿಂದಿ ಭಾಷೆಯಲ್ಲಿ ನೀಡಿರುವ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ (ಎನ್‌ಟಿಎ) ನಡೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಖಂಡಿಸಿದೆ. ಈ ಪರೀಕ್ಷೆಯನ್ನು ಮತ್ತೊಮ್ಮೆ ನಡೆಸುವಂತೆ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಕೇಂದ್ರ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಯುಜಿಸಿ ಅಧ್ಯಕ್ಷ ಕೆ. ಸಂಜಯ್ ಮೂರ್ತಿಗೆ ಪತ್ರ ಬರೆದಿದ್ದಾರೆ.

'ಪರೀಕ್ಷಾ ಸಂಸ್ಥೆಯ ಲೋಪದಿಂದ ಕನ್ನಡದ ವಿದ್ಯಾರ್ಥಿಗಳು ತೊಂದರೆಗೆ ಒಳಗಾಗಿದ್ದಾರೆ. ಪ್ರಶ್ನೆ ಪತ್ರಿಕೆಯಲ್ಲಿ 10 ಪ್ರಶ್ನೆಗಳು ಮಾತ್ರ ಕನ್ನಡದಲ್ಲಿದ್ದವು. ಉಳಿದ 90 ಪ್ರಶ್ನೆಗಳನ್ನು ಹಿಂದಿ ಭಾಷೆಯಲ್ಲಿ ನೀಡಲಾಗಿದೆ. ಇಂತಹ ಪ್ರಮಾದಗಳು ಮುಂದೆಂದೂ ಆಗದಂತೆ ಯುಜಿಸಿ-ಎನ್‌ಟಿಎ ಸಂಸ್ಥೆ ಅಗತ್ಯ ಕ್ರಮ ವಹಿಸಬೇಕು' ಎಂದು ಒತ್ತಾಯಿಸಿದ್ದಾರೆ.

# ಕರ್ಫ್ಯೂ: ಓಡಾಟ ನಿಯಂತ್ರಿಸಿ, ಕಿರುಕುಳ ನೀಡದಿರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ವೈರಾಣುವಿನ ರೂಪಾಂತರಿ 'ಓಮೈಕ್ರಾನ್' ಸೋಂಕು ನಗರದಲ್ಲಿ ದಿನೇ ದಿನೇ ಹೆಚ್ಚುತ್ತಿದೆ. ಓಮೈಕ್ರಾನ್ ಹರಡುವಿಕೆ ನಿಯಂತ್ರಿಸುವ ಉದ್ದೇಶದಿಂದ ಸರ್ಕಾರ 'ರಾತ್ರಿ ಕರ್ಫ್ಯೂ'ವನ್ನು ಮತ್ತೆ ಜಾರಿಗೊಳಿಸಿದೆ. 'ರಾತ್ರಿ ಕರ್ಫ್ಯೂ' ನಿಜಕ್ಕೂ ಅನಿವಾರ್ಯ ಇತ್ತೇ, ಸೋಂಕು ಹರಡುವಿಕೆಗೆ ತಡೆಗಟ್ಟಲು ಇದು ನೆರವಿಗೆ ಬರುತ್ತದೆಯೇ, ಇದರಿಂದ ಜನಜೀವನದ ಮೇಲೆ ಉಂಟಾಗಲಿರುವ ಪರಿಣಾಮಗಳೇನು ಎಂಬ ಬಗ್ಗೆ ವಿಭಿನ್ನ ಕ್ಷೇತ್ರಗಳ ಮೂವರು ಇಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಸೋಂಕು ನಿಯಂತ್ರಿಸುವಲ್ಲಿ ರಾತ್ರಿ ಕರ್ಫ್ಯೂ ನೆರವಾಗುವುದು ನಿಜ ಎಂಬುದು ತಜ್ಞರ ಅಭಿಪ್ರಾಯ. ಇದನ್ನು ಜಾರಿಗೊಳಿಸುವ ನೆಪದಲ್ಲಿ ಹೋಟೆಲ್, ಬಾರ್ ಮತ್ತು ರೆಸ್ಟೋರೆಂಟ್ ಮಾಲೀಕರಿಗೆ ಕಿರುಕುಳ ನೀಡಬಾರದು ಎಂಬುದು ಜಿಲ್ಲೆಯ ಮದ್ಯ ವ್ಯಾಪಾರಿಗಳ ಸಂಘದ ಕೋರಿಕೆ.

ರಾಜಧಾನಿ ಒಡಲದನಿ

## 'ಗುಂಪುಗೂಡುವಿಕೆ ತಡೆಯಲು ಸಹಕಾರಿ'

ಕೊರೊನಾ ವೈರಾಣು ಹರಡುವುದು ಕೆಮ್ಮುವಾಗ, ಸೀನುವಾಗ ದೇಹದಿಂದ ಹೊರ ಚಿಮ್ಮುವ ವೈರಾಣುಯುಕ್ತ ಹನಿಗಳಿಂದ. ಜನ ಗುಂಪುಗೂಡುವುದನ್ನು ತಡೆಯುವುದು, ಸೋಂಕು ಹರಡುವಿಕೆ ತಡೆಯುವುದಕ್ಕೂ ಸಹಕಾರಿ. ರಾತ್ರಿ ಕರ್ಫ್ಯೂ ಇರಲಿ, ದಿನದ ಕರ್ಫ್ಯೂವೇ ಇರಲಿ, ಇದರಿಂದ ಸೋಂಕು ನಿಯಂತ್ರಣಕ್ಕೆ ಅಲ್ಪಮಟ್ಟಿನ ಅನುಕೂಲ ಇದ್ದೇ ಇದೆ.

ಜನರು ಹೊಸ ವರ್ಷಾಚರಣೆಗೆ ಸಜ್ಜಾಗುತ್ತಿರುವ ಹೊತ್ತಿನಲ್ಲಿ ರಾತ್ರಿ ವೇಳೆ ಹೊರಗಡೆ ಸುತ್ತಾಟ ತುಸು ಹೆಚ್ಚೇ ಇರುತ್ತದೆ. ನೂರಾರು ಮಂದಿ ರಾತ್ರಿ ವೇಳೆಯೂ ಮನೆಯಿಂದ ಹೊರಗೆ ಬರುತ್ತಾರೆ. ನಾಲ್ಕು ಗೋಡೆಗಳ ನಡುವೆ, ದೊಡ್ಡ ಔತಣಕೂಟಗಳಲ್ಲಿ, ಬಾರ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಜನ ಗುಂಪುಗೂಡಿ ಸಮಯ ಕಳೆಯುವ ಸಂದರ್ಭಗಳು ಜಾಸ್ತಿ. ಇಂತಹ ಕಡೆ ಸೋಂಕಿತರು ಇದ್ದರೆ, ಖಂಡಿತಾ ನೂರಾರು ಮಂದಿಗೆ ಸೋಂಕನ್ನು ಹರಡುತ್ತಾರೆ. ರಾತ್ರಿ ಕರ್ಫ್ಯೂ ಜಾರಿಗೊಳಿಸಿದರೆ, ಜನ ಗುಂಪುಗೂಡುವುದನ್ನು ತಡೆಯಬಹುದು.

ಆದರೆ, ಸೋಂಕು ನಿಯಂತ್ರಣಕ್ಕೆ ರಾತ್ರಿ ಕರ್ಫ್ಯೂ ಒಂದೇ ದಾರಿಯೇ? ಖಂಡಿತಾ ಅಲ್ಲ. ವಿವಿಧ ನಿಯಂತ್ರಣ ಕ್ರಮಗಳಲ್ಲಿ ಇದೂ ಒಂದು ಅಷ್ಟೆ. ಇದರ ಜೊತೆಗೆ ಇತರ ಮುನ್ನೆಚ್ಚರಿಕಾ ಕ್ರಮಗಳನ್ನೂ ಅನುಸರಿಸಬೇಕು

**ಪ್ರೊ.ರಂಗ ಉದಯ್‌ಕುಮಾರ್**, ವೈರಾಣುತಜ್ಞ, ಜವಹರಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರ, ಜಕ್ಕೂರು

## 'ರೆಸ್ಟೋರೆಂಟ್‌ಗಳಿಗೆ ಹೆಚ್ಚಲಿದೆ ಕಿರುಕುಳ'

ರಾತ್ರಿ ಕರ್ಫ್ಯೂ ಜಾರಿಗೊಳಿಸುವುದರಿಂದ ಓಮೈಕ್ರಾನ್ ಸೋಂಕು ಹರಡುವಿಕೆ ನಿಯಂತ್ರಿಸಬಹುದು ಎಂಬುದು ಮೂರ್ಖತನ. ಇದರ ಅಗತ್ಯವೇ ಇರಲಿಲ್ಲ. ಹೊಸ ವರ್ಷಾಚರಣೆ ಸಂದರ್ಭದಲ್ಲಿ ನಗರದಲ್ಲಿ ಜನ ಹೆಚ್ಚು ಗುಂಪುಗೂಡುವುದು ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ ಹಾಗೂ ಇಂದಿರಾನಗರ ಪ್ರದೇಶಗಳಲ್ಲಿ. ಅದನ್ನಷ್ಟೇ ತಡೆಯುವ ಬದಲು ಎಲ್ಲ ಕಡೆಯೂ ಕರ್ಫ್ಯೂ ಜಾರಿಗೊಳಿಸಿದರೆ ವರ್ತಕರಿಗೆ, ರೆಸ್ಟೋರೆಂಟ್‌ಗಳ ಮಾಲೀಕರಿಗೆ ಭಾರಿ ನಷ್ಟ ಉಂಟಾಗುತ್ತದೆ.

ಚಿತ್ರಮಂದಿರಗಳಲ್ಲಿ ಶೇ 100ರಷ್ಟು ಆಸನ ಭರ್ತಿಯಾಗಲು ಅವಕಾಶ ಮುಂದುವರಿಸಲಾಗಿದೆ. ಮಾಲ್‌ಗಳಿಗೂ ಹೆಚ್ಚಿನ ನಿರ್ಬಂಧ ಇಲ್ಲ. ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ಹಾಗೂ ಹೋಟೆಲ್‌ಗಳು ಶೇ 50ರಷ್ಟು ಆಸನಗಳನ್ನಷ್ಟೇ ಬಳಸಬಹುದು ಎಂದು ನಿರ್ಬಂಧಿಸಲಾಗಿದೆ. ಇದರ ಹಿಂದಿನ ತರ್ಕ ಯಾವುದು ಎಂದು ಅರ್ಥವಾಗುತ್ತಿಲ್ಲ.

ಕೋವಿಡ್ ಬಿಕ್ಕಟ್ಟಿನಿಂದಾಗಿ ತತ್ತರಿಸಿದ್ದೇವೆ. ಮನಬಂದಂತೆ ನಿರ್ಬಂಧ ಹೇರುತ್ತಿರುವ ಸರ್ಕಾರ ಅದರಿಂದಾಗುವ ನಷ್ಟ ಪರಿಹಾರ ತುಂಬಿಕೊಡುವುದಿಲ್ಲ. ಕಳೆದ ವರ್ಷ 50 ದಿನಗಳಿಗೂ ಹೆಚ್ಚು ದಿನ ರೆಸ್ಟೋರೆಂಟ್‌ಗಳನ್ನು ತೆರೆಯುವುದಕ್ಕೇ ಸರ್ಕಾರ ಅವಕಾಶ ನೀಡಲಿಲ್ಲ. ಪರವಾನಗಿ ಶುಲ್ಕವನ್ನು ಈ ಎರಡು ತಿಂಗಳು ಮಾಫಿ ಮಾಡಿ ಎಂಬ ಬೇಡಿಕೆಗೂ ಸ್ಪಂದಿಸಿಲ್ಲ. ರಾತ್ರಿ 10 ಗಂಟೆಗೆ ರೆಸ್ಟೋರೆಂಟ್‌ಗಳನ್ನು ಮುಚ್ಚಿದರೆ ವ್ಯಾಪಾರಕ್ಕೆ ಮತ್ತೆ ಹೊಡೆತ ಬೀಳುತ್ತದೆ. ಅದಕ್ಕಿಂತಲೂ ಪೊಲೀಸರಿಂದ ಆಗುವ ಕಿರುಕುಳ ಮತ್ತಷ್ಟು ಹೆಚ್ಚಲಿದೆ.

**ಲೋಕೇಶ್**, ಬೆಂಗಳೂರು ನಗರ ಜಿಲ್ಲೆಯ ಮದ್ಯ ವ್ಯಾಪಾರಿಗಳ ಸಂಘದ ಅಧ್ಯಕ್ಷ

## 'ರಾಜಕೀಯ ರ‍್ಯಾಲಿಗೆ ನಿರ್ಬಂಧ ಏಕಿಲ್ಲ'

ಬೆಳಿಗ್ಗೆ ಹೊತ್ತು ಜನ ಗುಂಪುಗೂಡುವಿಕೆ ನಿಯಂತ್ರಿಸುವುದು ಸುಲಭ. ಆದರೆ, ರಾತ್ರಿ ಹೊತ್ತು ಇದನ್ನು ನಿಯಂತ್ರಿಸುವುದು ಬಲು ಕಷ್ಟ. ಹಾಗಾಗಿ ರಾತ್ರಿ ಕರ್ಫ್ಯೂ ಜಾರಿಗೊಳಿಸುವ ಕ್ರಮ ತಪ್ಪಲ್ಲ. ಸಮಸ್ಯೆ ಅದಲ್ಲ, ರಾಜಕೀಯ ರ‍್ಯಾಲಿಗಳಿಗೆ, ರಾಜಕೀಯ ಪಕ್ಷಗಳ ಚಟುವಟಿಕೆಗಳಿಗೆ ಇಂತಹ ಯಾವುದೇ ನಿರ್ಬಂಧವೂ ಅನ್ವಯವಾಗುತ್ತಿಲ್ಲ. ಇವುಗಳ ಮೇಲೆ ನಿಗಾ ಇಡಲು ಆಡಳಿತ ಯಂತ್ರಕ್ಕೂ ಆಸಕ್ತಿ ಇಲ್ಲ. ರಾಜಕೀಯ ಮುಖಂಡರು ಜನರಿಗೆ ಮಾದರಿಯಾಗಿರಬೇಕು. ಸೋಂಕು ನಿಯಂತ್ರಣಾ ಕ್ರಮಗಳ ಮಹತ್ವ ಸಾರುವ ವಿಚಾರದಲ್ಲಿ ಮೇಲ್ಪಂಕ್ತಿ ಹಾಕಿಕೊಡಬೇಕು. ಆದರೆ ಅವರು ಅದಕ್ಕೂ ತಮಗೂ ಸಂಬಂಧವೇ ಇಲ್ಲದಂತೆ ವರ್ತಿಸುತ್ತಿದ್ದಾರೆ.

ಅಧಿಕಾರಿಗಳು, ಮಾರ್ಷಲ್‌ಗಳು ಕೇವಲ ಮಾಸ್ಕ್ ಕಡ್ಡಾಯಗೊಳಿಸುವುದರ ಹಿಂದೆ ಬಿದ್ದಿದ್ದಾರೆ. ಮಾಸ್ಕ್ ಹಾಕಿಕೊಳ್ಳುವುದರ ಜೊತೆಗೆ ಪರಸ್ಪರ ಅಂತರ ಕಾಪಾಡುವುದೂ ಅಷ್ಟೇ ಮುಖ್ಯ. ಕಚೇರಿಗಳಲ್ಲಿ, ಅಂಗಡಿ ಮಳಿಗೆಗಳಲ್ಲಿ, ಮಾರುಕಟ್ಟೆಗಳಲ್ಲಿ, ಮಾಲ್‌ಗಳಲ್ಲಿ ಸಾರ್ವಜನಿಕ ಸಾರಿಗೆ ಮುಂತಾದೆಡೆಗಳಲ್ಲೆಲ್ಲಾ ಅಂತರ ಕಾಪಾಡುವಿಕೆಯನ್ನು ಕಡೆಗಣಿಸಲಾಗುತ್ತಿದೆ. ಇದು ಸೋಂಕು ಹೆಚ್ಚಳಕ್ಕೆ ಕಾರಣವಾಗುತ್ತಿದೆ.

**ಪ್ರಭಾ ದೇವ್**, 'ಹೆರಿಟೇಜ್ ಬೇಕು' ಸಂಘಟನೆ

ಸುದ್ದಿ 2 ನಿಮಿಷ

## 'ರಸ್ತೆ ಅಭಿವೃದ್ಧಿ ಹಣವನ್ನು ಕೋವಿಡ್‌ಗೆ ಬಳಸಿ'

ಬೆಂಗಳೂರು: 'ನಗರದ ರಸ್ತೆ, ಕಟ್ಟಡಗಳ ಆಧುನೀಕರಣಕ್ಕೆ ಸರ್ಕಾರವು ಸಾವಿರಾರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುವ ಬದಲು, ಆ ಹಣವನ್ನು ಕೋವಿಡ್ ನಿಯಂತ್ರಣಕ್ಕೆ ಬಳಸಬೇಕು' ಎಂದು ಕೆಪಿಸಿಸಿ ವಕ್ತಾರ ಪ್ರೊ.ಬಿ.ಕೆ. ಚಂದ್ರಶೇಖರ್ ಆಗ್ರಹಿಸಿದ್ದಾರೆ.

'ಅತಿ ಗಣ್ಯ ವ್ಯಕ್ತಿಗಳು (ವಿವಿಐಪಿ) ಸಂಚರಿಸುವ ಮಾರ್ಗಗಳನ್ನು ಆಧುನೀಕರಣಗೊಳಿಸಿ, ಕೇಂದ್ರ ವಾಣಿಜ್ಯ ಪ್ರದೇಶಗಳನ್ನಾಗಿ (ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್) ಮಾರ್ಪಾಡು ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬೆಳಗಾವಿ ಅಧಿವೇಶನದಲ್ಲಿ ತಿಳಿಸಿದ್ದಾರೆ. ಸಂಚಾರ ವ್ಯವಸ್ಥೆಯ ಉನ್ನತೀಕರಣ ಸ್ವಾಗತಾರ್ಹ. ಆದರೆ, ವಿವಿಐಪಿ ವ್ಯಕ್ತಿಗಳು ಇರದ ಬಡಾವಣೆಗಳು ಅವ್ಯವಸ್ಥೆಯ ಆಗರವಾಗಿವೆ. ದಿಕ್ಕುದೆಸೆಯಿಲ್ಲದ ಸಂಚಾರ, ಎಲ್ಲೆಂದರಲ್ಲಿ ವಾಹನಗಳ ನಿಲುಗಡೆ ಹಾಗೂ ಪಾದಚಾರಿ ಮಾರ್ಗದ ಅತಿಕ್ರಮಣವನ್ನು ಕಾಣಬಹುದಾಗಿದೆ.' ಎಂದಿದ್ದಾರೆ.

'ಸಂಚಾರ ಅವ್ಯವಸ್ಥೆಗೆ ಬನಶಂಕರಿ ಎರಡನೇ ಹಂತ ಉತ್ತಮ ಉದಾಹರಣೆ. ಪಾದಚಾರಿ ಮಾರ್ಗಗಳಲ್ಲಿಯೇ ವಾಹನಗಳನ್ನು ನಿಲ್ಲಿಸಲಾಗುತ್ತಿದೆ. ಹೀಗಾಗಿ, ಈಗ ಸೌಂದರ್ಯೀಕರಣದ ಯೋಜನೆ ಅಗತ್ಯವಿದೆಯೆ? 'ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರ'ವು 2021ರ ಅಕ್ಟೋಬರ್‌ನಲ್ಲಿ ನಡೆಸಿದ ಸಮೀಕ್ಷೆ ಪ್ರಕಾರ ಹಲವಾರು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆಯಿದೆ. ಕೋವಿಡ್ ಪರೀಕ್ಷೆಗೆ ಈಗಲೂ ಸೂಕ್ತ ವ್ಯವಸ್ಥೆಯಿಲ್ಲ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 21 ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣ ಪತ್ತೆ

ಬೆಂಗಳೂರು: ರಾಜ್ಯದ 21 ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ಮಂಗಳವಾರ ಪತ್ತೆಯಾಗಿವೆ. 356 ಮಂದಿ ಹೊಸದಾಗಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಒಂದು ದಿನದ ಅವಧಿಯಲ್ಲಿ 69 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.50ರಷ್ಟಿದೆ. ಮೂರು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 17 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಯಾದಗಿರಿ, ರಾಮನಗರ ಸೇರಿದಂತೆ 9 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರು ನಗರದಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಏರಿಕೆ ಕಂಡಿದೆ. ಮತ್ತೆ 269 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಡುಪಿಯಲ್ಲಿ 20, ಮೈಸೂರು ಹಾಗೂ ದಕ್ಷಿಣ ಕನ್ನಡದಲ್ಲಿ ತಲಾ 10 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 10ಕ್ಕಿಂತ ಕಡಿಮೆ ಇವೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 30.05 ಲಕ್ಷಕ್ಕೆ ಏರಿಕೆಯಾಗಿದೆ.

ಸೋಂಕಿತರಲ್ಲಿ 347 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.59 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 7,456ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲಿ 6,122 ಸೋಂಕಿತರಿದ್ದಾರೆ. ಯಾದಗಿರಿ ಹಾಗೂ ಗದಗ ಜಿಲ್ಲೆಯಲ್ಲಿ ಸಕ್ರಿಯ ಪ್ರಕರಣಗಳಿಲ್ಲ. ಬೀದರ್, ಹಾವೇರಿ ಸೇರಿದಂತೆ ಆರು ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 10ಕ್ಕಿಂತ ಕಡಿಮೆಯಿದೆ.

ಸಿದ್ಧತೆ ನಡೆಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಸೂಚನೆ • ಕಾರ್ಯಕ್ರಮದ ಅನುಷ್ಠಾನಕ್ಕೆ ಸಕಲ ಸಿದ್ಧತೆ

# 15 ವರ್ಷ ಮೇಲಿನ ಮಕ್ಕಳಿಗೆ ಜ.3ರಿಂದ ಕೋವಿಡ್ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 15 ವರ್ಷದಿಂದ 18 ವರ್ಷದೊಳಗಿನ ಮಕ್ಕಳಿಗೆ 2022ರ ಜ.3ರಿಂದ ಕೋವಿಡ್ ಲಸಿಕೆ ನೀಡುವ ಪ್ರಕ್ರಿಯೆ ಆರಂಭವಾಗಲಿದೆ.

'ಮಕ್ಕಳಿಗೆ ಲಸಿಕೆ ನೀಡುವ ಕಾರ್ಯಕ್ರಮದ ಅನುಷ್ಠಾನಕ್ಕೆ ಆಯಾ ವಲಯ ವ್ಯಾಪ್ತಿಯಲ್ಲಿ ಸಕಲ ಸಿದ್ಧತೆ ಮಾಡಿಕೊಳ್ಳಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದಲ್ಲಿ ಕೋವಿಡ್ ನಿಯಂತ್ರಣ ಸಂಬಂಧ ವರ್ಚುವಲ್ ರೂಪದಲ್ಲಿ ಮಂಗಳವಾರ ಸಭೆ ನಡೆಸಿದ ಅವರು, 'ಪಾಲಿಕೆ ವ್ಯಾಪ್ತಿಯ ಸರ್ಕಾರಿ ಹಾಗೂ ಖಾಸಗಿ ಶಾಲಾ-ಕಾಲೇಜುಗಳ ಪಟ್ಟಿಯನ್ನು ವಲಯವಾರು ಸಿದ್ಧಪಡಿಸಿಕೊಳ್ಳಬೇಕು. ಲಸಿಕೆ ನೀಡುವ ಸಿಬ್ಬಂದಿಯನ್ನು ಈ ಎಲ್ಲ ಶಾಲಾ-ಕಾಲೇಜುಗಳಿಗೆ ನಿಯೋಜಿಸಬೇಕು' ಎಂದು ನಿರ್ದೇಶನ ನೀಡಿದರು.

'15ವರ್ಷದಿಂದ 18 ವರ್ಷದೊಳಗಿನ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದರೆ ಅವರಿಗೂ ಲಸಿಕೆ ನೀಡಬೇಕು. ಶಾಲೆ ತೊರೆದ ಮಕ್ಕಳನ್ನು ಗುರುತಿಸಿ ಲಸಿಕೆ ನೀಡಲು ಸರ್ಕಾರೇತರ ಸಂಸ್ಥೆಗಳ ಜೊತೆ ಸೇರಿ ಕ್ರಮ ಕೈಗೊಳ್ಳಬೇಕು. ಕೊಳೆಗೇರಿ ಪ್ರದೇಶ, ಕೈಗಾರಿಕಾ ಪ್ರದೇಶಗಳಲ್ಲಿ ಈ ಬಗ್ಗೆ ಹೆಚ್ಚಿನ ನಿಗಾ ಅಗತ್ಯ' ಎಂದರು.

'ಹೆಚ್ಚು ಕೋವಿಡ್ ಪ್ರಕರಣಗಳು ಕಂಡುಬರುತ್ತಿರುವ ಕಡೆ ಸೋಂಕು ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು. ಸೋಂಕಿತರ ಸಂಪರ್ಕಕ್ಕೆ ಬಂದವರನ್ನು ಪತ್ತೆಹಚ್ಚುವ ಮಾಡುವ ಮೂಲಕ ಸೊಂಕನ್ನು ಮೂಲದಲ್ಲಿಯೇ ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕು. ಆಯಾ ವಾರ್ಡ್ ವ್ಯಾಪ್ತಿಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಜೊತೆ ಆರೋಗ್ಯ ವೈದ್ಯಾಧಿಕಾರಿಗಳು ಸಭೆ ನಡೆಸಬೇಕು. ಜನಸಂದಣಿ ಸೇರುವ ಪ್ರದೇಶ, ಔತಣಕೂಟಗಳಲ್ಲಿ ಕೋವಿಡ್ ನಿಯಂತ್ರಣ ನಿಯಮಗಳು ಕಡ್ಡಾಯವಾಗಿ ಪಾಲನೆ ಆಗುವಂತೆ ನೋಡಿಕೊಳ್ಳಬೇಕು. ಜನಸಂದಣಿ ಇರುವ ಕಡೆ ಹೋಗದಂತೆ ಜನಜಾಗೃತಿ ಮೂಡಿಸಬೇಕು' ಎಂದು ಸಲಹೆ ನೀಡಿದರು.

'ನಗರದಲ್ಲಿ ಪ್ರತಿನಿತ್ಯ ಸುಮಾರು 45,000 ಕೋವಿಡ್ ಪರೀಕ್ಷೆ ಮಾಡಲಾಗುತ್ತಿದೆ. ಅದನ್ನು ಮತ್ತಷ್ಟು ಹೆಚ್ಚಿಸಬೇಕು. ಲಸಿಕೆ ಪಡೆಯದವರನ್ನು ಗುರುತಿಸಿ ಲಸಿಕೆ ನೀಡಬೇಕು. ಕೋವಿಡ್ ನಿರ್ಬಂಧಗಳ ಜಾರಿಗೆ ಪೊಲೀಸ್ ಇಲಾಖೆ ಜೊತೆ ಕೈಜೋಡಿಸಬೇಕು. ರೆಸ್ಟೋರೆಂಟ್, ವಾಣಿಜ್ಯ ಉದ್ದಿಮೆಗಳಲ್ಲಿ ಕೋವಿಡ್ ನಿಯಮಗಳು ಉಲ್ಲಂಘನೆ ಕಂಡುಬಂದಲ್ಲಿ ದಂಡ ವಿಧಿಸಬೇಕು' ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಎಲ್ಲ ವಲಯಗಳ ಜಂಟಿ ಆಯುಕ್ತರು, ಮುಖ್ಯ ಆರೋಗ್ಯಾಧಿಕಾರಿ (ಆರೋಗ್ಯ) ಡಾ. ಬಾಲಸುಂದರ್, ಎಲ್ಲ ವಲಯಗಳ ಆರೋಗ್ಯ ಅಧಿಕಾರಿಗಳು, ಆರೋಗ್ಯ ವೈದ್ಯಾಧಿಕಾರಿಗಳು ಪಾಲ್ಗೊಂಡರು.

### ನಗರದ ಕೋವಿಡ್ ಅಂಕಿ–ಅಂಶ

| | |
|---|---|
| 12,61,997 | ಒಟ್ಟು ಪ್ರಕರಣಗಳು |
| 6,122 | ಸಕ್ರಿಯ ಪ್ರಕರಣಗಳು |
| 12,39,486 | ಗುಣಮುಖರಾದವರು |
| 16,388 | ಒಟ್ಟು ಸಾವು |
| ದಿನದ ಏರಿಕೆ | |
| ಹೊಸ ಪ್ರಕರಣ | 269 |
| ಗುಣಮುಖ | 209 |
| ಸಾವು | 01 |

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

### ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ಕೋವಿಡ್19 ವರ್ಲ್ಡೋಮೀಟರ್

| | ವಿಶ್ವ | ಭಾರತ |
|---|---|---|
| ಒಟ್ಟು ಪ್ರಕರಣ | 28.23 ಕೋಟಿ | 3.47 ಕೋಟಿ |
| ಸಕ್ರಿಯ ಪ್ರಕರಣ | 2.53 ಕೋಟಿ | 75,456 |
| ಗುಣಮುಖ | 25.15 ಕೋಟಿ | 3.42 ಕೋಟಿ |
| ಸಾವು | 54.26 ಲಕ್ಷ | 4.80 ಲಕ್ಷ |
| ದಿನದ ಮಾಹಿತಿ: ಹೊಸ ಪ್ರಕರಣ | 7.60 ಲಕ್ಷ | 6,358 |
| ದಿನದ ಮಾಹಿತಿ: ಗುಣಮುಖ | 4.67 ಲಕ್ಷ | 6,450 |
| ದಿನದ ಮಾಹಿತಿ: ಸಾವು | 5,193 | 293 |

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

| | |
|---|---|
| ಅಮೆರಿಕ | 2.29 ಲಕ್ಷ |
| ಬ್ರಿಟನ್ | 98,515 |
| ಸ್ಪೇನ್ | 53,654 |

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು

| | |
|---|---|
| ಅಮೆರಿಕ | 1.17 ಕೋಟಿ |
| ಫ್ರಾನ್ಸ್ | 11.71 ಲಕ್ಷ |
| ಬ್ರಿಟನ್ | 19.35 ಲಕ್ಷ |

ಎಲ್ಲಿ ಹೆಚ್ಚು ಸಾವು (ಒಟ್ಟು)

| | |
|---|---|
| ಮಹಾರಾಷ್ಟ್ರ | 1.41 ಲಕ್ಷ |
| ಕೇರಳ | 46,822 |
| ತಮಿಳುನಾಡು | 36,744 |

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

| | |
|---|---|
| ಮಹಾರಾಷ್ಟ್ರ | 66.59 |
| ಕೇರಳ | 52.36 |
| ತಮಿಳುನಾಡು | 27.44 |

ಪ್ರಜಾವಾಣಿ ಗ್ರಾಫಿಕ್ಸ್

ಸಭೆಯಲ್ಲಿ ಗೌರವ್ ಗುಪ್ತ ಮಾತನಾಡಿದರು. ಡಾ.ಕೆ.ವಿ.ತ್ರಿಲೋಕಚಂದ್ರ ಹಾಗೂ ಬಿಬಿಎಂಪಿ ಆರೋಗ್ಯ ವಿಭಾಗದ ಅಧಿಕಾರಿಗಳು ಇದ್ದಾರೆ

## 'ಮುನ್ನೆಚ್ಚರಿಕಾ ಡೋಸ್ ಜ.10ರಿಂದ'

'ಆರೋಗ್ಯ ಕಾರ್ಯಕರ್ತರು, ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ಮುಂಚೂಣಿಯಲ್ಲಿರುವ ಕಾರ್ಯಕರ್ತರು ಹಾಗೂ 60 ವರ್ಷ ಮೇಲ್ಪಟ್ಟವರಿಗೆ ಜ.10ರಿಂದ ಮುನ್ನೆಚ್ಚರಿಕೆ ಡೋಸ್ (ಬೂಸ್ಟರ್ ಡೋಸ್) ನೀಡಲಾಗುತ್ತದೆ. ಇದಕ್ಕೂ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಬೇಕು' ಎಂದು ಗೌರವ್ ಗುಪ್ತ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

## 'ಲಸಿಕೆ: 5 ಲಕ್ಷ ಮಕ್ಕಳು ಅರ್ಹ'

'ಬಿಬಿಎಂಪಿ ವ್ಯಾಪ್ತಿಯಲ್ಲಿ 15-18 ವರ್ಷದೊಳಗಿನ 5 ಲಕ್ಷ ಮಕ್ಕಳಿದ್ದಾರೆ. ಶಿಕ್ಷಣ ಸಂಸ್ಥೆಗಳು, ಲಸಿಕೆ ಪಡೆಯಲು ಅರ್ಹರಾಗಿರುವ ಮಕ್ಕಳು ಹಾಗೂ ಲಸಿಕಾಕರಣ ನಡೆಯುವ ಸ್ಥಳಗಳ ಮಾಹಿತಿ ಕಲೆಹಾಕಿ ವಲಯವಾರು ಕ್ರಿಯಾ ಯೋಜನೆಯನ್ನು ತಯಾರಿಸಬೇಕು' ಎಂದು ವಿಶೇಷ ಆಯುಕ್ತ (ಆರೋಗ್ಯ) ಡಾ.ಕೆ.ವಿ.ತ್ರಿಲೋಕಚಂದ್ರ ಅವರು ಅಧಿಕಾರಿಗಳಿಗೆ ಸೂಚಿಸಿದರು.

# ನಡು ರಸ್ತೆಯಲ್ಲೇ ಮಹಿಳೆಯ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆದ್ದಾರಿ ಬದಿಯಲ್ಲಿ ದಿನವಿಡೀ ಕಾದು ಕುಳಿತಿದ್ದ ಆರೋಪಿಗಳು ಕಾರೊಂದನ್ನು ಅಡ್ಡಗಟ್ಟಿ ಅದರಲ್ಲಿದ್ದ ಮಹಿಳೆಯನ್ನು ನಡು ರಸ್ತೆಯಲ್ಲಿ ಹತ್ಯೆ ಮಾಡಿದ್ದಾರೆ. ಈ ಸಂಬಂಧ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಅರ್ಚನಾ ರೆಡ್ಡಿ (42) ಕೊಲೆಯಾದವರು. ಮೂಲತಃ ಜಿಗಣಿಯವರಾದ ಅವರು ಪ್ರಸ್ತುತ ಬೆಳ್ಳಂದೂರಿನಲ್ಲಿ ವಾಸವಿದ್ದರು. ಸೋಮವಾರ ಜಿಗಣಿ ಪುರಸಭೆಗೆ ಮತದಾನ ನಡೆದಿತ್ತು. ಮತ ಹಾಕಲು ಹೋಗಿದ್ದ ಅರ್ಚನಾ, ರಾತ್ರಿ 10.30ರ ಸುಮಾರಿಗೆ ಮಗನೊಂದಿಗೆ ಮನೆಗೆ ಮರಳುತ್ತಿದ್ದರು. ಹೊಸರೋಡ್ ಸಿಗ್ನಲ್ ಬಳಿ ಕಾರು ಅಡ್ಡಗಟ್ಟಿದ್ದ ಆರೋಪಿಗಳು ಮಚ್ಚು ಮತ್ತು ಲಾಂಗ್‌ಗಳಿಂದ ಅರ್ಚನಾ ಮೇಲೆ ಮನಸೋ ಇಚ್ಛೆ ದಾಳಿ ನಡೆಸಿದ್ದರು. ಇದನ್ನು ಕಂಡು ಭಯಭೀತರಾಗಿದ್ದ ಕಾರು ಚಾಲಕ ಹಾಗೂ ಅರ್ಚನಾ ಅವರ ಮಗ ಕಾರಿನಿಂದ ಇಳಿದು ಪರಾರಿಯಾಗಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಮೊದಲ ಪತಿಯಿಂದ ಬೇರೆಯಾಗಿದ್ದ ಅರ್ಚನಾ ಬಳಿಕ ನವೀನ್ ಕುಮಾರ್ ಎಂಬಾತನನ್ನು ವಿವಾಹವಾಗಿದ್ದರು. ಕೆಲ ವರ್ಷಗಳ ನಂತರ ದಂಪತಿ ನಡುವೆ ಚನ್ನಪಟ್ಟಣದಲ್ಲಿರುವ ಆಸ್ತಿ ವಿಚಾರಕ್ಕೆ ಗಲಾಟೆ ನಡೆದಿತ್ತು. ಈ ಸಂಬಂಧ ಜಿಗಣಿ ಠಾಣೆಯಲ್ಲಿ ದೂರು ಕೂಡ ದಾಖಲಾಗಿತ್ತು. ಬಳಿಕ ನವೀನ್‌ನಿಂದ ದೂರವಾಗಿದ್ದ ಅರ್ಚನಾ, ಮಗನೊಂದಿಗೆ ಬೆಳ್ಳಂದೂರಿನ ಮನೆಯೊಂದರಲ್ಲಿ ವಾಸವಿದ್ದರು' ಎಂದು ಮಾಹಿತಿ ನೀಡಿದರು.

'ಕೊಲೆಯ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಹಳೆ ವೈಷಮ್ಯದಿಂದಾಗಿ ನವೀನ್ ಹಾಗೂ ಆತನ ಸಹಚರ ಸಂತೋಷ್ ಎಂಬುವರೇ ಹತ್ಯೆ ಮಾಡಿರಬಹುದು ಎಂಬ ಅನುಮಾನ ಇದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ರಾಜಾಜಿನಗರದ ಅಪಾರ್ಟ್‌ಮೆಂಟ್‌ನಲ್ಲಿ 23 ಪ್ರಕರಣ

# ನಗರದ ಎರಡು ಕಡೆ ಹೊಸ ಕ್ಲಸ್ಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಎರಡು ಕಡೆ ಹೊಸ ಕೋವಿಡ್ ಕ್ಲಸ್ಟರ್‌ಗಳು ಕಂಡುಬಂದಿವೆ. ವರ್ಷಾಂತ್ಯದ ರಜಾ ದಿನಗಳಲ್ಲಿ ಸೋಂಕು ಪತ್ತೆ ಪ್ರಮಾಣ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಬಿಬಿಎಂಪಿ ಅಧಿಕಾರಿಗಳು ಸೋಂಕು ನಿಯಂತ್ರಣ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸಜ್ಜಾಗಿದ್ದಾರೆ.

ಮೈಸೂರು ರಸ್ತೆ ಬಳಿಯ ಎಂಜಿನಿಯರ್ ಕಾಲೇಜಿನಲ್ಲೂ ಅನೇಕ ಕೋವಿಡ್ ಪ್ರಕರಣಗಳು ಪತ್ತೆಯಾಗಿದ್ದು, ಇಲ್ಲಿ ಹೊಸ ಕ್ಲಸ್ಟರ್ ನಿರ್ಮಾಣವಾಗಿದೆ ಎಂದು ವಿದ್ಯಾರ್ಥಿಗಳು ಆರೋಪಿಸಿದ್ದಾರೆ.

ಕ್ರಿಸ್‌ಮಸ್ ಅಂಗವಾಗಿ ಹಮ್ಮಿಕೊಂಡಿದ್ದ ಸಂಗೀತ (ಡಿಜೆ) ಕಾರ್ಯಕ್ರಮದಲ್ಲಿ ಪಾಲ್ಗೊಂಡ ಅನೇಕ ವಿದ್ಯಾರ್ಥಿಗಳಲ್ಲಿ ಕೋವಿಡ್ ಕಂಡುಬಂದಿದೆ. ಇನ್ನೂ ಅನೇಕರಲ್ಲಿ ಸೋಂಕಿನ ಲಕ್ಷಣಗಳು ಕಾಣಿಸಿಕೊಂಡಿವೆ. 'ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಪ್ರಕರಣಗಳು ಕಂಡು ಬಂದ ಬಳಿಕವೂ ತರಗತಿಗೆ ಹಾಜರಾಗುವಂತೆ ಕಾಲೇಜಿನ ಆಡಳಿತ ಒತ್ತಡ ಹೇರುತ್ತಿದೆ' ಎಂದು ವಿದ್ಯಾರ್ಥಿಯೊಬ್ಬರು ಆರೋಪಿಸಿದರು.

ಈ ಕುರಿತು ಪ್ರತಿಕ್ರಿಯಿಸಿದ ಕಾಲೇಜಿನ ಪ್ರಾಂಶುಪಾಲರು, 'ನಾಲ್ವರು ವಿದ್ಯಾರ್ಥಿಗಳಲ್ಲಿ ಕೋವಿಡ್ ಸೊಂಕು ಪತ್ತೆಯಾಗಿದ್ದು ನಿಜ. ಅವರು ಯಾರೂ ಹಾಸ್ಟೆಲ್‌ನ ನಿವಾಸಿಗಳಲ್ಲ. ಮನೆಯಿಂದಲೇ ಕಾಲೇಜಿಗೆ ಬರುತ್ತಿದ್ದವರು. ಸೋಂಕು ಪತ್ತೆಯಾದ ಬಳಿಕ ಅವರು ಯಾರೂ ತರಗತಿಗೆ ಹಾಜರಾಗಿಲ್ಲ' ಎಂದರು.

'ವಿದ್ಯಾರ್ಥಿಗಳಲ್ಲಿ ಕೋವಿಡ್ ಸೋಂಕು ಪತ್ತೆಯಾಗಿದ್ದು ಮಂಗಳವಾರ ಬೆಳಿಗ್ಗೆಯಷ್ಟೇ ತಿಳಿದುಬಂದಿದೆ. ಕಾಲೇಜಿನ ವಿದ್ಯಾರ್ಥಿಗಳಿಗೆ ಕೋವಿಡ್ ಪರೀಕ್ಷೆ ನಡೆಸಲು ಬಿಬಿಎಂಪಿ ಬಯಸಿದರೆ, ಅದಕ್ಕೆ ಅಗತ್ಯ ಸಹಕಾರ ನೀಡಲಿದ್ದೇವೆ' ಎಂದೂ ಅವರು ತಿಳಿಸಿದರು.

**23 ಮಂದಿಗೆ ಕೋವಿಡ್:** ರಾಜಾಜಿನಗರದ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲೂ ಕೋವಿಡ್ ಪ್ರಕರಣಗಳು ಭಾರಿ ಪ್ರಮಾಣದಲ್ಲಿ ಹೆಚ್ಚಳವಾಗಿರುವ ಬಗ್ಗೆ ಮಾಹಿತಿ ಬಂದಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

'ಮೊದಲ ಪ್ರಕರಣ ವಾರದ ಹಿಂದೆ ಪತ್ತೆಯಾಗಿತ್ತು. ನಂತರ ಇಲ್ಲಿ ಪ್ರತಿ ದಿನ ಒಂದೆರಡು ಪ್ರಕರಣಗಳು ದೃಢಪಡುತ್ತಲೇ ಇವೆ. ಇದುವರೆಗೆ ಒಟ್ಟು 23 ಪ್ರಕರಣಗಳು ಕಂಡುಬಂದಿವೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಾ.ಕೆ.ವಿ.ತ್ರಿಲೋಕಚಂದ್ರ ಮಾಹಿತಿ ನೀಡಿದರು.

'30ಕ್ಕೂ ಹೆಚ್ಚು ಮಹಡಿಗಳನ್ನು ಹೊಂದಿರುವ ಈ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಬೇರೆ ಬೇರೆ ಮಹಡಿಗಳ ನಿವಾಸಿಗಳಲ್ಲಿ ಸೋಂಕು ಪತ್ತೆಯಾಗಿದೆ. ಡಿ. 19ರಂದು ಆಯೋಜಿಸಿದ್ದ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾಗವಹಿಸಿದವರಲ್ಲಿ ಸೋಂಕು ಹರಡಿರುವ ಶಂಕೆ ಇದೆ' ಎಂದು ವಲಯದ ಆಯುಕ್ತ ಡಾ.ದೀಪಕ್ ತಿಳಿಸಿದರು.

'ಸೋಂಕಿತರಲ್ಲಿ ಯಾರಾದರೂ ಕೋವಿಡ್ ಪ್ರಮಾಣ ಹೆಚ್ಚು ಇರುವ ದೇಶಗಳಿಗೆ ಪ್ರಯಾಣ ಬೆಳೆಸಿದ್ದರೇ ಎಂಬ ಬಗ್ಗೆ ಖಚಿತ ಮಾಹಿತಿ ಇಲ್ಲ' ಎಂದರು.

'ರಾಜಾಜಿನಗರದ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಸೋಂಕು ಪತ್ತೆಯಾದವರಲ್ಲಿ ಯಾರೂ ಆಸ್ಪತ್ರೆಗೆ ದಾಖಲಾಗಿಲ್ಲ. ಅವರೆಲ್ಲರ ಮಾದರಿಗಳನ್ನೂ ವೈರಾಣುವಿನ ವಂಶವಾಹಿ ಸಂರಚನೆಯ ವಿಶ್ಲೇಷಣೆಗಾಗಿ (ಜೀನೋಮ್ ಸೀಕ್ವೆನ್ಸಿಂಗ್) ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿದೆ' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಇತ್ತೀಚಿನ ವಾರಗಳಲ್ಲಿ ಒಂದೇ ಕಡೆ ಅತಿ ಹೆಚ್ಚು ಸಂಖ್ಯೆಯಲ್ಲಿ ಸೋಂಕು ಪತ್ತೆಯಾದ ಪ್ರಕರಣ ಇದು. ಬೆಳ್ಳಂದೂರಿನ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ 12 ಪ್ರಕರಣಗಳು ಈ ಹಿಂದೆ ಪತ್ತೆಯಾಗಿದ್ದವು. ನಗರದಲ್ಲಿ ಒಟ್ಟು ಕ್ಲಸ್ಟರ್‌ಗಳ ಸಂಖ್ಯೆ 95ಕ್ಕೆ ಏರಿದೆ. 152 ವಾರ್ಡ್‌ಗಳಲ್ಲಿ 10ಕ್ಕಿಂತಲೂ ಹೆಚ್ಚು ಪ್ರಕರಣಗಳಿವೆ.

## ಇಂದಿನಿಂದ ಐಎಲ್‌ಐ, ಸಾರಿ ಪ್ರಕರಣಗಳ ಸಮೀಕ್ಷೆ

ಬೆಂಗಳೂರು: ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ) ಮತ್ತು ತೀವ್ರ ಉಸಿರಾಟದ ಸಮಸ್ಯೆ (ಸಾರಿ) ಪ್ರಕರಣಗಳ ಮನೆ ಮನೆ ಸಮೀಕ್ಷೆಯನ್ನು ಇದೇ 29ರಿಂದ 2022ರ ಜ.15ರವರೆಗೆ ನಡೆಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಇಲಾಖೆಯ ಆಯುಕ್ತ ಡಿ. ರಂದೀಪ್ ಸುತ್ತೋಲೆ ಹೊರಡಿಸಿದ್ದಾರೆ. 'ಇತ್ತೀಚೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಐಎಲ್‌ಐ, ಸಾರಿ ಪ್ರಕರಣಗಳ ಸಮೀಕ್ಷೆ ನಡೆಸಲು ಸೂಚಿಸಲಾಗಿದೆ. ಸಮೀಕ್ಷೆಯ ವರದಿಯನ್ನು ಉಪ ಕೇಂದ್ರಗಳ ಮಟ್ಟದಲ್ಲಿ ಐಎಚ್‌ಐಪಿ ತಂತ್ರಾಂಶದ ಎಸ್ ಅರ್ಜಿ ನಮೂನೆಯಲ್ಲಿ ಸಲ್ಲಿಸಬೇಕು' ಎಂದು ತಿಳಿಸಿದ್ದಾರೆ.

**ನಾಲ್ಕು ಗಂಟೆ ಅವಧಿ:** ಕೋವ್ಯಾಕ್ಸಿನ್ ಲಸಿಕೆಯ ಬಳಕೆ ಅವಧಿ ಬಗ್ಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಸುತ್ತೋಲೆ ಹೊರಡಿಸಿದ್ದಾರೆ.

'ಸೀಶೆಯ ಮುಚ್ಚಳ ತೆರೆದ ಬಳಿಕ 28 ದಿನಗಳ ವರೆಗೆ ಲಸಿಕೆ ವಿತರಿಸುವ ಬಗ್ಗೆ ಆಸ್ಪತ್ರೆಗಳು ಸ್ಪಷ್ಟೀಕರಣ ಕೇಳಿವೆ. ಲಸಿಕೆಯ ಸೀಶೆಯ ಮೇಲೆ ನಮೂದಿಸಿರುವ ಅವಧಿಯವರೆಗೆ ಮಾತ್ರ ಉಪಯೋಗಿಸಬೇಕು. ಒಂದು ಬಾರಿ ಮುಚ್ಚಳ ತೆಗೆದ ಬಳಿಕ 4 ಗಂಟೆಯೊಳಗೆ ವಿತರಿಸಬೇಕು' ಎಂದು ಸೂಚಿಸಿದ್ದಾರೆ.

ರಾತ್ರಿ ಕರ್ಫ್ಯೂ ನಿಮಿತ್ತ ನೃಪತುಂಗ ರಸ್ತೆಯಲ್ಲಿ ಕರ್ತವ್ಯದಲ್ಲಿದ್ದ ಪೊಲೀಸ್ ಸಿಬ್ಬಂದಿ ವಾಹನ ತಪಾಸಣೆ ನಡೆಸಿದರು– ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಅಶೋಕನಗರ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಮಲ್ಲೇಶ್ ಬೋಳೆತ್ತಿನ್ ಹಾಗೂ ಸಿಬ್ಬಂದಿ ರಾತ್ರಿ ಕರ್ಫ್ಯೂ ನಿಮಿತ್ತ ಬ್ರಿಗೇಡ್ ರಸ್ತೆಗೆ ಬ್ಯಾರಿಕೇಡ್ ಹಾಕಿ ವಾಹನ ಸಂಚಾರ ನಿರ್ಬಂಧಿಸಿದರು
ಪ್ರಜಾವಾಣಿ ಚಿತ್ರ/ ರಂಜು ಪಿ

ಹೋಟೆಲ್, ಪಬ್ ಬಾಗಿಲು ಮುಚ್ಚಿಸಿದ ಪೊಲೀಸರು: ಕೆಲವೆಡೆ ವಾಹನ ದಟ್ಟಣೆ

# ನಗರದ ಎಲ್ಲೆಡೆ ಪೊಲೀಸರ ನಾಕಾಬಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ರೂಪಾಂತರಿ ತಳಿ ಓಮೈಕ್ರಾನ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಸಾರ್ವಜನಿಕ ಸ್ಥಳಗಳಲ್ಲಿ ಹೊಸ ವರ್ಷಾಚರಣೆಗೆ ನಿರ್ಬಂಧ ವಿಧಿಸಿರುವ ಸರ್ಕಾರ ಮಂಗಳವಾರದಿಂದ 2022ರ ಜನವರಿ 7ರವರೆಗೆ ರಾತ್ರಿ ಕರ್ಫ್ಯೂ ಜಾರಿಗೊಳಿಸಿದೆ. ಮೊದಲ ದಿನ ನಗರದಲ್ಲಿ ಇದಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಯಿತು.

ನಗರದ ವಿವಿಧೆಡೆ ಪೊಲೀಸ್ ಸಿಬ್ಬಂದಿ ನಾಕಾಬಂದಿ ಹಾಕಿ ವಾಹನಗಳ ತಪಾಸಣೆ ನಡೆಸಿದರು. ರಾತ್ರಿ 9.30ಕ್ಕೆ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿದ ಹೊಯ್ಸಳ ಹಾಗೂ ಚೀತಾ ಸಿಬ್ಬಂದಿ 10 ಗಂಟೆಯೊಳಗೆ ಹೋಟೆಲ್, ಪಬ್ ಹಾಗೂ ರೆಸ್ಟೋರೆಂಟ್‌ಗಳ ಬಾಗಿಲು ಮುಚ್ಚುವಂತೆ ಸೂಚನೆ ನೀಡುತ್ತಿದ್ದರು. ಕೆಲವೆಡೆ, ಗಸ್ತಿನಲ್ಲಿದ್ದ ಸಿಬ್ಬಂದಿ 9.50ಕ್ಕೆ ಅಂಗಡಿಗಳ ಬಾಗಿಲು ಹಾಕಿಸಿದರು.

ಪೊಲೀಸರು ವಾಹನ ತಪಾಸಣೆ ನಡೆಸುತ್ತಿದ್ದುದರಿಂದ ಹಲವೆಡೆ ದಟ್ಟಣೆ ಏರ್ಪಟ್ಟಿತ್ತು. ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರ ಸೂಚನೆಯಂತೆ ನಗರದ ಎಲ್ಲಾ ಪೊಲೀಸ್ ಇನ್‌ಸ್ಪೆಕ್ಟರ್‌ಗಳು ತಮ್ಮ ಠಾಣಾ ವ್ಯಾಪ್ತಿಯಲ್ಲಿ ಗಸ್ತು ತಿರುಗಿ ಧ್ವನಿವರ್ಧಕಗಳ ಮೂಲಕ ರಾತ್ರಿ ಕರ್ಫ್ಯೂಗೆ ಸಹಕರಿಸುವಂತೆ ನಾಗರಿಕರಲ್ಲಿ ಮನವಿ ಮಾಡಿದರು. ಯಾರೂ ಮನೆಯಿಂದ ಹೊರಬರದಂತೆ ಸೂಚಿಸಿದರು.

ಟೌನ್‌ಹಾಲ್, ಎಂ.ಜಿ.ರಸ್ತೆ. ಇಂದಿರಾನಗರ, ಕೋರಮಂಗಲ, ಮಲ್ಲೇಶ್ವರ, ಜೆ.ಪಿ.ನಗರ, ಜಯನಗರ, ಶಿವಾಜಿನಗರ, ಉಪ್ಪಾರಪೇಟೆ, ಮೆಜೆಸ್ಟಿಕ್, ಹೆಬ್ಬಾಳ, ಯಲಹಂಕ, ಸದಾಶಿವನಗರ, ಎಚ್‌ಎಸ್‌ಆರ್ ಬಡಾವಣೆ, ಎಲೆಕ್ಟ್ರಾನಿಕ್ ಸಿಟಿ, ಮಹಾಲಕ್ಷ್ಮಿ ಲೇಔಟ್, ಕೆಂಗೇರಿ, ಮೈಸೂರು ರಸ್ತೆ, ದೀಪಾಂಜಲಿನಗರ, ಮಾಗಡಿ ರಸ್ತೆ, ಸಂಜಯನಗರ, ಜೆ.ಸಿ. ನಗರ, ವಿಜಯನಗರ, ಬೈಯಪ್ಪನಹಳ್ಳಿ, ಕೆ.ಆರ್.ಪುರ, ಜಾಲಹಳ್ಳಿ, ಯಶವಂತಪುರ, ಪೀಣ್ಯ, ಜೀವನ್‌ಬಿಮಾ ನಗರ, ಕೆ.ಆರ್.ಮಾರುಕಟ್ಟೆ, ಚಾಮರಾಜಪೇಟೆ, ಮೈಸೂರು ಬ್ಯಾಂಕ್ ವೃತ್ತ, ಕಾರ್ಪೊರೇಷನ್ ವೃತ್ತ, ಪುರಭವನ, ನೃಪತುಂಗ ರಸ್ತೆ ಸೇರಿದಂತೆ ವಿವಿಧೆಡೆ ಪೊಲೀಸ್ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಪ್ರಮುಖ ಹಾಗೂ ಒಳರಸ್ತೆಗಳಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಿದ್ದ ಸಿಬ್ಬಂದಿ ವಾಹನಗಳ ತಪಾಸಣೆ ನಡೆಸಿದರು. ಮೇಲ್ಸೇತುವೆಗಳ ಮೇಲೆ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು.

ಮೆಜೆಸ್ಟಿಕ್ ಸುತ್ತಲಿನ ಪ್ರದೇಶಗಳಲ್ಲಿನ ವ್ಯಾಪಾರಿಗಳು ಸ್ವಯಂ ಪ್ರೇರಿತವಾಗಿ ಅಂಗಡಿಗಳಿಗೆ ಬಾಗಿಲು ಹಾಕಿದ್ದರು. 10 ಗಂಟೆಯ ನಂತರವೂ ರಸ್ತೆಗಳಲ್ಲಿ ಸಂಚರಿಸುತ್ತಿದ್ದವರಿಗೆ ಎಚ್ಚರಿಕೆ ನೀಡಿ ಕಳುಹಿಸುತ್ತಿದ್ದ ದೃಶ್ಯಗಳೂ ಕಂಡುಬಂದವು. ಸ್ಯಾಟಲೈಟ್ ಬಸ್ ನಿಲ್ದಾಣದ ಸುತ್ತಲಿನ ಪ್ರದೇಶಗಳಲ್ಲೂ ಪೊಲೀಸ್ ಬಿಗಿ ಭದ್ರತೆ ಏರ್ಪಡಿಸಲಾಗಿತ್ತು.

ಕರ್ತವ್ಯದಲ್ಲಿದ್ದ ಸಿಬ್ಬಂದಿ ತುರ್ತು ಸೇವೆಗಳ ವಾಹನಗಳು ಹಾಗೂ ರಾತ್ರಿ ಪಾಳಿಯ ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದವರ ಗುರುತಿನ ಚೀಟಿಗಳನ್ನು ಪರಿಶೀಲಿಸಿ ಕಳುಹಿಸುತ್ತಿದ್ದರು.

## ದಿವ್ಯಾ ಸುರೇಶ್ ವಾಗ್ವಾದ

ಬಿಗ್ ಬಾಸ್ ರಿಯಾಲಿಟಿ ಶೋ ಸ್ಪರ್ಧಿ ದಿವ್ಯಾ ಸುರೇಶ್ ಅವರು 10 ಗಂಟೆಯ ನಂತರವೂ ಚರ್ಚ್‌ಸ್ಟ್ರೀಟ್‌ನಲ್ಲಿ ಓಡಾಡುತ್ತಿದ್ದರು. ಇದನ್ನು ಪ್ರಶ್ನಿಸಿದ ಪೊಲೀಸ್ ಸಿಬ್ಬಂದಿಯೊಂದಿಗೇ ವಾಗ್ವಾದ ನಡೆಸಲು ಮುಂದಾದರು. ದೃಶ್ಯ ಮಾಧ್ಯಮದವರು ಇದನ್ನು ಸೆರೆಹಿಡಿಯಲು ಮುಂದಾದಾಗ ಅವರ ಸ್ನೇಹಿತ ಕ್ಯಾಮೆರಾ ಕಸಿದುಕೊಳ್ಳಲು ಪ್ರಯತ್ನಿಸಿದರು. ಪೊಲೀಸರು ಇಬ್ಬರಿಗೂ ಎಚ್ಚರಿಕೆ ನೀಡಿ ಮನೆಗೆ ಕಳುಹಿಸಿದರು.

## ಪ್ರಯಾಣಿಕರ ಪರದಾಟ

ಬೇರೆ ಬೇರೆ ಊರುಗಳಿಂದ ನಗರಕ್ಕೆ ಬಂದಿದ್ದವರು ಮನೆಗಳಿಗೆ ಹೋಗಲು ವಾಹನಗಳು ಸಿಗದೆ ಪರದಾಡುತ್ತಿದ್ದ ದೃಶ್ಯಗಳು ಕಂಡುಬಂದವು.

ಆಟೊ ಹಾಗೂ ಕ್ಯಾಬ್ ಚಾಲಕರು ಪ್ರಯಾಣಿಕರಿಂದ ದುಪ್ಪಟ್ಟು ಹಣ ಕೇಳುತ್ತಿದ್ದರು. ಅವರು ಕೇಳಿದಷ್ಟು ಹಣ ಕೊಡಲಾಗದೆ ಕೆಲವರು ಮಕ್ಕಳೊಂದಿಗೆ ರೈಲ್ವೆ ಹಾಗೂ ಬಸ್ ನಿಲ್ದಾಣದ ಬಳಿ ಬ್ಯಾಗ್‌ಗಳನ್ನು ಹಿಡಿದು ನಿಂತಿದ್ದರು. ಕೆಲವೆಡೆ ಆಟೊ ಸಂಚಾರಕ್ಕೆ ಪೊಲೀಸರು ಅವಕಾಶ ನಿರಾಕರಿಸಿದರು. ಹೀಗಾಗಿ ಚಾಲಕರು ಹಾಗೂ ಪೊಲೀಸ್ ಸಿಬ್ಬಂದಿ ನಡುವೆ ವಾಗ್ವಾದ ಏರ್ಪಟ್ಟಿತ್ತು.

'ದಲಿತರ ಸಬಲೀಕರಣಕ್ಕಾಗಿ ಸಂಘರ್ಷ ರ್‍ಯಾಲಿ' ನಡೆಸಿದ ಡಿಎಸ್‌ಎಸ್

# 'ಪರಿಶಿಷ್ಟರ ಭೂಮಿಯನ್ನು ರಕ್ಷಿಸಿ'

ಪ್ರಜಾವಾಣಿ ವಾರ್ತೆ

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಸದಸ್ಯರು ನಗರದ ಚಿಕ್ಕ ಲಾಲ್‌ಬಾಗ್‌ನಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು– ಪ್ರಜಾವಾಣಿ ಚಿತ್ರ

**ಬೆಂಗಳೂರು:** ಎಸ್‌ಸಿ, ಎಸ್‌ಟಿ ಭೂ ಪರಭಾರೆ ನಿಷೇಧ ಕಾಯ್ದೆಗೆ (ಪಿಟಿಸಿಎಲ್) ಸಮಗ್ರ ತಿದ್ದುಪಡಿ ತರುವುದೂ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಸದಸ್ಯರು 'ದಲಿತರ ಸಬಲೀಕರಣಕ್ಕಾಗಿ ಸಂಘರ್ಷ ರ್‍ಯಾಲಿ' ನಡೆಸಿದರು.

'ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ನಿಗ್ರಹಿಸಲು 'ದೌರ್ಜನ್ಯ ನಿಯಂತ್ರಣ ಕಾಯ್ದೆ'ಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ದೌರ್ಜನ್ಯಕ್ಕೊಳಗಾದವರ ವಿರುದ್ಧ ಪೊಲೀಸರು ಪ್ರತಿ ದೂರು ದಾಖಲಿಸುವುದು ಕೂಡಲೇ ನಿಲ್ಲಬೇಕು. ಪಿಟಿಸಿಎಲ್ ಕಾಯ್ದೆಯ ಮೂಲ ಆಶಯಗಳನ್ನು ಯಥಾವತ್ತಾಗಿ ಕಾಯ್ದುಕೊಳ್ಳಬೇಕು. ಆ ಮೂಲಕ ಪರಿಶಿಷ್ಟರ ಭೂಮಿ ರಕ್ಷಿಸಬೇಕು. 2017ರ ಪರಿಶಿಷ್ಟ ಜಾತಿ ಜೇಷ್ಠತೆ ಸಂರಕ್ಷಣೆ ಕಾಯ್ದೆಯ ಪ್ರಕಾರ ಜೇಷ್ಠತೆಗಳನ್ನು ನಿಗದಿಪಡಿಸಿ, 1978ರ ಆದೇಶದಂತೆ ಸರ್ಕಾರಿ ನೌಕರರು ಹಾಗೂ ಅಧಿಕಾರಿಗಳಿಗೆ ಮುಂಬಡ್ತಿ ನೀಡಬೇಕು' ಎಂದು ಪ್ರತಿಭಟನಾಕಾರರು ಸರ್ಕಾರವನ್ನು ಆಗ್ರಹಿಸಿದರು.

'ಭೋವಿ, ತಾಂಡಾ, ಬಂಜಾರ ಹಾಗೂ ಆದಿಜಾಂಬವ ನಿಗಮಗಳಲ್ಲಿ ಎಸ್‌ಸಿ, ಎಸ್‌ಟಿ/ಟಿಎಸ್‌ಪಿ ನಿಧಿಯ ಅರ್ಧದಷ್ಟು ಮೊತ್ತವನ್ನು ನೇರ ಸಾಲಗಳಿಗೆ ಮೀಸಲಿಡಬೇಕು. ಕನಿಷ್ಠ ₹10 ಲಕ್ಷ ಸಬ್ಸಿಡಿ ಸಹಿತ ನೇರ ಸಾಲ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಬೇಕು. ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಮುಂದಾಗಬೇಕು. ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಸ್‌ಸಿ, ಎಸ್‌ಟಿ ನೌಕರರಿಗೆ ಜೇಷ್ಠತೆ ಆಧಾರದಲ್ಲಿ ಬಡ್ತಿ ನೀಡಬೇಕು. ಮಲೆನಾಡು ಭಾಗಗಳಲ್ಲಿ ಅನೇಕ ಕಾಫಿ ಪ್ಲಾಂಟರ್‌ಗಳು ಭೂಮಿ ಒತ್ತುವರಿ ಮಾಡಿದ್ದು, ಅದನ್ನು ವಶಪಡಿಸಿಕೊಂಡು ಭೂ ಹೀನ ಕೃಷಿ ಕಾರ್ಮಿಕರಿಗೆ ಒದಗಿಸಬೇಕು' ಎಂದೂ ಒತ್ತಾಯಿಸಿದರು.

'ಪರಿಶಿಷ್ಟ ಜಾತಿ/ ಪಂಗಡದವರ ಹೆಸರಿನಲ್ಲಿ ಹಲವರು ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ ಸರ್ಕಾರಿ ಉದ್ಯೋಗ ಗಿಟ್ಟಿಸಿಕೊಂಡಿದ್ದಾರೆ. ಅಂತಹವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ವಸತಿ ನಿಲಯಗಳನ್ನು ಉನ್ನತೀಕರಿಸಬೇಕು. ಸ್ನಾತಕೋತ್ತರ, ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿರುವ ಸಮುದಾಯದ ವಿದ್ಯಾರ್ಥಿಗಳಿಗೆ ಸೂಕ್ತ ವಸತಿ ನಿಲಯಗಳು ಇಲ್ಲ. ಅವರ ವ್ಯಾಸಂಗದ ಅನುಕೂಲಕ್ಕಾಗಿ ತಾಲ್ಲೂಕಿಗೊಂದು ಸುಸಜ್ಜಿತ ವಸತಿ ನಿಲಯ ಸ್ಥಾಪಿಸಬೇಕು' ಎಂದು ಸಮಿತಿಯ ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಆಗ್ರಹಿಸಿದರು.

'ಕೋವಿಡ್ ಕಾರಣ ನೀಡಿ ತಡೆ ಹಿಡಿಯಲಾಗಿರುವ ವಿದ್ಯಾರ್ಥಿ ವೇತನವನ್ನು ಕೂಡಲೇ ಬಿಡುಗಡೆ ಮಾಡಬೇಕು. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕೈಬಿಡಬೇಕು' ಎಂದು ತಿಳಿಸಿದರು.

ರೈತ ಮುಖಂಡ ಬಡಗಲಪುರ ನಾಗೇಂದ್ರ, ಕಾರ್ಮಿಕ ಮುಖಂಡ ಮಣಿ, ದಲಿತ ಮುಖಂಡರಾದ ಇಂದಿರಾ ಕೃಷ್ಣಪ್ಪ, ಎನ್.ನಾಗರಾಜ್, ರುದ್ರಪ್ಪ ಹನಗವಾಡಿ, ಚಂದ್ರು ಪೆರಿಯಾರ್, ನಿರ್ಮಲಾ ಇದ್ದರು.

# 'ಅಂಬಾನಿ ಆಸ್ತಿ ಮೌಲ್ಯ ಹೆಚ್ಚಿಸಿದ್ದೇ ಬಿಜೆಪಿ ಸಾಧನೆ'

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ನೂತನ ಸದಸ್ಯರಾದ ಎಂ.ಎಲ್. ಅನಿಲ್ ಕುಮಾರ್ ಮತ್ತು ಎಸ್.ರವಿ ಅವರನ್ನು ಶಾಸಕ ಕೃಷ್ಣಬೈರೇಗೌಡ ಸನ್ಮಾನಿಸಿದರು. ಮಾಜಿ ಉಪಮೇಯರ್ ಎನ್.ಇಂದಿರಾ, ಮಾಜಿ ಸದಸ್ಯರಾದ ಪಿ.ವಿ.ಮಂಜುನಾಥಬಾಬು, ವಿ.ವಿ.ಪಾರ್ತಿಬರಾಜನ್, ಮುಖಂಡರಾದ ಎಂ.ಜಯಗೋಪಾಲಗೌಡ, ಎನ್.ಎನ್.ಶ್ರೀನಿವಾಸಯ್ಯ, ಕೆ.ಅಶೋಕನ್, ದಾನೇಗೌಡ, ಹನುಮಂತೇಗೌಡ, ಡಿ.ಬಿ.ಸುರೇಶ್ ಗೌಡ, ಕೋಗಿಲು ಎಂ.ವೆಂಕಟೇಶ್, ವಿ.ಹರಿ, ಟಿ.ಜಿ.ಚಂದ್ರು, ಆರ್.ಎಂ.ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು

**ಯಲಹಂಕ:** ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಾಂಗ್ರೆಸ್ ಪಕ್ಷದ ಹಲವಾರು ನಾಯಕರು ತನು-ಮನ, ಧನ ವಲ್ಲದೆ ತಮ್ಮ ಪ್ರಾಣತ್ಯಾಗವನ್ನೂ ಮಾಡಿದ್ದಾರೆ. ಹತ್ತಾರು ವರ್ಷ ಜೈಲುವಾಸ ಹಾಗೂ ಹೋರಾಟ ಮಾಡುವ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದುಕೊಡುವಲ್ಲಿ ಅಪಾರ ಕೊಡುಗೆ ನೀಡಿದ್ದಾರೆ ಎಂದು ಶಾಸಕ ಕೃಷ್ಣಬೈರೇಗೌಡ ಹೇಳಿದರು.

ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಪಕ್ಷದ ವತಿಯಿಂದ ಕಳ್ಳಿಪಾಳ್ಯ ಸಮೀಪದ ವೆಂಕಟೇಶ್ವರನಗರದಲ್ಲಿ ಅಯೋಜಿಸಿದ್ದ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆ, ಪಕ್ಷದ ಸದಸ್ಯತ್ವ ನೋಂದಣಿ ಅಭಿಯಾನ, ನೂತನ ವಿಧಾನಪರಿಷತ್ ಸದಸ್ಯರಿಗೆ ಸನ್ಮಾನ ಹಾಗೂ ಮೇಕೆದಾಟು ಯೋಜನೆ ಪಾದಯಾತ್ರೆ ಕಾರ್ಯಕ್ರಮದ ಪೂರ್ವಭಾವಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ನೆಹರೂ ಬಗ್ಗೆ ಸರಿಯಾಗಿ ತಿಳಿದುಕೊಳ್ಳದ ಬಿಜೆಪಿಯವರು ಇಲ್ಲಸಲ್ಲದ ಆರೋಪಗಳನ್ನು ಮಾಡುವ ಮೂಲಕ ಡೋಂಗಿ ರಾಜಕಾರಣ ಮಾಡುತ್ತಿದ್ದಾರೆ. ಶೇ 40ರಷ್ಟು ಕಮಿಷನ್ ಲಂಚ ಹೊಡೆಯಲು ಮಾತ್ರ ಅಧಿಕಾರ ಬೇಕಾಗಿದ್ದು, ಇವರ ಆಡಳಿತಾವಧಿಯಲ್ಲಿ ಅಂಬಾನಿ, ಅದಾನಿಯಂತವರ ಆಸ್ತಿಮೌಲ್ಯ ಹೆಚ್ಚುತ್ತಿದೆಯೇ ಹೊರತು, ಬಡವರು ಬಡವರಾಗಿಯೇ ಉಳಿಯುತ್ತಿದ್ದಾರೆ. ಇದೇ ಬಿಜೆಪಿಯವರ ಸಾಧನೆಯಾಗಿದೆ ಎಂದು ವಾಗ್ದಾಳಿ ನಡೆಸಿದರು.

'ಮಳೆ, ನೆರೆ ಹಾವಳಿ ಸೇರಿದಂತೆ ಕೊರೊನಾದಿಂದ ಪ್ರಾಣಕಳೆದುಕೊಂಡವರಿಗೂ ಸರಿಯಾಗಿ ಪರಿಹಾರ ನೀಡಿಲ್ಲ. ಅಭಿವೃದ್ಧಿ ಮಾಡಲು ಇವರಿಗೆ ಸಮಯವಿಲ್ಲ; ಆದರೆ, ಎಲ್ಲದರಲ್ಲೂ ಲೂಟಿ ಹೊಡೆಯಲು ಪಣತೊಟ್ಟು ನಿಂತಿದ್ದಾರೆ. ಇಂತವರು ದೇಶಪ್ರೇಮದ ಬಗ್ಗೆ ಪಾಠ ಮಾಡುತ್ತಿರುವುದು ಹಾಸ್ಯಾಸ್ಪದ' ಎಂದರು.

ವಿಧಾನಪರಿಷತ್ ನೂತನ ಸದಸ್ಯರಾದ ಎಸ್.ರವಿ ಮತ್ತು ಎಂ.ಎಲ್. ಅನಿಲ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

## ತಾರಾ ಅನೂರಾಧಾಗೆ ಶಿಮುಶ ಪ್ರಶಸ್ತಿ

**ಚಿತ್ರದುರ್ಗ:** ಇಲ್ಲಿಯ ಮುರುಘಾ ಮಠದಿಂದ ಜಮುರಾ ರಾಷ್ಟ್ರೀಯ ನಾಟಕೋತ್ಸವದ ಅಂಗವಾಗಿ ನೀಡಲಾಗುವ 2021ನೇ ಸಾಲಿನ ಶಿಮುಶ ರಾಷ್ಟ್ರೀಯ ನಾಟಕ ಪ್ರಶಸ್ತಿಗೆ ಕಲಾವಿದೆ, ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ತಾರಾ ಅನೂರಾಧಾ ಅವರನ್ನು ಆಯ್ಕೆ ಮಾಡಲಾಗಿದೆ.

ಕಲಾವಿದೆಯಾಗಿ ನಾಡಿಗೆ ನೀಡಿರುವ ಸೇವೆ ಪರಿಗಣಿಸಿ ತಾರಾ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಜನವರಿ 1ರಂದು ಉದ್ಘಾಟನೆಯಾಗುವ ನಾಟಕೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಪ್ರಶಸ್ತಿಯು ₹ 1 ಲಕ್ಷ ನಗದು, ಫಲಕ ಒಳಗೊಂಡಿದೆ.

## ಉಪಾಸನಾ ಮೋಹನ್‌ಗೆ ಪ್ರಶಸ್ತಿ

**ಬೆಂಗಳೂರು:** ಇಂಚರ ಸುಗಮ ಸಂಗೀತ ಸಂಸ್ಥೆ ನೀಡುವ 'ಇಂಚರ ಪ್ರಶಸ್ತಿ'ಗೆ ಗಾಯಕ ಹಾಗೂ ಸಂಗೀತ ನಿರ್ದೇಶಕ ಉಪಾಸನಾ ಮೋಹನ್ ಆಯ್ಕೆಯಾಗಿದ್ದಾರೆ.

ಸಂಸ್ಥೆಯು 2022ರ ಜ.7 ರಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಂಜೆ 4.30ಕ್ಕೆ 'ಇಂಚರ ನಿರಂತರ ಗೀತೋತ್ಸವ' ಕಾರ್ಯಕ್ರಮ ಹಮ್ಮಿಕೊಂಡಿದ್ದು, ಪ್ರಶಸ್ತಿ ಪ್ರದಾನವೂ ನಡೆಯಲಿದೆ. ಗಾಯಕರಾದ ಮೃತ್ಯುಂಜಯ ದೊಡ್ಡವಾಡ, ಆನಂದ ಮಾದಲಗೆರೆ, ವರ್ಷಾ ಸುರೇಶ್, ಅರುಣ್ ಬಿ.ಎಸ್., ಅಭಿಲಾಷ್ ಜಮದಗ್ನಿ ಸಂಗಡಿಗರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದು ಸಂಸ್ಥೆಯ ಇಂಚರ ಪ್ರವೀಣ್ ಕುಮಾರ್ ತಿಳಿಸಿದ್ದಾರೆ.

ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆ

# ಮೇಕೆದಾಟು ಪಾದಯಾತ್ರೆ ಎಚ್‌ಡಿಕೆಗೆ ಡಿಕೆಶಿ ಆಹ್ವಾನ

ಪ್ರಜಾವಾಣಿ ವಾರ್ತೆ

ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಮದ್ದೂರು ಪಟ್ಟಣದ ಶಿವಪುರ ಧ್ವಜ ಸತ್ಯಾಗ್ರಹ ಸೌಧದ ಬಳಿ ನಡೆದ ಮೆರವಣಿಗೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವ ವಹಿಸಿದ್ದರು –ಪ್ರಜಾವಾಣಿ ಚಿತ್ರ

**ಮದ್ದೂರು:** 'ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ನಡೆಯಲಿರುವ ಪಾದಯಾತ್ರೆಯನ್ನು ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದ್ದಾರೆ. ಇದು ಪಕ್ಷಾತೀತವಾಗಿ ನಡೆಯುತ್ತಿರುವ ಹೋರಾಟವಾಗಿರುವುದರಿಂದ ಅವರೂ ಪಾಲ್ಗೊಳ್ಳಲಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆಹ್ವಾನಿಸಿದರು.

ಪಟ್ಟಣದ ಶಿವಪುರ ಧ್ವಜ ಸತ್ಯಾಗ್ರಹ ಸೌಧದ ಬಳಿ ಮಂಗಳವಾರ ನಡೆದ ಕಾಂಗ್ರೆಸ್‌ನ 137ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಅವರು, 'ನಮ್ಮ ಪಾಲಿನ ನೀರು, ಜಮೀನು ಹಾಗೂ ನಮ್ಮ ಹಣ ಬಳಸಿ ಅಣೆಕಟ್ಟೆ ನಿರ್ಮಿಸುವುದು ನಮ್ಮ ಹಕ್ಕು. ನೀರಿಗಾಗಿ ನಡೆಯುತ್ತಿರುವ ಹೋರಾಟಕ್ಕೆ ಯಾರೇ ಬಂದರೂ ಸ್ವಾಗತ' ಎಂದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿ, 'ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಆಹಾರ ಸುರಕ್ಷತಾ ಕಾನೂನು, ಶೈಕ್ಷಣಿಕ ಹಕ್ಕು, ಮಾಹಿತಿ ಹಕ್ಕು ಕಾನೂನುಗಳನ್ನು ಜಾರಿಗೊಳಿಸಿತ್ತು. ಆದರೆ, ಮೋದಿ ಸರ್ಕಾರ ಅಗತ್ಯವಿಲ್ಲದ ಜಾನುವಾರು ಹತ್ಯೆ ನಿಷೇಧ ಕಾಯ್ದೆ ಜಾರಿಗೊಳಿಸಿದೆ. ನೋಟು ನಿಷೇಧ, ಜಿಎಸ್‌ಟಿ ಮೂಲಕ ಆರ್ಥಿಕ ವ್ಯವಸ್ಥೆಯನ್ನು ಹಾಳು ಮಾಡಿದೆ' ಎಂದು ವಾಗ್ದಾಳಿ ನಡೆಸಿದರು.

'ನಾನು ಮುಖ್ಯಮಂತ್ರಿಯಾಗಿದ್ದಾಗ ಪರಿಶಿಷ್ಟರಿಗೆ ಟೆಂಡರ್‌ಗಳಲ್ಲಿ ಮೀಸಲಾತಿ ನೀಡುವ ಕಾನೂನು ಜಾರಿಗೊಳಿಸಲಾಗಿತ್ತು. ಈಗಿನ ಬಿಜೆಪಿ ಸರ್ಕಾರವು ಸಂವಿಧಾನ ವಿರೋಧಿಯಾದ ಮತಾಂತರ ನಿಷೇಧ ಕಾಯ್ದೆ ಜಾರಿಗೊಳಿಸಲು ಮುಂದಾಗಿದೆ. ಆರ್‌ಎಸ್‌ಎಸ್ ಅಜೆಂಡಾಗಳನ್ನು, ಮನುಸ್ಮೃತಿಯನ್ನು ಸಂವಿಧಾನದ ಜಾಗದಲ್ಲಿ ಸ್ಥಾಪಿಸುತ್ತಿದೆ' ಎಂದು ದೂರಿದರು.

'ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಆರ್‌ಎಸ್‌ಎಸ್ ನಾಯಕರು ಮತಾಂತರ ನಿಷೇಧ ಮಸೂದೆ ಕುರಿತು ವರದಿ ನೀಡಿದ್ದರು. ನಾನು ಮುಖ್ಯಮಂತ್ರಿಯಾಗಿದ್ದಾಗ ಆ ವರದಿ ಸಚಿವ ಸಂಪುಟ ಸಭೆಯ ಮುಂದೆ ಬಂದಿತ್ತು. ಆಗಿನ ಸಮಾಜ ಕಲ್ಯಾಣ ಇಲಾಖೆ ಸಚಿವ ಆಂಜನೇಯ ಅವರಿಗೆ ಅದನ್ನು ಕೈಬಿಡುವಂತೆ ತಿಳಿಸಿದ್ದೆ' ಎಂದರು.

### 'ದೇಶದ ಏಕತೆ, ಸಮಗ್ರತೆ ನಾಶ'

ಕಾಂಗ್ರೆಸ್ ಮುಖಂಡ ವೀರಪ್ಪ ಮೊಯಿಲಿ ಮಾತನಾಡಿ, 'ಪ್ರಧಾನಿ ನರೇಂದ್ರ ಮೋದಿ ಆಡಳಿತದಲ್ಲಿ ದೇಶದ ಏಕತೆ, ಸಮಗ್ರತೆ ನಾಶವಾಗುತ್ತಿದೆ. 7 ವರ್ಷಗಳಿಂದ ಕಾನೂನುಗಳಿಗೆ ರಕ್ಷಣೆ ಇಲ್ಲವಾಗಿದೆ. ದೇಶದ ಪ್ರಜಾಸತ್ತಾತ್ಮಕ ತಳಪಾಯ ಪತನವಾಗುತ್ತಿದೆ. ಈ ಬಗ್ಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯೇ ಆಕ್ಷೇಪ ವ್ಯಕ್ತಪಡಿಸಿದ್ದಾರೆ' ಎಂದರು.

# ರಿಲಯನ್ಸ್‌ನಲ್ಲಿ ನಾಯಕತ್ವ ಬದಲಾವಣೆ?

**ನವದೆಹಲಿ (ಪಿಟಿಐ):** ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಅಧ್ಯಕ್ಷ ಮುಕೇಶ್ ಅಂಬಾನಿ ಅವರು ಕಂಪನಿಯ ನಾಯಕತ್ವದಲ್ಲಿ ಬದಲಾವಣೆಗಳು ಆಗುವ ಬಗ್ಗೆ ಮಾತನಾಡಿದ್ದಾರೆ. ತಮ್ಮನ್ನೂ ಸೇರಿದಂತೆ ಕಂಪನಿಯ ಹಿರಿಯರು ಯುವ ತಲೆಮಾರಿಗೆ ದಾರಿ ಮಾಡಿಕೊಡುವ ಮೂಲಕ ಈ ಬದಲಾವಣೆ ಆಗಬೇಕಿದೆ ಎಂದು ಹೇಳಿದ್ದಾರೆ.

'ರಿಲಯನ್ಸ್ ಕಂಪನಿಯು ಈಗ ಮಹತ್ವಪೂರ್ಣವಾದ ನಾಯಕತ್ವ ಬದಲಾವಣೆಯನ್ನು ಜಾರಿಗೆ ತರುವ ಪ್ರಕ್ರಿಯೆಯಲ್ಲಿ ಇದೆ' ಎಂದು ಹೇಳಿದ್ದಾರೆ.

ಆಕಾಶ್ ಮತ್ತು ಅನಂತ್ ಅವರು ಅಂಬಾನಿ ಅವರ ಪುತ್ರರು, ಇಶಾ ಅವರು ಅಂಬಾನಿ ಅವರ ಪುತ್ರಿ.

'ನನ್ನನ್ನೂ ಸೇರಿದಂತೆ ಎಲ್ಲ ಹಿರಿಯರು ಹೆಚ್ಚು ಸ್ಪರ್ಧಾತ್ಮಕ ಆಗಿರುವ, ಬಹಳ ಬದ್ಧತೆಯನ್ನು ಹೊಂದಿರುವ ಮತ್ತು ವಿಶ್ವಾಸ ಮೂಡಿಸುವಂತಹ ಯುವ ನಾಯಕತ್ವಕ್ಕೆ ದಾರಿ ಮಾಡಿಕೊಡಬೇಕು. ನಾವು ಅವರಿಗೆ ಮಾರ್ಗದರ್ಶನ ನೀಡಬೇಕು. ಪ್ರೋತ್ಸಾಹ ನೀಡಬೇಕು ಮತ್ತು ಅವರನ್ನು ಸಶಕ್ತರನ್ನಾಗಿಸಬೇಕು. ಅವರು ನಮಗಿಂತ ಚೆನ್ನಾಗಿ ಕೆಲಸ ಮಾಡಿದಾಗ ಬೆನ್ನುತಟ್ಟಬೇಕು' ಎಂದಿದ್ದಾರೆ.

'ಆಕಾಶ್, ಇಶಾ ಮತ್ತು ಅನಂತ್ ಅವರು ಮುಂದಿನ ತಲೆಮಾರಿನ ನಾಯಕರಾಗಿ ರಿಲಯನ್ಸ್ ಕಂಪನಿಯನ್ನು ಇನ್ನೂ ಹೆಚ್ಚು ಎತ್ತರಕ್ಕೆ ಕೊಂಡೊಯ್ಯಲಿದ್ದಾರೆ ಎಂಬುದರದಲ್ಲಿ ನನಗೆ ಅನುಮಾನವೇ ಇಲ್ಲ' ಎಂದೂ ಅಂಬಾನಿ ಹೇಳಿದ್ದಾರೆ. ರಿಲಯನ್ಸ್ ಸಂಸ್ಥಾಪಕ ಧೀರೂಭಾಯ್ ಅಂಬಾನಿ ಅವರು ಜನ್ಮದಿನಾಚರಣೆಯ ಪ್ರಯುಕ್ತ ಆಯೋಜಿಸುವ 'ರಿಲಯನ್ಸ್ ಫ್ಯಾಮಿಲಿ ಡೇ' ಕಾರ್ಯಕ್ರಮದಲ್ಲಿ ಅಂಬಾನಿ ಈ ಮಾತುಗಳನ್ನು ಆಡಿದ್ದಾರೆ.

## ಖಾಸಗಿ ಕಾಲೇಜುಗಳ ಶುಲ್ಕ: ಸಿ.ಎಂಗೆ ಪತ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪಡೆದು ಸಮಸ್ಯೆಗೆ ಸಿಲುಕಿರುವ ಹಿಂದುಳಿದ, ಪರಿಶಿಷ್ಟ ಜಾತಿ/ ಪಂಗಡದ ಪ್ರತಿಭಾನ್ವಿತ ವಿದ್ಯಾರ್ಥಿಗಳ ನೆರವಿಗೆ ಬರುವಂತೆ ಮಾಜಿ ಶಿಕ್ಷಣ ಸಚಿವ ಬಿ. ಸೋಮಶೇಖರ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿದ್ದಾರೆ.

ಸೋಮಶೇಖರ್

ಈ ಕುರಿತು ಪತ್ರ ಬರೆದಿರುವ ಅವರು, ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್) ಫಲಿತಾಶ ಆಧರಿಸಿ ಕೌನ್ಸೆಲಿಂಗ್ ಇನ್ನೂ ಆರಂಭವಾಗಿಲ್ಲ. ಆದರೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು(ಕೆಇಎ) ಈಗಾಗಲೇ ಸೀಟು ಹಂಚಿಕೆ ಪೂರ್ಣಗೊಳಿಸಿದ್ದು, ಪ್ರವೇಶ ಪ್ರಕ್ರಿಯೆ ಮುಗಿದಿದೆ. ನೀಟ್ ಫಲಿತಾಂಶದಲ್ಲಿ ಅತಿ ಹೆಚ್ಚಿನ ಅಂಕ ಪಡೆದ ತಳ ಸಮಯದಾಯದವರು ಕೆಇಎ ಕೌನ್ಸೆಲಿಂಗ್‌ನಲ್ಲಿ ಪ್ರಸಿದ್ಧ ಎಂಜಿನಿಯರ್ ಕಾಲೇಜುಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಶುಲ್ಕ ಪಾವತಿ ಮಾಡುವಂತೆ ಇಂತಹ ವಿದ್ಯಾರ್ಥಿಗಳ ಮೇಲೆ ಒತ್ತಡ ಹೇರಲಾಗುತ್ತಿದೆ. ಹಿಂದೆಲ್ಲ, ಸರ್ಕಾರವೇ ಇಂತಹ ವಿದ್ಯಾರ್ಥಿಗಳ ಶುಲ್ಕವನ್ನು ಕಾಲೇಜುಗಳಿಗೆ ಭರಿಸಿ, ಭಾರತ ಸರ್ಕಾರದಿಂದ ಮರು ಪಾವತಿ ಮಾಡಿಸಿಕೊಳ್ಳುತ್ತಿತ್ತು. ಈ ಪದ್ಧತಿಯನ್ನು ಮತ್ತೆ ಜಾರಿಗೆ ತರುವಂತೆ ಆಗ್ರಹಿಸಿದ್ದಾರೆ.

ಪ್ರಣವಾನಂದ ಸ್ವಾಮೀಜಿ ಆರೋಪ

## ಈಡಿಗರ ಸಂಘದ ಚುನಾವಣೆಯಲ್ಲಿ ಅಕ್ರಮ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕರ್ನಾಟಕ ಪ್ರದೇಶ ಆರ್ಯ ಈಡಿಗ ಸಂಘದ ಚುನಾವಣೆಯಲ್ಲಿ ಅಕ್ರಮಗಳು ನಡೆಯುತ್ತಿದ್ದು, ಈ ಬಗ್ಗೆ ಸೂಕ್ತ ತನಿಖೆಯಾಗಬೇಕು' ಎಂದು ರಾಣೆಬೆನ್ನೂರಿನ ಶರಣ ಬಸವೇಶ್ವರ ಮಠದ ಪ್ರಣವಾನಂದ ಸ್ವಾಮೀಜಿ ಒತ್ತಾಯಿಸಿದ್ದಾರೆ.

'ಸಂಘದ ಕಾರ್ಯಕಾರಿ ಸಮಿತಿ ಅವಧಿ ಮುಗಿದಿದ್ದರೂ ಚುನಾವಣೆ ನಡೆಸಿರಲಿಲ್ಲ. ರಾಜ್ಯದಲ್ಲಿ 70 ಲಕ್ಷ ಇರುವ ಈಡಿಗ ಸಮುದಾಯದಲ್ಲಿ 13 ಸಾವಿರ ಮಂದಿಗೆ ಮಾತ್ರ ಸಂಘದ ಸದಸ್ಯತ್ವ ನೀಡಲಾಗಿದೆ. ಸಂಘದ ಚುನಾವಣಾಧಿಕಾರಿ ದೊಡ್ಡ ತಮ್ಮೇಗೌಡ ಅವರು ಯಾವುದೇ ಆದೇಶವಿಲ್ಲದೆ, ಐವರು ಅಧಿಕಾರಿಗಳನ್ನು ಚುನಾವಣಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡಿದ್ದಾರೆ' ಎಂದು ಆರೋಪಿಸಿದರು.

'ಚುನಾವಣಾ ಅಕ್ರಮಗಳಿಗೆ ಅವಕಾಶ ನೀಡಲು ಅಧಿಕಾರಿಗಳು ಹಣಕ್ಕೆ ಬೇಡಿಕೆ ಇಟ್ಟಿರುವ ಅನುಮಾನವಿದೆ. ಇವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರಿಗೂ ಮನವಿ ಸಲ್ಲಿಸಿದ್ದೇನೆ. ನ್ಯಾಯಾಲಯದಲ್ಲೂ ಈ ಪ್ರಕರಣದ ವಿಚಾರಣೆ ನಡೆಯಲಿದೆ. ಅಕ್ರಮಗಳಿಂದ ಕೂಡಿರುವ ಸಂಘವನ್ನು ಕೂಡಲೇ ರದ್ದು ಮಾಡಬೇಕು. ಚುನಾವಣೆಯನ್ನು ಪಾರದರ್ಶಕವಾಗಿ ನಡೆಸಬೇಕು' ಎಂದು ಒತ್ತಾಯಿಸಿದರು.

'ಈಡಿಗರ ಕುಲಕಸುಬು ನಿಲ್ಲಿಸಿದ್ದರಿಂದ ಸಮುದಾಯದ ಸಾವಿರಾರು ಮಂದಿ ಬೀದಿಪಾಲಾಗಿದ್ದಾರೆ. ಕಡಿಮೆ ಜನಸಂಖ್ಯೆ ಇರುವ ಸಮುದಾಯಗಳಿಗೆ ಸರ್ಕಾರ ನಿಗಮ ಮಂಡಳಿ ರಚಿಸಿದ್ದು, ಈಡಿಗ ಸಮುದಾಯಕ್ಕೆ ಯಾವುದೇ ನಿಗಮ ನೀಡಿಲ್ಲ' ಎಂದೂ ದೂರಿದರು.

## 'ಬಂದ್‌ನಿಂದ ಕನ್ನಡಿಗರಿಗೇ ನಷ್ಟ'

**ಬೆಂಗಳೂರು:** 'ಕೋವಿಡ್‌ನಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ಜನರು ಈಗಷ್ಟೇ ಚೇತರಿಸಿಕೊಳ್ಳುತ್ತಿದ್ದಾರೆ. ಈ ವೇಳೆ ಕರ್ನಾಟಕ ಬಂದ್ ಮಾಡಿದಲ್ಲಿ ಕನ್ನಡಿಗರಿಗೇ ಸಮಸ್ಯೆ ಆಗುತ್ತದೆ' ಎಂದು ಕನ್ನಡ ಪರ ಹೋರಾಟಗಾರ ರಾ.ನಂ. ಚಂದ್ರಶೇಖರ ತಿಳಿಸಿದ್ದಾರೆ.

ಕನ್ನಡಪರ ಸಂಘಟನೆಗಳು ಇದೇ 31ರಂದು ಕರೆ ನೀಡಿರುವ ಬಂದ್ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, 'ಮಹಾರಾಷ್ಟ್ರ ಏಕೀಕರಣ ಸಮಿತಿಯವರು (ಎಂಇಎಸ್) ಕನ್ನಡಿಗರನ್ನು ಪ್ರಚೋದಿಸಿ, ಕರ್ನಾಟಕದ ಹಿತಕ್ಕೆ ಮಾರಕವಾಗುವ ಕೆಲಸವನ್ನು ನಿರಂತರವಾಗಿ ಮಾಡಿಕೊಂಡು ಬಂದಿದ್ದಾರೆ. ಇತ್ತೀಚೆಗೆ ಅವರು ಕನ್ನಡಿಗರ ಸ್ವಾಭಿಮಾನದ ಸಂಕೇತವಾಗಿರುವ ಸಂಗೊಳ್ಳಿ ರಾಯಣ್ಣ ಅವರ ಪ್ರತಿಮೆಯನ್ನು ವಿರೂಪಗೊಳಿಸಿ, ಕರ್ನಾಟಕದ ಬಾವುಟವನ್ನು ಸುಟ್ಟಿರುವುದು ಅಕ್ಷಮ್ಯ. ಎಂಇಎಸ್‌ನ ಚಟುವಟಿಕೆಗಳಿಗೆ ಕಡಿವಾಣ ಹಾಕಲೇಬೇಕು. ಆದರೆ, 'ಕರ್ನಾಟಕ ಬಂದ್'ಗೆ ಕರೆ ನೀಡಿರುವುದು ಸರಿಯಲ್ಲ. ಬಂದ್ ಅನ್ನುವುದು ಜನಾಗ್ರಹದ ಕೊನೆಯ ಅಸ್ತ್ರ. ಎಲ್ಲದಕ್ಕೂ ಬಂದ್ ಹಾದಿ ಹಿಡಿಯುವುದು ಅಪ್ರಬುದ್ಧ ನಡೆಯಾಗಲಿದೆ' ಎಂದು ಹೇಳಿದ್ದಾರೆ.

## ಅರ್ಜುನದಾಸ್ ವಿಧಿವಶ

**ಬೆಂಗಳೂರು:** ಆರ್.ಟಿ. ನಗರದ ಆದಿ ಕಬೀರಾಶ್ರಮದ ಅಧ್ಯಕ್ಷ ಅರ್ಜುನದಾಸ್ (84) ಅವರು ಸೋಮವಾರ ಮಧ್ಯರಾತ್ರಿ 12.30ಕ್ಕೆ ನಿಧನರಾದರು.

ಅರ್ಜುನದಾಸ್

9 ವರ್ಷದವರಿರುವಾಗಲೇ ಈ ಆಶ್ರಮಕ್ಕೆ ಸೇರಿದ್ದ ಸ್ವಾಮೀಜಿ, 68 ವರ್ಷಗಳಿಂದ ಆಶ್ರಮದ ಟ್ರಸ್ಟ್‌ನ ಅಧ್ಯಕ್ಷರಾಗಿದ್ದರು. ಮಠದ ಆವರಣದಲ್ಲಿ ಸಮಾಧಿ ಮಾಡಲು ಟ್ರಸ್ಟಿಗಳು ಅವಕಾಶ ನೀಡದಿದ್ದರಿಂದ ನೂರಕ್ಕೂ ಅಧಿಕ ಭಕ್ತರು ಮಂಗಳವಾರ ಬೆಳಿಗ್ಗೆ ಧರಣಿ ನಡೆಸಿದರು. ಸಂಜೆ ವೇಳೆಗೆ ಪ್ರತಿಭಟನೆಗೆ ಮಣಿದ ಟ್ರಸ್ಟಿಗಳು, ಆಶ್ರಮದ ಆವರಣದಲ್ಲಿ ಸಮಾಧಿಗೆ ಅವಕಾಶ ಮಾಡಿಕೊಟ್ಟರು.

ಸಿದ್ಧಾರೂಢ ಮಿಷನ್ ಆಶ್ರಮದ ಅಧ್ಯಕ್ಷ ಆರೂಢಭಾರತಿ ಸ್ವಾಮೀಜಿ, ಸಾಧನಾಮಠದ ಅಧ್ಯಕ್ಷ ಸ್ವಾಮಿ ಚಂದ್ರೇಶಾನಂದ, ನೆಲಮಂಗಲದ ಶಿವಾನಂದಾಶ್ರಮದ ರಮಣಾನಂದ ಸ್ವಾಮೀಜಿ, ಸುಮಂಗಲಿ ಸೇವಾಶ್ರಮದ ಸುಶೀಲಮ್ಮ, ಪತಂಜಲಿ ಯೋಗಾಶ್ರಮದ ಪ್ರಕಾಶ್ ಗುರೂಜಿ, ನೆಲಮಂಗಲ ಸಿದ್ಧಾರೂಢ ಮಠದ ಉಮಾಭಾರತಿ, ದತ್ತಪೀಠದ ಸ್ವಾಮಿ ನಾರಾಯಣಾನಂದ ಸರಸ್ವತಿ, ಬ್ಯಾಟರಾಯನಪುರ ಆಶ್ರಯ ಅನಾಥಾಶ್ರಮ ಮಠದ ನಾಗರಾಜ ಸ್ವಾಮಿ ಮತ್ತಿತರರು ಹಾಗೂ ಭಕ್ತರ ಸಮ್ಮುಖದಲ್ಲಿ ಸಂಜೆ 6 ಗಂಟೆಗೆ ಸಮಾಧಿ ನಿರ್ಮಿಸಲಾಯಿತು.

### ನಿಧನ ವಾರ್ತೆ

## ಪದ್ಮಲತಾ ಪ್ರಸನ್ನಯ್ಯ

**ಬೆಂಗಳೂರು:** ಕರ್ನಾಟಕ ಜೈನ ಅಸೋಸಿಯೇಷನ್‌ನ ಅಧ್ಯಕ್ಷ ಬಿ.ಪ್ರಸನ್ನಯ್ಯ ಅವರ ಪತ್ನಿ ಪದ್ಮಲತಾ (66) ಮಂಗಳವಾರ ಬೆಳಿಗ್ಗೆ ನಿಧನರಾದರು.

ಅವರಿಗೆ ಪತಿ ಹಾಗೂ ಪುತ್ರ ಇದ್ದಾರೆ. ಬನಶಂಕರಿ ಚಿತಾಗಾರದಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

### ನಗರದಲ್ಲಿ ಇಂದು

**ನೇತ್ರದಾನ ನೋಂದಣಿಗೆ ಮಿಸ್ಡ್ ಕಾಲ್ ಸೌಲಭ್ಯ ಉದ್ಘಾಟನೆ**–ನಟರಾದ ಶಿವರಾಜ್ ಕುಮಾರ್ ಮತ್ತು ರಾಘವೇಂದ್ರ ರಾಜ್‌ಕುಮಾರ್, ನೇತೃತ್ವ–ಕೆ.ಭುಜಂಗ ಶೆಟ್ಟಿ, ಆಯೋಜನೆ–ರಾಜ್‌ಕುಮಾರ್ ಐ ಬ್ಯಾಂಕ್ ಮತ್ತು ನಾರಾಯಣ ನೇತ್ರಾಲಯ, ಸ್ಥಳ–ಕಂಠೀರವ ಸ್ಟುಡಿಯೊ, ನಂದಿನಿ ಬಡಾವಣೆ, ಬೆಳಿಗ್ಗೆ 9

ಶಿವರಾಜ್ ಕುಮಾರ್

**ವಿಶ್ವಮಾನವ ದಿನ:** ಅತಿಥಿಗಳು–ಆರ್.ಕೆ.ನಲ್ಲೂರು ಪ್ರಸಾದ್, ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಅನಿಲ್ ಕುಮಾರ್, ಸಿ.ಕೆ.ರಾಮೇಗೌಡ, ಪಿ.ಮಲ್ಲಿಕಾರ್ಜುನಪ್ಪ, ನೇ.ಭ.ರಾಮಲಿಂಗಶೆಟ್ಟಿ, ವ.ಚ.ಚನ್ನೇಗೌಡ, ಕಾ.ವೆಂ. ಶ್ರೀನಿವಾಸಮೂರ್ತಿ, ಆಯೋಜನೆ– ಕನ್ನಡ ಸಂಘರ್ಷ ಸಮಿತಿ, ಸ್ಥಳ–ಕುವೆಂಪು ಪ್ರತಿಮೆ, ಲಾಲ್‌ಬಾಗ್ ಪಶ್ಚಿಮ ದ್ವಾರ, ರಾಷ್ಟ್ರೀಯ ವಿದ್ಯಾಲಯ ರಸ್ತೆ, ಬೆಳಿಗ್ಗೆ 9

**ಕುವೆಂಪು ಧ್ಯಾನ:** ಸಾನ್ನಿಧ್ಯ–ಸಿದ್ಧರಾಮ ಚೈತನ್ಯ ಸ್ವಾಮೀಜಿ, ಅತಿಥಿಗಳು–ರವೀಂದ್ರ, ಮಂಜುನಾಥ ಅದ್ದೆ, ಬಸವರಾಜ ಕಲ್ಲುಸಕ್ಕರೆ, ಪದ್ಮ ಟಿ.ಚಿನ್ಮಯಿ, ನಾಗರಾಜ್ ಯಲಚವಾಡಿ, ಆಯೋಜನೆ, ಸ್ಥಳ–ವಿಶ್ವಮಾನವ ವಿದ್ಯಾಸಂಸ್ಥೆ ಆವರಣ, ಕೆಂಪೇಗೌಡ ಬಡಾವಣೆ, ಬೆಳಿಗ್ಗೆ 9.30

**ಕುವೆಂಪು ಜನ್ಮದಿನೋತ್ಸವ:** ಉದ್ಘಾಟನೆ–ಸಚಿವ ವಿ.ಸೋಮಣ್ಣ, ಗೌರವ ಸನ್ಮಾನ–ಗೊ.ರು.ಚನ್ನಬಸಪ್ಪ, ಅಧ್ಯಕ್ಷತೆ– ಸಾ.ರಾ. ಗೋವಿಂದು, ಅತಿಥಿಗಳು–ಜೆ.ಹುಚ್ಚಪ್ಪ, ಎಸ್.ಮಹದೇವಯ್ಯ, ಪಿ.ಮಲ್ಲಿಕಾರ್ಜುನ, ಎಂ.ತಿಮ್ಮಯ್ಯ, ಅಮೃತರಾಜ್, ಕೆ.ಎಸ್. ನಾಗರಾಜ್, ಆಯೋಜನೆ–ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಮತ್ತು ಕನ್ನಡ ಜನಶಕ್ತಿ ಕೇಂದ್ರ, ಸ್ಥಳ–ಸ್ವಾತಂತ್ರ್ಯ ಉದ್ಯಾನ, ಗಾಂಧಿನಗರ, ಬೆಳಿಗ್ಗೆ 10

**ಉಚಿತ ಆರೋಗ್ಯ ತಪಾಸಣೆ ಶಿಬಿರ ಮತ್ತು ಕೋವಿಡ್ ಲಸಿಕೆ ಕಾರ್ಯಕ್ರಮ:** ಉದ್ಘಾಟನೆ–ವಿಜಯನರಸಿಂಹ, ಅತಿಥಿ–ಎಸ್. ಟಿ.ಸೋಮಶೇಖರ್, ನವೀನ್ ಕುಮಾರ್, ಅಧ್ಯಕ್ಷತೆ–ಎ.ಸಿ.ಶ್ಯಾಮ್, ಆಯೋಜನೆ–ನ್ಯೂ ಹಾರ್ಡ್‌ವಿಕ್ ಇಂಡಿಯನ್ ಸ್ಕೂಲ್, ರಾಜರಾಜೇಶ್ವರಿ ನಗರ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಸ್ಥಳ–ಹಾರ್ಡ್‌ವಿಕ್ ಇಂಡಿಯನ್ ಸ್ಕೂಲ್ ಆವರಣ, ಮಾಗಡಿ ರಸ್ತೆ, ಬೆಳಿಗ್ಗೆ 10

**ಕುವೆಂಪು ಜನ್ಮದಿನ ಮತ್ತು ವಿಚಾರಗೋಷ್ಠಿ:** ಉದ್ಘಾಟನೆ–ಬಿ.ಆರ್. ಲಕ್ಷ್ಮಣ ರಾವ್, ಅಧ್ಯಕ್ಷತೆ ಮತ್ತು ಮಾಲಾರ್ಪಣೆ–ಡಾ.ಅಜಕ್ಕಳ ಗಿರೀಶ ಭಟ್, ಉಪನ್ಯಾಸ–ಬಿ.ಎನ್.ಶಶಿಕಿರಣ್, ಮಮತಾ ಸಾಗರ, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಕಚೇರಿ ಆವರಣ, ಮಲ್ಲತ್ತಹಳ್ಳಿ, ಬೆಳಿಗ್ಗೆ 10.30

**ನೆಲದ ಪದ–ದೇಸಿ ಯುವ ಸಾಂಸ್ಕೃತಿಕ ಉತ್ಸವ:** ಉದ್ಘಾಟನೆ–ಹಂಸಲೇಖ, ಅಧ್ಯಕ್ಷತೆ–ಎಸ್.ಮರಿಸ್ವಾಮಿ, ಅತಿಥಿಗಳು–ಎಂ.ಡಿ.ಪಲ್ಲವಿ, ಮಂಸೋರೆ, ಆಯೋಜನೆ ಕರ್ನಾಟಕ ವಿದ್ಯಾರ್ಥಿ ಸಂಘಟನೆ, ಸ್ಥಳ: ಸ್ಫೂರ್ತಿಧಾಮ, ಅಂಜನಾನಗರ, ಮಾಗಡಿ ಮುಖ್ಯರಸ್ತೆ, ಬೆಳಿಗ್ಗೆ: 10.30

**ಕುವೆಂಪು ಜನ್ಮ ಸಂಭ್ರಮ:** ಜಿ.ಕೃಷ್ಣಪ್ಪ ಅವರ 'ಕುವೆಂಪು ಶ್ರೀರಾಮಾಯಣ ದರ್ಶನಂ ವಚನ ದೀಪಿಕೆ' (ಗದ್ಯಾನುವಾದ) ಪುಸ್ತಕ ಬಿಡುಗಡೆ–ಎಚ್.ಎಸ್.ವೆಂಕಟೇಶ ಮೂರ್ತಿ, ಅಧ್ಯಕ್ಷತೆ–ವೂಡೇ ಪಿ.ಕೃಷ್ಣ, ಪುಸ್ತಕ ಕುರಿತು–ಬೈರಮಂಗಲ ರಾಮೇಗೌಡ, ಅತಿಥಿಗಳು–ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ, ಜೀರಿಗೆ ಲೋಕೇಶ್, ಕಾವ್ಯವಾಚನ–ವಿದ್ವಾನ್ ಖಾಸಿಂ ಮಲ್ಲಿಗೆಮಡುವು, ಆಯೋಜನೆ–ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಸಹಯೋಗ–ಗಾಂಧಿ ಶಾಂತಿ ಪ್ರತಿಷ್ಠಾನ, ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು, ಉದಯ ಪ್ರಕಾಶನ, ಸ್ಥಳ–ಬಾಪೂ ಸಭಾಂಗಣ, ಗಾಂಧಿ ಭವನ, ಕುಮಾರಪಾರ್ಕ್ ಪೂರ್ವ, ಬೆಳಿಗ್ಗೆ 10.30

ಜಿ.ಕೃಷ್ಣಪ್ಪ

**'ಮಾಧ್ಯಮ–ಆಡಳಿತ–ಅಭಿವೃದ್ಧಿ' ಸಂವಾದ:** ಉದ್ಘಾಟನೆ–ರವಿ ಹೆಗಡೆ, ಆಶಯ ನುಡಿ–ಎನ್.ಮಂಜುನಾಥ್ ಪ್ರಸಾದ್, ಅಧ್ಯಕ್ಷತೆ–ಸದಾಶಿವ ಶೆಣೈ, ಆಯೋಜನೆ ಮತ್ತು ಸ್ಥಳ–ಕರ್ನಾಟಕ ಮಾಧ್ಯಮ ಅಕಾಡೆಮಿ ಕಚೇರಿ, ವಿಶ್ವೇಶ್ವರಯ್ಯ ಕೇಂದ್ರ, ಬೆಳಿಗ್ಗೆ 11

**ಕುವೆಂಪು ಅವರ ಸಮಗ್ರ ಸಾಹಿತ್ಯ ಪುಸ್ತಕ ಪ್ರದರ್ಶನ ಮತ್ತು ಉಪನ್ಯಾಸ:** ಉದ್ಘಾಟನೆ–ಕೆ.ಸಿ.ಶಿವಾರೆಡ್ಡಿ, ಅಧ್ಯಕ್ಷತೆ–ಎಚ್.ರವಿಕುಮಾರ್, ಆಯೋಜನೆ–ಸರ್ಕಾರಿ ಕಲಾ ಕಾಲೇಜು, ಸ್ಥಳ–ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಬೆಳಿಗ್ಗೆ 11.30

**ನೃತ್ಯ ಸಂಭ್ರಮ:** ಅತಿಥಿ–ಎಸ್.ರಂಗಪ್ಪ, ಆಯೋಜನೆ ಮತ್ತು ಸ್ಥಳ–ಕರ್ನಾಟಕ ಸರ್ಕಾರ ಸಚಿವಾಲಯ ಕ್ಲಬ್, ಚನ್ನಬಸಪ್ಪ ಸಭಾಂಗಣ, ಮಧ್ಯಾಹ್ನ 1.35

**ವಿಶ್ವಮಾನವ ದಿನ:** 'ಕುವೆಂಪು ಅವರ ವಿಶ್ವಮಾನವ ಪ್ರಜ್ಞೆಯ ಆಯಾಮಗಳು' ಉಪನ್ಯಾಸ–ಬಸವರಾಜ ಕಲ್ಗುಡಿ, ಅಧ್ಯಕ್ಷತೆ–ಬೈರಮಂಗಲ ರಾಮೇಗೌಡ, ಆಯೋಜನೆ–ಬಿಎಂಶ್ರೀ ಪ್ರತಿಷ್ಠಾನ, ಸ್ಥಳ–ಎಂವಿಸೀ ಸಭಾಂಗಣ, ಬಿಎಂಶ್ರೀ ಕಲಾಭವನ, ಸಂಜೆ 4

**ಕುವೆಂಪು ಜಯಂತ್ಯುತ್ಸವ:** ಅಧ್ಯಕ್ಷತೆ–ಬೇಲಿ ಮಠದ ಶಿವರುದ್ರ ಸ್ವಾಮೀಜಿ, ಪ್ರತಿಮೆಗೆ ಮಾಲಾರ್ಪಣೆ–ಮುನಿರತ್ನ, ಅತಿಥಿಗಳು–ಎಚ್.ಶಿವರಾಮೇಗೌಡ, ಬೈರಮಂಗಲ ರಾಮೇಗೌಡ, ಪಾಲನೇತ್ರ, ಮಂಜುನಾಥ್ ರಾಜು, ಆಯೋಜನೆ–ಕರ್ನಾಟಕ ರಕ್ಷಣಾ ವೇದಿಕೆ, ಸ್ಥಳ–ಕುವೆಂಪು ಪ್ರತಿಮೆ, ಮಲ್ಲೇಶ್ವರ ವೃತ್ತ, ಸಂಜೆ 4.30

**ವಿಶ್ವಮಾನವ ದಿನ:** ಸಂಜೆ 4ರಿಂದ ಕುವೆಂಪು ವಿಚಾರಗೋಷ್ಠಿಗಳು, ಸಂಜೆ 7.30ಕ್ಕೆ ಸಮಾರೋಪ, ಅತಿಥಿಗಳು–ಆರ್. ಪಿ.ಮೋಹನ್, ಬೆಳಗೆರೆ ಲಿಂಗರಾಜಯ್ಯ, ಅಧ್ಯಕ್ಷತೆ–ಸಂತೋಷ್ ಕುಮಾರ್, ಆಯೋಜನೆ–ಭಾರತ್ ಎಲೆಕ್ಟ್ರಾನಿಕ್ಸ್ ಲಲಿತ ಕಲಾ ಸಂಘ ಹಾಗೂ ಬಿಇಎಲ್ ವಿದ್ಯಾಸಂಸ್ಥೆಗಳು, ಸ್ಥಳ–ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಬಿಇಎಲ್, ಜಾಲಹಳ್ಳಿ,

**ಕುವೆಂಪು ಜನ್ಮದಿನ ಮತ್ತು ಗೌರವ ಅಭಿನಂದನೆ:** ಉದ್ಘಾಟನೆ–ವಿ.ಸೋಮಣ್ಣ, ಅಭಿನಂದನೆ–ಅರುಣ್ ಸೋಮಣ್ಣ, ಸತೀಶ್ ಕುಮಾರ್ ಎಸ್. ಹೊಸಮನಿ, ಅಧ್ಯಕ್ಷತೆ–ಸಿ.ದಾಸೇಗೌಡ, ಉಪನ್ಯಾಸ–ಎಚ್.ಲಕ್ಷ್ಮೀನಾರಾಯಣಸ್ವಾಮಿ, ಆಯೋಜನೆ–ರಂಗೋತ್ರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ಜ್ಞಾನಸೌಧ, ಅನಂತಕುಮಾರ್ ಸಭಾಂಗಣ, ಕಲ್ಯಾಣನಗರ, ಮೂಡಲಪಾಳ್ಯ, ಸಂಜೆ 5

**'ಕನ್ನಡ ರಂಗಭೂಮಿ ಅಂದು–ಇಂದು' ಉಪನ್ಯಾಸ:** ಮೈಸೂರು ರಮಾನಂದ್ ಅವರ ನಿರ್ದೇಶನದ 'ಸಾರಾಯಿ ಸಂಕಟ' ನಾಟಕ ಪ್ರದರ್ಶನ, ಆಯೋಜನೆ–ಗೆಜ್ಜೆ ಹೆಜ್ಜೆ ರಂಗತಂಡ, ಸ್ಥಳ–ಸೇವಾ ಸದನ, ಮಲ್ಲೇಶ್ವರ, ಸಂಜೆ 5

**ರಾಷ್ಟ್ರ ಕವಿ ಕುವೆಂಪು ಜನ್ಮದಿನ:** ಉದ್ಘಾಟನೆ–ಕರಿಗೌಡ ಬೀಚನಹಳ್ಳಿ, ಅಧ್ಯಕ್ಷತೆ–ಎಸ್.ಟಿ.ಸೋಮಶೇಖರ್, ಅತಿಥಿಗಳು– ಪ್ರೊ. ಪಿ.ಕೆ.ನಂದೀಶ್, ಭರವಸೆ ತಂಡದಿಂದ ಕುವೆಂಪು ಕಾವ್ಯ ವಾಚನ ಹಾಗೂ ಬೀದಿನಾಟಕ, ಆಯೋಜನೆ–ಗಾಂಧಿಪಾರ್ಕ್ ನಡಿಗೆದಾರರ ಕೂಟ, ಸ್ಥಳ–ಗಾಂಧಿ ಪಾರ್ಕ್, ಭಾರತ್ ನಗರ 2ನೇ ಹಂತ, ಸಂಜೆ:5

**ಸಂಗೀತ ವೈಭವ ಹಾಗೂ ಕನ್ನಡ ನಿತ್ಯೋತ್ಸವ ಪ್ರಶಸ್ತಿ ಪ್ರದಾನ:** ಉದ್ಘಾಟನೆ–ಅರ್ಚನಾ ಉಡುಪ, ಪ್ರಾಸ್ತಾವಿಕ ನುಡಿ–ಕಿಕ್ಕೇರಿ ಕೃಷ್ಣಮೂರ್ತಿ, ಅಧ್ಯಕ್ಷತೆ–ವೈ.ಕೆ. ಮುದ್ದುಕೃಷ್ಣ, ಪ್ರಶಸ್ತಿ ಪ್ರದಾನ–ಎಲ್.ಎ. ರವಿಸುಬ್ರಹ್ಮಣ್ಯ, ಅತಿಥಿಗಳು–ಆನೂರು ಅನಂತಕೃಷ್ಣ ಶರ್ಮ, ಶ್ರೀನಿವಾಸ ಉಡುಪ, ಕಟ್ಟೆ ಸತ್ಯನಾರಾಯಣ, ಆಯೋಜನೆ–ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್, ಸ್ಥಳ–ಸಿ.ಅಶ್ವತ್ಥ್ ಕಲಾಭವನ, ಎನ್. ಆರ್.ಕಾಲೊನಿ, ಸಂಜೆ 5

ಅರ್ಚನಾ ಉಡುಪ

**ಸಿ.ಅಶ್ವತ್ಥ್ ನೆನಪಾರ್ಥ 'ಸೋರುತಿಹುದು ಮನೆಯ ಮಾಳಿಗೆ' ಕಾರ್ಯಕ್ರಮ:** ಉಪನ್ಯಾಸ–ಎನ್.ಎಸ್.ಪ್ರಸಾದ್, ಜಯಶ್ರೀ ಅರವಿಂದ್, ಅತಿಥಿಗಳು–ಎಚ್.ವೈ.ಸಂಜಯ್ ಕುಮಾರ್, ಉಪಸ್ಥಿತಿ– ಚಂದ್ರ ಅಶ್ವತ್ಥ್, ಸಿ.ಅಶ್ವತ್ಥ್ ಅವರ ಮರೆಯಲಾಗದ ಹಾಡುಗಳು ಗಾಯನ:ಸವಿಗಾನ ಮಂಜಣ್ಣ, ಪರಶುರಾಮ, ಜಲೀಲ್, ಮಂಜುನಾಥ ಭಟ್, ಆಯೋಜನೆ–ಅಂಕುರ ಸಾಂಸ್ಕೃತಿಕ ಟ್ರಸ್ಟ್, ಸ್ಥಳ–ಕಪ್ಪಣ್ಣ ಅಂಗಳ, ಜೆ.ಪಿ.ನಗರ ಮೊದಲನೇ ಹಂತ, ಸಂಜೆ 6

**ರಂಗ ಹಬ್ಬ:** 'ಗುಳ್ಳೆನರಿ' ನಾಟಕ ಪ್ರದರ್ಶನ, ರಚನೆ ಮತ್ತು ನಿರ್ದೇಶನ–ಕೆ.ವಿ.ಶ್ರೀನಿವಾಸ ಪ್ರಭು, ಆಯೋಜನೆ–ಕಲಾ ಗಂಗೋತ್ರಿ, ಸ್ಥಳ–ರಂಗ ಶಂಕರ, ಜೆ.ಪಿ.ನಗರ, ಸಂಜೆ 7.30

ಕಾಮಗಾರಿಯಲ್ಲಿ ಅವ್ಯವಹಾರ ಆರೋಪ: ಪ್ರತಿಭಟನೆ

# ಬಿಜೆಪಿ –ಎಎಪಿ ಕಾರ್ಯಕರ್ತರ ಘರ್ಷಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಿ.ವಿ.ರಾಮನ್ ನಗರ ಕ್ಷೇತ್ರ ವ್ಯಾಪ್ತಿಯಲ್ಲಿ ಕೆಆರ್‌ಐಡಿಎಲ್ ಕಾಮಗಾರಿಯಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿ ಮಂಗಳವಾರ ಆಯೋಜಿಸಿದ್ದ ಪ್ರತಿಭಟನೆ ವೇಳೆ ಆಮ್ ಆದ್ಮಿ ಪಕ್ಷ ಹಾಗೂ ಬಿಜೆಪಿ ಕಾರ್ಯಕರ್ತರ ನಡುವೆ ಘರ್ಷಣೆ ನಡೆದಿದೆ.

ಎಎಪಿ ಕಾರ್ಯಕರ್ತರು ತಿಪ್ಪಸಂದ್ರ ಮುಖ್ಯರಸ್ತೆಯ ಮುಖ್ಯದ್ವಾರದ ಬಳಿ ಮಂಗಳವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

'ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ಪಕ್ಷದ ಕಾರ್ಯಕರ್ತರ ಮೇಲೆ ಬಿಜೆಪಿಯ ಕಾರ್ಯಕರ್ತರು ಹಲ್ಲೆ ನಡೆಸಿದ್ದಾರೆ. ಆರೋಪಿಗಳ ವಿರುದ್ಧ ಕ್ರಮ ಜರುಗಿಸಬೇಕು' ಎಂದು ಒತ್ತಾಯಿಸಿ ಎಎಪಿ ಬೆಂಗಳೂರು ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ನೇತೃತ್ವದ ನಿಯೋಗವು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಮನವಿ ಸಲ್ಲಿಸಿದೆ.

'ಸಿ.ವಿ.ರಾಮನ್ ನಗರದಲ್ಲಿ ನಡೆಸಲು ಉದ್ದೇಶಿಸಿದ್ದ ₹3 ಕೋಟಿ ಮೊತ್ತದ ಆರು ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿತ್ತು. ಅಂದಾಜು ಮೊತ್ತಕ್ಕಿಂತ ಶೇ 15ರಷ್ಟು ಕಡಿಮೆ ದರದಲ್ಲಿ ಕಾಮಗಾರಿ ನಡೆಸಲು ಗುತ್ತಿಗೆದಾರರು ಮುಂದೆ ಬಂದಿದ್ದರು. ಹೀಗಿದ್ದರೂ ಟೆಂಡರ್ ಪ್ರಕ್ರಿಯೆ ರದ್ದುಪಡಿಸಿ ಎಲ್ಲ ಕಾಮಗಾರಿಗಳನ್ನೂ ಕೆಆರ್‌ಐಡಿಎಲ್‌ಗೆ ವಹಿಸಲಾಗಿದೆ. ಸ್ಥಳೀಯ ಶಾಸಕ ಎಸ್.ರಘು ಅವರು ಕಮಿಷನ್ ಆಸೆಯಿಂದ ಕೆಆರ್‌ಐಡಿಎಲ್‌ಗೆ ಕಾಮಗಾರಿಗಳು ಸಿಗುವಂತೆ ನೋಡಿಕೊಂಡಿದ್ದಾರೆ' ಎಂದು ಮೋಹನ್ ದಾಸರಿ ಆರೋಪಿಸಿದರು.

'ತಿಪ್ಪಸಂದ್ರ ಮುಖ್ಯರಸ್ತೆಯ ಮಹಾದ್ವಾರದ ಬಳಿ ಪ್ರತಿಭಟಿಸುತ್ತಿದ್ದ ನಮ್ಮ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ ಠಾಣೆಗೆ ಕರೆದೊಯ್ಯುತ್ತಿದ್ದರು. ಜೀವನ್‌ಬಿಮಾ ನಗರ ಠಾಣೆ ಮುಂದೆ ಸೇರಿದ್ದ ಬಿಜೆಪಿ ಕಾರ್ಯಕರ್ತರು ನಮ್ಮವರ ಮೇಲೆ ಹಲ್ಲೆ ನಡೆಸಿದ್ದಾರೆ' ಎಂದು ದೂರಿದರು.

'ಜನವರಿಯಲ್ಲಿ ಬಿಬಿಎಂಪಿ ಚುನಾವಣೆ ಘೋಷಣೆಯಾಗುವ ಸಾಧ್ಯತೆ ಇದೆ. ಇದನ್ನು ಗಮನದಲ್ಲಿಟ್ಟುಕೊಂಡು ಎಎಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. ಅವರ ಆರೋಪಗಳಲ್ಲಿ ಹುರುಳಿಲ್ಲ. ನಾವು ಯಾವ ಕಾಮಗಾರಿಯನ್ನೂ ಕೆಆರ್‌ಡಿಐಎಲ್‌ಗೆ ವಹಿಸಿಲ್ಲ' ಎಂದು ಶಾಸಕ ರಘು 'ಪ್ರಜಾವಾಣಿ'ಗೆ ತಿಳಿಸಿದರು.

'ಹಿಂದಿನ ಎರಡು ದಶಕಗಳಿಂದ ಜನಪರ ಕೆಲಸಗಳನ್ನು ಮಾಡುತ್ತಾ ಬಂದಿದ್ದೇನೆ. ಹೀಗಿದ್ದರೂ ಎಎಪಿ ಕಾರ್ಯಕರ್ತರು ಸುಳ್ಳು ಆರೋಪ ಮಾಡಿ ನನ್ನ ಘನತೆಗೆ ಕುಂದು ತರಲು ಪ್ರಯತ್ನಿಸಿದ್ದಾರೆ. ಅದನ್ನು ನಮ್ಮ ಕಾರ್ಯಕರ್ತರು ಪ್ರಶ್ನಿಸಿದ್ದಾರೆ. ಯಾರ ಮೇಲೂ ಹಲ್ಲೆ ನಡೆಸಿಲ್ಲ' ಎಂದು ಸ್ಪಷ್ಟಪಡಿಸಿದರು.

## ಜ.11ಕ್ಕೆ ಪಡಿತರ ವಿತರಕರ ಸಮಾವೇಶ

ಬೆಂಗಳೂರು: 'ಬೆಂಗಳೂರು ಪಡಿತರ ವಿತರಕರ ಹಿತರಕ್ಷಣಾ ಸಂಘ ಹಾಗೂ ರಾಜ್ಯ ಪಡಿತರ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ ಜನವರಿ 11ರಂದು ಬೆಳಿಗ್ಗೆ 11 ಗಂಟೆಗೆ ಬೆಳಗಾವಿಯ ಕೊಂಡುಸ್ಕರ ಭವನದ ಜಗಜ್ಯೋತಿ ಬಸವಣ್ಣನವರ ವೇದಿಕೆಯಲ್ಲಿ 'ಪಡಿತರ ವಿತರಕರ ಸಮಾವೇಶ' ಹಮ್ಮಿಕೊಳ್ಳಲಾಗಿದೆ. ಇದನ್ನು ಆಹಾರ ಸಚಿವ ಉಮೇಶ್ ಕತ್ತಿ ಉದ್ಘಾಟಿಸಲಿದ್ದಾರೆ' ಎಂದು ಸಂಘದ ಅಧ್ಯಕ್ಷ ಜೆ.ಬಿ. ಕುಮಾರ್ ಹೇಳಿದರು.

ಪ್ರಜಾವಾಣಿ
ಪ್ರಜಾಧ್ವನಿ
ಜನರ ಮನದಾಳದ ಮಾತು
ರಾಜ್ಯದಲ್ಲಿ ಕೋವಿಡ್ ನಿಯಂತ್ರಣಕ್ಕೆ ಮತ್ತೆ ಹತ್ತು ದಿನ ರಾತ್ರಿ ಕರ್ಫ್ಯೂ ಜಾರಿಗೊಳಿಸಿರುವ ನಿರ್ಧಾರ ಸರಿಯೇ?
QR ಕೋಡ್ ಸ್ಕ್ಯಾನ್ ಮಾಡಿ ಅಥವಾ bit.ly/prajadhwani ಲಿಂಕ್ ಮೂಲಕ ಇಂದು ಸಂಜೆ 5ರ ಒಳಗೆ ನಿಮ್ಮ ಅನಿಸಿಕೆಯನ್ನು ಕಳುಹಿಸಿ

## ವಿಮಲಾ ಪೈ ವಿಶ್ವ ಕೊಂಕಣಿ ಪುರಸ್ಕಾರ ಪ್ರಕಟ

ಮಂಗಳೂರು: ನಗರದ ವಿಶ್ವ ಕೊಂಕಣಿ ಕೇಂದ್ರವು ಕೊಡಮಾಡುವ ವಿಮಲಾ ವಿ. ಪೈ ವಿಶ್ವ ಕೊಂಕಣಿ ಸಾಹಿತ್ಯ ಪುರಸ್ಕಾರ 2021, ವಿಮಲಾ ವಿ. ಪೈ ವಿಶ್ವ ಕೊಂಕಣಿ ಕವಿತಾ ಕೃತಿ ಪುರಸ್ಕಾರ 2021 ಮತ್ತು ವಿಮಲಾ ವಿ. ಪೈ ವಿಶ್ವ ಕೊಂಕಣಿ ಜೀವನ ಸಿದ್ಧಿ ಸಮ್ಮಾನಗಳನ್ನು ಪ್ರಕಟಿಸಲಾಗಿದೆ.

ವಿಶ್ವ ಕೊಂಕಣಿ ಸಾಹಿತ್ಯ ಪುರಸ್ಕಾರಕ್ಕೆ ನಗರದ ಆಂಟನಿ ಬಾರ್ಕೂರ್ ರಚಿಸಿದ ಕೊಂಕಣಿ ಸಣ್ಣ ಕತೆಗಳ ಸಂಕಲನ 'ಮಾಸಾಂ', ವಿಶ್ವ ಕೊಂಕಣಿ ಕವಿತಾ ಕೃತಿ ಪುರಸ್ಕಾರಕ್ಕೆ ಗೋವಾದ ಉದಯ ನರಸಿಂಹ ಮ್ಹಾಂಬ್ರೋ ರಚಿಸಿದ ಕವಿತಾ ಸಂಕಲನ 'ಇಂದ್ರಧೊಣು ಉದೆಂವ್' ಆಯ್ಕೆಯಾಗಿವೆ.

ಹಿರಿಯರನ್ನು ಗೌರವಿಸಲು ಸ್ಥಾಪಿಸಲಾದ ವಿಮಲಾ ವಿ. ಪೈ ವಿಶ್ವ ಕೊಂಕಣಿ ಜೀವನ ಸಿದ್ಧಿ ಸಮ್ಮಾನಕ್ಕೆ ಗೋವಾದ ಸುರೇಶ ಜೈವಂತ ಬೋರ್ಕರ್ ಅವರನ್ನು ಆಯ್ಕೆ ಮಾಡಲಾಗಿದೆ. ಪುರಸ್ಕಾರಗಳು ತಲಾ ₹1 ಲಕ್ಷ ಗೌರವಧನ ಮತ್ತು ಫಲಕವನ್ನು ಒಳಗೊಂಡಿವೆ. ಈ ಪ್ರಶಸ್ತಿಗಳನ್ನು ಟಿ.ವಿ. ಮೋಹನದಾಸ ಪೈಯವರು ತಮ್ಮ ತಾಯಿ ವಿಮಲಾ ವಿ. ಪೈ ಅವರ ಹೆಸರಿನಲ್ಲಿ ಪ್ರಾಯೋಜಿಸಿದ್ದಾರೆ. ಶೀಘ್ರದಲ್ಲೇ ಜರುಗಲಿರುವ ವಾರ್ಷಿಕ ವಿಶ್ವ ಕೊಂಕಣಿ ಪುರಸ್ಕಾರ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ವಿಶ್ವ ಕೊಂಕಣಿ ಕೇಂದ್ರದ ಅಧ್ಯಕ್ಷ ನಂದಗೋಪಾಲ ಶೆಣೈ ತಿಳಿಸಿದ್ದಾರೆ.

ಉದಯ ಮ್ಹಾಂಬ್ರೋ

ಸುರೇಶ ಬೋರ್ಕರ್


ಆಂಟನಿ ಬಾರ್ಕೂರ್

ಕೇಂದ್ರ ಸಚಿವರ ಕ್ಷೇತ್ರದಲ್ಲೂ ಆಯ್ಕೆಯಿಲ್ಲ • ಮೂರು ವರ್ಷಗಳಲ್ಲಿ 25 ಗ್ರಾಮಗಳಷ್ಟೇ ಆಯ್ಕೆ

# 11 ಸಂಸದರಿಂದ ಆದರ್ಶ ಗ್ರಾಮಕ್ಕೆ ಎಳ್ಳುನೀರು

• ಡಿ.ಎಂ.ಕುರ್ಕೆ ಪ್ರಶಾಂತ್

ಪ್ರಜಾವಾಣಿ ವಿಶೇಷ

ಚಿಕ್ಕಬಳ್ಳಾಪುರ: ಕಳೆದ ಮೂರು ವರ್ಷಗಳಿಂದ ರಾಜ್ಯದ 11 ಸಂಸದರು 'ಸಂಸದರ ಆದರ್ಶ ಗ್ರಾಮ' ಯೋಜನೆಗೆ ಎಳ್ಳುನೀರು ಬಿಟ್ಟಿದ್ದಾರೆ! 2019–20ರಿಂದ ಇಲ್ಲಿಯವರೆಗೆ ಈ ಯೋಜನೆಯಡಿ ಗ್ರಾಮಗಳನ್ನು ಆಯ್ಕೆಯೇ ಮಾಡಿಲ್ಲ.

ಪ್ರಧಾನಿ ನರೇಂದ್ರ ಮೋದಿ 2014ರ ಅ. 11ರಂದು ಈ ಮಹತ್ವಾಕಾಂಕ್ಷೆಯ ಯೋಜನೆಯನ್ನು ಜಾರಿಗೊಳಿಸಿದರು. ಗ್ರಾಮಗಳ ಸಮಗ್ರ ಅಭಿವೃದ್ಧಿಯ ಜತೆಗೆ ಸಂಸದರ ನಾಯಕತ್ವ, ಸಾಮರ್ಥ್ಯ ತೋರುವುದು ಯೋಜನೆಯ ಉದ್ದೇಶವಾಗಿದೆ.

ಸಂಸದರ ಆದರ್ಶ ಗ್ರಾಮ ಯೋಜನೆ ನಾಮಕಾವಾಸ್ತೆ ಯೋಜನೆ ಎನ್ನುವ ಟೀಕೆ ಹಿಂದಿನಿಂದಲೂ ಇದೆ. ತುಮಕೂರು ಸಂಸದ ಜಿ.ಎಸ್. ಬಸವರಾಜು ಮಾತ್ರ 2019–20 ಮತ್ತು 2020–21ರಲ್ಲಿ ಗ್ರಾಮಗಳನ್ನು ಆಯ್ಕೆ ಮಾಡಿದ್ದಾರೆ. ಪ್ರಸಕ್ತ ಸಾಲಿನ ಆಯ್ಕೆ ಬಾಕಿ ಇದೆ. ಉಳಿದ ಸಂಸದರು ಒಂದು ವರ್ಷ ಆಯ್ಕೆ ಮಾಡಿದ್ದರೆ ಮತ್ತೊಂದು ವರ್ಷ ಯೋಜನೆಯಿಂದ ದೂರವೇ ಉಳಿದಿದ್ದಾರೆ.

ಚಿತ್ರದುರ್ಗ, ಧಾರವಾಡ, ಉತ್ತರ ಕನ್ನಡ, ಹಾಸನ, ಚಾಮರಾಜನಗರ, ದಕ್ಷಿಣ ಕನ್ನಡ, ಬೀದರ್, ಬೆಂಗಳೂರು ದಕ್ಷಿಣ, ಬೆಂಗಳೂರು ಸೆಂಟ್ರಲ್, ಹಾವೇರಿ, ಶಿವಮೊಗ್ಗ ಕ್ಷೇತ್ರದ ಸಂಸದರು ಮೂರು ವರ್ಷಗಳಿಂದ ಸಂಸದರ ಆದರ್ಶ ಗ್ರಾಮ ಯೋಜನೆಯಡಿ ಗ್ರಾಮಗಳ ಆಯ್ಕೆಗೆ ಮುಂದಾಗಿಲ್ಲ.

ಹಾಸನ ಹೊರತುಪಡಿಸಿ ಉಳಿದ ಎಲ್ಲ ಕ್ಷೇತ್ರಗಳಲ್ಲಿಯೂ ಬಿಜೆಪಿ ಸಂಸದರೇ ಇದ್ದಾರೆ. ಕೇಂದ್ರ ಸಚಿವರಾದ ಎ. ನಾರಾಯಣಸ್ವಾಮಿ, ಪ್ರಲ್ಹಾದ ಜೋಶಿ, ಭಗವಂತ ಖೂಬಾ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ಕ್ಷೇತ್ರಗಳಲ್ಲಿಯೇ ಪ್ರಧಾನಿ ಮೋದಿ ಅವರ ಕನಸಿನ ಯೋಜನೆಗೆ ಗ್ರಹಣ ಬಡಿದಿದೆ.

2019–20ನೇ ಸಾಲಿನಲ್ಲಿ ಬೆಳಗಾವಿ, ಬೆಂಗಳೂರು ಉತ್ತರ, ಚಿಕ್ಕೋಡಿ, ಕೊಪ್ಪಳ, ಕಲಬುರಗಿ, ತುಮಕೂರು, ದಾವಣಗೆರೆ, ಬಳ್ಳಾರಿ ಸಂಸದರು ಮಾತ್ರ ಗ್ರಾಮಗಳನ್ನು ಆಯ್ಕೆ ಮಾಡಿದ್ದಾರೆ. ಉಳಿದ 20 ಸಂಸದರ ಕ್ಷೇತ್ರಗಳಲ್ಲಿ ಆಯ್ಕೆ ನಡೆದಿಲ್ಲ.

2020–21ನೇ ಸಾಲಿನಲ್ಲಿ ಮಂಡ್ಯ, ಬಾಗಲಕೋಟೆ, ಚಿಕ್ಕಬಳ್ಳಾಪುರ, ತುಮಕೂರು, ಕೋಲಾರ, ರಾಯಚೂರು, ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದರು ಗ್ರಾಮಗಳನ್ನು ಆಯ್ಕೆ ಮಾಡಿದ್ದಾರೆ. ಉಳಿದ 21 ಸಂಸದರು ಯೋಜನೆಯನ್ನು ಕೈಚೆಲ್ಲಿದ್ದಾರೆ.

2021–22ನೇ ಸಾಲಿನಲ್ಲಿ ಮಂಡ್ಯ, ಬೆಳಗಾವಿ, ವಿಜಯಪುರ, ಉಡುಪಿ–ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಕೋಲಾರ, ಮೈಸೂರು ಸಂಸದರು ಗ್ರಾಮಗಳನ್ನು ಆಯ್ಕೆ ಮಾಡಿದ್ದಾರೆ. ಉಳಿದ 21 ಸಂಸದರ ಕ್ಷೇತ್ರಗಳಲ್ಲಿ ಆಯ್ಕೆ ನಡೆದಿಲ್ಲ. ಈ ಮೂರು ವರ್ಷಗಳಲ್ಲಿ ಲೋಕಸಭೆ ಮತ್ತು ರಾಜ್ಯಸಭಾ ಸದಸ್ಯರು ಒಟ್ಟು 25 ಗ್ರಾಮಗಳನ್ನು ಈ ಯೋಜನೆಯಡಿ ಆಯ್ಕೆ ಮಾಡಿದ್ದಾರೆ.

### ಪ್ರತಿಕ್ರಿಯಿಸದ ಸಚಿವರು, ಸಂಸದರು

ಈ ಬಗ್ಗೆ ಅಭಿಪ್ರಾಯ ಪಡೆಯಲು ಕೆಲವು ಸಂಸದರಿಗೆ ಎರಡು ದಿನಗಳಲ್ಲಿ ಹಲವು ಬಾರಿ ಕರೆ ಮಾಡಿದರೂ ಅವರು ಪ್ರತಿಕ್ರಿಯಿಸಲಿಲ್ಲ. ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಎ. ನಾರಾಯಣಸ್ವಾಮಿ ಕರೆ ಸ್ವೀಕರಿಸಲಿಲ್ಲ. ಅವರ ಸಹಾಯಕರಿಗೆ ಇಂತಹ ವಿಚಾರವಾಗಿ ಸಂಸದರನ್ನು ಸಂಪರ್ಕಿಸಬೇಕಿತ್ತು ಎಂದು ತಿಳಿಸಲಾಯಿತು. ನಾವೇ ಕರೆ ಮಾಡಿಸುತ್ತೇವೆ ಎಂದರು. ನಂತರ 'ಆರೋಗ್ಯ ಸರಿ ಇಲ್ಲ, ಕೆಲಸದ ಒತ್ತಡದಲ್ಲಿ ಇದ್ದಾರೆ' ಎಂದರು.

ಮತ್ತೊಬ್ಬ ಕೇಂದ್ರ ಸಚಿವ ಭಗವಂತ ಖೂಬಾ, ಎರಡು ಬಾರಿ ಕರೆ ಸ್ವೀಕರಿಸಿದರೂ, 'ಈ ಬಗ್ಗೆ ನಂತರ ಮಾತನಾಡುವೆ' ಎಂದು ಕರೆ ಕಡಿತಗೊಳಿಸಿದರು. ಹಾವೇರಿ, ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಹಾಸನ ಸಂಸದರನ್ನು ನೇರವಾಗಿ ಮತ್ತು ಅವರ ಸಹಾಯಕರ ಮೂಲಕ ಸಂಪರ್ಕಕ್ಕೆ ಪ್ರಯತ್ನಿಸಿದರೂ ಲಭ್ಯವಾಗಲಿಲ್ಲ.

## ನ್ಯಾಯಾಂಗ ಮೂಲಸೌಕರ್ಯ ಅಭಿವೃದ್ಧಿ ಮಂಡಳಿ ಅಗತ್ಯ: ನ್ಯಾ. ನಜೀರ್

ಪುತ್ತೂರು: 'ಶಾಂತಿ ಮತ್ತು ಸುವ್ಯವಸ್ಥೆ ಇಲ್ಲದಿದ್ದಲ್ಲಿ ಸಮಾಜ ನೆಮ್ಮದಿಯಿಂದಿರಲು ಸಾಧ್ಯವಿಲ್ಲ. ಶಾಂತಿ– ಸುವ್ಯವಸ್ಥೆ ಕಾಪಾಡಲು ಅಗತ್ಯ ವ್ಯವಸ್ಥೆ ಕಲ್ಪಿಸುವುದು ಸರ್ಕಾರದ ಕರ್ತವ್ಯ' ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎಸ್. ಅಬ್ದುಲ್ ನಜೀರ್ ಹೇಳಿದರು.

ನಗರದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ಸಮಾಜದಲ್ಲಿ ಶಾಂತಿ– ಸುವ್ಯವಸ್ಥೆ ಕಾಪಾಡುವ ಜವಾಬ್ದಾರಿ ಸರ್ಕಾರದ್ದಷ್ಟೇ ಅಲ್ಲ, ನ್ಯಾಯಾಂಗ ವ್ಯವಸ್ಥೆ ಮೇಲೂ ಆ ಜವಾಬ್ದಾರಿ ಇದೆ.ಹಾಗಾಗಿ ನ್ಯಾಯಾಂಗ ವ್ಯವಸ್ಥೆಗೆ ಮೂಲ ಸೌಲಭ್ಯ ಕಲ್ಪಿಸಲು, 'ನ್ಯಾಯಾಂಗ ಮೂಲಸೌಕರ್ಯ ಅಭಿವೃದ್ಧಿ ಮಂಡಳಿ' ಸ್ಥಾಪನೆ ಅಗತ್ಯ' ಎಂದರು.

## ಚಪ್ಪಲಿ ತೋರಿಸಿದ ಶಾಸಕ: ವಿಡಿಯೊ ವೈರಲ್

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ಸೋಮವಾರ ನಡೆದ ಪುರಸಭೆ ಚುನಾವಣೆ ಸಂದರ್ಭದಲ್ಲಿ ಮತಗಟ್ಟೆ ಬಳಿ ನಡೆದ ಮಾತಿನ ಚಕಮಕಿ ಸಂದರ್ಭದಲ್ಲಿ ಕಾಂಗ್ರೆಸ್ ಶಾಸಕ ಎಸ್. ಭೀಮನಾಯ್ಕ ಅವರು ಬಿಜೆಪಿಯ ಮಾಜಿ ಶಾಸಕ ಕೆ.ನೇಮಿರಾಜನಾಯ್ಕ ಅವರಿಗೆ ಚಪ್ಪಲಿ ತೋರಿಸಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಮಂಗಳವಾರ ವೈರಲ್ ಆಗಿದೆ.

ಪಟ್ಟಣದ ರಾಮನಗರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ಥಾಪಿಸಿದ್ದ 20 ಮತ್ತು 21ನೇ ಮತಗಟ್ಟೆಯ ಬಳಿ ಶಾಸಕ ಮತ್ತು ಮಾಜಿ ಶಾಸಕರು ಹಾಗೂ ಬೆಂಬಲಿಗರ ನಡುವೆ ಪರಸ್ಪರ ಮಾತಿನ ಚಕಮಕಿ ನಡೆದಿತ್ತು. ಎರಡೂ ಪಕ್ಷಗಳ ಕಾರ್ಯಕರ್ತರು ಕೈ – ಕೈ ಮಿಲಾಯಿಸುವ ಹಂತಕ್ಕೆ ತಲುಪಿದ್ದರು. ಈ ಸಂದರ್ಭದಲ್ಲಿ ಲಘು ಲಾಠಿ ಪ್ರಹಾರ ಕೂಡ ನಡೆದಿತ್ತು. ಈ ಸಂಬಂಧ ಪ್ರಕರಣ ದಾಖಲಾಗಿದೆ.

## 'ಸಹಾಯವಾಣಿ' ಶೀಘ್ರ ಆರಂಭ

ಹಾವೇರಿ: 'ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಇಲಾಖೆಯ ಹಾಸ್ಟೆಲ್‌ಗಳ ಕುಂದುಕೊರತೆ ನಿವಾರಣೆಗೆ ಜ.10ರೊಳಗೆ 'ಸಹಾಯವಾಣಿ' ಆರಂಭಿಸುತ್ತೇವೆ. ಬಿಎಸ್‌ಎನ್‌ಎಲ್ ಜೊತೆ ಒಪ್ಪಂದ ಮಾಡಿಕೊಂಡಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಲಿದ್ದಾರೆ' ಎಂದು ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ 'ಪ್ರಗತಿ ಪರಿಶೀಲನಾ ಸಭೆ' ನಡೆಸಿದ ನಂತರ ಅವರು ಮಾತನಾಡಿದರು. 'ಹಾಸ್ಟೆಲ್‌ಗಳಿಗೆ ಆಹಾರ ಧಾನ್ಯ ಪೂರೈಸುವ ಟೆಂಡರ್‌ನಲ್ಲಿ ಪಾರದರ್ಶಕತೆ ತರಲು ಹೊಸ ಸುತ್ತೋಲೆ ಹೊರಡಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ ನೇತೃತ್ವದ ಸಮಿತಿಯನ್ನು ಪುನರ್ ರಚಿಸಲಾಗಿದೆ. ಯಾವ ಒತ್ತಡಕ್ಕೂ ಒಳಗಾಗುವುದಿಲ್ಲ. ಲೋಪದೋಷಗಳು ಕಂಡುಬಂದರೆ ಅಧಿಕಾರಿಗಳೇ ನೇರ ಹೊಣೆ' ಎಂದು ಎಚ್ಚರಿಕೆ ನೀಡಿದರು.

**ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ನಾ.ಬ.ದಂ.ಕಾಲುವೆ, ವಿಭಾಗ ಸಂ.6, ಚಿಕ್ಕಹೊನ್ನಕುಣಿ–584111, ತಾ: ದೇವದುರ್ಗ, ಜಿ: ರಾಯಚೂರು.
ಸಂಖ್ಯೆ/ಕೃಭಾಜನಿನಿ/ನಾಬದಂಕಾ/ವಿ–6/ತಾಶಾ–2/ L-17B/D-16/ಟೆಂಡರ್/2021–22/750 ದಿ.:27–12–2021
:: ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ::
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣ ಭಾಗ್ಯ ಜಲ ನಿಗಮ (ನಿ.) ಬೆಂಗಳೂರು/ಆಲಮಟ್ಟಿ ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳಿಂದ, ಕೆಳಗಿನ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಮುಖಾಂತರ ಕರೆಯಲಾಗಿದ್ದು, ಕಾಮಗಾರಿಗಳನ್ನು percentage ಆಧಾರದಲ್ಲಿ ದ್ವಿ–ಲಕೋಟೆ ಪದ್ಧತಿಯಲ್ಲಿ ಅಪ್ಲೋಡ್ ಮಾಡುವುದು.
Balance construction of Lateral no.17B from ch: 3.00 km to 4.00 km of distributary-16 of NRBC.(Indent No.18246)
**ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು ಈ ಕೆಳಕಂಡಂತಿವೆ.**
1) ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: 28.12.2021 ರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ: 04.01.2022ರ ಸಂಜೆ: 4.00 ಗಂಟೆಗೆ. 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 05.01.2022 ರ ಸಂಜೆ: 4.00 ಗಂಟೆಯವರೆಗೆ. 4) ತಾಂತ್ರಿಕ ಬಿಡ್‌ನ್ನು ದಿನಾಂಕ: 06.01.2022 ರ ಸಂಜೆ: 5.00 ಗಂಟೆಗೆ ಮೇಲಿನ ಕಛೇರಿಯಲ್ಲಿ ತೆರೆಯಲಾಗುವುದು. 5) ಆರ್ಥಿಕ ಬಿಡ್‌ನ್ನು ದಿನಾಂಕ: 31.01.2022 ರ ಬೆಳಿಗ್ಗೆ: 11.00 ಗಂಟೆಗೆ ಅಥವಾ ಮುಂಚಿತವಾಗಿ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ" ತೆರೆಯಲಾಗುವುದು.
ಕಾಮಗಾರಿಗೆ ಸಂಬಂಧಿಸಿದ ಹೆಚ್ಚಿನ ವಿವರಗಳು, ಸೂಚನೆಗಳು ಮತ್ತು ಷರತ್ತು/ನಿಬಂಧನೆಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಜಾಲತಾಣದಲ್ಲಿ ಅಥವಾ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಿಂದ ಕಛೇರಿಯ ದಿನಗಳಂದು ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ನಾಬದಂಕಾಲುವೆ, ವಿಭಾಗ ಸಂ.6, ಚಿಕ್ಕಹೊನ್ನಕುಣಿ–584111.
ವಾ.ಸಾ.ಸಂ.ಇ/ರಾಯಚೂರು/461/ಎಂ.ಸಿ.&ಎ/2021–22

**ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ**
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ.49, ಈಸ್ಟ್ ವಿಂಗ್, 4 ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001. ದೂರವಾಣಿ: 080–22265383, ವೆಬ್‌ಸೈಟ್: www.kiadb.in
ನಂ.: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–29/12587/2021–22 ದಿನಾಂಕ: 27.12.2021
**ಟೆಂಡರ್ ಆಹ್ವಾನ ಪ್ರಕಟಣೆ**
(ಜಿ.ಓ.ಕೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕೆಐಎಡಿಬಿ, ಇವರು ಎಲೆಕ್ಟ್ರಾನಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ ಸಾರ್ವಜನಿಕ ಖರೀದಿ ಕಾಯಿದೆ 1999 ಮತ್ತು ನಿಯಮಗಳು 2000ರಲ್ಲಿನ ಕರ್ನಾಟಕ ಪಾರದರ್ಶಕತೆಗೆ ಅನುಗುಣವಾಗಿ ಸಾಕಷ್ಟು ಹಣಕಾಸು ಸಂಪನ್ಮೂಲ ಹೊಂದಿರುವ ಮತ್ತು ಸಾಕಷ್ಟು ಹಿಂದಿನ ಅನುಭವಗಳನ್ನು ಹೊಂದಿರುವ ಕೆಪಿಡಬ್ಲ್ಯೂಡಿಯಲ್ಲಿ ನೋಂದಾಯಿತ ಅರ್ಹ 1ನೇ ದರ್ಜೆ ಗುತ್ತಿಗೆದಾರ (ಸಿವಿಲ್)ರಿಂದ **ಯಾದಗಿರಿ ಜಿಲ್ಲೆ, ಕಡೇಚೂರು ಕೈಗಾರಿಕಾ ಪ್ರದೇಶ ಸಬ್ ಲೇಔಟ್, ಪ್ಲಾಟ್ ಸಂ.5ರಲ್ಲಿ ಹೆಚ್‌ಡಿಪಿಇ ನೀರು ಸರಬರಾಜು ಪೈಪ್‌ಲೈನ್ ಮತ್ತು ಮಳೆನೀರು ಚರಂಡಿ, ಆರ್‌ಸಿಸಿ ಕ್ರಾಸ್ ಚರಂಡಿ ಕಾಮಗಾರಿಗಳು, ಆರ್‌ಸಿಸಿ ಸೈಡ್ ಚರಂಡಿಗಳು ಡಾಂಬರೀಕರಣ ಜೊತೆಗೆ ರಸ್ತೆ ಸಂ.2ಬಿ, 2ಸಿ ಮತ್ತು 2ಡಿಯ 18ಎಂ ಅಗಲ ರಸ್ತೆಗಳು, ರಸ್ತೆ ನಂ.2ಎ, 24ಎಂ ಅಗಲ ರಸ್ತೆಗಳ ನಿರ್ಮಿಸುವ ಕಾಮಗಾರಿಗಾಗಿ** ದ್ವಿ ಲಕೋಟೆ ಪದ್ಧತಿಯಡಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **27.01.2022, ಸಂಜೆ 4.00 ಗಂಟೆವರೆಗೆ.** ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/- ಮುಖ್ಯ ಅಭಿಯಂತರರು-2, ಕೆಐಎಡಿಬಿ

**ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ**
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಛೇರಿ, ನವನಗರ, ಪಿ.ಬಿ.ರಸ್ತೆ, ಹುಬ್ಬಳ್ಳಿ–580 025.
ದೂರವಾಣಿ ಸಂಖ್ಯೆ: : (0836) 2223877, ಫ್ಯಾಕ್ಸ ಸಂಖ್ಯೆ : (0836) 2324307
email:seepmc.hescom@gmail.com Web Site :www.hescom.co.in
Corporate Identity Number (CIN) : U31401KA2002SGC030437
No:HESCOM/SEE(PMC)/EE-P1/2021-22/Cys-4591 Date: 27.12.2021
**ಟೆಂಡರ್ ಪ್ರಕಟಣೆ**
(ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಮಾತ್ರ)
ಅಧೀಕ್ಷಕ ಇಂಜಿನೀಯರ್ (ವಿ), ಪಿಎಮ್‌ಸಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಪೂರ್ಣಗುತ್ತಿಗೆ ಆಧಾರದಮೇಲೆ ಟೆಂಡರಗಳನ್ನು ಆಹ್ವಾನಿಸಲಾಗಿದೆ.
1. ಉತ್ತರ ಕನ್ನಡ ಜಿಲ್ಲೆಯಲ್ಲಿ ಜೋಯಡಾ ತಾಲ್ಲೂಕಿನ 33/11ಕೆವಿ ಜೋಯಡಾ ವಿದ್ಯುತ್ ಉಪ–ಕೇಂದ್ರದಿಂದ ಉಳವಿ ಗ್ರಾಮಕ್ಕೆ ಭೂಗತ ಕೇಬಲ್ ಅಳವಡಿಸಿ ಹೊಸ 11ಕೆವಿ ಮಾರ್ಗ ನಿರ್ಮಿಸುವುದು. ಬಿಡ್ ಇಂಡಿಂಟ್ ಸಂಖ್ಯೆ: HESCOM/2021-22/EL/WORK_INDENT5519 ರನ್ವಯ.
2.ಹುಬ್ಬಳ್ಳಿ ನಗರ ವಿಭಾಗದ ಸಿಎಸ್‌ಡಿ–1 ಉಪವಿಭಾಗದಲ್ಲಿ 63/100/250 ಕೆವಿಎ ಸಾಂಪ್ರದಾಯಕ ವಿದ್ಯುತ್ ಪರಿವರ್ತಕಗಳನ್ನು Star 2 Rated ವಿದ್ಯುತ್ ಪರಿವರ್ತಕಗಳಿಗೆ ಬದಲಾಯಿಸುವುದು. ಬಿಡ್ ಇಂಡಿಂಟ್ ಸಂಖ್ಯೆ: HESCOM/2021-22/EL/WORK_INDENT5520 ರನ್ವಯ.
ಸದರಿ ಟೆಂಡರಗಳ ಪೂರ್ಣ ವಿವರವನ್ನು ವೆಬ್‌ಸೈಟ್, www.eproc.karnataka.gov.in ರಲ್ಲಿ ದಿನಾಂಕ: 30.12.2021 @ 17.00 PM ನಂತರ ಪಡೆಯಬಹುದು
ಸಹಿ/– ಅಧೀಕ್ಷಕ ಇಂಜಿನೀಯರರು(ವಿ) (ಪಿಎಮ್‌ಸಿ), ಹೆಸ್ಕಾಂ, ಹುಬ್ಬಳ್ಳಿ.
DIPR/DWD/802/2020-21/DESHPANDEPUBLICITY
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
**ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ**
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಹಳಿಯಾಳ ವಿಭಾಗ (ಉ.ಕ)
ಇ–ಮೇಲ್: midhly@yahoo.co.in ಫೋ.ನಂ: 08284–220113
ನಂ:ಕಾನಿಅ/ಸನೀವಿಹ/ತಾವಿ/ಟೆಂಡರ್:2021–22/ 1696 ದಿನಾಂಕ : 23/12/2021
**ಟೆಂಡರ ದಿನಾಂಕ ಮರು ನಿಗದಿ ಹಾಗೂ ತಿದ್ದುಪಡಿ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)– ಕೆಡ್ಯೂ–3 & 4**
ಉಲ್ಲೇಖ: (1) ಈ ಕಚೇರಿ ಟೆಂಡರ್ ಪ್ರಕಟಣೆ ಸಂ:ಕಾನಿಅ/ ಸನೀವಿಹ/ ತಾವಿ/ಟೆಂಡರ್:2021–22/ 1324 ದಿನಾಂಕ: 30/09/2021 (2) ಈ ಕಚೇರಿ ಟೆಂಡರ್ ಅವಧಿ ಮುಂದೂಡಿಕೆ ಪ್ರಕಟಣೆ ಸಂ: ಕಾನಿಅ/ಸನೀವಿಹ/ ತಾವಿ/ಟೆಂಡರ್: 2021–22/1517 ದಿನಾಂಕ: 12/11/2021
ಮೇಲಿನ ಉಲ್ಲೇಖ (1) ರಡಿ ಈ ಕಚೇರಿಯಿಂದ ಆಹ್ವಾನಿಸಿದ **ಲೆಕ್ಕ ಶೀರ್ಷಿಕೆ: 4702–00–101–5–01–436** ಅಣೆಕಟ್ಟು ಪಿಕಪ್ಸ್ ಬಂದಾರಗಳು **(NABARD RIDF-26)** ರಡಿಯಲ್ಲಿನ 05 ಕಾಮಗಾರಿಗಳ ಟೆಂಡರ್ ಸಲ್ಲಿಸುವ ದಿನಾಂಕಗಳನ್ನು ಉಲ್ಲೇಖ ಪತ್ರ (2) ರಡಿಯಲ್ಲಿ ಮುಂದೂಡಿರುವುದನ್ನು ಈಗ ಈ ಕೆಳಗಿನಂತೆ ಮರು ನಿಗದಿಪಡಿಸಲಾಗಿದೆ.
ಕಾಮಗಾರಿಯ Indent No: 32928, Indent No:32930, Indent No:32929, Indent No:32931, Indent No:32932.
ಖಾಲಿ ಟೆಂಡರ ಫಾರಂಗಳನ್ನು ಇ–ಪ್ರೊಕ್ಯೂಮೆಂಟ್ ವೆಬಸೈಟ್ ವಿಳಾಸ : "https:// eproc.karnataka.gov.in/eportal/index.seam" ದಲ್ಲಿ ದಿನಾಂಕ: 23.12.2021 ರಿಂದ ಡೌನಲೋಡ್ ಮಾಡಿಕೊಳ್ಳುವುದು. ಮೇಲಿನ ಉಲ್ಲೇಖ ಪತ್ರ (1) ರ ಪ್ರಕಟಣೆಯಲ್ಲಿನ ಅ.ನಂ: (3) ರಿಂದ (5)ರ ವರೆಗಿನ ಕಾಮಗಾರಿಗಳಿಗೆ ದಿನಾಂಕ: 03.01.2022 ರಂದು ವಿಭಾಗ ಕಚೇರಿಯಲ್ಲಿ ಬಿಡ್‌ದಾರರೊಂದಿಗೆ ಪೂರ್ವಭಾವಿ ಸಭೆಯನ್ನು ನಿಗದಿಪಡಿಸಲಾಗಿರುತ್ತದೆ. ಟೆಂಡರ್ ಕುರಿತಂತೆ ದಿನಾಂಕ: 06.01.2022 ರೊಳಗಾಗಿ ಅನುಮಾನಗಳಿದ್ದರೆ ಕಚೇರಿ ಅಥವಾ ಇ–ಪ್ರೊಕ್ಯೂಮೆಂಟ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. **ಟೆಂಡರಗಳನ್ನು ದಿನಾಂಕ: 07–01–2022 ರ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು.** ಕಾಮಗಾರಿಗಳ ತಾಂತ್ರಿಕ ಬಿಡ್‌ನ್ನು ದಿನಾಂಕ: 10–01–2022 ಮಧ್ಯಾಹ್ನ 4.30 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ದೊರೆತ ನಂತರ ತೆರೆಯಲಾಗುವುದು.
ಉಲ್ಲೇಖ ಪತ್ರ (1)ರ ಪ್ರಕಟಣೆಯಲ್ಲಿನ ಅ.ನಂ:(3) ಕಾಮಗಾರಿಯ Indent No: 32929 ಬದಲಾಗಿ Indent No: 33301 ಎಂದು ತಿದ್ದುಪಡಿ ಮಾಡಿ ಓದಿಕೊಳ್ಳತಕ್ಕದ್ದು. ಇನ್ನುಳಿದಂತೆ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
**ವಿ.ಸೂ: ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.**
ಸಹಿ/– (ಅವಿನಾಶ ಆರ್. ಆಲೂರು), ಕಾರ್ಯನಿರ್ವಾಹಕ ಅಭಿಯಂತರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಹಳಿಯಾಳ ವಿಭಾಗ (ಉ.ಕ)
DIPR/ADK/MCA/618/21-22 Dt.27.12.21

ಕರ್ನಾಟಕ ಸರ್ಕಾರ
**ಕಾವೇರಿ ನೀರಾವರಿ ನಿಗಮ ನಿಯಮಿತ**
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ನಂ.1, ಕಾ.ನೀ.ನಿ.ನಿ ವಿಭಾಗ, ನಾಗವಲ್ಲಿ, ದೂರವಾಣಿ: 0816–2248681
**ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಪ್ರಕಟಣೆ–ಎರಡನೇ ಕರೆ–07/2021–22 ದಿ : 21.12.2021**
ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಟರ್ನ್ ಕೀ ಮತ್ತು ಐಟಂವಾರು ಪದ್ಧತಿಯಲ್ಲಿ KW-4 ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯದೆ 1999 ನಿಯಮಗಳು 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಯಾವುದೇ ರಾಜ್ಯ/ಕೇಂದ್ರ ಸರ್ಕಾರದ ಪಿ.ಡ.ಬ್ಲ್ಯೂ.ಡಿ ಗುತ್ತಿಗೆದಾರರು/ ಸಾರ್ವಜನಿಕ ಕ್ಷೇತ್ರ ಸಂಸ್ಥೆಗಳು ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು ರಲ್ಲಿ ದರ್ಜೆ–1ಎ ನೊಂದಾಯಿಸಿದ ಅರ್ಹ ಗುತ್ತಿಗೆದಾರರುಗಳಿಂದ ಹೇಮಾವತಿ ಯೋಜನೆ ತುಮಕೂರು ಶಾಖಾ ನಾಲೆಯ ಸರಪಳಿ 81.100 ಕಿ.ಮೀ. ನಿಂದ ನೀರನ್ನು ಏತ್ತಿ ಕುಂದರನಹಳ್ಳಿ ಮತ್ತು ಸೋಪನಹಳ್ಳಿ ಗ್ರಾಮಗಳ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ಅಂದಾಜು ಮೊತ್ತ ರೂ.2.12 ಕೋಟಿಗಳ (Indent Number- 35837 Call-2) ಕಾಮಗಾರಿಗೆ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಇ–ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **29.12.2021 ರ ನಂತರ 10.01.2022** ಸಂಜೆ 4.00 ಗಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **11.01.2022** ಸಂಜೆ 5.00 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: **21.01.2022** ಸಂಜೆ 5.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೋದನೆ ನಂತರ) ಟೆಂಡರ್ ಮೊತ್ತ, ಇ.ಎಂ.ಡಿ. ಮೊತ್ತ, ಭಾಗವಹಿಸಬೇಕಾದ ಗುತ್ತಿಗೆದಾರರ ವಿವರ, ಕಾಮಗಾರಿ ವಿವರಗಳು, ಷರತ್ತುಗಳು, ಕಾಲಾವಧಿ ಹಾಗೂ ಇನ್ನಿತರ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ http://eproc.karnataka.gov.in ಮೂಲಕ ಪಡೆಯಬಹುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್, ನಂ.1, ಕಾ.ನೀ.ನಿ.ನಿ ವಿಭಾಗ, ನಾಗವಲ್ಲಿ
DIPR/TUM/492/MCA/2021-22

**ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು**
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಡೀನ್ ಕಮ್ ನಿರ್ದೇಶಕರ ಕಛೇರಿ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಬೆಂಗಳೂರು – 560002. ಫೋನ್: 080–26705053/26703176
ಇ–ಮೇಲ್: gdcribangalore@gmail.com ವೆಬ್‌ಸೈಟ್: www.karnataka.gov.in/gdcrib
ಸಂಖ್ಯೆ: ಸ.ದಂ.ಕಾ.ಸಂ.ಸಂ/ಸರಬ/ಟೆಂಡರ್/27/2020–21
30,14/2019–20 ದಿನಾಂಕ: 27–12–2021
**ಮರು ಟೆಂಡರ್ ಪ್ರಕಟಣೆ** (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ಮಾತ್ರ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ರಂತೆ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಈ ಸಂಸ್ಥೆಗೆ ಐಸಿಎಂಆರ್ ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನಕ್ಕೆ ಉಪಕರಣಗಳ, ಸಂಶೋಧನಾ ಪ್ರಯೋಗಾಲಯಕ್ಕೆ ಉಪಕರಣಗಳ ಮತ್ತು ಈ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಎಸ್‌ಸಿಪಿ / ಎಸ್‌ಟಿಪಿ ಯೋಜನೆ ಅಡಿಯಲ್ಲಿ ಲ್ಯಾಪ್ ಟಾಪ್ ವಿತರಿಸಲು ಖರೀದಿ ಸಂಬಂಧ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಸರಬರಾಜುದಾರರಿಗೆ ಬೇಕಾದ ಟೆಂಡರ್ ಫಾರ್ಮ / ದಾಖಲೆಗಳು, ಪ್ರಕಟಣೆಗಳು, ವಿವರಗಳು, ಷರತ್ತುಗಳು ಹಾಗೂ ಇತರೆ ಮಾಹಿತಿಗಳನ್ನು ವೆಬ್‌ಸೈಟ್: **https://eproc.karnataka.gov.in** ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸುವುದು. ಇ–ಟೆಂಡರ್ ಪರಿಷ್ಕರಣಾ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ನಿಯಮಗಳನುಸಾರ.
**ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ**

| ಕ್ರ. ಸಂ. | ವಿವರ | ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ |
|---|---|---|
| 1 | ಐಸಿಎಮ್‌ಆರ್ ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನಕ್ಕೆ ಉಪಕರಣಗಳು | ಸದಂಕಾಸಂಸಂ/ಸರಬ/ಟೆಂಡರ್/27/2020–21 ದಿನಾಂಕ: 27–12–2021 |
| 2 | ಸಂಶೋಧನಾ ಪ್ರಯೋಗಾಲಯಕ್ಕೆ ಉಪಕರಣಗಳು | ಸದಂಕಾಸಂಸಂ/ಸರಬ/14/2019–20 ದಿನಾಂಕ: 27–12–2021 |
| 3 | ಎಸ್‌ಸಿಪಿ ಮತ್ತು ಎಸ್‌ಟಿಪಿ ಅನುದಾನದಡಿಯಲ್ಲಿ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ | ಸದಂಕಾಸಂಸಂ/ಸರಬ/ಎಸ್‌ಸಿ.ಎಸ್‌ಟಿ/30/2019–20 ದಿನಾಂಕ: 27–12–2021 |

**ಘಟನಾವಳಿಗಳು:** 1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ದಿನಾಂಕ: **30–12–2021 ಬೆಳಿಗ್ಗೆ 11.00 ರ ನಂತರ ಲಭ್ಯ.** 2) ಭರ್ತಿ ಮಾಡಿದ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **14–01–2022ರಂದು ಸಾಯಂಕಾಲ 4.00 ಗಂಟೆವರೆಗೆ.** 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **17–01–2022ರಂದು ಬೆಳಿಗ್ಗೆ 11.00 ಗಂಟೆಗೆ.** 4) ಆರ್ಥಿಕ ಬಿಡ್ ತೆರೆಯುವ ಸಮಯ ಮತ್ತು ದಿನಾಂಕವನ್ನು **ನಂತರ ತಿಳಿಸಲಾಗುವುದು.**
ಸಹಿ/–
ಡೀನ್ ಕಮ್ ನಿರ್ದೇಶಕರು
ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
ವಾಸಾಸಂಇ/ಬೆಂ.ನ/ಅಡ್ವಟೋರ್/2565/2021–22
ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

**ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿ(ನಿ),ಮುಏನೀ ವಿಭಾಗ ನಂ.2, ಬಬಲೇಶ್ವರ. ತಾ:ಬಬಲೇಶ್ವರ, ಜಿ: ವಿಜಯಪುರ. ದೂರವಾಣಿ:08355–200020,
ಇ–ಮೇಲ್:eemli2babaleshwar@gmail.com
ಸಂ:ಕೃಭಾಜನಿನಿ/ಎಮ್.ಎಲ್.ಐ/ವಿ.ಸಂ.2/ಯೋ.ಶಾ–4/ಎಸ್.ಸಿ.ಪಿ&ಟಿ.ಎಸ್.ಪಿ/2021–22/1324 ದಿನಾಂಕ:24.12.2021
**ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)**
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕೃಭಾಜನಿನಿ, ಮುಏನೀ ವಿಭಾಗ ನಂ.2 ಬಬಲೇಶ್ವರ ಇವರು 2021–22 ನೇ ಸಾಲಿನ ಬಬಲೇಶ್ವರ ಮತಕ್ಷೇತ್ರದಡಿಯಲ್ಲಿನ ಎಸ್,ಸಿ,ಪಿ ಮತ್ತು ಟಿ.ಎಸ್.ಪಿ ಯೋಜನೆಯಡಿಯಲ್ಲಿನ ಟೆಂಡರ್ **ಇಂಡೆಂಟ್ ಸಂ.21583** ಅಂದಾಜು ಮೊತ್ತ ರೂ 65.72 ಲಕ್ಷ(ಎಸ್.ಸಿ.ಪಿ) ಮತ್ತು ಟೆಂಡರ್ **ಇಂಡೆಂಟ್ ಸಂ.21584** ಅಂದಾಜು ಮೊತ್ತ ರೂ 65.72 ಲಕ್ಷ(ಟಿ.ಎಸ್.ಪಿ) ಕಾಮಗಾರಿಗಳಿಗಾಗಿ **ನೊಂದಾಯಿತ ಕೆ.ಪಿ.ಡಬ್ಲ್ಯೂ..ಡಿ–1 ಅಥವಾ ಕೆ.ಬಿ.ಜೆ.ಎನ್.ಎಲ್ ಕೆಟಗೇರಿ–3 ನೇ ದರ್ಜೆ & ಮೇಲ್ಪಟ್ಟು ಗುತ್ತಿಗೆದಾರರು** ಇವರಿಂದ ಟೆಂಡರನ್ನು ಅಹ್ವಾನಿಸಲಾಗಿರುತ್ತದೆ. ಕೆ ಟಿ ಟಿ ಪಿ ಪಿ /ಸರ್ಕಾರಿ ಸೂತ್ತೋಲೆ ಸಂ.ಆಇ675 ವೆಚ್ಚ12/2020 ಬೆಂಗಳೂರು ದಿನಾಂಕ 22.12.2020 ನಿಯಮ ರನ್ವಯ ಗುತ್ತಿಗೆದಾರರು ಇ.ಎಂ.ಡಿ ಘೋಷಣಾ ಪತ್ರವನ್ನು ಸಲ್ಲಿಸಿ, **ದ್ವಿಪ್ರತಿಯಲ್ಲಿನ ಲಕೋಟಿಯಲ್ಲಿ** ಟೆಂಡರನ್ನು ಸಲ್ಲಿಸುವದು. ಟೆಂಡರ್ ಪ್ಯಾರಾ–1.1 ರಲ್ಲಿ ಸೂಚಿಸಿರುವ ಅಗತ್ಯ ದಾಖಲೆಗಳನ್ನೊಳಗೊಂಡಿರುವ ಬಿಡ್ ದಾರರ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವದು.
**ಇ–ಟೆಂಡರನಲ್ಲಿ ದಾಖಲಾತಿಗಳನ್ನು ಸ್ವಿಕರಿಸುವ ಹಾಗೂ ಸಲ್ಲಿಸುವ ವಿವರಗಳು**
1) ಅರ್ಹ ಗುತ್ತಿಗೆದಾರರು ಇ–ಟೆಂಡರ ಮೂಲಕ ಪ್ರವೇಶ ಪಡಯುವ ದಿನಾಂಕ **27.12.2021 ರಿಂದ 07.01.2022** ಸಾಯಂಕಾಲ 5.00 ಗಂಟೆಯವರೆಗೆ.
2) ಪೂರ್ಣಗೋಳಿಸಿದ ಇ–ಟೆಂಡರ ದಾಖಲಾತಿಗಳನ್ನು ಸಲ್ಲಿಸುವ ಕೋನೆಯ **ದಿನಾಂಕ:07.01.2022** ಸಾಯಂಕಾಲ 5.00 ಗಂಟೆಯವರೆಗೆ.
3) ಲಕೋಟೆ (ತಾಂತ್ರಿಕ ಹಾಗೂ ಆರ್ಥಿಕ ಬಿಡ್) ನ್ನು ಕಾರ್ಯನಿರ್ವಾಹಕ ಅಭಿಯಂತರು ಕೃಭಾಜನಿನಿ ಮುಏನೀ ವಿಭಾಗ ಸಂಖ್ಯೆ–2 ಬಬಲೇಶ್ವರ ಇವರ ಕಚೇರಿಯಲ್ಲಿ ದಿನಾಂಕ: **10.01.2022 & 12.01.2022** ರ ಬೆಳಗ್ಗೆ 11.00 ಗಂಟೆಗೆ ಕ್ರಮವಾಗಿ ತೆರೆಯಲಾಗುವುದು.
ಇಲೆಕ್ಟ್ರಾನಿಕ್ ಟೆಂಡರಿಂಗ್ ಕುರಿತು ಹೆಚ್ಚಿನ ಮಾಹಿತಿಗಾಗಿ **http;//eproc.karnatak.gov.in/e portal/lines. Seam** ಕ್ಲಿಕ್ ಮಾಡಿ ಅಥವಾ **KBJNL** ವೆಬ್ ಸೈಟ್ www.kbjnl.karnataka.gov.in ಮತ್ತು ಈ ಕೆಳಗಿನ ಅಧಿಕಾರಿಯ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಮುಏನೀ ವಿಭಾಗ ಸಂ.2, ಬಬಲೇಶ್ವರ.
ವಾಸಾಸಂಇ/ವಿಜಯಪುರ/423/ಎಂಸಿಎ/2021–22

### ಬಿಜೆಪಿ ಕಾರ್ಯಕಾರಿಣಿ: ಪ್ರಮುಖರ ಜೊತೆ ಅರುಣ್ ಸಿಂಗ್ ಮಾತುಕತೆ

# 150 ಕ್ಷೇತ್ರ ಗೆಲುವಿಗೆ ಹೈಕಮಾಂಡ್ ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ 150 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲು ಬಿಜೆಪಿ ಹೈಕಮಾಂಡ್ ರೂಪಿಸಿರುವ ನೀಲನಕ್ಷೆಯನ್ನು ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಬಿಚ್ಚಿಟ್ಟರು.

ನಗರದ ಡೆನಿಸನ್ಸ್ ಹೋಟೆಲ್‌ನಲ್ಲಿ ಮಂಗಳವಾರ ನಡೆದ ಬಿಜೆಪಿ ರಾಜ್ಯ ಕಾರ್ಯಕಾರಿಣಿಗೂ ಮುನ್ನ ನಡೆದ ಪ್ರಭಾರಿ ಹಾಗೂ ಸಹ ಪ್ರಭಾರಿಗಳ ಸಭೆಯಲ್ಲಿ ಸಿಂಗ್ ಅವರು, 2023ರ ಚುನಾವಣೆಯಲ್ಲಿಯೂ ಬಹುಮತ ಗಳಿಸುವ ಬಗೆಗೆ ಹೈಕಮಾಂಡ್ ಗಂಭೀರವಾಗಿದೆ. ಆ ನಿಟ್ಟಿನಲ್ಲಿ ಎಲ್ಲರೂ ಕೆಲಸ ಮಾಡಬೇಕು ಎಂದು ಸೂಚಿಸಿದರು.

ದಾವಣಗೆರೆಯಲ್ಲಿ ಹಿಂದೆ ನಡೆದಿದ್ದ ಕಾರ್ಯಕಾರಿಣಿ ಬಳಿಕ ಪಕ್ಷದಲ್ಲಿ ಆದ ಬೆಳವಣಿಗೆ ಹಾಗೂ ಚುನಾವಣಾ ಫಲಿತಾಂಶಗಳ ಬಗ್ಗೆ ಅರುಣ್ ಸಿಂಗ್ ಹಾಗೂ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಪ್ರಭಾರಿಗಳ ಜೊತೆ ಚರ್ಚಿಸಿದರು. ಪಕ್ಷದ ಸಂಘಟನೆ ವಿಸ್ತರಿಸುವ, ಮುಂಬರುವ ಚುನಾವಣೆಗೆ ಸಜ್ಜುಗೊಳ್ಳಲು ರೂಪಿಸಿರುವ ಕಾರ್ಯತಂತ್ರಗಳ ಬಗ್ಗೆ ಅವರಿಗೆ ಮಾಹಿತಿ ನೀಡಲಾಯಿತು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ ರವಿ. ರಾಷ್ಟ್ರೀಯ ಉಪಾಧ್ಯಕ್ಷೆ ಅರುಣಾ, ಆರ್. ಅಶೋಕ., ಗೋವಿಂದ ಕಾರಜೋಳ, ಎಸ್.ಟಿ ಸೋಮಶೇಖರ್, ಡಾ. ಸುಧಾಕರ, ಶಂಕರಪಾಟೀಲ ಮುನೇನಕೊಪ್ಪ, ಕೆ.ಎಸ್. ಈಶ್ವರಪ್ಪ, ಆನಂದ ಸಿಂಗ್, ಶಿವರಾಮ ಹೆಬ್ಬಾರ, ಎಂಟಿಬಿ ನಾಗರಾಜ, ಗೋವಿಂದ ಕಾರಜೋಳ, ಮಾಧುಸ್ವಾಮಿ. ಕೋಟ ಶ್ರೀನಿವಾಸ ಪೂಜಾರಿ, ಸುನೀಲ್ ಕುಮಾರ್, ಸಂಸದ ಸದಾನಂದಗೌಡ, ಸಂಘಟನಾ ಕಾರ್ಯದರ್ಶಿ ಅರುಣಕುಮಾರ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಬೆಳಿಗ್ಗೆ 11 ಗಂಟೆಗೆ ನಿಗದಿಯಾಗಿದ್ದ ಉದ್ಘಾಟನಾ ಸಮಾರಂಭ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬರುವುದು ವಿಳಂಬವಾದ್ದರಿಂದ ಮಧ್ಯಾಹ್ನ 3 ಗಂಟೆಗೆ ಉದ್ಘಾಟನೆಗೊಂಡಿತು.

ಹುಬ್ಬಳ್ಳಿಯಲ್ಲಿ ಮಂಗಳವಾರ ಬಿಜೆಪಿ ಕಾರ್ಯಕಾರಿಣಿ ಆರಂಭಕ್ಕೂ ಮುನ್ನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗೋ ಪೂಜೆ ಮಾಡಿ ಗೋವಿಗೆ ಮುತ್ತಿಟ್ಟರು. ಶಾಸಕ ಜಗದೀಶ ಶೆಟ್ಟರ್, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಇದ್ದಾರೆ –ಪ್ರಜಾವಾಣಿ ಚಿತ್ರ

## ರಾಜ್ಯ ಸರ್ಕಾರದ ಸಾಧನೆಗೆ ಅಭಿನಂದನಾ ನಿರ್ಣಯ

ಹುಬ್ಬಳ್ಳಿ: ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ರಾಜ್ಯ ಬಿಜೆಪಿ ಸರ್ಕಾರ ಜನಪರವಾಗಿ ಆಡಳಿತಾತ್ಮಕ ಸುಧಾರಣೆಗಳನ್ನು ಜಾರಿಗೆ ತಂದಿದೆ. ನಾಡು, ನುಡಿ, ಗಡಿ, ನೆಲ, ಜಲದ ಬಗ್ಗೆ ತಮ್ಮದೇ ಆದ ಗಟ್ಟಿನಿಲುವು ಕೈಗೊಂಡಿದೆ. ಆದ್ದರಿಂದ ರಾಜ್ಯ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುವ ನಿರ್ಣಯವನ್ನು ಸಭೆಯಲ್ಲಿ ಕೈಗೊಳ್ಳಲಾಯಿತು.

ರಾಜ್ಯ ಸರ್ಕಾರ ಧಾರ್ಮಿಕ ಸ್ವಾತಂತ್ರ್ಯ ಹಕ್ಕಿನ ಸಂರಕ್ಷಣೆಗಾಗಿ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣೆ ಮಸೂದೆ 2021 ಅನ್ನು ವಿಧಾನಸಭೆಯ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಿದ್ದು ಐತಿಹಾಸಿಕ ಎಂದು ಕೊಂಡಾಡಿದ ಸಭೆ, ಇದಕ್ಕೂ ಅಭಿನಂದಿಸಿತು.

### ‘ಎಲ್ಲರೂ ಬರಲೇಬೇಕು ಎಂದೇನಿಲ್ಲ’

ಹುಬ್ಬಳ್ಳಿ: ‘ಎಲ್ಲಾ ಸಚಿವರು, ಸಂಸದರು ಹಾಗೂ ಶಾಸಕರು ಕಾರ್ಯಕಾರಿಣಿಗೆ ಬರಲೇಬೇಕು ಎಂದೇನಿಲ್ಲ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಬಿ.ಎಸ್. ಯಡಿಯೂರಪ್ಪ, ಜಾರಕಿಹೊಳಿ ಸಹೋದರರು ಸೇರಿದಂತೆ, ಅನೇಕರು ಗೈರಾಗಿರುವ ಕುರಿತು ಮಾಧ್ಯಮದವರ ಪ್ರಶ್ನೆಗೆ ಹೀಗೆ ಪ್ರತಿಕ್ರಿಯಿಸಿದರು.

‘ಯಡಿಯೂರಪ್ಪ ಅವರ ವಿದೇಶ ಪ್ರವಾಸ ಮುಂಚೆಯೇ ನಿಗದಿಯಾಗಿತ್ತು. ಕೆಲವರ ಗೈರು ಹಾಜರಿಗೆ ವಿಶೇಷ ಅರ್ಥ ಕಲ್ಪಿಸಬೇಕಿಲ್ಲ’ ಎಂದರು.

## ‘ಲಿಂಗದೇವ’ ಪದ ಬಳಕೆಗೂ ನಮಗೂ ಸಂಬಂಧವಿಲ್ಲ: ಮಾತೆ ಗಂಗಾದೇವಿ



ಮಾತೆ ಗಂಗಾದೇವಿ

ಬಾಗಲಕೋಟೆ: ‘ಬಸವಣ್ಣನ ವಚನಗಳಲ್ಲಿ ಲಿಂಗದೇವ ಬದಲಿಗೆ ಕೂಡಲಸಂಗಮದೇವ ಎಂಬ ಅಂಕಿತವನ್ನೇ ನಾವು ಬಳಸಲಿದ್ದೇವೆ. ಕೆಲವರು ಇನ್ನೂ ಲಿಂಗದೇವ ಎಂಬ ಅಂಕಿತವನ್ನು ಬಳಕೆ ಮಾಡುತ್ತಿದ್ದು, ಅದಕ್ಕೂ ನಮಗೂ ಸಂಬಂಧವಿಲ್ಲ’ ಎಂದು ಕೂಡಲಸಂಗಮ ಬಸವಧರ್ಮ ಪೀಠದ ಮಾತೆ ಗಂಗಾದೇವಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಬಸವಧರ್ಮ ಪೀಠದಿಂದ ಹಿಂದಿನ ಪೀಠಾಧ್ಯಕ್ಷೆ ಮಾತೆ ಮಹಾದೇವಿ ಪ್ರಕಟಿಸಿದ್ದ ‘ವಚನದೀಪ್ತಿ’ ಪುಸ್ತಕದಲ್ಲಿ ಲಿಂಗದೇವ ಅಂಕಿತ ಬಳಸಲಾಗಿತ್ತು. ರಾಜ್ಯ ಸರ್ಕಾರ ಅದನ್ನು ಮುಟ್ಟುಗೋಲು ಹಾಕಿಕೊಂಡಿದೆ. ಆ ಕ್ರಮವನ್ನು ನಂತರ ಸುಪ್ರೀಂಕೋರ್ಟ್ ಕೂಡ ಎತ್ತಿಹಿಡಿದಿದೆ. ಅದನ್ನು ಒಪ್ಪಿಕೊಂಡು ‘ವಚನದೀಪ್ತಿ’ ಪುಸ್ತಕದ ಮರು ಮುದ್ರಣ ನಿಲ್ಲಿಸಿದ್ದ ಮಾತೆ ಮಹಾದೇವಿ, ‘ಲಿಂಗದೇವ ಅಂಕಿತ ಬಳಸುವುದಿಲ್ಲ’ ಎಂದು 2017ರ ಸೆಪ್ಟೆಂಬರ್ 21ರಂದು ಸ್ಪಷ್ಟನೆ ನೀಡಿದ್ದರು. ಅದನ್ನೇ ನಾವೂ ಮುಂದುವರಿಸಿಕೊಂಡು ಹೋಗಲಿದ್ದೇವೆ’ ಎಂದರು.

‘ಆದರೆ ಕೆಲವರು ಈಗಲೂ ಲಿಂಗದೇವ ಅಂಕಿತವನ್ನೇ ಬಳಸುತ್ತಿದ್ದಾರೆ. ಅದು ಅವರ ವೈಯಕ್ತಿಕ ಅಭಿಪ್ರಾಯವೇ ಹೊರತು ಬಸವಧರ್ಮ ಪೀಠಕ್ಕೆ ಸಂಬಂಧವಿಲ್ಲ. ‘ಲಿಂಗದೇವ’ ಬಳಕೆಯಿಂದ ಲಿಂಗಾಯತ ಧರ್ಮ ಸ್ವತಂತ್ರ ಹೋರಾಟಕ್ಕೂ ಹಿನ್ನಡೆ ಆಗಿದೆ. ಅದನ್ನು ತಪ್ಪಿಸಲು ಹಾಗೂ ನ್ಯಾಯಾಲಯದ ತೀರ್ಪು ಗೌರವಿಸಲು ಈ ಸ್ಪಷ್ಟನೆ ನೀಡುತ್ತಿದ್ದೇನೆ’ ಎಂದು ಹೇಳಿದರು.

‘ಬಸವಧರ್ಮ ಪೀಠದ ಅಧೀನ ಸಂಸ್ಥೆಗಳಲ್ಲೂ ಇನ್ನು ಮುಂದೆ ಕೂಡಲಸಂಗಮ ದೇವ ಅಂಕಿತವನ್ನೇ ಬಳಸಲು ಸುತ್ತೋಲೆ ಹೊರಡಿಸಲಾಗುವುದು. ಲಿಂಗದೇವ ಪದ ಬಳಕೆ ಪರ ಇರುವ ಭಕ್ತರಿಗೂ ಮನವರಿಕೆ ಮಾಡಿಕೊಡಲಾಗುವುದು’ ಎಂದು ತಿಳಿಸಿದರು.

ಬಸವಧರ್ಮ ಪೀಠದ ಉಪಾಧ್ಯಕ್ಷ ಮಹಾದೇಶ್ವರ ಸ್ವಾಮೀಜಿ, ಕೂಡಲಸಂಗಮದ ಹಿರಿಯರಾದ ಜಿ.ಜಿ.ಪಾಟೀಲ ಸುದ್ದಿಗೋಷ್ಠಿಯಲ್ಲಿದ್ದರು.

### ಮುಖ್ಯಮಂತ್ರಿ ಬದಲಾವಣೆ; ಮಾತನಾಡದಂತೆ ಸೂಚನೆ

# ಕವಟಗಿಮಠ ದೂರು; ಬಿಎಸ್‌ವೈ, ಜಾರಕಿಹೊಳಿ ಗೈರು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಹೇಳಿಕೆ ನೀಡಿದರೆ ಕಠಿಣ ಕ್ರಮದ ಎಚ್ಚರಿಕೆ, ಬಿ.ಎಸ್. ಯಡಿಯೂರಪ್ಪ, ರಮೇಶ ಜಾರಕಿಹೊಳಿ ಸೇರಿದಂತೆ ಕೆಲವರ ಗೈರು ಹಾಜರಿ ಮತ್ತು ಬಿಜೆಪಿ ಮುಖಂಡ ಮಹಾಂತೇಶ ಕವಟಗಿಮಠ ಅವರ ದೂರು.

ಮಂಗಳವಾರ ಹುಬ್ಬಳ್ಳಿಯ ಡೆನಿಸನ್ಸ್ ಹೋಟೆಲ್‌ನಲ್ಲಿ ಆರಂಭವಾದ ಬಿಜೆಪಿಯ ರಾಜ್ಯ ಕಾರ್ಯಕಾರಿಣಿ ಹೊರಗೆ ಮತ್ತು ಒಳಗೆ ಈ ಸುದ್ದಿಗಳು ಸದ್ದು ಮಾಡಿದವು.

ಮುಖ್ಯಮಂತ್ರಿ ಬದಲಾವಣೆ ಸೇರಿದಂತೆ ಪಕ್ಷದ ಸಂಘಟನೆ ಮೇಲೆ ಪರಿಣಾಮ ಬೀರುವ ಯಾವುದೇ ಹೇಳಿಕೆ ನೀಡದಂತೆ ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಎಲ್ಲ ಮುಖಂಡರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

‘ಮುಖ್ಯಮಂತ್ರಿ ಬದಲಾವಣೆ ಹೇಳಿಕೆಯಿಂದ ಪಕ್ಷದ ಸಂಘಟನೆ ಮೇಲೆ ಪರಿಣಾಮ ಆಗುತ್ತಿದೆ. ಬದಲಾವಣೆ ವಿಷಯ ಹೈಕಮಾಂಡ್ ಮುಂದಿಲ್ಲ. ಆದರೂ ಕೆಲವರು ಅದನ್ನು ಮಾತನಾಡುತ್ತಿದ್ದಾರೆ. ಕೂಡಲೇ ನಿಲ್ಲಿಸಬೇಕೆಂದು ಎಚ್ಚರಿಸಿದ್ದಾರೆ’ ಎಂದು ಬಿಜೆಪಿ ಮೂಲಗಳು ಹೇಳಿವೆ.

ಬೆಳಗಾವಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯ ಸೋಲಿನ ಬಗ್ಗೆ ಬಿಜೆಪಿ ಅಭ್ಯರ್ಥಿಯಾಗಿ ಸೋತಿರುವ ಮಹಾಂತೇಶ ಕವಟಗಿಮಠ ಅವರು, ಅರುಣ್ ಸಿಂಗ್ ಅವರನ್ನು ಭೇಟಿಯಾಗಿ ದೂರಿದ್ದಾರೆ.

**ಕಾರ್ಯಕಾರಿಣಿಗೆ ನಿಗದಿಪಡಿಸಲಾಗಿದ್ದ 300 ಜನರ ಪೈಕಿ 281 ಮಂದಿ ಮೊದಲ ದಿನ ಹಾಜರಾಗಿದ್ದಾರೆ. ಉಳಿದ 19 ಮಂದಿ ಅನುಮತಿ ಪಡೆದುಕೊಂಡೇ ಗೈರಾಗಿದ್ದಾರೆ**

**ಪಿ. ರಾಜೀವ್,** ಬಿಜೆಪಿ ವಕ್ತಾರ

‘ಜಾರಕಿಹೊಳಿ ಸಹೋದರರು ತಮ್ಮ ವಿರುದ್ಧ ಅವರ ಸಹೋದರನನ್ನು ನಿಲ್ಲಿಸಿ, ಗೊಂದಲಕ್ಕೆ ಕಾರಣರಾದರು. ಮುಖ್ಯಮಂತ್ರಿ ಸೇರಿದಂತೆ ಯಾರೂ ಸ್ಪಷ್ಟವಾಗಿ ಅವರಿಗೆ ಏನನ್ನೂ ಹೇಳಲಿಲ್ಲ. ಅವರಿಗೆ ಮಾತಿಗೆ ಎಲ್ಲರೂ ಗೋಣು ಅಲ್ಲಾಡಿಸಿದ್ದರಿಂದ ಪಕ್ಷ ಮುಜುಗರ ಅನುಭವಿಸುವಂತಾಯಿತು. ಅವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ ಎನ್ನಲಾಗಿದೆ.

ಧಾರವಾಡ ಕ್ಷೇತ್ರದ ಚುನಾವಣೆಯಲ್ಲಿಯೂ ಪ್ರಯಾಸದ ಗೆಲುವು ಸಾಧಿಸಿದ ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ್ ಸಹ ದೂರು ನೀಡಿದ್ದಾರೆ ಎಂದು ತಿಳಿದು ಬಂದಿದೆ.

**ಮುಖಂಡರು ಗೈರು:** ಶಾಸಕರಾದ ಬಿ. ಎಸ್. ಯಡಿಯೂರಪ್ಪ, ರಮೇಶ ಜಾರಕಿಹೊಳಿ, ಬಾಲಚಂದ್ರ ಜಾರಕಿಹೊಳಿ ಅವರ ಗೈರಿನ ಬಗ್ಗೆ ಚರ್ಚೆ, ಗುಸು ಗುಸು ಮಾತು ಕೇಳಿ ಬಂದವು. ಕುಟುಂಬ ಸಮೇತ ಬಿ.ಎಸ್. ಯಡಿಯೂರಪ್ಪ ಅವರು ದುಬೈ ಪ್ರವಾಸ ಕೈಗೊಂಡಿರುವುದು ಉದ್ದೇಶಪೂರ್ವಕವಾಗಿಯೇ ಎನ್ನುವ ಮಾತುಗಳು ಕೇಳಿ ಬಂದವು. ವಿಧಾನ ಪರಿಷತ್ ಚುನಾವಣೆಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಬಿಜೆಪಿ ಅಭ್ಯರ್ಥಿ ಸೋಲಿನ ಕುರಿತು ಚರ್ಚೆಯಾಗುವ ಸಾಧ್ಯತೆಗಳಿದ್ದರೂ, ಜಾರಕಿಹೊಳಿ ಸಹೋದರರು ಗೈರಾಗಿದ್ದರು. ಬೆಳಗಾವಿ ಜಿಲ್ಲೆಯಲ್ಲಿದ್ದರೂ ಇತ್ತ ಸುಳಿಯಲಿಲ್ಲ.

**ದೆಹಲಿಗೆ ಹೊರಟ ಜೋಶಿ:** ಕಾರ್ಯಕಾರಿಣಿ ಬುಧವಾರವೂ ನಡೆಯಲಿದೆ. ಆದರೆ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಉದ್ಘಾಟನೆ ನಂತರ ದೆಹಲಿಗೆ ತೆರಳಿದರು.

## ಮತ್ತೆ ಭೇಟಿಗೆ ಸೂಚನೆ

ಹುಬ್ಬಳ್ಳಿ: ಬೆಳಗಾವಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯ ಸೋಲಿನ ಬಗೆಗೆ ಬಿಜೆಪಿ ಅಭ್ಯರ್ಥಿಯಾಗಿದ್ದ ಮಹಾಂತೇಶ ಕವಟಗಿಮಠ ಅವರ ದೂರು ಆಲಿಸಿದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಬುಧವಾರ ಮತ್ತೆ ಭೇಟಿಯಾಗುವಂತೆ ತಿಳಿಸಿದ್ದಾರೆ.

ಈ ಕುರಿತು ‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ ಅವರು, ವಿಧಾನ ಪರಿಷತ್ ಚುನಾವಣೆಯ ಸೋಲಿನ ಬಗೆಗೆ ಅವರಿಗೆ ಪೂರ್ಣವಾಗಿ ಮಾಹಿತಿ ನೀಡಿದ್ದೇನೆ ಎಂದರು. ‘ಚುನಾವಣೆ ಬಗೆಗೆ ನಾನೂ ಮಾಹಿತಿ ಸಂಗ್ರಹಿಸಿದ್ದೇನೆ. ನೀವು ಹೇಳಿ ಎಂದು ಸಿಂಗ್ ಅವರು ಹೇಳಿದರು. ಎಲ್ಲವನ್ನೂ ಕೇಳಿದ ಮೇಲೆ ಬುಧವಾರ ಬಂದು ಭೇಟಿ ಮಾಡುವಂತೆ ತಿಳಿಸಿದ್ದಾರೆ’ ಎಂದು ಹೇಳಿದರು.

### ‘ಹೊರಹಾಕುವ ಎಚ್ಚರಿಕೆ’

ಹುಬ್ಬಳ್ಳಿ: ‘ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಇಲ್ಲ. ಇದರ ಬಗ್ಗೆ ಯಾರೇ ಮಾತನಾಡಿದರೂ ಪಕ್ಷದಿಂದ ಹೊರಹಾಕುವುದಾಗಿ ಅರುಣ್ ಸಿಂಗ್ ಎಚ್ಚರಿಕೆ ನೀಡಿದ್ದಾರೆ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕೆಲ ಮುಖ್ಯಮಂತ್ರಿ ಆಕಾಂಕ್ಷಿಗಳಿಗೆ ನಿರಾಸೆಯಾಗಿದೆ. ಯಾರಿಗೆ ಅಂತ ನೇರವಾಗಿ ಹೇಳಲು ಆಗುವುದಿಲ್ಲ. ಕೆಲವರು ಬೆಳಗಾವಿ ಅಧಿವೇಶನ ವೇಳೆಯಲ್ಲಿ ಸುವರ್ಣ ವಿಧಾನಸೌಧದಲ್ಲಿ ಓಡಾಡಿದ್ದಾರೆ ಅವರಿಗೆಲ್ಲ ನಿರಾಸೆಯಾಗಿದೆ’ ಎಂದರು.

## ದಣಿವರಿಯದೇ ಕೆಲಸ ಮಾಡುವ ಶಕ್ತಿ ಇದೆ: ಬಸವರಾಜ ಬೊಮ್ಮಾಯಿ

ಒಂದನೇ ಪುಟದಿಂದ

‘ಬೊಮ್ಮಾಯಿ ಅವರ ನೇತೃತ್ವದಲ್ಲೇ ಮುಂದಿನ ವಿಧಾನಸಭೆ ಚುನಾವಣೆ ನಡೆಯಲಿದೆ ಹಾಗೂ ನಾಯಕತ್ವ ಬದಲಾವಣೆಯ ಪ್ರಶ್ನೆಯೇ ಇಲ್ಲ’ ಎಂಬ ಬಿಜೆಪಿ ರಾಜ್ಯ ಘಟಕದ ಉಸ್ತುವಾರಿ ಅರುಣ್ ಸಿಂಗ್ ಹೇಳಿಕೆಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ‘ರಾಷ್ಟ್ರೀಯ ವರಿಷ್ಠರು ನನ್ನ ಮೇಲೆ ವಿಶ್ವಾಸ ಇಟ್ಟಿದ್ದಾರೆ. ಅದನ್ನು ಉಳಿಸಿಕೊಳ್ಳುತ್ತೇನೆ. ಒಂದು ತಂಡವಾಗಿ ಕೆಲಸ ಮಾಡುವ ವಿಷಯದಲ್ಲಿ ಬಿಜೆಪಿ ನಂಬಿಕೆ ಇಟ್ಟಿದೆ. ಪಕ್ಷದ ಎಲ್ಲ ನಾಯಕರೂ ಒಗ್ಗಟ್ಟಾಗಿ ಕೆಲಸ ಮಾಡುತ್ತೇವೆ. ಪಕ್ಷ ಮತ್ತು ಸರ್ಕಾರದ ಮಧ್ಯೆ ಇರುವ ಉತ್ತಮ ಸಂಬಂಧವನ್ನು ಇನ್ನಷ್ಟು ಬಲಪಡಿಸಿ ಕಾರ್ಯನಿರ್ವಹಿಸುತ್ತೇನೆ’ ಎಂದೂ ಅವರು ತಿಳಿಸಿದರು.

### ‘ಮುಖ್ಯಮಂತ್ರಿ ವಿಶ್ರಾಂತಿ ಪಡೆಯಲಿ’

ಒಂದನೇ ಪುಟದಿಂದ

ವಿಶ್ರಾಂತಿಯ ಅವಧಿಯಲ್ಲಿ ಮುಖ್ಯಮಂತ್ರಿಯವರ ಭೇಟಿಗೆ ಯಾರೂ ಹೋಗಬಾರದು. ರಾಜ್ಯದಲ್ಲಿ ಓಮೈಕ್ರಾನ್ ತಳಿಯ ಕೊರೊನಾ ವೈರಾಣುವಿನ ಹರಡುವಿಕೆಯ ಆತಂಕವಿದೆ. ಈ ಅವಧಿಯಲ್ಲಿ ಬೊಮ್ಮಾಯಿ ಅವರು ವಿಶ್ರಾಂತಿ ಪಡೆದರೆ ಒಳ್ಳೆಯದು ಎಂದು ಹೇಳಿದ್ದಾರೆ.

ಪೌಷ್ಟಿಕ ಆಹಾರ ಸೇವಿಸಿ

## ನಿರಾಣಿ, ಈಶ್ವರಪ್ಪಗೆ ಕಿವಿಮಾತು?

ಹುಬ್ಬಳ್ಳಿ: ಬೆಳಗಾವಿಯಲ್ಲಿ ನಡೆದ ವಿಧಾನಮಂಡಲ ಅಧಿವೇಶನ ಸಂದರ್ಭದಲ್ಲಿ, ಸಚಿವರಾದ ಮುರುಗೇಶ ನಿರಾಣಿ ಹಾಗೂ ಕೆ.ಎಸ್. ಈಶ್ವರಪ್ಪ ಅವರು ಪ್ರತ್ಯೇಕ ಸಭೆ ನಡೆಸುವ ಅವಶ್ಯಕತೆ ಏನಿತ್ತು? ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಇಬ್ಬರನ್ನು ಏರಿದ ಧ್ವನಿಯಲ್ಲಿ ಪ್ರಶ್ನಿಸಿದರು ಎನ್ನಲಾಗಿದೆ.

ಪಕ್ಷದ ಮುಖಂಡರೊಂದಿಗೆ ಪ್ರತ್ಯೇಕವಾಗಿ ಸಭೆ ನಡೆಸಿದ ಅವರು, ‘ವಿರೋಧ ಪಕ್ಷದವರಿಗೆ ನೀವೇ ಅಸ್ತ್ರ ಕೊಡುತ್ತಿದ್ದೀರಿ. ಪ್ರತಿಯೊಬ್ಬರ ಚಲನವಲನವನ್ನು ವರಿಷ್ಠರು ಗಮನಿಸುತ್ತಿದ್ದಾರೆ ಎಂಬುದು ನೆನಪಿರಲಿ’ ಎಂದು ಅವರು ಎಚ್ಚರಿಸಿದ್ದಾರೆ.

‘ಪಕ್ಷಕ್ಕೆ ಮುಜುಗುರ ತರುವಂತಹ ಹೇಳಿಕೆಗಳನ್ನು ಮಾಧ್ಯಮಗಳಿಗೆ ಹೇಳಕೂಡದು ಎಂದ ಅವರು, ಪಕ್ಷ ಬಿಟ್ಟು ಹೋಗುವವರಿಗೆ ಯಾವುದೇ ಅಧಿಕಾರ ನೀಡಬೇಡಿ ಎಂದು ಮುಖ್ಯಮಂತ್ರಿಗೆ ಸೂಚಿಸಿದರು’ ಎಂದು ತಿಳಿದು ಬಂದಿದೆ.

‘ಬೆಳಗಾವಿ ಸೋಲು ಸಹಿಸಲು ಸಾಧ್ಯವಿಲ್ಲ. ಎಷ್ಟೇ ದೊಡ್ಡವರಿದ್ದರೂ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು. ಮಂಡ್ಯದಲ್ಲಿ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಬೆಂಬಲಿಸಿದ್ದಕ್ಕೆ ಸಚಿವ ನಾರಾಯಣಗೌಡ ಅವರನ್ನು ಸಿಂಗ್, ತೀವ್ರವಾಗಿ ತರಾಟೆಗೆ ತೆಗೆದುಕೊಂಡರು’ ಎಂದು ಗೊತ್ತಾಗಿದೆ.

‘ಗುಜರಾತ್ ವಿಧಾನಸಭೆ ಚುನಾವಣೆಯಲ್ಲಿ ಈ ಬಾರಿ ಗೆದ್ದರೆ ಅದು ದಾಖಲೆಯಾಗಲಿದೆ. ಮಧ್ಯಪ್ರದೇಶದಲ್ಲಿ ನಾಲ್ಕು ಬಾರಿ ಅಧಿಕಾರಕ್ಕೆ ಬಂದಿದ್ದೇವೆ. ಉತ್ತರಾಖಂಡದಲ್ಲಿ ಕೇವಲ ಆರು ತಿಂಗಳಲ್ಲಿ ಇಬ್ಬರು ಸಿ.ಎಂ. ಬದಲಾಯಿಸಲಾಗಿದೆ. ಬೇರೆ ಯಾವುದೇ ರಾಜ್ಯಗಳಲ್ಲಿ ಇಲ್ಲದ ಬಿಕ್ಕಟ್ಟು ಕರ್ನಾಟಕದಲ್ಲಿ ಮಾತ್ರ ಇದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು ಎಂದು ಗೊತ್ತಾಗಿದೆ.

### ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮುಂದೆ ವಾದ ಮಂಡನೆ

# ‘ಲಿಂಗಾಯತ ಗೌಡ- ಪಂಚಮಸಾಲಿ ಎರಡೂ ಒಂದೇ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲಿಂಗಾಯತ ಪಂಚಮಸಾಲಿ, ಮಲೆಗೌಡ ಮತ್ತು ಲಿಂಗಾಯತಗೌಡ ಎಂದು ಕರೆಯಲ್ಪಡುವ ಸಮಾಜಗಳನ್ನು ಪಂಚಮಸಾಲಿಗಳ ಪರ್ಯಾಯ ನಾಮಗಳೆಂದು ಪರಿಗಣಿಸಿ 2ಎ ಮೀಸಲಾತಿ ಕಲ್ಪಿಸಬೇಕು’ ಎಂದು ಲಿಂಗಾಯತ ಪಂಚಮಸಾಲಿಗೌಡ ಮಹಾಸಭಾದ ಕಾನೂನು ಘಟಕವು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮುಂದೆ ವಾದ ಮಂಡಿಸಿತು.

ಆಯೋಗದ ಕಚೇರಿಯಲ್ಲಿ ಮಂಗಳವಾರ ನಡೆದ ವಿಚಾರಣೆಗೆ ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಬಸವ ಜಯಮೃತ್ಯುಂಜಯ ಸ್ವಾಮೀಜಿ, ಮೈಸೂರು ಹೊಸಮಠದ ಚಿದಾನಂದಸ್ವಾಮೀಜಿ, ಪಂಚಮಸಾಲಿಗೌಡ ಲಿಂಗಾಯತ ರಾಜ್ಯ ಸಂಚಾಲಕ ಅಮ್ಮನಪುರ ಮಲ್ಲೇಶ ನೇತೃತ್ವದ ನಿಯೋಗ ಹಾಜರಾಗಿ ವಿವರಣೆ ನೀಡಿತು. ನಿಯೋಗದ ಪರವಾಗಿ ಮಹಾಸಭಾದ ಕಾನೂನು ಘಟಕದ ಅಧ್ಯಕ್ಷ ದಿನೇಶ್ ಪಾಟೀಲ ವಾದ ಮಂಡಿಸಿದರು.

‘ಉತ್ತರ ಕರ್ನಾಟಕದಲ್ಲಿ ಲಿಂಗಾಯತ ಪಂಚಮಸಾಲಿ, ಮಲೆನಾಡಿನಲ್ಲಿ ಮಲೆಗೌಡ ಹಾಗೂ ಮೈಸೂರು ಪ್ರಾಂತ್ಯದ 14 ಜಿಲ್ಲೆಗಳಲ್ಲಿ ಲಿಂಗಾಯತಗೌಡ ಎಂದು ಕರೆಯಲಾಗುತ್ತಿದೆ. ಮೈಸೂರು ಗೆಜೆಟ್, ಪಂಚಮಸಾಲಿ ದಾಖಲೆಗಳು, ಸಂಶೋಧಕ ಎಂ.ಎಂ. ಕಲಬುರ್ಗಿ ಅವರ ಪುಸ್ತಕಗಳಲ್ಲಿ ಇದನ್ನೇ ಉಲ್ಲೇಖಿಸಲಾಗಿದೆ’ ಎಂದು ದಿನೇಶ್ ಪಾಟೀಲ ಅವರು ಆಯೋಗಕ್ಕೆ ವಿವರ ಸಲ್ಲಿಸಿದರು.

‘ಲಿಂಗಾಯತ ಗೌಡ ಹಾಗೂ ಪಂಚಮಸಾಲಿಗಳ ಜೀವನ ಕ್ರಮ, ಧಾರ್ಮಿಕ ಮತ್ತು ಕೃಷಿ ಪದ್ಧತಿಗಳು ಒಂದೇ ರೀತಿ ಇವೆ. ಆದ್ದರಿಂದ ಪರ್ಯಾಯ ನಾಮ ಎಂದು ಪರಿಗಣಿಸಿ ಅವರಿಗೂ ನ್ಯಾಯ ಒದಗಿಸಬೇಕು’ ಎಂದು ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಮನವಿ ಮಾಡಿದರು.

ವಾದ ಆಲಿಸಿದ ಆಯೋಗದ ಅಧ್ಯಕ್ಷ ಕೆ.ಜಯಪ್ರಕಾಶ ಹೆಗ್ಡೆ, ‘ಚಾಮರಾಜನಗರ, ಮೈಸೂರು ಹಾಗೂ ಕೆಲವು ಜಿಲ್ಲೆಗಳಲ್ಲಿ ಸರ್ವೆ ಮಾಡಿಸಿ ಮಾಹಿತಿ ಸಂಗ್ರಹಿಸಲಾಗುವುದು’ ಎಂದು ತಿಳಿಸಿದರು.

### ಯುಗಾದಿ ವೇಳೆಗೆ ಮೀಸಲಾತಿಯ ವಿಶ್ವಾಸ

‘ಈ ಹಿಂದೆ ಮುಖ್ಯಮಂತ್ರಿ ಮನೆ ಬಾಗಿಲಿಗೆ ನಾವೇ ಹೋಗಬೇಕಿತ್ತು. ಈಗ ಮುಖ್ಯಮಂತ್ರಿ ಅವರೇ ಹುಬ್ಬಳ್ಳಿಯಲ್ಲಿ ನಮ್ಮ ಸಭೆಗೆ ಬಂದು ಅಹವಾಲು ಆಲಿಸಿದ್ದಾರೆ. ಯುಗಾದಿ ವೇಳೆಗೆ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಸಿಗುವ ವಿಶ್ವಾಸ ಇದೆ’ ಎಂದು ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಆಯೋಗದ ವಿಚಾರಣೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸ್ವಾಮೀಜಿ, ‘ಉತ್ತರ ಕರ್ನಾಟಕ ಮಾತ್ರವಲ್ಲದೇ ಹಳೇ ಮೈಸೂರು ಭಾಗದಲ್ಲೂ ಪಂಚಮಸಾಲಿ ಲಿಂಗಾಯತ ಗೌಡರಿದ್ದಾರೆ ಎಂಬುದು ಅರಿವಿಗೆ ಬಂದಿದೆ. ಲಿಂಗಾಯತಗೌಡ ಸಮಾಜಕ್ಕೆ ಮೀಸಲಾತಿ ಕಲ್ಪಿಸುವ ಸಂಬಂಧ ಇತಿಹಾಸದಲ್ಲಿ ಮೊದಲ ಬಾರಿಗೆ ಆಯೋಗ ವಿಚಾರಣೆ ನಡೆಸಿರುವುದು ಸಂತಸದ ವಿಷಯ’ ಎಂದರು.

### ಕೋಟದಲ್ಲಿ ಲಾಠಿ ಚಾರ್ಜ್ - ಡಿಎಸ್‌ಪಿ ನೇತೃತ್ವದಲ್ಲಿ ತನಿಖೆ

# ಕೊರಗರ ಮೇಲೆ ಪೊಲೀಸರಿಂದ ಹಲ್ಲೆ: ಆರೋಪ

ಪ್ರಜಾವಾಣಿ ವಾರ್ತೆ

ಕೋಟ (ಬ್ರಹ್ಮಾವರ): ಕೋಟತಟ್ಟು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊರಗ ಕಾಲೊನಿಯಲ್ಲಿ ಸೋಮವಾರ ರಾತ್ರಿ ನಡೆದ ಮೆಹಂದಿ ಕಾರ್ಯಕ್ರಮದಲ್ಲಿ ಅವಧಿ ಮೀರಿ ಲೌಡ್ ಸ್ಪೀಕರ್ ಬಳಸಿದ ಕಾರಣಕ್ಕೆ ಮದುಮಗ ಸೇರಿ ಕೊರಗ ಸಮುದಾಯದರ ಹಲವರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ ಎಂದು ಆರೋಪಿಸಿ ಕೊರಗ ಸಮುದಾಯದವರು ಮಂಗಳವಾರ ಪ್ರತಿಭಟನೆ ನಡೆಸಿದರು.

‘ಕೊರಗರ ವಿರುದ್ಧ ಅಮಾನುಷವಾಗಿ ನಡೆದುಕೊಂಡಿರುವ ಕೋಟ ಪಿಎಸ್‌ಐ ಹಾಗೂ ಸಿಬ್ಬಂದಿ ಮೇಲೆ ಶಿಸ್ತು ಕ್ರಮ ಜರುಗಿಸಬೇಕು’ ಎಂದು ಕೊರಗ ಸಮುದಾಯದವರು ಒತ್ತಾಯಿಸಿದರು.

**ಘಟನೆ ವಿವರ:** ಕೊರಗ ಕಾಲೊನಿಯ ರಾಜೇಶ್ ಎಂಬುವರ ಮದುವೆ ಪ್ರಯುಕ್ತ ಸೋಮವಾರ ರಾತ್ರಿ ನಡೆದ ಮೆಹಂದಿ ಕಾರ್ಯಕ್ರಮದಲ್ಲಿ ಲೌಡ್ ಸ್ಪೀಕರ್ ಹಾಕಲಾಗಿತ್ತು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಸ್ಥಳೀಯರೊಬ್ಬರು ಪೊಲೀಸರಿಗೆ ದೂರು ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು ಡಿಜೆ ಬಂದ್ ಮಾಡುವಂತೆ ತಿಳಿಸಿದರೂ ಕುಟುಂಬದವರು ನಿರಾಕರಿಸಿದರು ಎಂದು ಪೊಲೀಸರು ಹೇಳಿದ್ದಾರೆ.

ಆದರೆ, ಕೊರಗ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡಿದ್ದಾರೆ. ಮದುಮಗ ರಾಜೇಶ ಹಾಗೂ ಇತರ ಕೆಲವರನ್ನು ಠಾಣೆಗೆ ಕರೆದೊಯ್ದು ಹಲ್ಲೆ ನಡೆಸಿದ್ದಾರೆ ಎಂದು ಸ್ಥಳೀಯರು ದೂರಿದ್ದಾರೆ.

ಘಟನೆ ಖಂಡಿಸಿ ಕೊರಗ ಸಮುದಾಯದವರು ಹಾಗೂ ಮುಖಂಡರು ಸೋಮವಾರ ಮಧ್ಯರಾತ್ರಿವರೆಗೂ ಠಾಣೆ ಎದುರು ಪ್ರತಿಭಟನೆ ನಡೆಸಿದರು. ಕೋಟ ಪಿಎಸ್‌ಐ ಹಾಗೂ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ, ಹೋರಾಟ ತೀವ್ರಗೊಳಿಸುವುದಾಗಿ ಕೊರಗ ಸಮುದಾಯದ ಮುಖಂಡ ಗಣೇಶ್ ಕೊರಗ ಹಾಗೂ ದಲಿತ ಸಂಘರ್ಷ ಸಮಿತಿ ಮುಖಂಡರು ಎಚ್ಚರಿಕೆ ನೀಡಿದರು.

**ಇನ್‌ಸ್ಪೆಕ್ಟರ್ ಭೇಟಿ:** ಬ್ರಹ್ಮಾವರ ಇನ್‌ಸ್ಪೆಕ್ಟರ್ ಅನಂತ ಪದ್ಮನಾಭ ಅವರು ಮಂಗಳವಾರ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿದರು. ಈ ಸಂದರ್ಭ ತಪ್ಪಿತಸ್ಥ ಅಧಿಕಾರಿ ಹಾಗೂ ಸಿಬ್ಬಂದಿ ವಿರುದ್ಧ ಕ್ರಮ ಜರುಗಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದರು. ಪ್ರತಿಕ್ರಿಯಿಸಿದ ಇನ್‌ಸ್ಪೆಕ್ಟರ್, ಘಟನೆಯನ್ನು ಮೇಲಧಿಕಾರಿಗಳ ಗಮನಕ್ಕೆ ತರಲಾಗಿದ್ದು, ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳುವ ಭರವಸೆ ನೀಡಿದರು.

ಸುದ್ದಿ ತಿಳಿಯುತ್ತಿದ್ದಂತೆ ಕುಂದಾಪುರ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ ಕೊರಗ ಕಾಲೊನಿಗೆ ಭೇಟಿ ನೀಡಿದರು. ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಎಸ್‌ಪಿಗೆ ಸೂಚನೆ ನೀಡಿದರು.

ಕೊರಗ ಕಾಲೊನಿಗೆ ಇನ್‌ಸ್ಪೆಕ್ಟರ್ ಅನಂತ ಪದ್ಮನಾಭ ಭೇಟಿ ನೀಡಿದರು.

### ಇಂದು ವರದಿ ಸಲ್ಲಿಸಲು ಸೂಚನೆ

ಘಟನೆ ಬಗ್ಗೆ ಸಮಗ್ರ ತನಿಖೆ ನಡೆಸಿ ಡಿ.29ರ ಸಂಜೆಯೊಳಗೆ ವರದಿ ನೀಡುವಂತೆ ಉಡುಪಿ ಡಿಎಸ್‌ಪಿ ಅವರಿಗೆ ಸೂಚನೆ ನೀಡಲಾಗಿದೆ. ತನಿಖೆ ಮುಗಿಯುವವರೆಗೂ ಕೋಟ ಪಿಎಸ್‌ಐ ಹಾಗೂ ಸಿಬ್ಬಂದಿಯನ್ನು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸದಂತೆ ಸೂಚಿಸಲಾಗಿದೆ. ತನಿಖಾ ವರದಿ ಬಂದ ಬಳಿಕ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಸ್‌ಪಿ ವಿಷ್ಣುವರ್ಧನ್ ತಿಳಿಸಿದರು.


## ಉದ್ಯೋಗ ವಾಣಿ

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ)

ಈ ಕೆಳಕಂಡ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

(1) ಎಂಪ್ರಿ ಫೆಲೊ ( ಹವಾಮಾನ ಬದಲಾವಣೆ)

(2) ಹಿರಿಯ ಸಮಾಲೋಚಕರು (ಹವಾಮಾನ ಬದಲಾವಣೆ)

ಹೆಚ್ಚಿನ ಮಾಹಿತಿ ಮತ್ತು ಅರ್ಜಿ ನಮೂನೆಗಳಿಗಾಗಿ ದಯವಿಟ್ಟು ಎಂಪ್ರಿ ವೆಬ್‌ಸೈಟ್ https://empri.karnataka.gov.in/page/Recruitment/en ನೋಡುವುದು. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12.01.2022.

ಸಹಿ/- ಮಹಾ ನಿರ್ದೇಶಕರು

**SRI SIDDHARTHA SCHOOL & COLLEGE OF NURSING**
Agalakote, B.H. Road, TUMKUR-572107.

**RECRUITMENT OF TEACHING FACULTIES**

| Qualification / speciality M.Sc. Nursing | No. of Vacancies |
|---|---|
| 1. Medical Surgical Nursing | 02 |
| 2. Community Health Nursing | 02 |
| 3. Mental Health Nursing | 02 |
| 4. Paediatric Nursing | 01 |
| 5. OBG | 02 |
| B.Sc. Nursing | 10 |

Preferably 3+ Years Experience. Attractive Salary for Right Candidates
Applicants may send updated profile to: siddharthanursing@gmail.com
Apply with 10 days from the date of Advertisement
For More Details Refer: Website: www.ssmctumkur.org
Mobile Number: 9900314253

**SRI SIDDHARTHA DENTAL COLLEGE & HOSPITAL**
Agalakote, B.H. Road, TUMKUR-572107.

**RECRUITMENT NOTICE**

Applications are invited for the following Posts in the Sri Siddhartha Dental Clinic at Sri Siddhartha Dental College and Hospital Premises, Tumkur.

| POST | Min Qualification | No. of Vacancy |
|---|---|---|
| Doctors | MDS Qualified (Any Speciality) | 02 |
| Doctors | BDS | 02 |
| Dental Technicians | Dental Technician Course | 02 |
| Receptionists | Any degree skill Proficiency in Computer skills | 02 |
| Chair Side Assistant | PUC | 02 |
| Ambulance Drivers | Experienced | 02 |

The Interested eligible candidates may apply with their credentials to e-mail: ssdctumkur@gmail.com within 10th January 2022.
Principal

ಪ್ರಜಾವಾಣಿ ಉದ್ಯೋಗ ವಾಣಿ



ಉದ್ಯೋಗಾವಕಾಶದ ಜಾಹೀರಾತಿಗಾಗಿ ಸಂಪರ್ಕಿಸಿ: Mob : 96069 12220

WANT TO FIND THE BEST CAREER MOVE CLOSE TO HOME?

WALK-IN INTERVIEW

ICL Join ICL, Grow with us
ICL Fincorp

Find your nearest ICL Branch from the list below and visit one of our walk-in venues in Bangalore.

Scan To Know Interview Locations

DATE : 30TH DECEMBER | TIME : 9 AM TO 1 PM

| INTERVIEW VENUE | FOR BRANCHES | INTERVIEW VENUE | FOR BRANCHES |
|---|---|---|---|
| JP NAGAR METRO | Puttenahalli, Konanakunte, Padmanabha Nagar, Dodda Kammanahalli, Begur, Kaikondrahalli | MADIWALA | Kengeri, Mysore Road |
| GANGA NAGAR | Jalahalli, Mathikere, Ashwath Nagar, Hebbal, Vidyaranyapura, Rajaji Nagar, Thanisandra | K R PURAM | Hoskote |

| | |
|---|---|
| BRANCH HEADS | Graduates with min. 5 years experience in Banking, NBFCor Insurance industry and exceptional sales skills. |
| ASSISTANT BRANCH HEADS | Graduates with 2-5 years experience in Banking, NBFC or Insurance industry and exceptional sales skills. |
| JUNIOR OFFICERS | Graduates with 0-2 years experience. Freshers can also apply. Experience in the banking or the NBFC industry will be preferred. |
| BUSINESS DEVELOPMENT EXECUTIVES | Graduates with 0-2 years experience in Banking, NBFC or Insurance industry & exceptional sales skills. Freshers can also apply. |

Note: Candidates attending the interview should carry their original Aadhar, Educational certificates, & Experience certificates along with the Xerox copies.

Send your CV & preferred location of placement to careers@iclfincorp.com Ph: 85890 20507 iclfincorp.com

# 9 ವೈದ್ಯಕೀಯ ವಿದ್ಯಾರ್ಥಿಗಳಿಗೆ ಕೋವಿಡ್ ಸೋಂಕು ದೃಢ

ಮಂಡ್ಯ: ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ (ಮಿಮ್ಸ್) ಪ್ರಥಮ ಎಂಬಿಬಿಎಸ್‌ನ 9 ವಿದ್ಯಾರ್ಥಿಗಳಿಗೆ ಸೋಮವಾರ ಕೋವಿಡ್–19 ದೃಢಪಟ್ಟಿದೆ. ಓಮೈಕ್ರಾನ್ ಪರೀಕ್ಷೆಗಾಗಿ ಸೋಂಕಿತರ ಮೂಗು, ಗಂಟಲು ದ್ರವವನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.

9 ಮಂದಿಯಲ್ಲಿ 6 ಮಂದಿ ಕೇರಳದವರು. ಡಿ.8ರಂದು ಕೇರಳಕ್ಕೆ ತೆರಳಿದ್ದ ಅವರು ಡಿ.15ರಂದು ವಾಪಸಾಗಿದ್ದರು. ರಾಜ್ಯ ಪ್ರವೇಶಿಸುವುದಕ್ಕೂ ಮುನ್ನ ನಡೆಸಿದ್ದ ಕೋವಿಡ್ ತಪಾಸಣೆಯಲ್ಲಿ ನೆಗೆಟಿವ್ ವರದಿ ಬಂದಿತ್ತು. ಡಿ.24ರಂದು ಜ್ವರ ಕಾಣಿಸಿಕೊಂಡಾಗ ಮತ್ತೆ ತಪಾಸಣೆ ನಡೆಸಲಾಗಿತ್ತು.

ಆರಂಭದಲ್ಲಿ ಐವರಲ್ಲಿ ಕೋವಿಡ್ ಪಾಸಿಟಿವ್ ಬಂದಿತ್ತು. ಎಲ್ಲರನ್ನೂ ತಪಾಸಣೆಗೆ ಒಳಪಡಿಸಿದಾಗ ಸೋಂಕಿತರ ಕೊಠಡಿಯಲ್ಲಿ ವಾಸಿಸುತ್ತಿದ್ದ ಇತರ ನಾಲ್ವರಲ್ಲೂ ಕೋವಿಡ್ ಪತ್ತೆಯಾಗಿದೆ. ಸದ್ಯ ಸಂಸ್ಥೆಯ 400ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತಪಾಸಣೆ ನಡೆಸಲಾಗಿದೆ.

‘ಸೋಂಕಿತರಿಗೆ ಪ್ರತ್ಯೇಕವಾಗಿ ಚಿಕಿತ್ಸೆ ನೀಡಲಾಗುತ್ತಿದ್ದು, ರೋಗ ಲಕ್ಷಣ ಇಲ್ಲ. ಓಮೈಕ್ರಾನ್ ಭೀತಿ ಇರುವುದರಿಂದ ಮೂಗು, ಗಂಟಲು ದ್ರವವನ್ನು ಪರೀಕ್ಷೆಗೆ ಕಳುಹಿಸಲಾಗಿದೆ. ಈ ಕುರಿತು ರಾಜ್ಯ ಸರ್ಕಾರವೇ ವರದಿ ಪ್ರಕಟಿಸಲಿದೆ’ ಎಂದು ಮಿಮ್ಸ್ ನಿರ್ದೇಶಕ ಡಾ.ಎಂ.ಆರ್.ಹರೀಶ್ ತಿಳಿಸಿದರು.

**ರಾಜ್ಯದ ಕೋವಿಡ್ ಅಂಕಿ–ಅಂಶ**

| | |
|---|---|
| 30,05,232 | ಒಟ್ಟು ಪ್ರಕರಣಗಳು ▲ |
| 7,456 | ಸಕ್ರಿಯ ಪ್ರಕರಣಗಳು ▲ |
| 29,59,429 | ಗುಣಮುಖರಾದವರು ▲ |
| 38,318 | ಒಟ್ಟು ಸಾವು ▲ |

ದಿನದ ಏರಿಕೆ

| | |
|---|---|
| ಹೊಸ ಪ್ರಕರಣ | 356 ▲ |
| ಗುಣಮುಖ | 347 ▲ |
| ಸಾವು | 02 ▼ |

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

# ‘ಆಯ್ಕೆ ಇಲ್ಲದ ವ್ಯಕ್ತಿಗೂ ಹಕ್ಕು ನಿರಾಕರಣೆ ಸಲ್ಲದು’

ನವದೆಹಲಿ: ಸಂವಿಧಾನದ 14ನೇ ವಿಧಿಯು ನೀಡುವ ಸಮಾನತೆಯ ಹಕ್ಕು ಯಾವುದೇ ಆಯ್ಕೆ ಇಲ್ಲದ ಅಥವಾ ಅರ್ಥಪೂರ್ಣವಾದ ಯಾವುದೇ ಆಯ್ಕೆ ಇಲ್ಲದ ವ್ಯಕ್ತಿಗೂ ಅನ್ವಯವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಯಾವುದೇ ಆಯ್ಕೆ ಇಲ್ಲದ ವ್ಯಕ್ತಿಗೂ ಮೂಲಭೂತ ಹಕ್ಕು ನಿರಾಕರಣೆ ಮಾಡುವಂತಿಲ್ಲ. ನ್ಯಾಯಯುತವಲ್ಲದ ನಿಯಮಗಳನ್ನು ಒಪ್ಪುವಂತೆ ನಿಗದಿತ ನಮೂನೆಯಲ್ಲಿ ಆ ವ್ಯಕ್ತಿಯಿಂದ ಸಹಿ ಅಥವಾ ಸಮ್ಮತಿ ಪಡೆದುಕೊಳ್ಳುವುದು ಸರಿಯಲ್ಲ. ಅದು ವಿವೇಚನಾರಹಿತ ಮತ್ತು ಆತ್ಮಸಾಕ್ಷಿರಹಿತವಾದುದು ಎಂದು ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಮತ್ತು ಬಿ.ಆರ್. ಗವಾಯಿ ಅವರ ಪೀಠವು ಹೇಳಿದೆ.

ಅಂಗವೈಕಲ್ಯ ಪಿಂಚಣಿಯನ್ನು ನಿರಾಕರಿಸಿದ್ದನ್ನು ಪ್ರಶ್ನಿಸಿ ಪಣಿರಾಮ್ ಎಂಬವರು ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ಪೀಠವು ನಡೆಸಿತು. ಸ್ವಯಂ ಸೇವಾ ಸೈನ್ಯಕ್ಕೆ (ಟೆರಿಟೋರಿಯಲ್ ಆರ್ಮಿ) ಮರುಸೇರ್ಪಡೆ ಆಗುವ ಹೊತ್ತಿಗೆ ಸಹಿ ಮಾಡಿ ಕೊಟ್ಟ ಕರಾರಿನ ಆಧಾರದಲ್ಲಿ ಪಣಿರಾಮ್ ಅವರಿಗೆ ಪಿಂಚಣಿ ನಿರಾಕರಿಸಲಾಗಿತ್ತು. ಅವರು ಸೇನೆಯಲ್ಲಿ 25 ವರ್ಷ ಕರ್ತವ್ಯ ನಿರ್ವಹಿಸಿದ್ದರು. ಬಳಿಕ ಸ್ವಯಂ ಸೇವಾ ಸೈನ್ಯ ಸೇರಿದ್ದರು. 10 ದಿನಗಳ ರಜೆ ಮುಗಿಸಿ 2009ರ ಏಪ್ರಿಲ್ 24ರಂದು ಕರ್ತವ್ಯಕ್ಕೆ ಹಾಜರಾಗಲು ಹೋಗುತ್ತಿದ್ದಾಗ ಅಪಘಾತವಾಗಿತ್ತು. ಪರಿಣಾಮವಾಗಿ ಅವರ ಕಾಲು ಕತ್ತರಿಸಬೇಕಾಗಿ ಬಂದಿತ್ತು.

ಹೆಚ್ಚುವರಿ ಪಿಂಚಣಿಗೆ ಬೇಡಿಕೆ ಇರಿಸುವುದಿಲ್ಲ ಎಂದು ಬರೆದಿದ್ದ ಕರಾರಿಗೆ ಪಣಿರಾಮ್ ಸಹಿ ಮಾಡಿದ್ದಾರೆ. ಹಾಗಾಗಿ, ಪಿಂಚಣಿ ನೀಡಲಾಗದು ಎಂಬ ಕೇಂದ್ರದ ವಾದವನ್ನು ಪೀಠವು ತಿರಸ್ಕರಿಸಿತು.

‘ಪ್ರಬಲವಾದ ಕೇಂದ್ರ ಸರ್ಕಾರ ಮತ್ತು ದೇಶಕ್ಕಾಗಿ ಹೋರಾಡಿದ ಸಾಮಾನ್ಯ ಸೈನಿಕರನ್ನು ಸಮಾನ ಎಂದು ಪರಿಗಣಿಸಲು ಸಾಧ್ಯವೇ’ ಎಂದು ಪೀಠವು ಪ್ರಶ್ನಿಸಿದೆ.

ಯುದ್ಧವಲ್ಲದ ಸಂದರ್ಭದಲ್ಲಿ ಗಾಯಗೊಂಡ ಸಿಬ್ಬಂದಿಯು ಶೇ 20 ಅಥವಾ ಅದಕ್ಕಿಂತ ಹೆಚ್ಚು ಅಂಗವೈಕಲ್ಯಕ್ಕೆ ಒಳಗಾಗಿದ್ದರೆ ಅಂಥವರು ಅಂಗವೈಕಲ್ಯ ಪಿಂಚಣಿ ಪಡೆಯಲು ಅರ್ಹರು ಎಂದು ನಿಯಮ ಹೇಳುತ್ತದೆ. ಅರ್ಜಿದಾರರಿಗೆ ಪಿಂಚಣಿ ನಿರಾಕರಿಸಲು ಕಾರಣವೇನು ಎಂಬುದು ಅರ್ಥವಾಗುತ್ತಿಲ್ಲ. ಸೇನಾ ಕರ್ತವ್ಯದಿಂದಾಗಿಯೇ ಅವರು ಗಾಯಗೊಂಡಿದ್ದಾರೆಯೇ ಹೊರತು ನಿರ್ಲಕ್ಷ್ಯದಿಂದ ಅಲ್ಲ ಎಂದು ವೈದ್ಯಕೀಯ ಮಂಡಳಿ ಕೂಡ ಹೇಳಿದೆ ಎಂದು ಪೀಠವು ಹೇಳಿದೆ.


**ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ**
ಜ್ಞಾನಸಾಗರ ಆವರಣ, ವಿನಾಯಕನಗರ, ಕಂಟೋನ್ಮೆಂಟ್, ಬಳ್ಳಾರಿ – 583105.
ದೂರವಾಣಿ:08392–242703 ಫ್ಯಾಕ್ಸ್ : 08392–242806
ಸಂಖ್ಯೆ:ವಿಶ್ರೀಕೃವಿಬ/ಆಡಳಿತ/ಟೆಂಡರ್/ಪ್ರಾ.ಅ.ವಿ/2021–22/1814 ದಿನಾಂಕ:27.12.2021

**ಟೆಂಡರ್ ಪ್ರಕಟಣೆ:** (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯವು ಕ್ರಸಂ: 01) Supplying of Equipments to the Department of Studies in Zoology at Vijayanagara Sri Krishnaevaraya University, Jnana Sagara Campus, Ballari **Rs. 8,50,500/-** ಲಕ್ಷಗಳು, ಕೆಲಸವನ್ನು ನಿರ್ವಹಿಸಲು ನಿಯಮಾನುಸಾರ ಅರ್ಹ ಏಜೆನ್ಸಿಗಳಿಂದ ಟೆಂಡರನ್ನು (3ನೇ ಕರೆಗೆ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ www.e-proc.karnataka.gov.in ಮುಖಾಂತರ **ದಿನಾಂಕ 25.01.2022 ಸಾಯಂಕಾಲ 05.00 ಗಂಟೆಯವರೆಗೆ** ಟೆಂಡರ್ ಗಳನ್ನು ಸಲ್ಲಿಸಬಹುದು. ಸಂಪೂರ್ಣ ವಿವರಗಳನ್ನು ಈ ಕೆಳಕಂಡ ಅಧಿಕಾರಿಯ ಕಛೇರಿಯಲ್ಲಿ ಪಡೆಯಬಹುದಾಗಿದೆ.

**ಕುಲಸಚಿವರು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ**

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ದಕ್ಷಿಣ, ದಕ್ಷಿಣ ವಲಯ ಕಚೇರಿ, ಕಟ್ಟಡ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು – 11.
ಸಂಖ್ಯೆ: ಕಾಪಾಅ(ದ)/ಇ–ಪ್ರೊಕ್/15/2021–22 ದಿನಾಂಕ: 28.12.2021

**ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ)**
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗಾಗೆ ಅರ್ಹ ಟೆಂಡರುದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

| ಕ್ರ ಸಂ. | ಕಾಮಗಾರಿಗಳ ಹೆಸರು<br>ದ್ವಿಲಕೋಟೆ ಪದ್ಧತಿ | ಟೆಂಡರ್‌ಗಿಟ್ಟ ಅಂದಾಜು ಮೊತ್ತ (₹. ಲಕ್ಷಗಳಲ್ಲಿ) |
|---|---|---|
| 1. | ವಾರ್ಡ್ ಸಂಖ್ಯೆ–169ರ ಎಲ್‌ಐಸಿ ಕಾಲೋನಿಯಲ್ಲಿ ವಿವಿಧೋದ್ದೇಶ ಕಟ್ಟಡ ನಿರ್ಮಾಣ ಮಾಡುವುದು. (ಬಾಕಿ ಉಳಿಕೆ ಕಾಮಗಾರಿಗಳು) (ಹಳೆ ಅನುಬಂಧ–2) ಹೊಸ ಕ್ರ. ಸಂ.16. | 200.00 |
| 2. | (1) ಸ್ಮಶಾನದಲ್ಲಿ ಕಾಂಪೌಂಡ್ ಗೋಡೆ ಮತ್ತು ನಡಿಗೆದಾರಿಗೆ ಸುಧಾರಣೆಗಳನ್ನು ಮಾಡುವುದು. (2) ಹೊಂಬೇಗೌಡ ಆಟದ ಮೈದಾನದಲ್ಲಿ ಪ್ರಸ್ತುತವಿರುವ ಶೌಚಾಲಯ ಸಂಕೀರ್ಣ ಮತ್ತು ವೇದಿಕೆಗೆ ದುರಸ್ತಿಗಳನ್ನು ಮಾಡುವುದು. (3) ಹೊಂಬೇಗೌಡ ಆಟದ ಮೈದಾನದಲ್ಲಿ ಗ್ಯಾಲರಿಗೆ ಇ–ಸೈಡ್‌ಗೆ ಸುಧಾರಣೆಗಳನ್ನು ಮಾಡುವುದು. (4) ಹೊಂಬೇಗೌಡ ಆಟದ ಮೈದಾನದಲ್ಲಿ ಗ್ಯಾಲರಿಗೆ ಸುಧಾರಣೆಗಳನ್ನು ಮಾಡುವುದು (ಉತ್ತರ ಮತ್ತು ಪಶ್ಚಿಮ ಭಾಗ) (5) ಹೊಂಬೇಗೌಡ ಆಟದ ಮೈದಾನದಲ್ಲಿ ಗ್ಯಾಲರಿ ಮೇಲ್ಭಾಗದಲ್ಲಿ ದರ್ಶಕ (tensile) ಮೇಲ್ಛಾವಣಿ ಒದಗಿಸುವುದು. (6) ವಾರ್ಡ್ ಸಂಖ್ಯೆ–145 ಹೊಂಬೇಗೌಡ ಆಟದ ಮೈದಾನದ ಸ್ಮಶಾನದಲ್ಲಿ ಬರ್ನಿಂಗ್ ಪಾಯಿಂಟ್‌ಗಳಿಗೆ ಸುಧಾರಣೆಗಳು ಮತ್ತು ಕೊಳವೆಬಾವಿ ಸಿಂಕಿಂಗ್ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. (6 ಕಾಮಗಾರಿಗಳು) | 564.64 |

**ಟೆಂಡರ್ ವೇಳಾಪಟ್ಟಿ:** (1). ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ **21.01.2022**ರ ಸಂಜೆ **4:00** ಗಂಟೆಯವರೆಗೆ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **11.01.2022**ರ ಮಧ್ಯಾಹ್ನ **3:00** ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಚೇರಿ ಯೋಜನೆ (ದಕ್ಷಿಣ) ಇಲ್ಲಿ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **21.01.2022**ರ ಸಂಜೆ **4:00** ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **24.01.2022**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್‌ಗಳನ್ನು ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ದೊರೆತ ನಂತರ ಅಥವಾ ದಿನಾಂಕ **28.01.2022**ರ ಸಂಜೆ **4:00** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

**ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ**

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ


‘ಕೋವೊವ್ಯಾಕ್ಸ್’, ‘ಕಾರ್ಬಿವ್ಯಾಕ್ಸ್’ ಲಸಿಕೆ, ಮೊಲ್ನುಪಿರವಿರ್ ಔಷಧಕ್ಕೆ ಒಪ್ಪಿಗೆ

# ಮತ್ತೆರಡು ಲಸಿಕೆಗಳ ಬಳಕೆಗೆ ಅನುಮತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ತಡೆಯ ‘ಕೋವೊವ್ಯಾಕ್ಸ್’ ಮತ್ತು ‘ಕಾರ್ಬಿವ್ಯಾಕ್ಸ್’ ಲಸಿಕೆಗಳ ತುರ್ತು ಬಳಕೆಗೆ ಭಾರತೀಯ ಔಷಧ ನಿಯಂತ್ರಕರು ಮಂಗಳವಾರ ಅನುಮೋದನೆ ನೀಡಿದ್ದಾರೆ. ಜೊತೆಗೆ ‘ಮೊಲ್ನುಪಿರವಿರ್’ ಔಷಧದ ತುರ್ತು ಬಳಕೆಗೂ ಅನುಮತಿ ನೀಡಲಾಗಿದ್ದು, 13 ಕಂಪನಿಗಳು ಇದನ್ನು ಸ್ಥಳೀಯವಾಗಿ ತಯಾರಿಸಲಿವೆ. ಎರಡೂ ಲಸಿಕೆ ಹಾಗೂ ಔಷಧವನ್ನು ಅಮೆರಿಕದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಆದರೆ ಭಾರತದ ಕಂಪನಿಗಳ ಸಹಯೋಗದಲ್ಲಿ ದೇಶೀಯವಾಗಿಯೇ ತಯಾರಾಗಲಿವೆ.

ಈ ಎರಡು ಲಸಿಕೆಗಳ ಮೂಲಕ ದೇಶದಲ್ಲಿ ಒಟ್ಟು ಎಂಟು ಲಸಿಕೆಗಳಿಗೆ ಅನುಮೋದನೆ ಸಿಕ್ಕಂತಾಗಿದೆ. ಕೋವಿಶೀಲ್ಡ್, ಕೋವ್ಯಾಕ್ಸಿನ್, ಝೈಕೋವ್–ಡಿ, ಸ್ಪುಟ್ನಿಕ್ ವಿ, ಮೊಡೆರ್ನಾ, ಜಾನ್ಸನ್ ಅಂಡ್ ಜಾನ್ಸನ್ ಲಸಿಕೆಗಳ ತುರ್ತು ಬಳಕೆಗೆ ಈಗಾಗಲೇ ಅನುಮತಿ ಸಿಕ್ಕಿದೆ.

ಪ್ರೊಟೀನ್ ಆಧಾರಿತ ಕೋವೊವ್ಯಾಕ್ಸ್ ಲಸಿಕೆಯನ್ನು ಅಮೆರಿಕದ ನೋವೊವ್ಯಾಕ್ಸ್ ಪಾಲುದಾರಿಕೆಯಲ್ಲಿ ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ತಯಾರಿಸಲಿದೆ. ಹ್ಯೂಸ್ಟನ್‌ನ ಬಾಯ್ಲರ್ ಕಾಲೇಜ್ ಆಫ್ ಮೆಡಿಸಿನ್ ಮತ್ತು ಡೈನಾವ್ಯಾಕ್ಸ್ ಟೆಕ್ನಾಲಜಿ ಸಹಯೋಗದಲ್ಲಿ ಹೈದರಾಬಾದ್‌ನ ಬಯೊಲಾಜಿಕಲ್–ಇ ಸಂಸ್ಥೆಯು ಕಾರ್ಬಿವ್ಯಾಕ್ಸ್ ಲಸಿಕೆ ತಯಾರಿಸಲಿದೆ.

ಈ ಎರಡೂ ಲಸಿಕೆಗಳನ್ನು ಎರಡು ಡೋಸ್‌ಗಳಲ್ಲಿ ನೀಡಲಾಗುತ್ತದೆ. 2ರಿಂದ 8 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ಇವನ್ನು ಇರಿಸಬೇಕು. ಕಾರ್ಬಿವ್ಯಾಕ್ಸ್ ಲಸಿಕೆಯು ವುಹಾನ್ ತಳಿಯ ವಿರುದ್ಧ ಶೇ 90ರಷ್ಟು, ಡೆಲ್ಟಾ ತಳಿ ವಿರುದ್ಧ ಶೇ 80ರಷ್ಟು ಪರಿಣಾಮಕಾರಿ ಎನಿಸಿದ್ದು, ಮೊದಲ ಡೋಸ್ ನೀಡಿದ 28ನೇ ದಿನದ ಬಳಿಕ ಎರಡನೇ ಡೋಸ್ ನೀಡಬೇಕು. ಕೋವೊವ್ಯಾಕ್ಸ್ ಶೇ 90ರಷ್ಟು ಪರಿಣಾಮಕಾರಿ ಎನಿಸಿದ್ದು, 2ನೇ ಡೋಸ್ ನೀಡಲು 21 ದಿನದ ಅಂತರ ಸಾಕು.

ಬಯೊಲಾಜಿಕಲ್–ಇ ಸಂಸ್ಥೆ ಜೊತೆಗೆ ಜೂನ್‌ನಲ್ಲಿ ಒಪ್ಪಂದ ಮಾಡಿಕೊಂಡಿದ್ದ ಕೇಂದ್ರ ಸರ್ಕಾರವು, ₹1,500 ಕೋಟಿ ವೆಚ್ಚದಲ್ಲಿ 30 ಕೋಟಿ ಡೋಸ್ ಪೂರೈಸಲು ಬೇಡಿಕೆ ಸಲ್ಲಿಸಿತ್ತು. ತಿಂಗಳಿಗೆ 7.5 ಕೋಟಿ ಡೋಸ್ ತಯಾರಿಸಲು ಸಂಸ್ಥೆ ಉದ್ದೇಶಿಸಿದೆ. 2022ರ ಫೆಬ್ರುವರಿಯಿಂದ ಈ ಪ್ರಮಾಣವನ್ನು 10 ಕೋಟಿಗೆ ಹೆಚ್ಚಿಸುವ ಗುರಿ ಇಟ್ಟುಕೊಂಡಿದೆ. ಕೋವೊವ್ಯಾಕ್ಸ್ ಲಸಿಕೆ ತಯಾರಿಯ ಪ್ರಮಾಣದ ಬಗ್ಗೆ ಸೀರಂ ಸಂಸ್ಥೆ ಇನ್ನೂ ಮಾಹಿತಿ ನೀಡಿಲ್ಲ.

ಆ್ಯಂಟಿವೈರಲ್ ಔಷಧವಾದ ‘ಮೊಲ್ನುಪಿರವಿರ್’ ದೇಹದೊಳಗೆ ಕೊರೊನಾ ವೈರಸ್ ದುಪ್ಪಟ್ಟಾಗುವುದನ್ನು ತಡೆಯುತ್ತದೆ ಮತ್ತು ಇದನ್ನು ಕೋವಿಡ್‌ನ ಆರಂಭಿಕ ಚಿಕಿತ್ಸೆ ಎಂದು ಪರಿಗಣಿಸಲಾಗಿದೆ. ಡಾ. ರೆಡ್ಡೀಸ್ ಲ್ಯಾಬ್, ನಾಟ್ಕೊ ಫಾರ್ಮಾ, ಮೈಲಾನ್, ಸ್ಟ್ರೈಡ್ಸ್, ಸಿಪ್ಲಾ, ಸನ್ ಫಾರ್ಮಾ ಸೇರಿದಂತೆ 13 ಕಂಪನಿಗಳು ಈ ಔಷಧ ತಯಾರಿಸಲಿವೆ. ಸೌಮ್ಯ ಮತ್ತು ಮಧ್ಯಮ ಕೋವಿಡ್ ಲಕ್ಷಣಗಳಿರುವ ಜನರಿಗೆ ಈ ಔಷಧವನ್ನು ನೀಡಲು ಅಮೆರಿಕ ಹಾಗೂ ಬ್ರಿಟನ್ ಸರ್ಕಾರಗಳು ಇತ್ತೀಚೆಗೆ ಅನುಮತಿ ನೀಡಿದ್ದವು.

ಈ ಔಷಧವನ್ನು ವೈದ್ಯರ ಸಲಹೆ ಮೇರೆಗೆ ನೀಡಲಾಗುತ್ತದೆ. ರೋಗಿಯ ರಕ್ತದಲ್ಲಿ ಆಮ್ಲಜನಕದ ಪ್ರಮಾಣವು ಶೇ 93ಕ್ಕಿಂತ ಹೆಚ್ಚಿದ್ದು, ಆಸ್ಪತ್ರೆ ಸೇರಬೇಕಾದ ತುರ್ತು ಉಂಟಾದ ವ್ಯಕ್ತಿಗೆ ನೀಡಲಾಗುತ್ತದೆ. 800 ಎಂಜಿ ಪ್ರಮಾಣದಲ್ಲಿ ದಿನಕ್ಕೆ ಎರಡು ಬಾರಿ, ಐದು ದಿನ ಔಷಧ ನೀಡಬೇಕು ಎಂದು ಉಲ್ಲೇಖಿಸಲಾಗಿದೆ.

## ಶಾಲಾ–ಕಾಲೇಜು, ಸಿನಿಮಾ ಮಂದಿರ ಬಂದ್

ನವದೆಹಲಿ: ಓಮೈಕ್ರಾನ್ ಸೇರಿದಂತೆ ಕೋವಿಡ್ ಪ್ರಕರಣಗಳಲ್ಲಿ ಏರಿಕೆ ಕಂಡುಬಂದಿದ್ದು, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ರಾಷ್ಟ್ರ ರಾಜಧಾನಿಯಲ್ಲಿ ಯೆಲ್ಲೊ ಅಲರ್ಟ್ ಘೋಷಿಸಿದ್ದಾರೆ. ಸರ್ಕಾರದ ಆದೇಶದ ಪ್ರಕಾರ, ಶಾಲೆಗಳು, ಕಾಲೇಜುಗಳು, ಸಿನಿಮಾ ಮಂದಿರಗಳು ಹಾಗೂ ಜಿಮ್‌ಗಳು ಬಂದ್ ಆಗಲಿವೆ.

ಅಗತ್ಯವಲ್ಲದ ವಸ್ತುಗಳ ಮಾರಾಟದ ಅಂಗಡಿಗಳು ಬೆಳಿಗ್ಗೆ 10ರಿಂದ ರಾತ್ರಿ 8ರವರೆಗೆ ದಿನ ಬಿಟ್ಟು ದಿನ ಮಾತ್ರ ತೆರೆಯಬೇಕು. ಬಸ್ ಹಾಗೂ ಮೆಟ್ರೊಗಳಲ್ಲಿ ಒಟ್ಟು ಆಸನ ಸಾಮರ್ಥ್ಯದ ಶೇ 50ರಷ್ಟು ಜನರು ಪ್ರಯಾಣಿಸಲು ಮಾತ್ರ ಅನುಮತಿ ಇದೆ. ಶೇ 50ರಷ್ಟು ಸಿಬ್ಬಂದಿ ಮಾತ್ರ ಕಚೇರಿಗೆ ಹಾಜರಾಗಬೇಕು ಎಂದು ತಿಳಿಸಲಾಗಿದೆ. ಮದುವೆ ಹಾಗೂ ಅಂತ್ಯಸಂಸ್ಕಾರಕ್ಕೆ 20 ಜನರ ಮಿತಿ ಹೇರಲಾಗಿದೆ.

ಜನ ಸೇರುವ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ ಸಮಾರಂಭಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿರ್ಬಂಧಿಸಲಾಗಿದೆ. ರೆಸ್ಟೋರೆಂಟ್‌ಗಳು ಒಟ್ಟು ಆಸನ ಸಾಮರ್ಥ್ಯದ ಅರ್ಧದಷ್ಟು ಜನರಿಗೆ ಮಾತ್ರ ಅವಕಾಶ ನೀಡಬೇಕು. ಬೆಳಿಗ್ಗೆ 8ರಿಂದ ರಾತ್ರಿ 10ರವರೆಗೆ ತೆರೆದಿರಬಹುದು. ಜನರ ಮಿತಿ ನಿಯಮ ಬಾರ್‌ಗಳಿಗೂ ಅನ್ವಯವಾಗಲಿದ್ದು, ಇವು ಮಧ್ಯಾಹ್ನ 12ರಿಂದ ರಾತ್ರಿ 10ರವರೆಗೆ ತೆರೆದಿರಬಹುದು.

ಕೋವಿಡ್ ದೃಢಪಡುವಿಕೆ ದರವು ಸತತವಾಗಿ ಎರಡು ದಿನ ಶೇ 0.50ಕ್ಕಿಂತ ಹೆಚ್ಚಿದ್ದರೆ, ಯೆಲ್ಲೋ ಅಲರ್ಟ್ ಘೋಷಿಸಲಾಗುತ್ತದೆ. ಪ್ರಕರಣ ಹೆಚ್ಚುತ್ತಿರುವುದರಿಂದ ನಿರ್ಬಂಧಗಳನ್ನು ವಿಧಿಸಲಾಗಿದ್ದು, ಜನರು ದಿಗಿಲಿಗೆ ಒಳಗಾಗಬಾರದು ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

**ದೆಹಲಿಯಲ್ಲಿ ದಾಖಲೆಯ ಪ್ರಕರಣ:** ದೆಹಲಿಯಲ್ಲಿ ಒಂದೇ ದಿನ ಕೋವಿಡ್‌ನ 331 ಹೊಸ ಪ್ರಕರಣಗಳು ವರದಿಯಾಗಿದ್ದು, ದೃಢಪಡುವಿಕೆ ದರ ಶೇ 0.67 ದಾಖಲಾಗಿದೆ.

## ಓಮೈಕ್ರಾನ್ ಪ್ರಕರಣ 653ಕ್ಕೆ ಏರಿಕೆ

ನವದೆಹಲಿ (ಪಿಟಿಐ): ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ಓಮೈಕ್ರಾನ್ ಸೋಂಕಿತರ ಸಂಖ್ಯೆ ದೇಶದಲ್ಲಿ 653ಕ್ಕೆ ಏರಿದೆ. ಅವರ ಪೈಕಿ 186 ಮಂದಿ ಈಗಾಗಲೇ ಗುಣಮುಖರಾಗಿದ್ದಾರೆ. 21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸೋಂಕು ಪ್ರಕರಣಗಳು ದೃಢಪಟ್ಟಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಮಂಗಳವಾರ ಹೇಳಿದೆ. ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಅಂದರೆ, 167 ಪ್ರಕರಣಗಳಿವೆ. ದೆಹಲಿಯಲ್ಲಿ 165, ಕೇರಳದಲ್ಲಿ 57, ತೆಲಂಗಾಣದಲ್ಲಿ 55, ಗುಜರಾತ್‌ನಲ್ಲಿ 49 ಮತ್ತು ರಾಜಸ್ಥಾನದಲ್ಲಿ 46 ಪ್ರಕರಣಗಳು ದೃಢಪಟ್ಟಿವೆ. ಇದು ಮಂಗಳವಾರ ಬೆಳಿಗ್ಗೆ 8.30ರ ವರೆಗಿನ ದತ್ತಾಂಶವಾಗಿದೆ.

6,358 ಜನರಲ್ಲಿ ಕೊರೊನಾ ಸೋಂಕು ಮಂಗಳವಾರ ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆಯು 75,456ಕ್ಕೆ ಇಳಿದಿದೆ. 293 ಮಂದಿ ಮೃತಪಟ್ಟಿದ್ದಾರೆ. 61 ದಿನಗಳಲ್ಲಿ ಪ್ರತಿ ದಿನದ ಹೊಸ ಸೋಂಕು ಸಂಖ್ಯೆಯು 15 ಸಾವಿರದ ಒಳಗೇ ಇದೆ. ಕೇರಳ ಮತ್ತು ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಪ್ರಕರಣಗಳು ವರದಿಯಾಗುತ್ತಿವೆ. ಕೇರಳದಲ್ಲಿ 1,636 ಮತ್ತು ಮಹಾರಾಷ್ಟ್ರದಲ್ಲಿ 2,172 ಪ್ರಕರಣಗಳು ದೃಢಪಟ್ಟಿವೆ.

## ಮುನ್ನೆಚ್ಚರಿಕೆ ಡೋಸ್‌ಗೆ ವೈದ್ಯರ ಶಿಫಾರಸು ಬೇಕಿಲ್ಲ

ಗಂಭೀರ ಆರೋಗ್ಯ ಸಮಸ್ಯೆ ಹೊಂದಿರುವ 60 ವರ್ಷಕ್ಕೆ ಮೇಲ್ಪಟ್ಟ ವ್ಯಕ್ತಿಗಳಿಗೆ ಲಸಿಕೆಯ ‘ಮುನ್ನೆಚ್ಚರಿಕೆ ಡೋಸ್’ ನೀಡಲಾಗುವುದು ಎಂದು ಸರ್ಕಾರ ಪ್ರಕಟಿಸಿದೆ. ಆದರೆ ವೈದ್ಯರ ಶಿಫಾರಸು ಪತ್ರವಿದ್ದರೆ ಲಸಿಕೆ ನೀಡಲಾಗುವುದು ಎಂಬ ನಿಯಮವನ್ನು ಕೈಬಿಡಲಾಗಿದೆ. ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಈ ಸಂಬಂಧ ಮಂಗಳವಾರ ಮಾಹಿತಿ ನೀಡಿದ್ದಾರೆ.

ಚುನಾವಣೆಗೆ ನಿಯೋಜಿಸುವ ಸಿಬ್ಬಂದಿಯನ್ನೂ ಮುಂಚೂಣಿ ಕಾರ್ಯಕರ್ತರು ಎಂದು ಪರಿಗಣಿಸಿ ಅವರಿಗೂ ಮುನ್ನೆಚ್ಚರಿಕೆ ಡೋಸ್ ನೀಡಬೇಕು ಎಂದು ಸರ್ಕಾರ ತಿಳಿಸಿದೆ. 2ನೇ ಡೋಸ್ ಪಡೆದು 39 ವಾರ ಅಥವಾ 9 ತಿಂಗಳು ಕಳೆದಿರುವವರು ಮುನ್ನೆಚ್ಚರಿಕೆ ಡೋಸ್ ಪಡೆಯಲು ಅರ್ಹರಾಗಿದ್ದಾರೆ. ‘ಕೋವಿನ್’ ವ್ಯವಸ್ಥೆಯು ಮುನ್ನೆಚ್ಚರಿಕೆ ಡೋಸ್ ಪಡೆಯುವ ಕುರಿತಂತೆ ಅರ್ಹರಿಗೆ ಸಂದೇಶ ಕಳುಹಿಸಲಿದೆ. ಮುನ್ನೆಚ್ಚರಿಕೆ ಡೋಸ್ ಪಡೆದ ಮಾಹಿತಿಯು ಡಿಜಿಟಲ್ ರೂಪದ ಕೋವಿಡ್ ಲಸಿಕೆ ಪ್ರಮಾಣಪತ್ರದಲ್ಲಿ ನಮೂದಾಗಲಿದೆ.


ಬಹು ಮಾಧ್ಯಮ ಪ್ರಜಾವಾಣಿ LIVE
ಪ್ರಜಾವಾಣಿ ಕನ್ನಡ ಧ್ವನಿ
Prajavani.net/podcast
ದಿನದ ವಿಶೇಷ:
ಸಂಜೆ 4: ಝಣ ಝಣ ಕಾಂಚಾಣ
ಬೆಳಿಗ್ಗೆ 7 : ವಚನವಾಣಿ,
ಬೆಳಿಗ್ಗೆ 7.30 : ದಿನದ ಸೂಕ್ತಿ
ಬೆಳಿಗ್ಗೆ 8: ಮಧ್ಯಾಹ್ನ 2: ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್,
ಬೆಳಿಗ್ಗೆ 9: ಪ್ರಚಲಿತ,
ಬೆಳಿಗ್ಗೆ 9.30: ಸಂಪಾದಕೀಯ
Prajavani.net
Prajavani Prajavani


## ‘ರಾತ್ರಿ ಕರ್ಫ್ಯೂ ಆದೇಶದಲ್ಲಿ ಬದಲಾವಣೆ ಇಲ್ಲ’

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕಾಗಿ ರಾಜ್ಯದಲ್ಲಿ ರಾತ್ರಿ ಕರ್ಫ್ಯೂ ಜಾರಿಗೊಳಿಸಿರುವ ನಿರ್ಧಾರದಲ್ಲಿ ಯಾವುದೇ ಬದಲಾವಣೆ ಇಲ್ಲ. ಹತ್ತು ದಿನಗಳ ಬಳಿಕವೇ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ತಜ್ಞರ ಸಲಹೆ ಆಧರಿಸಿಯೇ ರಾತ್ರಿ ಕರ್ಫ್ಯೂ ಜಾರಿಗೊಳಿಸುವ ತೀರ್ಮಾನ ಮಾಡಲಾಗಿದೆ. ಎಲ್ಲ ಸಾಧಕ– ಬಾಧಕಗಳನ್ನು ನೋಡಿಕೊಂಡೇ ನಿರ್ಧಾರ ಕೈಗೊಳ್ಳಲಾಗಿದೆ. ಹತ್ತು ದಿನಗಳವರೆಗೂ ಈ ವ್ಯವಸ್ಥೆ ಮುಂದುವರಿಯಲಿದೆ’ ಎಂದರು.

ಹತ್ತು ದಿನಗಳ ಕಾಲ ರಾತ್ರಿ ಕರ್ಫ್ಯೂ ಹೇಗಿರಲಿದೆ ಎಂಬ ಮಾರ್ಗಸೂಚಿಯನ್ನು ಬಿಡುಗಡೆ ಮಾಡಲಾಗಿದೆ. ಉತ್ತಮ ರೀತಿಯಲ್ಲಿ ಮಾರ್ಗಸೂಚಿ ಪಾಲಿಸುವ ಮೂಲಕ ಜನರು ಸಂಪೂರ್ಣ ಸಹಕಾರ ನೀಡಬೇಕು. ನಂತರ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ತಜ್ಞರ ಜತೆ ಚರ್ಚಿಸಿ ಮುಂದಿನ ತೀರ್ಮಾನಕ್ಕೆ ಬರಲಾಗುವುದು ಎಂದು ಹೇಳಿದರು.

## ‘ಚುನಾವಣೆ ಮುಂದೂಡಬೇಕೆ?’

ರಾಯಪುರ (ಪಿಟಿಐ): ‘ಉತ್ತರ ಪ್ರದೇಶ ಚುನಾವಣೆಯನ್ನು ಬಿಜೆಪಿ ಮುಂದೂಡಲು ಬಯಸುತ್ತಿದೆಯೇ’ ಎಂದು ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೆಲ್ ಪ್ರಶ್ನಿಸಿದ್ದಾರೆ. ಚುನಾವಣಾ ಆಯೋಗದ ವಿಶ್ವಾಸಾರ್ಹತೆಯನ್ನೂ ಅವರು ಪ್ರಶ್ನಿಸಿದ್ದಾರೆ.

‘ಇದೇ ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ದೇಶದಲ್ಲಿ ಕೋವಿಡ್‌ನ ಎರಡನೇ ಅಲೆ ತೀವ್ರವಾಗಿತ್ತು. ಆಗ ಸಾವಿರಾರು ಜನರು ಕೋವಿಡ್‌ನಿಂದ ಸಾಯುತ್ತಿದ್ದರು. ಅಂತಹ ಸಂದರ್ಭದಲ್ಲೇ ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ನಡೆಸಲಾಗಿತ್ತು. ಆದರೆ ಓಮೈಕ್ರಾನ್‌ನ ಕೆಲವೇ ಪ್ರಕರಣಗಳು ಪತ್ತೆಯಾಗಿವೆ. ಪರಿಸ್ಥಿತಿ ತೀವ್ರವಾಗಿ ಇಲ್ಲದಿದ್ದರೂ, ಚುನಾವಣೆ ನಡೆಸುವ ಬಗ್ಗೆ ಸರ್ಕಾರವು ಚುನಾವಣಾ ಆಯೋಗದ ಜತೆ ಸಭೆ ನಡೆಸಿದೆ. ಆಗ ಇಲ್ಲದೇ ಇದ್ದ ಭಯ ಈಗ ಏಕೆ? ಉತ್ತರ ಪ್ರದೇಶ ಚುನಾವಣೆಯಲ್ಲಿ ಸೋಲುವ ಭಯ ಬಿಜೆಪಿಗೆ ಕಾಡುತ್ತಿದೆಯೇ? ಇದಕ್ಕಾಗಿಯೇ ಅದು ಚುನಾವಣೆ ಮುಂದೂಡಲು ಬಯಸುತ್ತಿದೆಯೇ’ ಎಂದು ಅವರು ಪ್ರಶ್ನಿಸಿದ್ದಾರೆ.


ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು–570 022.**
ಸಂ.ಕಾಅ/ಗ್ರಾಕುನೀ&ನೈವಿ/ಮೈ/ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
**ಇ–ಟೆಂಡರ್ ಪ್ರಕಟಣೆ ಸಂಖ್ಯೆ. 24/2021–22 ದಿ: 18.12.2021**
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿದ ಕಾಮಗಾರಿ ಮೊತ್ತ ದನ್ವಯ 2ನೇ ದರ್ಜೆ ಗುತ್ತಿಗೆದಾರರು ಮತ್ತು ಮೇಲ್ಪಟ್ಟು ಟೆಂಡರ್ ನಮೂನೆ KW-4 ರೀತ್ಯಾ (ದ್ವಿ ಲಕೋಟೆ ಪದ್ಧತಿಯಂತೆ) ನಂಜನಗೂಡು ತಾಲ್ಲೂಕಿನ 41 ಕಾಮಗಾರಿಗಳಿಗೆ 5 ಪ್ಯಾಕೇಜ್‌ರಲ್ಲಿ (ಟೆಂಡರ್‌ಗಿಟ್ಟ ಮೊತ್ತ ರೂ.237.83 ಲಕ್ಷಗಳಿಂದ ರೂ. 386.42 ಲಕ್ಷದವರೆಗೆ) ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗಧಿತ ಅವಧಿ ದಿನಾಂಕ: 28.12.2021 ರಿಂದ 14.01.2022 ಸಂಜೆ 5.00 ಘಂಟೆಯವರೆಗೆ, ಸಾಧ್ಯವಾದರೆ ಟೆಂಡರ್ ತೆರೆಯುವ ದಿನಾಂಕ: 17.01.2022 ರ ಸಂಜೆ 5.00 ಘಂಟೆ ಯ ನಂತರ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು. https://eprockarnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (ಪೋನ್ ನಂ.0821–2460495)ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
**ಸಹಿ/– ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಮೈಸೂರು.**
DIPR/DDMYS/MCA/744/2020-21

ಕರ್ನಾಟಕ ಸರ್ಕಾರ
**ಜಲಾನಯನ ಅಭಿವೃದ್ಧಿ ಇಲಾಖೆ**
ಆಯುಕ್ತರ ಕಾರ್ಯಾಲಯ, 7ನೇ ಮಹಡಿ, ಕ.ಗೃ.ಮಂ ಸಂಕೀರ್ಣ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009
ಸಂ: ಜಲಅಇ/ಉಕೃನಿ/ರಿವಾರ್ಡ್/ಸಂ./ವಿ.ಎಮ್.ಇ/2021–22 ದಿನಾಂಕ: 29.12.2021
**ಟೆಂಡರ್ ಆಹ್ವಾನಿಸುವ ಸೂಚನೆ**
**ರಿವಾರ್ಡ್ ಯೋಜನೆಯಡಿ**
**Vegetation Monitoring Equipments ಗಳ ಸಂಗ್ರಹಣೆ**
ಜಲಾನಯನ ಅಭಿವೃದ್ಧಿ ಇಲಾಖೆಯು ಕರ್ನಾಟಕ ಇ–ಸಂಗ್ರಹಣೆ ವೇದಿಕೆ (https://eproc.karnataka.gov.in) ಮೂಲಕ ವಿಶ್ವಬ್ಯಾಂಕ್ ನೆರವಿನ ರಿವಾರ್ಡ್ ಯೋಜನೆಯಡಿ ಈ ಕೆಳಗಿನ Vegetation Monitoring Equipments ಗಳ ಸಂಗ್ರಹಣೆಗಾಗಿ ಬಿಡ್‌ಗಳನ್ನು ಆಹ್ವಾನಿಸುತ್ತಿದೆ.

| ಉಪಕರಣಗಳ ಹೆಸರು | ಪ್ರಮಾಣ | ಇಎಂಡಿ ಮೊತ್ತ ರೂ. ಗಳಲ್ಲಿ |
|---|---|---|
| Vegetation Monitoring Equipments with two years warranty and CMC for 25% of the equipments for three years | | |
| Schedule-I: Leaf Area Index (LAI) Meter | 38 | 5,10,000/- |

ಟೆಂಡರ್ ದಾಖಲಾತಿಗಳೊಂದಿಗೆ ವಿವರವಾದ ಮಾಹಿತಿಯನ್ನು ಕರ್ನಾಟಕ ಇ–ಸಂಗ್ರಹಣೆ ವೇದಿಕೆಯಲ್ಲಿ ದಿನಾಂಕ: 29.12.2021 ರಿಂದ ಲಭ್ಯವಿರುತ್ತದೆ. ಆಸಕ್ತಿಯುಳ್ಳ ತಯಾರಕರು ಹಾಗೂ ಅವರ ಅಧಿಕೃತ ಏಜೆಂಟರುಗಳು ವಿವರಗಳನ್ನು ಅವಲೋಕಿಸಿ ಟೆಂಡರ್ಗಳನ್ನು ಸಲ್ಲಿಸುವುದು, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 27.01.2022 ಸಂಜೆ 5.00 ಗಂಟೆಯವರೆಗೆ ಮತ್ತು ಬಿಡ್ ಪೂರ್ವ ಸಭೆಯನ್ನು ದಿನಾಂಕ:06.01.2022 ಬೆಳಗ್ಗೆ 11.00 ಗಂಟೆಗೆ ನಿಗದಿಪಡಿಸಲಾಗಿದೆ
ಸಹಿ/–
ನಿರ್ದೇಶಕರು
ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು
DIPR/DDU/Zen/RO-2571/2021-22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ


ಕಾನ್ಪುರ: ಉದ್ಯಮಿ ಮನೆಯಲ್ಲಿ ₹200 ಕೋಟಿ ನಗದು ಪತ್ತೆ ಪ್ರಕರಣ

# ಮೋದಿ–ಅಖಿಲೇಶ್ ವಾಕ್ಸಮರ

ಪ್ರಜಾವಾಣಿ ವಾರ್ತೆ

ಕಾನ್ಪುರ: ತನ್ನ ಮನೆಯಲ್ಲಿ ₹200 ಕೋಟಿ ನಗದನ್ನು ಮುಚ್ಚಿಟ್ಟದ್ದ ಕಾನ್ಪುರದ ಸುಗಂಧ ದ್ರವ್ಯ ಉದ್ಯಮಿ ಪೀಯೂಷ್ ಜೈನ್ ವಿಚಾರವು ಈಗ ಬಿಜೆಪಿ ಮತ್ತು ಸಮಾಜವಾದಿ ಪಕ್ಷದ ನಡುವೆ ಕೆಸರೆರಚಾಟಕ್ಕೆ ಕಾರಣವಾಗಿದೆ. ವಿಧಾನಸಭಾ ಚುನಾವಣೆಯ ಹೊಸ್ತಿಲಲ್ಲಿ ಇರುವ ಉತ್ತರ ಪ್ರದೇಶದಲ್ಲಿ, ಈ ವಿಚಾರವು ಈಗ ಆಡಳಿತ ಮತ್ತು ವಿರೋಧ ಪಕ್ಷದ ಪ್ರಚಾರದ ಅಂಶವಾಗಿದೆ.

‘ಈ ಹಿಂದೆ ಉತ್ತರ ಪ್ರದೇಶವನ್ನು ಆಳಿದ್ದ ಪಕ್ಷವು ಇಡೀ ರಾಜ್ಯಕ್ಕೆ ಭ್ರಷ್ಟಾಚಾರದ ಸುಗಂಧವನ್ನು ಹರಡಿತ್ತು. ಅದು ಈಗ ಎಲ್ಲರಿಗೂ ಕಾಣುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಹೇಳಿದ್ದಾರೆ. ಇಲ್ಲಿನ ಮೆಟ್ರೊ ರೈಲನ್ನು ಉದ್ಘಾಟಿಸಿ ಮಾತನಾಡಿದ ಅವರು ಅಖಿಲೇಶ್ ಯಾದವ್ ಅವರ ನೇತೃತ್ವದ ಹಿಂದಿನ ಸರ್ಕಾರದ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದ್ದಾರೆ.

‘ಡಬ್ಬಗಳಲ್ಲಿ ಇಟ್ಟಿದ್ದ ಕಂತೆಕಂತೆ ನೋಟನ್ನು ನೀವು ನೋಡಿದ್ದೀರಿ. ಬಹುಶಃ ಅವರು (ಎಸ್‌ಪಿ) ಇದನ್ನು ನಾವೇ ಮಾಡಿಸಿದ್ದೇವೆ ಎಂದು ಹೇಳುತ್ತಾರೆ. ಆದರೆ ಕಾನ್ಪುರದ ಜನರಿಗೆ ಈ ವ್ಯವಹಾರ ಚೆನ್ನಾಗಿ ಅರ್ಥವಾಗುತ್ತದೆ’ ಎಂದು ಮೋದಿ ಹೇಳಿದ್ದಾರೆ.

ಅಖಿಲೇಶ್ ಯಾದವ್ ಅವರು ಉನ್ನಾವ್‌ನಲ್ಲಿ ಮಂಗಳವಾರ ನಡೆಸಿದ ರ‍್ಯಾಲಿಯಲ್ಲಿ ಸಾವಿರಾರು ಜನರು ಭಾಗಿಯಾಗಿದ್ದರು–ಪಿಟಿಐ ಚಿತ್ರ

‘ಇದು ಅವರ ಸಾಧನೆ. ನೋಟಿನ ಬೆಟ್ಟವು ಬಹಿರಂಗವಾಗಿದೆ. ಆದರೆ ಇದಕ್ಕೆ ತಾವೇ ಕಾರಣ ಎಂದು ಹೇಳಿಕೊಳ್ಳಲು ಅವರು ಮುಂದೆ ಬರುತ್ತಿಲ್ಲ. ಬದಲಿಗೆ ಬಾಯಿಮುಚ್ಚಿಕೊಂಡು ಮನೆಯಲ್ಲಿ ಕುಳಿತಿದ್ದಾರೆ’ ಎಂದು ಮೋದಿ ಹೇಳಿದ್ದಾರೆ.

ಮೋದಿ ಅವರ ಈ ಆರೋಪಕ್ಕೆ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ತಿರುಗೇಟು ನೀಡಿದ್ದಾರೆ. ‘ಈ ಕಾರ್ಯಾಚರಣೆಯಲ್ಲಿ ಬಿಜೆಪಿ ಎಡವಟ್ಟು ಮಾಡಿಕೊಂಡಿದೆ. ಸಮಾಜವಾದಿ ಪಕ್ಷದ ಪುಷ್ಪರಾಜ್ ಜೈನ್ ಬದಲಿಗೆ, ಬಿಜೆಪಿಯ ಪೀಯೂಷ್ ಜೈನ್ ಮನೆಯಲ್ಲಿ ಶೋಧಕಾರ್ಯ ನಡೆಸಲಾಗಿದೆ’ ಎಂದು ಅಖಿಲೇಶ್ ತಿರುಗೇಟು ನೀಡಿದ್ದಾರೆ.

‘ಈಗ ಬಂಧನದಲ್ಲಿರುವ ಪೀಯೂಷ್ ಜೈನ್ ಅವರ ಮೊಬೈಲ್ ಫೋನ್ ಕರೆಗಳ ವಿವರವನ್ನು ಬಹಿರಂಗಪಡಿಸುವ ಧೈರ್ಯವನ್ನು ಬಿಜೆಪಿ ಮಾಡಲಿ. ಅವರ ಜತೆ ಬಿಜೆಪಿಯ ಯಾರೆಲ್ಲಾ ನಾಯಕರು ಸಂಪರ್ಕದಲ್ಲಿದ್ದರು ಎಂಬುದು ಜನರಿಗೆ ಗೊತ್ತಾಗಲಿದೆ’ ಎಂದು ಅವರು ಬಿಜೆಪಿಗೆ ಸವಾಲು ಹಾಕಿದ್ದಾರೆ.


ಕರ್ನಾಟಕ ಸರ್ಕಾರ
**ಗಣಿ ಮತ್ತು ಭೂವಿಜ್ಞಾನ ಇಲಾಖೆ**
#49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001. ಇ–ಮೇಲ್: dir-mines@karnataka.gov.in
ಸಂ: ಡಿಎಂಜಿ–17012/22/2021/2021–22 ದಿನಾಂಕ: 28.12.2021
ಸಿ.ನಂ: 652857
**ಅಧಿಸೂಚನೆ ಮತ್ತು ಟೆಂಡರ್ ಆಹ್ವಾನಿಸುವ ಪ್ರಕಟಣೆ**
**“ಸುಣ್ಣದ ಕಲ್ಲಿನ ಗಣಿಗಾರಿಕೆಗೆ ಗಣಿ ಗುತ್ತಿಗೆ ನೀಡಲು ಬಿಡ್‌ಗಳ ಆಹ್ವಾನ”**
Mines and Minerals (Development and Regulation) Act, 1957 ರ ಸೆಕ್ಷನ್ 10(ಬಿ)ಯ ಅಡಿಯಲ್ಲಿ ಪ್ರದತ್ತವಾದ ಅಧಿಕಾರದಂತೆ ಮತ್ತು the Minerals (Evidence of Mineral Contents) Rules, 2015 and the Mineral (Auction) Rules, 2015 and Mineral (Auction) Amendment Rules, 2015 ಮತ್ತು ಅದರಡಿಯಾದ ತಿದ್ದುಪಡಿಗಳ ಅನುಗುಣವಾಗಿ ಕರ್ನಾಟಕ ಸರ್ಕಾರವು ಸುಣ್ಣದ ಕಲ್ಲಿನ ಗಣಿ ಗುತ್ತಿಗೆಗಳನ್ನು ನೀಡಲು ಎಲೆಕ್ಟ್ರಾನಿಕ್ ಹರಾಜಿಗೆ ಒಳಪಡಿಸಲು ಹೊಸ ಪ್ರದೇಶಗಳನ್ನು ಗುರುತಿಸಿದೆ. ಯಾವುದೇ ವ್ಯಕ್ತಿ, ಸಂಸ್ಥೆ, ಕಂಪನಿಯು ಟೆಂಡರ್ ದಾಖಲೆಯಲ್ಲಿ ನಮೂದಿಸಿರುವ ಅರ್ಹತೆಗಳನ್ನು ಹೊಂದಿರುವವರು ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ. ಹರಾಜಿಗೆ ಒಳಪಡಿಸಿದ ಪ್ರದೇಶಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ಬ್ಲಾಕ್ ಹೆಸರು | ವಿಸ್ತೀರ್ಣ (ಹೆ.ಗಳಲ್ಲಿ) | ಅಂದಾಜಿಸಲಾದ ಖನಿಜ ಸಂಪನ್ಮೂಲ (ಎಂಎಂಟಿ) |
|---|---|---|---|
| 1 | ದಿಗ್ಗಂವ್ ಸುಣ್ಣದ ಕಲ್ಲಿನ ಬ್ಲಾಕ್ | 786.32 | 812.67 |
| 2 | ಉಡಗಿ ಸುಣ್ಣದ ಕಲ್ಲಿನ ಬ್ಲಾಕ್ | 646.34 | 459.41 |

ಮೇಲಿನ ಪಟ್ಟಿಯಲ್ಲಿ ತಿಳಿಸಿರುವ ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಬೇಕಾದ ತಾಂತ್ರಿಕ ಬಿಡ್‌ಗಳ ಹೊರತಾಗಿ, ಬಿಡ್ಡುದಾರರು ತಮ್ಮ ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ಸಲ್ಲಿಸಬೇಕಾಗುತ್ತದೆ. ಅರ್ಹತಾ ನಿಬಂಧನೆಗಳು, ನಿಯಮ ಹಾಗೂ ನಿಬಂಧನೆಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸಬೇಕಾದ ದಿನಾಂಕ ಮತ್ತು ಸಮಯಗಳ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿರುತ್ತದೆ. ಟೆಂಡರ್ ದಸ್ತಾವೇಜುಗಳು, ಪ್ರಕಟಣೆಗಳು, ನವೀಕರಣಗಳು ಮತ್ತು ಇ–ಹರಾಜು ಪ್ರಕ್ರಿಯೆಗೆ ಸಂಬಂಧಿಸಿದ ಇತರೆ ವಿವರಗಳು ಎಂಎಸ್‌ಟಿಸಿ ನಿಯಮಿತ (https://www.mstcecommerce.com/auctionhome/mlcl/index.jsp) ದಲ್ಲಿ ಮಾತ್ರ ಎಲೆಕ್ಟ್ರಾನಿಕ್ ರೂಪದಲ್ಲಿ ಲಭ್ಯವಾಗುವುದು. ಆಸಕ್ತಿಯುಳ್ಳ ಮತ್ತು ಅರ್ಹ ಬಿಡ್ಡುದಾರರು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ನೊಂದಣಿ ಮಾಡಿಕೊಳ್ಳಬೇಕು. ಇ–ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಟೆಂಡರ್ ದಸ್ತಾವೇಜು ಮಾದರಿ ಮತ್ತು ಬ್ಲಾಕ್‌ನ ಕುರಿತಾದ ಸಾರಾಂಶಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ (https://www.mstcecommerce.com/ auctionhome/mlcl/index.jsp) ನಲ್ಲಿ ಉಚಿತವಾಗಿ ಲಭ್ಯವಿದೆ. ಬಿಡ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಟೆಂಡರ್ ದಸ್ತಾವೇಜಿನಲ್ಲಿ ಸೂಚಿಸಿರುವ ಹಣ ರೂ.5,00,000/– (ಐದು ಲಕ್ಷ ರೂಪಾಯಿಗಳು ಮಾತ್ರ) + ಜಿಎಸ್‌ಟಿ ಪಾವತಿಸುವ ಮೂಲಕ ಸಂಬಂಧಪಟ್ಟ ಗಣಿ ಬ್ಲಾಕ್‌ನ ಟೆಂಡರ್ ದಸ್ತಾವೇಜುಗಳನ್ನು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್‌ನಿಂದ ಪಡೆಯಬಹುದು. ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: 28.12.2021 ರಿಂದ ಆಸಕ್ತ ಬಿಡ್‌ದಾರರಿಗೆ ಮೇಲ್ಕಂಡ ಎಂ.ಎಸ್.ಟಿ.ಸಿ ವೆಬ್‌ಸೈಟ್ ನಲ್ಲಿ ಲಭ್ಯವಿದ್ದು ದಿನಾಂಕ: 07.02.2022 ಟೆಂಡರ್ ಮಾರಾಟದ ಕೊನೆಯ ದಿನವಾಗಿರುತ್ತದೆ. ತಾಂತ್ರಿಕ ಹಾಗೂ ಬಿಡ್ ಮೊತ್ತ ನಮೂದಿಸಿದ ಪ್ರಸ್ತಾವನೆಯನ್ನು ಎಂ.ಎಸ್.ಟಿ.ಸಿ ವೆಬ್ ಸೈಟ್‌ನಲ್ಲಿ ದಿನಾಂಕ: 17.02.2022 ರ 17.00 ಗಂಟೆಗೆ ಅಥವಾ ಅದರೊಳಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ದಿನಾಂಕ: 17.02.2022 ರ 17.00 ಗಂಟೆಗೆ ಅಥವಾ ಅದರೊಳಗೆ ಸಲ್ಲಿಸಬೇಕಾಗುತ್ತದೆ.
ಸಹಿ/–
ನಿರ್ದೇಶಕರು
DIPR/DDU/Zen/R.O:2568/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ


ಜನತಂತ್ರದ ಹಬ್ಬ 2021

## ನುಡಿ–ಕಿಡಿ

ನಾನು ಮೊದಲು ಕಾಂಗ್ರೆಸ್‌ನಲ್ಲಿಯೇ ಇದ್ದೆ. ಆದರೆ ಬಿಜೆಪಿ ವಿರುದ್ಧ ಹೋರಾಡಲು ಕಾಂಗ್ರೆಸ್ ಯಾವುದೇ ಆಸಕ್ತಿ ತೋರಿಸಲಿಲ್ಲ. ಹೀಗಾಗಿಯೇ ನಾನು ಕಾಂಗ್ರೆಸ್ ತೊರೆದು, ಟಿಎಂಸಿ ಸೇರಿದೆ
**ಸುಶ್ಮಿತಾ ದೇವ್,** ಟಿಎಂಸಿಯ ರಾಜ್ಯಸಭಾ ಸದಸ್ಯೆ

ಕಾಂಗ್ರೆಸ್ ಅನ್ನು ಹೊರತುಪಡಿಸಿ ಭಾರತವನ್ನು ಪ್ರಗತಿಯ ಪಥದಲ್ಲಿ ಮುನ್ನಡೆಸುತ್ತೇವೆ ಎಂದು ಯಾರಾದರೂ ಭಾವಿಸಿದ್ದರೆ, ಅವರು ನಿಜಕ್ಕೂ ಮೂರ್ಖರ ಸ್ವರ್ಗದಲ್ಲಿ ಇದ್ದಾರೆ ಎಂದೇ ಅರ್ಥ
**ಪ್ರದೀಪ್ ಭಟ್ಟಾಚಾರ್ಯ,** ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ

ಎಬಿಸಿಡಿಯೇ ಸಮಾಜವಾದಿ ಪಕ್ಷದ ಮಂತ್ರ. ಎ ಅಂದರೆ ಆತಂಕವಾದ, ಬಿ ಎಂದರೆ ಭಾಯಿ–ಬತೀಜಾವಾದ (ಸೋದರ ಸಂಬಂಧಿಗೆ ಮಣೆ), ಸಿ ಅಂದರೆ ಭ್ರಷ್ಟಾಚಾರ ಮತ್ತು ಡಿ ಅಂದರ ದಂಗೆ
**ಅಮಿತ್ ಶಾ,** ಕೇಂದ್ರ ಗೃಹ ಸಚಿವ

ಹಾಥರಸ್, ಲಖಿಂಪುರ ಖೇರಿ, ಗೋರಖಪುರ ಮತ್ತು ಆಗ್ರಾ ಘಟನೆಗಳ ನಂತರ ಬಿಜೆಪಿ ಬೆಂಬಲಿಗರೇ ಆ ಪಕ್ಷದ ವಿರುದ್ಧ ಎಬಿಸಿಡಿ ಘೋಷಣೆ ಕೂಗುತ್ತಿದ್ದಾರೆ. ಎಬಿಸಿಡಿ ಅಂದರೆ, ಅಬ್ ಬಿಜೆಪಿ ಚೋಡ್ ದೊ (ಈಗ ಬಿಜೆಪಿಯನ್ನು ತೊರೆಯಿರಿ)
**ಅಖಿಲೇಶ್ ಯಾದವ್,** ಸಮಾಜವಾದಿ ಪಕ್ಷದ ಮುಖ್ಯಸ್ಥ

## ದಿನದ ಬೆಳವಣಿಗೆ

- ಪಂಜಾಬ್ ವಿಧಾನಸಭಾ ಚುನಾವಣೆಗೆ ಎಎಪಿ ತನ್ನ ಅಭ್ಯರ್ಥಿಗಳ ಮತ್ತೊಂದು ಪಟ್ಟಿಯನ್ನು ಮಂಗಳವಾರ ಬಿಡುಗಡೆ ಮಾಡಿದೆ. 15 ಅಭ್ಯರ್ಥಿಗಳ ಕ್ಷೇತ್ರಗಳನ್ನು ಎಎಪಿ ಮಂಗಳವಾರ ಅಂತಿಮಗೊಳಿಸಿದೆ. ಈ ಮೂಲಕ ಪಕ್ಷವು ಒಟ್ಟು 88 ಅಭ್ಯರ್ಥಿಗಳ ಹೆಸರು ಪ್ರಕಟಿಸಿದಂತಾಗಿದೆ
- ಪಂಜಾಬ್: ಮಾಜಿ ಕ್ರಿಕೆಟಿಗ ದಿನೇಶ್ ಮೊಂಗಿಯಾ ಅವರು ಮಂಗಳವಾರ ಬಿಜೆಪಿ ಸೇರಿದ್ದಾರೆ. ಪಂಜಾಬ್ ಕಾಂಗ್ರೆಸ್ ಶಾಸಕರಾದ ಫತೇ ಸಿಂಗ್ ಬಾಜ್ವಾ ಮತ್ತು ಬಲ್ವಿಂದರ್ ಸಿಂಗ್ ಲಡ್ಡಿ ಅವರು ಮಂಗಳವಾರ ಬಿಜೆಪಿ ಸೇರಿದ್ದಾರೆ
- ಗೋವಾದಲ್ಲಿ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಿಯೇ ಚುನಾವಣಾ ಕಣಕ್ಕೆ ಇಳಿಯುತ್ತೇವೆ ಎಂದು ಟಿಎಂಸಿ ಹೇಳಿದೆ



# ಗದ್ದೆಗಳು: ಕಪ್ಪೆಗಳ ಔತಣತಾಣಗಳು

ಅಲಕನಂದಾ ಬಾಟ್ನಿ

ಗದ್ದೆಗಳಲ್ಲಿ ಕಪ್ಪೆಗಳು ವಾಸಿಸುವುದು ಸಾಮಾನ್ಯ. ಬೆಳೆಗಳನ್ನು ಹಾಳುಮಾಡುವ ಲೀಫ್-ಹಾಪರ್‌ನಂತಹ ಕೀಟಕಗಳನ್ನು ಭಕ್ಷಿಸುವ ಈ ಕಪ್ಪೆಗಳನ್ನು ಜೈವಿಕ ನಿಯಂತ್ರಣ ಸೈನಿಕರೆಂದು ಹೇಳಬಹುದು. ಗಿಡಗಳ ರಸವನ್ನು ಹೀರಿ ಅದರ ಚೈತನ್ಯವನ್ನು ಕಡಿಮೆ ಮಾಡಿ, ಅನೇಕ ರೋಗಗಳನ್ನು ಉಂಟು ಮಾಡುವ ವೈರಸ್ ಮತ್ತು ಇತರೆ ರೋಗಕಾರಕ ಕ್ರಿಮಿಗಳ ನಿಯಂತ್ರಣದಲ್ಲೂ ಕಪ್ಪೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇತ್ತೀಚೆಗೆ ಬೆಂಗಳೂರಿನ ಸಂಶೋಧಕರು ಗದ್ದೆಗಳಲ್ಲಿನ ಕಪ್ಪೆಗಳನ್ನು ಸಮೀಕ್ಷಿಸಿ, ಅವುಗಳ ಆಹಾರಕ್ರಮವನ್ನು ವಿಶ್ಲೇಷಿಸಿದ್ದಾರೆ.

ಸಂಶೋಧಕರು ಎರಡು ಕಪ್ಪೆಗಳನ್ನು ಉದಾಹರಣೆಯಾಗಿ ಪರಿಗಣಿಸಿ, ಅವುಗಳ ಆಹಾರಸೇವನೆ ಮತ್ತು ಹೊಟ್ಟೆಯ ವಿವರಗಳ ಬಗ್ಗೆ ಸಾಕಷ್ಟು ವಿಶ್ಲೇಷಣೆಯನ್ನು ಮಾಡಿದ್ದಾರೆ. ಕೀಟಕಗಳನ್ನು ಸಂಹರಿಸಿ, ಬೆಳೆಗಳನ್ನು ರಕ್ಷಿಸುವಲ್ಲಿ ಕಪ್ಪೆಗಳು ಪ್ರಮುಖ ಪಾತ್ರವಹಿಸುತ್ತವೆ ಎಂಬುದಕ್ಕೆ ಈ ಅಧ್ಯಯನ ಸಾಕ್ಷಿಯಾಗಿದೆ. ಕೀಟನಾಶಕಗಳ ವಿಪರೀತ ಬಳಕೆಯಿಂದಾಗಿ ಹಲವು ಕೀಟಕಗಳು ನಾಶವಾಗಿವೆ. ಇದರಿಂದಾಗಿ ಕಪ್ಪೆಗಳ ಆಹಾರ ಆಯ್ಕೆ ಕೆಲವೇ ಕೀಟಕಗಳಿಗೆ ಮಾತ್ರ ಸೀಮಿತವಾಗಿದೆ ಎಂದು ಅಧ್ಯಯನದಿಂದ ತಿಳಿದುಬಂದಿದೆ.

ಬೆಳೆಗಳನ್ನು ನಾಶಮಾಡುವ ಕೀಟಕಗಳನ್ನು ಕಪ್ಪೆಗಳು ಆಹಾರವಾಗಿ ಸೇವಿಸುತ್ತವೆ. ಆದ್ದರಿಂದ ಅವನ್ನು ತೋಟ-ಗದ್ದೆಗಳಂಥ ಪರಿಸರದ ನಿಯಂತ್ರಣ ವ್ಯವಸ್ಥೆಯ ಪ್ರಮುಖ ಪಾತ್ರಧಾರಿಗಳು ಎನ್ನಬಹುದು. ಆದರೆ ಅವುಗಳ ಭವಿಷ್ಯ ಅಪಾಯದಲ್ಲಿದೆ. ಇಂತಹ ಪ್ರದೇಶಗಳಲ್ಲಿ ಆವಾಸಸ್ಥಾನದ ಕೊರತೆ ಮತ್ತು ಅತಿಯಾದ ಕೃಷಿ ರಾಸಾಯನಿಕಗಳ ಬಳಕೆ – ಈ ಎರಡು ಸಂಯೋಜಿತ ವಿಷಯಗಳು ಕಪ್ಪೆಗಳ ಸಂಖ್ಯೆಯ ಇಳಿತಕ್ಕೆ ಮುಖ್ಯ ಕಾರಣವೆಂದು ಹೇಳಬಹುದಾಗಿದೆ.

ಕಪ್ಪೆಗಳ ಸಾಂದ್ರತೆ ಮತ್ತು ಅವುಗಳ ಆಹಾರಪದ್ಧತಿಯನ್ನು ಸಂಶೋಧಿಸಲು ಸಂಶೋಧಕರು ಕಪ್ಪೆಗಳಿರುವ ಬತ್ತದ ಗದ್ದೆಗಳನ್ನು ಸಮೀಕ್ಷಿಸಿದರು. ಬಹಳ ಸಾಮಾನ್ಯವಾಗಿ ಕಂಡುಬರುವ ಮಿನಿವಾರ್ಯರ್ ಕಾಪೆರಾಟಾ ಮತ್ತು ಮೈಕ್ರೊಹೈಲ ಓರ್ನಾಟ ಎಂಬ ಎರಡು ಕಪ್ಪೆಗಳ ಪ್ರಭೇದವನ್ನು ಸಂಗ್ರಹಿಸಿ, ಅವುಗಳ ಹೊಟ್ಟೆಯ ಅಂಶಗಳನ್ನು ಪರಿಶೀಲಿಸಲಾಯಿತು. ಸಮೀಕ್ಷಿಸಿದ 60 ಗದ್ದೆಗಳಲ್ಲಿ ಆರು ಪ್ರಭೇದಕ್ಕೆ ಸೇರಿದ 1705 ಕಪ್ಪೆಗಳಿದ್ದವು. ಮುಖ್ಯವಾಗಿ ಈ ಎರಡು ಪ್ರಭೇದದ ಕಪ್ಪೆಗಳ ಹೊಟ್ಟೆಯ ಭಾಗಗಳನ್ನು ಹೊರತೆಗೆದು ಪರೀಕ್ಷಿಸಿದಾಗ 261 ಬಗೆಯ ಕೀಟಕಗಳು ಕಂಡುಬಂದವು. ನಂತರ ಅವುಗಳನ್ನು ವಿಂಗಡಿಸಿ ವಿಶ್ಲೇಷಿಸಲಾಯಿತು.

‘ಈ ಎರಡು ಪ್ರಭೇದಗಳು ಒಟ್ಟಾಗಿ ಇದ್ದಲ್ಲೆಲ್ಲ ಬಗೆಬಗೆಯ ಕೀಟಗಳನ್ನು ಅವು ತಿನ್ನುತ್ತಿದ್ದವು ಎಂಬುದು ಮುಖ್ಯವಾಗಿ ಕಂಡುಬಂದಿದೆ’ ಎನ್ನುತ್ತಾರೆ, ಈ ಸಂಶೋಧನೆಯ ನೇತೃತ್ವ ವಹಿಸಿದ ಡಾ. ಕೆ. ಎಸ್. ಶೇಷಾದ್ರಿ. ಮಿನಿವಾರ್ಯರ್ ಕಾಪೆರಾಟಾ ಕಪ್ಪೆಗೆ ವಿವಿಧ ರೀತಿಯ ಕೀಟಗಳಾದ ಜೀರುಂಡೆ, ಲಾರ್ವ ಮತ್ತು ಜೇಡಗಳು ತಿನ್ನಲು ಆದ್ಯತೆ. ಆದರೆ ಮೈಕ್ರೊಹೈಲ ಓರ್ನಾಟ ಕಪ್ಪೆಯ ಆದ್ಯತೆ ಬೇರೆಯಂತೆ. ಅವು ಕೀಟಗಳ ವರ್ಗಕ್ಕೆ ಸೇರಿದ ಕಣಜಗಳು, ಇರುವೆಗಳು ಮತ್ತು ಗೆದ್ದಲುಗಳನ್ನು ಹೆಚ್ಚು ತಿನ್ನುತ್ತವೆಯಂತೆ. ಸಾಮಾನ್ಯವಾಗಿ ಈ ಲಾರ್ವ/ಮರಿಹುಳುಗಳು, ಕಣಜಗಳು ಮತ್ತು ಜೀರುಂಡೆಗಳು ಬತ್ತದ ಗದ್ದೆಗಳನ್ನು ನಾಶ ಮಾಡುವ ಕೀಟಕಗಳೇ! ಸಂಶೋಧಕರಿಗೆ ಕಪ್ಪೆಗಳ ಹೊಟ್ಟೆಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ಸಣ್ಣ ಕಲ್ಲು ಮತ್ತು ಮಣ್ಣಿನ ಅಂಶಗಳೂ ಸಿಕ್ಕಿವೆ. ಕೀಟಕಗಳಲ್ಲಿನ ಕ್ಯಾರಾಪೇಸ್‌ನಂತಹ ಜೀರ್ಣವಾಗಲು ಕಷ್ಟಕರವಾಗಿರುವ ಭಾಗವನ್ನು ಸುಲಭವಾಗಿ ಒಡೆದು ಜೀರ್ಣಿಸಲು ಕಪ್ಪೆಗಳಿಗೆ ಈ ಕಲ್ಲುಗಳು ಸಹಾಯ ಮಾಡುತ್ತವೆ ಎಂದೂ ಊಹಿಸಲಾಗಿದೆ.

ಕಪ್ಪೆಗಳು ಕೆಲವು ಕೀಟಕಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಅವನ್ನು ಆಹಾರವಾಗಿ ಸೇವಿಸುತ್ತವೆ. ಹೀಗೆಯೇ ವಿಭಿನ್ನ ಬಗೆಯ ಬೇಟೆಯ ತಂತ್ರಗಳನ್ನು ಕಪ್ಪೆಗಳು ಅಳವಡಿಸಿಕೊಂಡಿರುತ್ತವೆ. ಪರಿಸರದ ಹಿನ್ನೆಲೆ ಮತ್ತು ಬಣ್ಣಕ್ಕೆ ತಕ್ಕ ಹಾಗೆ ತನ್ನನ್ನು ಬದಲಿಸಿಕೊಂಡು, ಅವಿತು ಕುಳಿತು ಬೇಟೆಗೆ ಕಾಯುವುದು ಮಿನಿವಾರ್ಯರ್ ಕಾಪೆರಾಟಾ ಕಪ್ಪೆಯ ವೈಶಿಷ್ಟ್ಯ. ಬೇಟೆಗಾರನಂತೆ ಒಮ್ಮೆಲೆ ದಾಳಿ ಮಾಡಿ ಕೀಟಕಗಳನ್ನು ಹಿಡಿದು ಸೇವಿಸುವುದು ಮೈಕ್ರೊಹೈಲ ಓರ್ನಾಟ ಕಪ್ಪೆಯ ಕ್ರಮ. ಕೀಟಕಗಳೇ ಕಪ್ಪೆಗಳ ಔತಣವಾದರೂ, ಅವುಗಳ ಆಯ್ಕೆಯಲ್ಲಿ ಕಪ್ಪೆಯಿಂದ ಕಪ್ಪೆಗೆ ವ್ಯತ್ಯಾಸ ಇರುವುದು ಗಮನಾರ್ಹ. ಮುಂದಿನ ದಿನಗಳಲ್ಲಿ, ಕಪ್ಪೆಗಳ ಆಹಾರಪದ್ಧತಿ ಮತ್ತು ಕಪ್ಪೆಗಳ ಮೇಲೆ ಕೀಟನಾಶಕಗಳ ಪರಿಣಾಮದ ಬಗ್ಗೆ ಹೆಚ್ಚು ಗಂಭೀರ ಅಧ್ಯಯನ ಅಗತ್ಯವೆನ್ನುತ್ತಾರೆ ಸಂಶೋಧಕರು.

ಬೇರೆ ಕೀಟಕಗಳಂತೆ ಧಾನ್ಯಗಳನ್ನು ಸೇವಿಸುವ ಕೀಟಕಗಳು ಕೀಟನಾಶಕಗಳ ವಿರುದ್ಧ ಪ್ರತಿರೋಧವನ್ನು ಬೆಳೆಸಿಕೊಳ್ಳಬಹುದು. ಆದರೆ ಅವು ಜೈವಿಕ ನಿಯಂತ್ರಣ ಸೈನಿಕರೆಂದು ಹೆಸರು ಪಡೆದ ಕಪ್ಪೆಗಳಿಂದ ತಪ್ಪಿಸಿಕೊಳ್ಳಲು ಅಸಾಧ್ಯ. ಕಪ್ಪೆಗಳು ಈ ಕೀಟಕಗಳನ್ನು ಆಹಾರವನ್ನಾಗಿ ಸೇವಿಸುವುದರಿಂದ ಕೀಟನಾಶಕಗಳ ಹಾನಿಕಾರಕವಾದ ಉಪಯೋಗವನ್ನು ತಡೆಯಬಹುದು. ಮಾತ್ರವಲ್ಲ, ಕೀಟನಾಶಕಗಳಿಗೆ ಖರ್ಚು ಮಾಡಬೇಕಾದ ಹಣವನ್ನೂ ಉಳಿಸುತ್ತದೆ; ಜೊತೆಗೆ ಪ್ರಕೃತಿಯ ವೈವಿಧ್ಯನಾಶವನ್ನೂ ತಡೆಗಟ್ಟಬಹುದು. ಪರಿಸರಹಾನಿಯನ್ನು ಉಂಟುಮಾಡುವ ಕೀಟನಾಶಕ ಬೇಕೇ ಅಥವಾ ನಿಸರ್ಗದ ಆಹಾರಜಾಲವು (ಫೂಡ್ ವೆಬ್‌ನಿಂದ) ಸಹಜವಾಗಿಯೇ ಸಿದ್ಧಗೊಳಿಸಲಾಗಿರುವ ಜೈವಿಕ ನಿಯಂತ್ರಣ ಸೈನಿಕನಾದ ಕಪ್ಪೆಗಳು ಬೇಕೇ ಎಂಬುದು ನಮ್ಮ ಮುಂದಿರುವ ಪ್ರಶ್ನೆ.

(ಲೇಖಕಿ: ಸಂಶೋಧಕಿ)

> ಬೆಳೆಗಳನ್ನು ನಾಶಮಾಡುವ ಕೀಟಕಗಳನ್ನು ಕಪ್ಪೆಗಳು ಆಹಾರವಾಗಿ ಸೇವಿಸುತ್ತವೆ. ಆದ್ದರಿಂದ ಅವನ್ನು ತೋಟ–ಗದ್ದೆಗಳಂಥ ಪರಿಸರದ ನಿಯಂತ್ರಣ ವ್ಯವಸ್ಥೆಯ ಪ್ರಮುಖ ಪಾತ್ರಧಾರಿಗಳು ಎನ್ನಬಹುದು. ಆದರೆ ಅವುಗಳ ಭವಿಷ್ಯ ಅಪಾಯದಲ್ಲಿದೆ.

# ಪೆಗ್‌ಮ್ಯಾನ್: ಗೂಗಲ್ ಮ್ಯಾಪ್‌ನಲ್ಲೊಬ್ಬ ಗೆಳೆಯ

ಅವಿನಾಶ್ ಬಿ.

**ಗೂಗಲ್** ಮ್ಯಾಪ್ ಎಂಬುದು ವೆಬ್‌ಬ್ರೌಸರ್‌ನಲ್ಲಿ ಮಾತ್ರವಲ್ಲದೆ ಸ್ಮಾರ್ಟ್‌ಫೋನ್‌ಗಳ ಆ್ಯಪ್‌ಗಳ ಮೂಲಕ ನಮಗೆಲ್ಲ ಚಿರಪರಿಚಿತವಾದ ಭೂಮಿಯ ನಕಾಶೆ. ಹೆಚ್ಚಿನವರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವುದಕ್ಕಾಗಿಯೋ ಅಥವಾ ಎರಡು ಸ್ಥಳಗಳ ಮಧ್ಯೆ ದೂರವನ್ನು ಅಳೆಯುವುದಕ್ಕಾಗಿಯೋ ಗೂಗಲ್ ಮ್ಯಾಪ್ ಬಳಸಿರುತ್ತಾರೆ. ಆದರೆ, ಇದರಲ್ಲಿ ಪೆಗ್‌ಮ್ಯಾನ್ ಎಂಬ ಗೆಳೆಯ ಇದ್ದಾನೆ. ಆತ ನಮಗೆಲ್ಲ ಸಹಾಯ ಮಾಡುವುದಕ್ಕೆ ಕಾಯುತ್ತಾ ಇರುತ್ತಾನೆ ಎಂಬುದನ್ನು ಎಷ್ಟು ಮಂದಿ ಗಮನಿಸಿದ್ದೀರಿ?



ಗೂಗಲ್ ಮ್ಯಾಪ್‌ನಲ್ಲಿ ಕಾಣಸಿಗುವ ಪೆಗ್‌ಮ್ಯಾನ್ ವೈಶಿಷ್ಟ್ಯ

ಹೌದು. ಗೂಗಲ್ ಮ್ಯಾಪ್ ಅನ್ನು ಕಂಪ್ಯೂಟರಿನಲ್ಲಿ ವೆಬ್ ಬ್ರೌಸರಿನಲ್ಲಿ ತೆರೆದಾಗಲಷ್ಟೇ ಈ ಪೆಗ್‌ಮ್ಯಾನ್ ಎಂಬ ವೈಶಿಷ್ಟ್ಯಪೂರ್ಣವಾದ ಒಂದು ಐಕಾನ್ ಕಾಣಸಿಗುತ್ತದೆ. ಈ ವೈಶಿಷ್ಟ್ಯ ಹೊಸದೇನಲ್ಲ. ದಶಕದ ಹಿಂದೆಯೇ ಇದನ್ನು ಪರಿಚಯಿಸಲಾಗಿತ್ತು. ಬಹುತೇಕರಿಗೆ ಇದರ ಅರಿವಿಲ್ಲ ಅಷ್ಟೇ. ಮಾನವಾಕೃತಿಯ ಈ ಲಾಂಛನವನ್ನು ಬಳಸಿ, ಮ್ಯಾಪ್‌ನಲ್ಲಿ ನಿರ್ದಿಷ್ಟ ಸ್ಥಳದಲ್ಲಿರುವ ವಿವರಗಳನ್ನು ಚಿತ್ರದ ಮೂಲಕ ತಿಳಿದುಕೊಳ್ಳಬಹುದಾಗಿದೆ. ಅದು ಹೇಗೆಂದರೆ, ಗೂಗಲ್ ಸ್ಟ್ರೀಟ್‌ವ್ಯೂ ಎಂಬುದನ್ನು ಕೇಳಿರುತ್ತೀರಿ. ಗೂಗಲ್ ದೇಶದ ಉದ್ದಗಲಕ್ಕೆ ಸಂಚರಿಸಿ ಬೀದಿ ಬೀದಿಯ ಚಿತ್ರಗಳನ್ನು ತನ್ನ ಮ್ಯಾಪ್ ಸರ್ವರ್‌ನಲ್ಲಿ ಸೇರಿಸಿದೆ. ಅದುವೇ ಗೂಗಲ್ ಮ್ಯಾಪ್‌ನಲ್ಲಿರುವ ಸ್ಟ್ರೀಟ್ ವ್ಯೂ. ಇದನ್ನು ನೋಡಬೇಕಿದ್ದರೆ ನಮಗೆ ಪೆಗ್‌ಮ್ಯಾನ್ ಸಹಾಯ ಮಾಡುತ್ತಾನೆ.

ಬ್ರೌಸರ್‌ನಲ್ಲಿ ಗೂಗಲ್ ಮ್ಯಾಪ್ ತೆರೆದಾಗ, ಕೆಳಗಿನ ಬಲಮೂಲೆಯಲ್ಲಿ ನ್ಯಾವಿಗೇಶನ್ ನಿಯಂತ್ರಣ ಕೇಂದ್ರದಲ್ಲಿ ಈ ಪೆಗ್‌ಮ್ಯಾನ್ ಕಾದಿರುತ್ತಾನೆ. ಈ ಮ್ಯಾಪ್‌ನಲ್ಲಿ ನಾವು ನೋಡಬೇಕಾದ ಸ್ಥಳದ ರಸ್ತೆಗಳು ಹೇಗಿವೆ, ಅಲ್ಲಿರುವ ಸ್ಮಾರಕಗಳು ಅಥವಾ ಕಟ್ಟಡಗಳು ಏನೆಲ್ಲಾ ಇವೆ, ಹೇಗಿವೆ ಎಂಬುದನ್ನು ಈ ಸ್ಟ್ರೀಟ್ ವ್ಯೂ ಎಂಬ ವೈಶಿಷ್ಟ್ಯವು ತೋರಿಸುತ್ತದೆ. ಇದು ಈ ಹಿಂದೆ ಗೂಗಲ್ ಕಾರ್ ದೇಶದ ಉದ್ದಗಲಕ್ಕೂ ಓಡಾಡಿ ಸಂಗ್ರಹಿಸಿರುವ, ಉತ್ತಮ ಗುಣಮಟ್ಟದ ಚಿತ್ರಗಳ ಗುಚ್ಛ.

ಬಲಕೆಳಮೂಲೆಯಲ್ಲಿ ಕುಳಿತಿರುವ ಈ ಪೆಗ್‌ಮ್ಯಾನ್ ಐಕಾನ್ ಮೇಲೆ ಕ್ಲಿಕ್ ಮಾಡಿ ಹಿಡಿದಾಗ, ಇಡೀ ಮ್ಯಾಪ್‌ನಲ್ಲಿ ನೀಲಿ ಗೆರೆಗಳು ಅಥವಾ ನೀಲಿ ಬಣ್ಣದ ಬಿಂದುಗಳು ಗೋಚರಿಸುತ್ತವೆ. ಈ ನೀಲಿ ಗೆರೆಗಳು ಅಥವಾ ಬಿಂದುಗಳು, ಆ ಸ್ಥಳದಲ್ಲಿ ಸ್ಟ್ರೀಟ್ ವ್ಯೂ ಲಭ್ಯವಿದೆ ಎಂಬುದನ್ನು ಸೂಚಿಸುತ್ತವೆ. ನೀಲಿಗೆರೆ ಅಥವಾ ಬಿಂದುಗಳು ಇಲ್ಲದಿರುವಲ್ಲಿ ಸ್ಟ್ರೀಟ್ ವ್ಯೂ ಚಿತ್ರಗಳು ಇರುವುದಿಲ್ಲ ಎಂದರ್ಥ.

ಹೀಗೆ, ಪೆಗ್‌ಮ್ಯಾನ್ ಐಕಾನ್ ಅನ್ನು ಕ್ಲಿಕ್ ಮಾಡಿ ಹಿಡಿದು, ಈ ನೀಲಿಗೆರೆ ಅಥವಾ ಬಿಂದು ಇರುವಲ್ಲಿ ಎಳೆಯುತ್ತಾ ಹೋದರೆ, ಆಯಾ ಜಾಗದಲ್ಲಿರುವ ಚಿತ್ರಗಳು ಚಿಕ್ಕದಾಗಿ (ಥಂಬ್‌ನೇಲ್) ಕಾಣಿಸುತ್ತವೆ. ನಿರ್ದಿಷ್ಟ ಜಾಗಕ್ಕೆ, ಉದಾಹರಣೆಗೆ, ಬೆಂಗಳೂರಿನಲ್ಲಿ ‘ವಿಧಾನಸೌಧ’ ಎಂದು ಬರೆದಿರುವಲ್ಲಿಗೆ ಈ ಪೆಗ್‌ಮ್ಯಾನ್ ಅನ್ನು ಎಳೆದು ಬಿಟ್ಟರೆ, ಸ್ಟ್ರೀಟ್ ವ್ಯೂ ಮೋಡ್‌ನಲ್ಲಿ ಆ ಜಾಗದ ಚಿತ್ರವು ದೊಡ್ಡದಾಗಿ ಪೂರ್ತಿ ಬ್ರೌಸರಿನಲ್ಲಿ ಕಾಣಿಸುತ್ತದೆ. ಈ ಚಿತ್ರವನ್ನೂ ಕ್ಲಿಕ್ ಮಾಡಿ ಎಳೆಯುತ್ತಾ ನೋಡಿದರೆ, 360 ಡಿಗ್ರಿಯಲ್ಲಿ ಈ ಸ್ಥಳದ ರಸ್ತೆಗಳು, ಕಟ್ಟಡಗಳು, ವಾಹನಗಳನ್ನು ನೋಡಬಹುದಾಗಿದೆ. ಈ ಚಿತ್ರವನ್ನು ಯಾವಾಗ ಸೆರೆಹಿಡಿದದ್ದು ಎಂಬ ಮಾಹಿತಿಯೂ ಎಡಮೇಲ್ಭಾಗದಲ್ಲಿ ಗೋಚರಿಸುತ್ತದೆ. ಅದು ಲೈವ್ (ಉಪಗ್ರಹ ಮೂಲಕ) ಚಿತ್ರ ಅಲ್ಲ.

ಯಾವುದೇ ನಿರ್ದಿಷ್ಟ ಸ್ಥಳದ ಅನ್ವೇಷಣೆಗೆ, ಅಲ್ಲಿ ಏನೇನಿದೆ, ಯಾವ ಕಟ್ಟಡ ಹೇಗಿದೆ ಎಂದೆಲ್ಲ ತಿಳಿದುಕೊಳ್ಳುವುದಕ್ಕೆ ಈ ಪೆಗ್‌ಮ್ಯಾನ್ ತೋರಿಸುವ ಸ್ಟ್ರೀಟ್ ವ್ಯೂ ಅತ್ಯುಪಯುಕ್ತ. ಇದರಿಂದ ಮತ್ತೊಂದು ಪ್ರಯೋಜನವೂ ಇದೆ. ಸಾಮಾಜಿಕ ಮಾಧ್ಯಮಗಳಲ್ಲಿ ಯಾವುದೋ ಒಂದು ಫೋಟೋ ವೈರಲ್ ಆಗಿರುತ್ತದೆ. ಅದು ನಿಜವಾಗಿಯೂ ಆ ದೇಶದ್ದೇ ಅಥವಾ ಆ ಪ್ರದೇಶದ್ದೇ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಗೂಗಲ್ ಮ್ಯಾಪಿನ ಸ್ಟ್ರೀಟ್ ವ್ಯೂ ಬಳಸಿ ತಾಳೆ ನೋಡಬಹುದಾಗಿದೆ. ಉದಾಹರಣೆಗೆ, ಇದು ಬೆಂಗಳೂರಿನ ಕಬ್ಬನ್ ಪಾರ್ಕ್ ಬಳಿ ಇರುವ ಸುಂದರವಾದ ಕೆತ್ತನೆಯುಳ್ಳ ಕಟ್ಟಡ ಅಂತ ಯಾರೋ ಸಾಮಾಜಿಕ ಮಾಧ್ಯಮದಲ್ಲಿ ಸುಳ್ಳು ಸುಳ್ಳೇ ಒಂದು ಫೋಟೋ ಹಂಚಿಕೊಂಡಿರುತ್ತಾರೆ. ಗೂಗಲ್ ಮ್ಯಾಪ್ ಮೂಲಕ ಕಬ್ಬನ್ ಪಾರ್ಕ್‌ನ ಸ್ಟ್ರೀಟ್ ವ್ಯೂ ನೋಡಿದರೆ, ಅಂತಹ ಕಟ್ಟಡ ಇದೆಯೇ ಅಥವಾ ಇಲ್ಲವೇ ಎಂಬುದು ಖಚಿತವಾಗುತ್ತದೆ.

ಗೂಗಲ್ ಮ್ಯಾಪ್‌ನಲ್ಲಿ ವಿಧಾನಸೌಧದ ಬಳಿ ಪೆಗ್‌ಮ್ಯಾನ್ ಅನ್ನು ಎಳೆದು ಬಿಟ್ಟಾಗ ಕಾಣಸಿಗುವ ಸ್ಟ್ರೀಟ್ ವ್ಯೂ ಇದು. ಎಡಮೇಲ್ಭಾಗದಲ್ಲಿ ಚಿತ್ರ ಸೆರೆಹಿಡಿದ ವರ್ಷ, ವ್ಯಕ್ತಿಯ ಮಾಹಿತಿ ಇದೆ. ಫೋಟೊ ಕ್ಲಿಕ್ ಮಾಡಿ ಎಳೆದರೆ, ಈ ಸ್ಥಳದ 360 ಡಿಗ್ರಿ ವೀಕ್ಷಣೆ ಸಾಧ್ಯ

# ನಿಮ್ಮ ಬೈಗುಳ ನಮಗೆ ಕೇಳಿಸದು!

> ಹೊಸ ಹೊಸ ಬಗೆಯ ತಂತ್ರಜ್ಞಾನಗಳು ನಮ್ಮ ನಿತ್ಯದ ಜೀವನವನ್ನು ಸಾಕಷ್ಟು ಪ್ರಭಾವಿಸುತ್ತಿವೆ. ನಮ್ಮ ಮಾತು, ಆಹಾರ, ವಿಹಾರ, ಆರೋಗ್ಯ – ಹೀಗೆ ಎಲ್ಲವೂ ಇಂದು ತಂತ್ರಜ್ಞಾನಕ್ಕೆ ಅಧೀನವಾಗುತ್ತಿವೆ...

ಪೃಥ್ವಿರಾಜ್

**ರಾಜಕೀಯ** ಸಭೆ–ಸಮಾರಂಭಗಳಲ್ಲಿ ಪರಸ್ಪರ ಆರೋಪಗಳ ಭರದಲ್ಲಿ ರಾಜಕೀಯ ನಾಯಕರ ಅವಾಚ್ಯ ಶಬ್ದಗಳು ಸಾಮಾನ್ಯವಾಗಿಬಿಟ್ಟಿವೆ. ಟಿ.ವಿ. ಕಾರ್ಯಕ್ರಮಗಳಲ್ಲಿ, ಬಹಿರಂಗ ವೇದಿಕೆಗಳಲ್ಲಿ ಕೆಟ್ಟ ಪದಗಳನ್ನು ಕೇಳಿಸಿಕೊಳ್ಳಲು ಸಭ್ಯರಿಗೆ ಖಂಡಿತ ಮುಜುಗರವಾಗಬಹುದು. ಟಿವಿ ಪ್ರಸಾರಗಳಲ್ಲಿ ಇಂಥ ಮಾತುಗಳಿಗೆ ಬೀಪ್ ಸೌಂಡ್ ಹಾಕುವುದಕ್ಕೆ ಅವಕಾಶವಿದ್ದರೂ, ನೇರಪ್ರಸಾರವಾಗುವ ಕಾರ್ಯಕ್ರಮಗಳಲ್ಲಿ ಹಾಗೆ ಮಾಡುವುದು ಸಾಧ್ಯವಾಗದು. ಆದರೆ ಮಾತನಾಡುವವರ ಬಾಯಿಗೆ ಬೀಗ ಹಾಕಲಂತೂ ಸಾಧ್ಯವಿಲ್ಲವಷ್ಟೆ. ಆದರೆ ಅವರ ಅನುಚಿತ ಮಾತುಗಳು ಇತರರ ಕಿವಿಗೆ ಬೀಳದಂತೆ ಖಂಡಿತ ತಡೆಯಬಹುದು. ಈ ಸಮಸ್ಯೆಗೆ ಪರಿಹಾರವಾಗಿಯೇ ವಿಶೇಷ ಮೈಕ್ರೊಫೋನ್ ಒಂದನ್ನು ತಯಾರಿಸಲಾಗಿದೆ.

ದುಬೈ ಡಿಸೈನರ್ ಜಿನಾ ಅಹ್ಮದ್ ಎಂಬುವವರು ‘ಥೆಮಿಸ್’ ಹೆಸರಿನ ಆ್ಯಂಟಿ ಅಫೆನ್ಸಿವ್ ಸ್ಪೀಕರ್ ತಯಾರಿಸಿದ್ದಾರೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ನೆರವಿನಿಂದ ಕಾರ್ಯನಿರ್ವಹಿಸುವ ಈ ಉಪಕರಣವು ಕೆಟ್ಟ ಪದಗಳನ್ನು ಗುರುತಿಸುತ್ತವೆ; ಅವು ಕೇಳುಗರ ಕಿವಿಗೆ ಬೀಳದಂತೆ ಸ್ವಯಂಚಾಲಿತವಾಗಿ ಮ್ಯೂಟ್ ಮಾಡುತ್ತದೆ. ಸಮಾಜಕ್ಕೆ ಉಪಯೋಗಕಾರಿಯಾದ ಈ ಸಾಧನ ಶೀಘ್ರ ಮಾರುಕಟ್ಟೆಗೆ ಪೂರ್ಣಪ್ರಮಾಣದಲ್ಲಿ ಬಳಕೆಗೆ ಬರಬೇಕಿದೆ. ಕೆಟ್ಟ ಪದಗಳಿಂದ ಉಂಟಾಗುವ ಪರಿಸರ ಮಾಲಿನ್ಯ ಆದಷ್ಟು ಬೇಗ ನಿಯಂತ್ರಣಕ್ಕೆ ಬರಲಿ ಎಂದು ಹಾರೈಸೋಣ.

## ಮುಖಕ್ಕೂ ಮಾತಿಗೂ ಕೋಟಿ ಬೆಲೆ

ರೋಬೋಟಿಕ್ ತಂತ್ರಜ್ಞಾನದ ಅಭಿವೃದ್ಧಿಯಲ್ಲಿ ನಿತ್ಯ ಹೊಸ ಹೊಸ ಪ್ರಯೋಗಗಳು ನಡೆಯುತ್ತಲೇ ಇವೆ. ಈ ನಿಟ್ಟಿನಲ್ಲಿ ಹೊಸ ಹೆಜ್ಜೆ ಇಟ್ಟಿರುವ ರಷ್ಯಾದ ಪ್ರೋಮೊಬೋಟ್ ಸಂಸ್ಥೆಯು ಮನುಷ್ಯರ ಮುಖ, ಧ್ವನಿ ಮೇಲಿನ ಹಕ್ಕುಸ್ವಾಮ್ಯ ಪಡೆಯಲು ಮುಂದಾಗುತ್ತಿದೆ. 2019ರಿಂದ ಈ ಸಂಸ್ಥೆ ಹುಮನ್ಯಾಡ್ ರೋಬೊಗಳ ತಯಾರಿಯಲ್ಲಿ ಮಗ್ನವಾಗಿದೆ. ಈ ರೋಬೊಗಳನ್ನು ಮತ್ತಷ್ಟು ಅಭಿವೃದ್ಧಿ ಮಾಡುವ ಸಲುವಾಗಿ ಆಸಕ್ತರ ಮುಖ ಹಾಗೂ ಧ್ವನಿ ಮೇಲಿನ ಹಕ್ಕುಸ್ವಾಮ್ಯ ಪಡೆದು ಅವನ್ನು ರೋಬೊಗಳಿಗೆ ಜೋಡಿಸಲು ಶ್ರಮಿಸುತ್ತಿದೆ. ಇದರಿಂದ ರೋಬೊಗಳು ಹೆಚ್ಚು ನೈಜವಾಗಿ ಕಾಣುತ್ತವೆ ಎಂಬುದು ಸಂಸ್ಥೆಯ ಆಲೋಚನೆ. ಇದಕ್ಕಾಗಿ 25 ವರ್ಷ ಮೇಲ್ಪಟ್ಟವರು ತಮ್ಮ ಧ್ವನಿ ಹಾಗೂ ಮುಖಚಹರೆಯನ್ನು ತಮ್ಮ ಸಂಸ್ಥೆಗೆ ಮಾರಿಕೊಳ್ಳುವ ಅವಕಾಶ ಕಲ್ಪಿಸುತ್ತಿದೆ. ಇದಕ್ಕೆ ಸುಮಾರು ಎರಡು ಲಕ್ಷ ಡಾಲರ್ (ಸುಮಾರು ರೂ. 1.5 ಕೋಟಿ) ನೀಡುವುದಾಗಿ ಪ್ರಕಟಿಸಿದೆ. ಆದರೆ ಈ ಅವಕಾಶ ಅಷ್ಟು ಸುಲಭವಲ್ಲ. ಇದಕ್ಕಾಗಿ ಸಂಸ್ಥೆ ಹಲವು ಷರತ್ತುಗಳನ್ನು ವಿಧಿಸಿದೆ. ಹಲವು ಪರೀಕ್ಷೆಗಳನ್ನು ನಡೆಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು. ನೂರಾರು ಗಂಟೆ ಭಾಷಣಸ್ಪರ್ಧೆ, ಮುಖಚಹರೆಗಾಗಿ ಒಂದಷ್ಟು ದಿನ ಫೋಟೊಶೂಟ್ – ಹೀಗೆ ಕೆಲವು ಸ್ಪರ್ಧೆಗಳಲ್ಲಿ ಭಾಗವಹಿಸಬೇಕಾಗುತ್ತದೆ ಎಂದು ತಿಳಿಸಿದೆ. ಈ ಎಲ್ಲ ಸ್ಪರ್ಧೆ, ಪರೀಕ್ಷೆಗಳಲ್ಲಿ ಉತ್ತೀರ್ಣರಾದರವರ ಮುಖ ಮತ್ತು ಮಾತುಗಳು ಕೋಟಿಗಟ್ಟಲೇ ಸಂಪಾದಿಸುತ್ತವೆ! ನಮ್ಮ ಮುಖಕ್ಕೂ ಮಾತಿಗೂ ಬೆಲೆ ಇದೆ ಎಂದು ತಂತ್ರಜ್ಞಾನ ತೋರಿಸಿಕೊಡುತ್ತಿದೆ.

## ಶುದ್ಧವಾಗಲಿ ಗಾಳಿ!

ಸ್ವಚ್ಛಗಾಳಿ ಸೇವಿಸಿದರೆ ಮಾತ್ರ ಆರೋಗ್ಯ ಚೆನ್ನಾಗಿರುತ್ತದೆ ಎಂಬುದು ತಿಳಿದಿರುವ ಸಂಗತಿಯೇ. ಆದರೆ ಮಿತಿಮೀರಿದ ವಾಯುಮಾಲಿನ್ಯದಿಂದಾಗಿ ಈಗ ಶುದ್ಧವಾಯು ಕೂಡ ಮರೀಚಿಕೆಯಾಗುತ್ತಿದೆ. ಮಹಾನಗರಗಳಲ್ಲಿ ವಾಸಿಸುತ್ತಿರುವವರಿಗಂತೂ ಮನೆಯಲ್ಲೂ ಒಳ್ಳೆಯ ಗಾಳಿ ಸಿಗುವುದು ದುಸ್ತರವೇ ಆಗುತ್ತಿದೆ. ಇದಕ್ಕೆ ಪರಿಹಾರವಾಗಿ ಏರ್ ಪ್ಯೂರಿಫೈಯರ್ ಉಪಕರಣಗಳು ಮಾರುಕಟ್ಟೆಗೆ ಲಗ್ಗೆ ಇಡುತ್ತಿವೆ. ಈ ನಿಟ್ಟಿನಲ್ಲಿ ಹೊಸ ಪ್ರಯೋಗ ಮಾಡಿರುವ ಯುರೋಪ್‌ನ ಏಸ್ಪೆನ್ ಸಂಸ್ಥೆ ಹೆಚ್ 13 ಹೆಪಾ ಯುವಿಸ್ ಜೆರ್ಮಿ ಸೈಡಲ್ ಏರ್ ಪ್ಯೂರಿಫೈಯರ್ ಹೆಸರಿನ ಹೊಸ ಪರಿಕರವನ್ನು ತಯಾರಿಸಿದೆ. ಏರ್ ಕೂಲರ್ ರೀತಿ ತಣ್ಣನೆ ಗಾಳಿ ನೀಡುವ ಜತೆಗೆ, ಗಾಳಿಯಲ್ಲಿನ ಹಾನಿಕಾರಕ ಕ್ರಿಮಿಗಳನ್ನು ನೇರಳಾತೀತ ಕಿರಣಗಳ ಮೂಲಕ ಕೊಲ್ಲುತ್ತದೆ. ಸುಮಾರು ಸಾವಿರ ಚದರ ಅಡಿ ವಿಸ್ತೀರ್ಣದ ಪ್ರದೇಶದಲ್ಲಿ ಗಾಳಿಯನ್ನು ಸ್ವಚ್ಛ ಮಾಡುವ ಸಾಮರ್ಥ್ಯ ಈ ವಿಶೇಷ ಉಪಕರಣಕ್ಕಿದೆ. ನಾವು ಮತ್ತು ನಮ್ಮ ಪರಿಸರ ಸ್ವಚ್ಛವಾಗಿರಲು ಈ ಉಪಕರಣ ಮುಂದಿನ ದಿನಗಳಲ್ಲಿ ಕಾರಣವಾಗಬಹುದು.




## ಕ್ಷಣಗಳಲ್ಲೇ ಮಾಸ್ಕ್ ಸ್ವಚ್ಛ!

ಕೊರೊನಾ ಹಾವಳಿಯಿಂದಾಗಿ ಮಾಸ್ಕ್ ಇಲ್ಲದೆ ಮನೆಯಿಂದ ಹೊರಗಡೆ ಕಾಲಿಡುವ ಪರಿಸ್ಥಿತಿ ಇಲ್ಲ. ಬಳಕೆಗೊಂಡ ಮಾಸ್ಕ್‌ಗಳ ನಿರ್ವಹಣೆ ಕೂಡ ಹಲವು ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಹೀಗಾಗಿ ಬಳಸಿ ಬೀಸಾಡುವ ಮಾಸ್ಕ್‌ಗಳಿಗಿಂತ ಪುನರ್ಬಳಕೆಯಾಗುವಂಥ ಮಾಸ್ಕ್‌ಗಳಿಗೆ ಹೆಚ್ಚು ಬೇಡಿಕೆ ಇದೆ. ಆದರೆ ಪುರುಸೊತ್ತಿಲ್ಲದ ಹಲವರಿಗೆ ಇವನ್ನು ಸ್ವಚ್ಛಗೊಳಿಸಿಕೊಂಡು ಬಳಸಿಕೊಳ್ಳುವುದು ಸ್ವಲ್ಪ ಕಷ್ಟವೇ. ಈ ಸಮಸ್ಯೆಗೆ ಪರಿಹಾರವೆಂಬಂತೆ ‘ಶಾನಿಕೇಸ್’ ಹೆಸರಿನ ಹೊಸ ಬಗೆಯ ಉಪಕರಣವನ್ನು ತಯಾರಿಸಲಾಗಿದೆ. ನೋಡಲು ವಾಟರ್ ಬಾಟಲ್‌ನಂತೆ ಕಾಣುವ ಈ ಪರಿಕರದ ಮುಚ್ಚಳವನ್ನು ತೆಗೆದು, ಅದರೊಳಗೆ ಬಳಸಿದ ಮಾಸ್ಕ್ ಇಡಬೇಕು. ಬಳಿಕ ಸ್ವಿಚ್ ಆನ್ ಮಾಡಿದರೆ ಸಾಕು ಕ್ಷಣಗಳಲ್ಲೇ ಮಾಸ್ಕ್ ಸ್ವಚ್ಛವಾಗುತ್ತದೆ. ಈ ಪರಿಕರದಲ್ಲಿ ಬಿಡುಗಡೆಯಾಗುವ ನೇರಳಾತೀತ ಕಿರಣಗಳು ಮಾಸ್ಕ್ ಮೇಲಿರುವ ಕ್ರಿಮಿಗಳನ್ನು ಕೊಲ್ಲುತ್ತವೆ. ಕೇವಲ ಮಾಸ್ಕ್‌ಗಳಷ್ಟೇ ಅಲ್ಲದೆ, ಕರವಸ್ತ್ರಗಳನ್ನೂ ಇದರಲ್ಲಿ ಸ್ವಚ್ಛಮಾಡಿಕೊಳ್ಳಬಹುದು.



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



# ಅಭಿಮತ

### ಸುಭಾಷಿತ

ಭರವಸೆ ಮತ್ತು ಆಶಾವಾದವು ಬರೀ ಮನೋಭಾವಗಳಲ್ಲ, ಅವು ಜೀವನದ ಕಾರ್ಯತಂತ್ರಗಳೇ ಆಗಿವೆ.

–ಥಾಮಸ್ ಫ್ರೀಡ್‌ಮನ್

## ಕೋವಿಡ್ ತಡೆ ನಿರ್ಬಂಧ ರಾಜಕೀಯ ರ‍್ಯಾಲಿಗಳಿಗೆ ಅನ್ವಯಿಸದೇ?

**ಕೊರೊನಾ** ಸೋಂಕು ಹರಡುವುದನ್ನು ತಡೆಯಲು ಕೆಲವು ರಾಜ್ಯ ಸರ್ಕಾರಗಳು ಕೈಗೊಂಡಿರುವ ನಿರ್ಬಂಧ ಕ್ರಮಗಳ ಉದ್ದೇಶವೇ ಅನುಮಾನಾಸ್ಪದವಾಗಿದೆ. ಅದರಲ್ಲೂ ಉತ್ತರಪ್ರದೇಶ ಸರ್ಕಾರದ ನಡೆ 'ಹೇಳುವುದೊಂದು ಮಾಡುವುದೊಂದು' ಎನ್ನುವಂತಿದೆ. ಆ ರಾಜ್ಯದ ವಿವಿಧ ನಗರಗಳಲ್ಲಿ ಸರ್ಕಾರವು ರಾತ್ರಿ ಕರ್ಫ್ಯೂ ವಿಧಿಸಿದೆ. ಹೊಸ ವರ್ಷಾಚರಣೆಯ ಹಿನ್ನೆಲೆಯಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಸೇರುವುದರಿಂದ ಸೋಂಕು ಹರಡುತ್ತದೆ ಎನ್ನುವುದು ಸರ್ಕಾರದ ವಾದ. ಆದರೆ, ಆಡಳಿತಾರೂಢ ಬಿಜೆಪಿಯೇ ಮಂಗಳವಾರ ಕಾನ್ಪುರದಲ್ಲಿ ಬೃಹತ್ ರಾಜಕೀಯ ರ‍್ಯಾಲಿ ಏರ್ಪಡಿಸಿತ್ತು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ರ‍್ಯಾಲಿಯಲ್ಲಿ ಭಾಗವಹಿಸಿದ್ದರು. ಅಲ್ಲದೆ, ರ‍್ಯಾಲಿಗೆ ಕನಿಷ್ಠ 75 ಸಾವಿರ ಜನರನ್ನು ಕರೆತರಬೇಕೆಂದು ಸರ್ಕಾರದ ವಿವಿಧ ಇಲಾಖೆಗಳ ಮೇಲೆ ಜಿಲ್ಲಾ ಆಡಳಿತವು ಒತ್ತಡ ಹೇರಿ, ಅದಕ್ಕಾಗಿ ಅಧಿಕೃತ ಸುತ್ತೋಲೆಯನ್ನೇ ಹೊರಡಿಸಿತ್ತು ಎಂದು ವರದಿಯಾಗಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಈಚೆಗೆ ಪ್ರಯಾಗ್‌ರಾಜ್‌ನಲ್ಲಿ ನಡೆಸಿದ ರ‍್ಯಾಲಿಯಲ್ಲೂ ಸರ್ಕಾರಿ ನೌಕರರು ಪಾಲ್ಗೊಳ್ಳಬೇಕು ಎಂದು ಅಲ್ಲಿನ ಜಿಲ್ಲಾ ಆಡಳಿತ ಸೂಚಿಸಿತ್ತು. ಉತ್ತರಪ್ರದೇಶದಲ್ಲಿ ಪ್ರಧಾನಿ ಈಚೆಗೆ ಭಾಗವಹಿಸಿದ್ದ ವಿವಿಧ ಸಮಾವೇಶಗಳಲ್ಲೂ ಸರ್ಕಾರಿ ಅಧಿಕಾರಿಗಳೇ ಮುಂದೆ ನಿಂತು ಸಾವಿರಾರು ಜನರನ್ನು ಸೇರಿಸಿರುವುದು ವರದಿಯಾಗಿದೆ. ಹೀಗೆ ರಾಜಕೀಯ ರ‍್ಯಾಲಿಗೆ ಅಪಾರ ಸಂಖ್ಯೆಯಲ್ಲಿ ಜನರನ್ನು ಸೇರಿಸುವುದರಿಂದ ಕೊರೊನಾ ಇಲ್ಲವೇ ಓಮೈಕ್ರಾನ್ ಸೋಂಕು ಹರಡಲು ಆಡಳಿತ ಪಕ್ಷವೇ ಕಾರಣವಾದಂತೆ ಆಗುವುದಿಲ್ಲವೇ? ಅಥವಾ ರಾಜಕೀಯ ರ‍್ಯಾಲಿಗಳಿಂದ ಈ ಸೋಂಕು ಹರಡುವುದಿಲ್ಲ ಎಂದು ಸರ್ಕಾರವೇನಾದರೂ ಭಾವಿಸಿದೆಯೇ?

**ರಾಜಕೀಯ ರ‍್ಯಾಲಿಗಳು ಕೋವಿಡ್ ಕ್ಲಸ್ಟರ್‌ಗಳಾಗಿ ಸೋಂಕು ಹರಡುವಿಕೆ ವೇಗ ಪಡೆಯಲು ಕಾರಣವಾಗಬಾರದು**

ಒಂದೆಡೆ ಸೋಂಕು ತಡೆಯಲೆಂದು ಸರ್ಕಾರವು ನಿರ್ಬಂಧ ಹೇರಿ ಜನರ ಆರ್ಥಿಕ ಚಟುವಟಿಕೆಗಳನ್ನು ನಿಯಂತ್ರಿಸುತ್ತಿದೆ. ಇನ್ನೊಂದೆಡೆ ರಾಜಕೀಯ ಉದ್ದೇಶಕ್ಕಾಗಿ ಆಡಳಿತ ಪಕ್ಷವೇ ರ‍್ಯಾಲಿಗಳನ್ನು ಏರ್ಪಡಿಸಿ ಸಾವಿರಾರು ಜನರನ್ನು ಒಂದೆಡೆ ಸೇರಿಸುತ್ತಿದೆ. ಇದು, ಏನನ್ನು ಸೂಚಿಸುತ್ತದೆ? ಸೋಂಕು ತಡೆಯುವ ತನ್ನ ಪ್ರಯತ್ನಗಳಲ್ಲಿ ಸರ್ಕಾರ ಪ್ರಾಮಾಣಿಕವಾಗಿಲ್ಲ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಜನರ ಆರೋಗ್ಯದ ಮೇಲೆ ಏನೇ ದುಷ್ಪರಿಣಾಮವಾದರೂ ಪರವಾಗಿಲ್ಲ, ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಪಕ್ಷಕ್ಕೆ ಪೂರಕ ವಾತಾವರಣ ನಿರ್ಮಾಣ ಆಗಬೇಕು ಎನ್ನುವುದಷ್ಟೇ ಉತ್ತರಪ್ರದೇಶದ ಬಿಜೆಪಿ ನೇತೃತ್ವದ ಸರ್ಕಾರದ ಉದ್ದೇಶವಿದ್ದಂತಿದೆ. ಸರ್ಕಾರದ ಈ ವಿರೋಧಾಭಾಸದ ಕ್ರಮಗಳಿಂದಾಗಿ, ಜನಸಾಮಾನ್ಯರು ಕೂಡಾ ಓಮೈಕ್ರಾನ್ ಸೋಂಕು ತಡೆಗಾಗಿ ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳನ್ನು ಲಘುವಾಗಿ ಪರಿಗಣಿಸುವ ಪರಿಸ್ಥಿತಿ ಉಂಟಾಗಿದೆ. ಜನರ ಆರೋಗ್ಯದ ಜೊತೆ ಚೆಲ್ಲಾಟವಾಡುವ ಇಂತಹ ಎಡಬಿಡಂಗಿ ಕ್ರಮಗಳನ್ನು ಉತ್ತರಪ್ರದೇಶ ಸರ್ಕಾರ ತಕ್ಷಣ ನಿಲ್ಲಿಸಬೇಕು. 'ಚುನಾವಣೆ ಗೆಲ್ಲುವ ಸಲುವಾಗಿ ಆದಿತ್ಯನಾಥ ನೇತೃತ್ವದ ಸರ್ಕಾರವು ಆಡಳಿತ ಯಂತ್ರವನ್ನು ದುರುಪಯೋಗಪಡಿಸಿಕೊಂಡು ರಾಜಕೀಯ ರ‍್ಯಾಲಿಗಳನ್ನು ಆಯೋಜಿಸುತ್ತಿದೆ' ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಸಹಿತ ವಿರೋಧ ಪಕ್ಷಗಳ ಹಲವು ನಾಯಕರು ಕಿಡಿಕಾರಿದ್ದಾರೆ. ಬಿಜೆಪಿಯ ಸಂಸತ್ ಸದಸ್ಯರೇ ಆಗಿರುವ ವರುಣ್ ಗಾಂಧಿ ಅವರಂತೂ 'ರಾತ್ರಿ ಕರ್ಫ್ಯೂ ಹೇರುವುದು ಮತ್ತು ಹಗಲಿನಲ್ಲಿ ರ‍್ಯಾಲಿ ನಡೆಸಿ ಲಕ್ಷಾಂತರ ಜನರನ್ನು ಸೇರಿಸುವುದು ಸಾಮಾನ್ಯ ಜನರ ತರ್ಕಕ್ಕೆ ನಿಲುಕದು' ಎಂದು ಟೀಕಿಸಿದ್ದಾರೆ. ಸೋಂಕು ಗರಿಷ್ಠ ಪ್ರಮಾಣದಲ್ಲಿ ಹರಡುವುದು ಜನಸಂದಣಿ ಹೆಚ್ಚಿಗೆ ಇರುವ ಹಗಲಿನಲ್ಲೇ ವಿನಾ ರಾತ್ರಿ ವೇಳೆ ಅಲ್ಲ. ರಾತ್ರಿ ವೇಳೆ ಜನಸಂಚಾರ ಹೆಚ್ಚು ಇರುವುದಿಲ್ಲ. ಈ ರಾಜಕೀಯ ರ‍್ಯಾಲಿಗಳು ಕೋವಿಡ್ ಕ್ಲಸ್ಟರ್‌ಗಳಾಗಿ ಸೋಂಕು ಹರಡುವಿಕೆ ವೇಗ ಪಡೆಯಲು ಕಾರಣವಾಗಬಾರದು. ನಮ್ಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ನ್ಯೂನತೆಗಳು ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಬಯಲಾಗಿವೆ. ಚುನಾವಣೆ ಗೆಲ್ಲುವ ಏಕೈಕ ಉದ್ದೇಶದಿಂದ ಸರ್ಕಾರವೇ ಪುನಃ ಅಂತಹ ಅಪಾಯಕ್ಕೆ ಜನರನ್ನು ದೂಡುವುದು ಅಕ್ಷಮ್ಯ. ಜನರ ಆರೋಗ್ಯದ ಮೇಲೆ ಏನೇ ದುಷ್ಪರಿಣಾಮ ಉಂಟಾದರೂ ಪರವಾಗಿಲ್ಲ, ತಮ್ಮ ರಾಜಕೀಯ ಪ್ರಚಾರ ಯಾವುದೇ ಅಡೆತಡೆಯಿಲ್ಲದೆ ನಡೆಯಬೇಕು ಎಂದು ದೇಶದ ಪ್ರಧಾನಿ ಮತ್ತು ರಾಜ್ಯವೊಂದರ ಮುಖ್ಯಮಂತ್ರಿಯೇ ತಮ್ಮ ನಡವಳಿಕೆಯ ಮೂಲಕ ತೋರಿಸಿಕೊಡುತ್ತಿರುವುದು ಜನಪರ ನಾಯಕತ್ವದ ಲಕ್ಷಣವಲ್ಲ.

ಕರ್ನಾಟಕದಲ್ಲಿ 'ರಾತ್ರಿ ಕರ್ಫ್ಯೂ ಹೇರುವುದಿಲ್ಲ' ಎಂದು ವಾರದ ಹಿಂದೆ ಸಚಿವರೇ ಸ್ಪಷ್ಟಪಡಿಸಿದ್ದರು. ಈಗ ರಾಜ್ಯದಲ್ಲಿ ಹಠಾತ್ತನೆ ರಾತ್ರಿ ಕರ್ಫ್ಯೂ ಘೋಷಿಸಲಾಗಿದೆ. ಹೋಟೆಲ್ ಉದ್ಯಮದ ಮೇಲೆ ಕೆಲವು ನಿರ್ಬಂಧಗಳನ್ನು ಹೇರಲಾಗಿದೆ. ಹೊಸ ವರ್ಷ ಆಚರಣೆಯ ಸಂದರ್ಭದಲ್ಲಿ ನಡೆಯಬಹುದಾಗಿದ್ದ ವಹಿವಾಟಿನ ನಿರೀಕ್ಷೆಯಲ್ಲಿದ್ದ ಆತಿಥ್ಯ ಉದ್ಯಮವು ಸರ್ಕಾರದ ದಿಢೀರ್ ನಿರ್ಧಾರದಿಂದ ಕಂಗಾಲಾಗಿದೆ. ನೀತಿ ಆಯೋಗವು ಪ್ರಕಟಿಸಿರುವ 2019–20ನೇ ಸಾಲಿನ ಆರೋಗ್ಯ ಸೂಚ್ಯಂಕ ವರದಿಯನ್ನು ಗಮನಿಸಿದರೆ ಕರ್ನಾಟಕದ ಸಾರ್ವಜನಿಕ ಆರೋಗ್ಯ ಸ್ಥಿತಿ ಕುಸಿಯುತ್ತಿರುವುದನ್ನೂ ಕಾಣಬಹುದು. ಆರೋಗ್ಯ ಸೂಚ್ಯಂಕ ರ‍್ಯಾಂಕಿಂಗ್‌ನಲ್ಲಿ ಕೇರಳ, ತಮಿಳುನಾಡು, ತೆಲಂಗಾಣ, ಆಂಧ್ರ ಪ್ರದೇಶ ಅಗ್ರಸ್ಥಾನದಲ್ಲಿವೆ. ಕರ್ನಾಟಕದ ಸ್ಥಾನ ಹಿಂದಿನ ವರ್ಷ ಇದ್ದ 8ನೇ ರ‍್ಯಾಂಕ್‌ನಿಂದ 9ನೇ ರ‍್ಯಾಂಕ್‌ಗೆ ಕುಸಿದಿದೆ. ಉತ್ತರಪ್ರದೇಶವಂತೂ ದೊಡ್ಡ ರಾಜ್ಯಗಳ ರ‍್ಯಾಂಕಿಂಗ್ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದೆ. ರಾಜ್ಯ ಸರ್ಕಾರಗಳು ತಳೆಯುವ ಎಡಬಿಡಂಗಿ ನೀತಿಗಳ ದುಷ್ಪರಿಣಾಮವನ್ನು ಜನಸಾಮಾನ್ಯರು ಅನುಭವಿಸಬೇಕಾಗಿ ಬಂದಿರುವುದು ದಾರುಣ ಸಂಗತಿ.

'ಜಲ ಸುರಕ್ಷತೆ'ಗಾಗಿ ಅಣೆಕಟ್ಟುಗಳನ್ನು ಅತಿ ಎಚ್ಚರಿಕೆಯಿಂದ ಕಾಯ್ದುಕೊಳ್ಳಬೇಕಾದ ಜರೂರಿದೆ

# ಅಣೆಕಟ್ಟು ಸುರಕ್ಷತೆಗೆ ಶಾಸನದ ಬಲ

ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

**ನಮ್ಮ** ದೇಶಕ್ಕೆ ಸ್ವಾತಂತ್ರ್ಯ ಬಂದ ಏಳು ದಶಕಗಳ ನಂತರ, ಅಣೆಕಟ್ಟುಗಳ ಸುರಕ್ಷತೆಗೆ ಸಂಬಂಧಿಸಿದ ಮಸೂದೆಗೆ ಈ ತಿಂಗಳ ಪ್ರಾರಂಭದಲ್ಲಿ ರಾಜ್ಯಸಭೆ ಅನುಮೋದನೆ ನೀಡಿದೆ. 2019ರ ಆಗಸ್ಟ್ ತಿಂಗಳಿನಲ್ಲಿ ಇದನ್ನು ಲೋಕಸಭೆ ಅಂಗೀಕರಿಸಿತ್ತು. ರಾಷ್ಟ್ರಪತಿಯವರ ಅಂಕಿತದ ನಂತರ 'ಅಣೆಕಟ್ಟು ಸುರಕ್ಷತಾ ಅಧಿನಿಯಮ-2021' ವಿಧ್ಯುಕ್ತವಾಗಿ ಜಾರಿಗೆ ಬರಲಿದೆ.

ಕೇಂದ್ರೀಯ ಜಲ ಆಯೋಗದ ಮೂಲದಂತೆ, ನಮ್ಮ ದೇಶದಲ್ಲಿ 5,745 ಬೃಹತ್ ಅಣೆಕಟ್ಟುಗಳಿವೆ. ಇವುಗಳಲ್ಲಿ 100 ವರ್ಷ ಮೀರಿರುವ ಸುಮಾರು 400 ಅಣೆಕಟ್ಟುಗಳಿದ್ದು, ಅವುಗಳ ಸುರಕ್ಷತೆಯ ಬಗ್ಗೆ ಅತಿ ಹೆಚ್ಚಿನ ಕಾಳಜಿ ವಹಿಸಬೇಕಾದ ತುರ್ತು ಅಗತ್ಯವಿದೆ. ಇದಕ್ಕೆ ಕಾರಣ ಇದುವರೆವಿಗೂ ಸಂಭವಿಸಿರುವ ಬೃಹತ್ ಅಣೆಕಟ್ಟುಗಳ ಬಿರಿತ, ಕುಸಿತ, ಒಡೆತ ಮುಂತಾದ ವೈಫಲ್ಯಗಳ 40 ಗಂಭೀರ ಪ್ರಕರಣಗಳು.

1979ರಲ್ಲಿ ಗುಜರಾತ್‌ನ ಮೋರ್ವಿ ಪಟ್ಟಣದ ಸಮೀಪವಿರುವ ಮಚು ಅಣೆಕಟ್ಟು ಒಡೆದು 12,000 ಮನೆಗಳು ಕೊಚ್ಚಿಹೋಗಿ, ಸುಮಾರು 2,000 ಮಂದಿ ಸಾವನ್ನಪ್ಪಿದರು. ಈ ಭೀಕರ ಅವಘಡದ ನಂತರ ಎಚ್ಚೆತ್ತ ಹಲವಾರು ರಾಜ್ಯ ಸರ್ಕಾರಗಳು, ರಾಜ್ಯ ಮಟ್ಟದಲ್ಲಿ 'ಅಣೆಕಟ್ಟು ಸುರಕ್ಷತಾ ಸಂಸ್ಥೆ'ಗಳನ್ನು ಸ್ಥಾಪಿಸಿ ಸುರಕ್ಷತಾ ಕ್ರಮಗಳನ್ನು ಕೈಗೊಂಡವು. ಇಂದು 18 ರಾಜ್ಯಗಳಲ್ಲಿ ಅಲ್ಲದೆ, ನ್ಯಾಷನಲ್ ಹೈಡ್ರೊಎಲೆಕ್ಟ್ರಿಕ್ ಪವರ್ ಕಾರ್ಪೊರೇಷನ್, ಭಾಕ್ರಾ- ಬಿಯಾಸ್, ದಾಮೋದರ್ ವ್ಯಾಲಿ, ಕೇರಳ ರಾಜ್ಯ ವಿದ್ಯುತ್ ಮಂಡಳಿ ಮತ್ತು ಉತ್ತರಾಖಂಡ ಜಲವಿದ್ಯುತ್ ನಿಗಮಗಳಲ್ಲಿ ಅಣೆಕಟ್ಟು ಸುರಕ್ಷತಾ ಸಂಸ್ಥೆಗಳು ಅಸ್ತಿತ್ವದಲ್ಲಿದ್ದರೂ ಅವುಗಳ ಕೆಲಸ ಕಾರ್ಯಗಳಲ್ಲಿ ಅನೇಕ ಕೊರತೆಗಳಿವೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಸಂಸ್ಥೆಗಳು ಸಲಹೆಗಳನ್ನು ನೀಡಬಹುದೇ ವಿನಾ ಅಣೆಕಟ್ಟುಗಳ ಸುರಕ್ಷತೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಅಧಿಕಾರ ಅವುಗಳಿಗಿಲ್ಲ.

ಬೃಹತ್ ಅಣೆಕಟ್ಟುಗಳ ಸುರಕ್ಷತೆಗೆ ಅಗತ್ಯವಾದ ವಿಧಿವಿಧಾನಗಳನ್ನು ರೂಪಿಸುವ ಉದ್ದೇಶದಿಂದ 2010ರಲ್ಲಿ, ಅಂದಿನ ಯುಪಿಎ ಸರ್ಕಾರವು ಲೋಕಸಭೆಯಲ್ಲಿ ಮಸೂದೆಯೊಂದನ್ನು ಮಂಡಿಸಿತು. ಮುಂದೆ ಅದು ಸ್ಥಾಯಿ ಸಮಿತಿಯ ಪರಿಶೀಲನೆಗೆ ಒಳಗಾಗಿ, ಅನೇಕ ತಿದ್ದುಪಡಿಗಳೊಂದಿಗೆ ಲೋಕಸಭೆಯಲ್ಲಿ ಮಂಡಿತಗೊಂಡರೂ 2014ರಲ್ಲಿ 15ನೆಯ ಲೋಕಸಭೆಯ ಅವಧಿ ಮುಗಿದ ಕಾರಣ ಮಸೂದೆಯ ಕಾಲಾವಧಿಯೂ ಕೊನೆಗೊಂಡಿತು. ಅಂದಿನ ಮಸೂದೆಯಲ್ಲಿದ್ದ ಎಲ್ಲ ಅಂಶಗಳ ಜೊತೆಗೆ ಮತ್ತಷ್ಟನ್ನು ಒಳಗೊಂಡಿರುವ ಹೊಸ ಮಸೂದೆಯು ಲೋಕಸಭೆ, ರಾಜ್ಯಸಭೆಯಲ್ಲಿ ಅನುಮೋದನೆಗೊಂಡು ರಾಷ್ಟ್ರಪತಿ ಅಂಕಿತಕ್ಕೆ ಕಾದಿದೆ. ಅಣೆಕಟ್ಟುಗಳ ಸುರಕ್ಷತೆಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಿರ್ದಿಷ್ಟ ಹಾಗೂ ಸ್ಪಷ್ಟವಾದ ಜವಾಬ್ದಾರಿಗಳನ್ನು ನೀಡಲು ಅಗತ್ಯವಾದ ಕಾನೂನು ಮತ್ತು ಸಾಂಸ್ಥಿಕ ಚೌಕಟ್ಟನ್ನು ಈ ಅಧಿನಿಯಮ ಒದಗಿಸಲಿದೆ. ಅಣೆಕಟ್ಟುಗಳ ವೈಫಲ್ಯದಿಂದಾಗುವ ಅವಘಡಗಳನ್ನು ತಡೆಯಲು ಬೃಹತ್ ಅಣೆಕಟ್ಟುಗಳ ಮೇಲೆ ಕಣ್ಗಾವಲು, ಪರಿಶೀಲನೆ, ದಿನನಿತ್ಯದ ಕಾರ್ಯಾಚರಣೆ, ನಿರ್ವಹಣೆಗೆ ಅಗತ್ಯವಾದ ಎಲ್ಲ ವ್ಯವಸ್ಥೆಗಳನ್ನೂ ಕಲ್ಪಿಸಲಿದೆ.

ಕೇಂದ್ರದ ಹಂತದಲ್ಲಿ 'ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಸಮಿತಿ' ಮತ್ತು 'ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಪ್ರಾಧಿಕಾರ' ಎಂಬ ಎರಡು ಸಂಸ್ಥೆಗಳು ರಚನೆಯಾಗಲಿವೆ. ರಾಷ್ಟ್ರೀಯ ಸಮಿತಿ, ಅಣೆಕಟ್ಟುಗಳ ಸುರಕ್ಷತೆಗೆ ಸಂಬಂಧಿಸಿದ ನೀತಿ-ನಿಲುವುಗಳು, ವಿಧಿವಿಧಾನಗಳು, ಸುರಕ್ಷತೆ ಮತ್ತು ಅವಘಡ ನಿಯಂತ್ರಣಗಳಿಗೆ ಅಗತ್ಯವಾದ ಮಾರ್ಗದರ್ಶಿ ಸೂತ್ರಗಳನ್ನು ಸಿದ್ಧಪಡಿಸಲಿದೆ. ರಾಷ್ಟ್ರೀಯ ಸುರಕ್ಷತಾ ಪ್ರಾಧಿಕಾರ ಈ ಎಲ್ಲ ನೀತಿ ನಿಯಮಗಳನ್ನು ಅನುಷ್ಠಾನಗೊಳಿಸಲಿದೆ. ಈ ಸಂಬಂಧ ಪ್ರಾಧಿಕಾರ ನೀಡುವ ಆದೇಶ ಎಲ್ಲ ರಾಜ್ಯ ಸರ್ಕಾರಗಳಿಗೂ ಕಡ್ಡಾಯವಾಗಿ ಅನ್ವಯವಾಗಲಿದೆ. ಇದೇ ರೀತಿ ರಾಜ್ಯ ಮಟ್ಟದಲ್ಲೂ 'ರಾಜ್ಯ ಅಣೆಕಟ್ಟು ಸುರಕ್ಷತಾ ಸಂಸ್ಥೆ' ಮತ್ತು ರಾಜ್ಯ ಅಣೆಕಟ್ಟು ಸುರಕ್ಷತಾ ಸಮಿತಿ ಅಸ್ತಿತ್ವಕ್ಕೆ ಬರಲಿವೆ. ಇವುಗಳ ಕರ್ತವ್ಯಗಳನ್ನು ಸ್ಪಷ್ಟವಾಗಿ ನಿರೂಪಿಸಲಾಗಿದ್ದು, ಒಟ್ಟಾರೆಯಾಗಿ ಅವು ರಾಜ್ಯದ ವ್ಯಾಪ್ತಿಯಲ್ಲಿನ ಅಣೆಕಟ್ಟುಗಳ ನಿಗಾವಣೆ, ಕಾರ್ಯಾಚರಣೆ, ನಿರ್ವಹಣೆಯ ಜವಾಬ್ದಾರಿಗಳನ್ನು ನಿರ್ವಹಿಸಲಿವೆ.

ದೇಶದಲ್ಲಿ 15 ಮೀಟರ್‌ಗಳಿಗಿಂತ ಎತ್ತರವಿರುವ ಅಥವಾ 10-15 ಮೀಟರ್‌ಗಳಷ್ಟು ಎತ್ತರವಿದ್ದು, ಕನಿಷ್ಠ 10 ಲಕ್ಷ ಘನ ಮೀಟರ್‌ಗಳಷ್ಟು ನೀರನ್ನು ಸಂಗ್ರಹಿಸಬಲ್ಲ ಅಣೆಕಟ್ಟುಗಳನ್ನು ಬೃಹತ್ ಅಣೆಕಟ್ಟುಗಳೆಂದು ವರ್ಗೀಕರಿಸಲಾಗಿದೆ. ಈ ಅಧಿನಿಯಮವು ದೇಶದ ಅಂತಹ ಎಲ್ಲ ಅಣೆಕಟ್ಟುಗಳಿಗೆ ಅನ್ವಯವಾಗಲಿದೆ. ಅವುಗಳ ಸುರಕ್ಷತೆಗೆ ಇದುವರೆಗೆ ನೀತಿ ನಿಯಮಗಳೇ ಇರಲಿಲ್ಲವೆಂದಲ್ಲ. ವರ್ಷದಲ್ಲಿ ಎರಡು ಬಾರಿ, ಮಳೆಗಾಲದ ಮೊದಲು ಮತ್ತು ಆನಂತರ ಅಣೆಕಟ್ಟುಗಳ ವಿವರವಾದ ಪರೀಕ್ಷೆ, ಕೋಡಿಯ ವ್ಯವಸ್ಥೆ, ಅಣೆಕಟ್ಟೆಯಲ್ಲಿರುವ ಸುರಂಗ, ಕೊಳವೆ ಮಾರ್ಗ, ವಿದ್ಯುದುತ್ಪಾದನೆಗೆ ನೀರು ಹಾಯಿಸುವ ಪೈಪುಗಳು, ತೂಬು ಗೇಟುಗಳು, ನಿಗಾವಣೆಯ ಸಾಧನಗಳ ಸ್ಥಿತಿಗತಿ, ಇಡೀ ಅಣೆಕಟ್ಟೆಯ ಆರೋಗ್ಯ, ತುರ್ತು ಕಾರ್ಯಾಚರಣೆಯ ಯೋಜನೆಗಳು ಮುಂತಾದ ಎಲ್ಲ ಅಂಶಗಳನ್ನೂ ವ್ಯವಸ್ಥಿತವಾಗಿ ಮಾಡಬೇಕಾದ ಕ್ರಮವನ್ನು 'ಅಣೆಕಟ್ಟು ಪುನರ್ವಸತೀಕರಣ ಮತ್ತು ಸುಧಾರಣಾ ಕೈಪಿಡಿ'ಯಲ್ಲಿ ಸ್ಪಷ್ಟವಾಗಿ ನಿರೂಪಿಸಲಾಗಿದೆ. ವರ್ಷದಲ್ಲಿ ಎರಡು ಬಾರಿ ಇಂತಹ ಪರೀಕ್ಷೆ ನಡೆಸಿ ವರದಿಯನ್ನು ಕೇಂದ್ರೀಯ ಜಲ ಆಯೋಗಕ್ಕೆ ಸಲ್ಲಿಸಬೇಕು. ಆದರೆ ಬಹುತೇಕ ರಾಜ್ಯಗಳು ಇಂತಹ ವಿವರವಾದ ಸುರಕ್ಷತಾ ಪರಿಶೀಲನೆ ಕೈಗೊಳ್ಳುವುದೂ ಇಲ್ಲ, ವರದಿಯನ್ನು ಸಲ್ಲಿಸುವುದೂ ಇಲ್ಲವೆನ್ನುವುದು, ಇಂತಹ ವರದಿಗಳನ್ನು ಪರಿಶೀಲಿಸುವ ಭಾರತದ ಮಹಾಲೇಖಪಾಲರ ಕಟುವಾದ ಟೀಕೆ. ಅಣೆಕಟ್ಟುಗಳ ಸುರಕ್ಷತೆಗೆ ಸಂಬಂಧಿಸಿದ ಈ ನಿರಾಶಾದಾಯಕ ಪರಿಸ್ಥಿತಿಯು 2021ರ ಅಧಿನಿಯಮ ಜಾರಿಗೆ ಬಂದ ನಂತರ ನಿಧಾನವಾಗಿಯಾದರೂ ಬದಲಾಗುವ ನಿರೀಕ್ಷೆಯಿದೆ.

2021ರ ಅಣೆಕಟ್ಟು ಸುರಕ್ಷತಾ ಮಸೂದೆಯನ್ನು ಕೆಲ ರಾಜ್ಯಗಳು ವಿರೋಧಿಸಿದ್ದು ಉಂಟು. ಈ ವಿರೋಧಕ್ಕೆ ಮುಖ್ಯವಾಗಿ ಎರಡು ಕಾರಣಗಳಿವೆ. ರಾಜ್ಯದ ಭೌಗೋಳಿಕ ವ್ಯಾಪ್ತಿಯಲ್ಲಿರುವ ಅಣೆಕಟ್ಟುಗಳ ಸುರಕ್ಷತೆ, ನಿರ್ವಹಣೆಗೆ ಸಂಬಂಧಿಸಿದಂತೆ ಶಾಸನಗಳನ್ನು ಮಾಡುವ ರಾಜ್ಯಗಳ ಹಕ್ಕು, ಅಧಿಕಾರಗಳನ್ನು ಈ ಮಸೂದೆಯು ಮೊಟಕುಗೊಳಿಸುತ್ತದೆ ಎಂಬುದು ಮೊದಲನೆಯ ದೂರು. ಆದರೆ ದೇಶದ ಅಣೆಕಟ್ಟುಗಳ ಒಟ್ಟಾರೆ ಸುರಕ್ಷತೆಯ ದೃಷ್ಟಿಯಿಂದ ಇಂತಹ ಶಾಸನವನ್ನು ಮಾಡುವ ಸಂವಿಧಾನಾತ್ಮಕ ಅಧಿಕಾರ ತನಗಿದೆಯೆಂಬುದನ್ನು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ. ಇನ್ನೊಂದು ಕಾರಣವೆಂದರೆ, ಕೆಲವು ಅಣೆಕಟ್ಟುಗಳಿಗೆ ಸಂಬಂಧಿಸಿದಂತೆ ಇರುವ ವಿಚಿತ್ರ ಪರಿಸ್ಥಿತಿ. ಮುಲ್ಲಪೆರಿಯಾರ್ ಇದಕ್ಕೊಂದು ಉದಾಹರಣೆ.

ಮುಲ್ಲಪೆರಿಯಾರ್, 1887- 1895ರ ನಡುವೆ ಕೇರಳದ ಇಡುಕ್ಕಿ ಜಿಲ್ಲೆಯಲ್ಲಿ ಪೆರಿಯಾರ್ ನದಿಗೆ ಅಡ್ಡವಾಗಿ ಕಟ್ಟಿದ ಅಣೆಕಟ್ಟು. 1886ರಲ್ಲಿ ಬ್ರಿಟಿಷ್ ಆಡಳಿತವಿದ್ದ ಮದ್ರಾಸ್ ಪ್ರಾಂತ್ಯ ಮತ್ತು ಟ್ರಾವಂಕೂರ್ ಮಹಾರಾಜರ ನಡುವೆ ಏರ್ಪಟ್ಟ, ಇಂದಿಗೂ ಜೀವಂತವಾಗಿರುವ ಒಪ್ಪಂದದ ಪ್ರಕಾರ, ಮುಲ್ಲಪೆರಿಯಾರ್ ಕೇರಳದಲ್ಲಿದ್ದರೂ ಇಂದಿಗೂ ಅದರ ನಿರ್ವಹಣೆಯ ಜವಾಬ್ದಾರಿ ತಮಿಳುನಾಡಿನದು. ಹೀಗಾಗಿ ಇದು ಎರಡು ರಾಜ್ಯಗಳ ನಡುವೆ ನಿರಂತರವಾದ ವ್ಯಾಜ್ಯಕ್ಕೆ ಕಾರಣವಾಗಿದೆ. ಹೊಸ ಶಾಸನ ಜಾರಿಗೆ ಬಂದ ನಂತರ, ಮುಲ್ಲಪೆರಿಯಾರ್ ಅಣೆಕಟ್ಟೆಯ ಸುರಕ್ಷತೆ, ದಿನನಿತ್ಯದ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಪ್ರಾಧಿಕಾರ ನಡೆಸುತ್ತದೆ. ಈ ಜವಾಬ್ದಾರಿಯಲ್ಲಿ ಕೇರಳ ಮತ್ತು ತಮಿಳುನಾಡಿಗೆ ಯಾವ ಪಾತ್ರವೂ ಇರುವುದಿಲ್ಲ. ತಮಿಳುನಾಡಿನ ಒಡೆತನದ, ಆದರೆ ಕೇರಳದಲ್ಲಿರುವ ಪರಂಬಿಕುಲಮ್, ತುನಕಡವು ಮತ್ತು ಪೆರುವರಿಪಲ್ಲಮ್ ಅಣೆಕಟ್ಟುಗಳದ್ದೂ ಇದೇ ಕಥೆ. ಪಶ್ಚಿಮ ಬಂಗಾಳ, ಒಡಿಶಾ ಮತ್ತು ಜಾರ್ಖಂಡ್ ರಾಜ್ಯಗಳಲ್ಲೂ ಈ ರೀತಿಯ ಅಣೆಕಟ್ಟುಗಳಿವೆ. ಹೀಗಾಗಿ ಈ ಎಲ್ಲ ರಾಜ್ಯಗಳೂ ಈ ಮಸೂದೆಯನ್ನು ವಿಶೇಷವಾಗಿ ವಿರೋಧಿಸಿದ್ದವು.

ಅಮೆರಿಕ, ಚೀನಾದ ನಂತರ ಅತಿ ಹೆಚ್ಚು ಅಣೆಕಟ್ಟುಗಳನ್ನು ಹೊಂದಿರುವ ಭಾರತ, ಅಣೆಕಟ್ಟುಗಳ ಸುರಕ್ಷತೆಯ ದೃಷ್ಟಿಯಿಂದ ಮಾಡಬೇಕಿರುವ ಕೆಲಸಗಳು ಬಹಳಷ್ಟಿವೆ. ನೀರಿನ ಕೊರತೆ ನಿರಂತರವಾಗಿ ಏರುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ, ಪ್ರಜೆಗಳಿಗೆ 'ಜಲ ಸುರಕ್ಷತೆ'ಯ ಭರವಸೆ ನೀಡಿರುವ ಸರ್ಕಾರ, ಸಣ್ಣ, ಮಧ್ಯಮ, ಬೃಹತ್ ಅಣೆಕಟ್ಟುಗಳೆಲ್ಲವನ್ನೂ ಅತಿ ಹೆಚ್ಚಿನ ಮುತುವರ್ಜಿ, ಎಚ್ಚರಿಕೆಗಳಿಂದ ಕಾಯ್ದುಕೊಳ್ಳಬೇಕಾಗಿದೆ. ಹೊಸ ಮಸೂದೆ ದೀರ್ಘಾವಧಿಯಲ್ಲಿ ಈ ಉದ್ದೇಶ ಸಾಧನೆಗೆ ಎಷ್ಟರಮಟ್ಟಿಗೆ ನೆರವಾಗಲಿದೆಯೆಂಬುದನ್ನು ಕಾದು ನೋಡಬೇಕು.

## ಚುರುಮುರಿ

### ಸರಿಗನ್ನಡಂ...

• ಮಣ್ಣೆರಾಜು

'ಹೊಸ ವರ್ಷದ ನಿನ್ನ ಹೊಸ ಸಂಕಲ್ಪ ಏನು?' ಶಂಕ್ರಿ ಕೇಳಿದ.

'ನಮ್ಮನೆಗೆ ಹಾಲು ಕೊಡುವ ಹಾಲಮ್ಮನಿಗೆ ಸ್ವಚ್ಛ ಕನ್ನಡ ಕಲಿಸಲು ತೀರ್ಮಾನ ಮಾಡಿದ್ದೇನೆ' ಅಂದಳು ಸುಮಿ.

'ಹಾಲಮ್ಮ ಅಚ್ಚಗನ್ನಡತಿ. ಆಕೆಗೆ ಕನ್ನಡ ಬಿಟ್ಟು ಬೇರೆ ಭಾಷೆ ಗೊತ್ತಿಲ್ಲ. ಅದರ ಬದಲು ಗಣಿತ ಕಲಿಸು, ಹಾಲಿನ ಲೆಕ್ಕ ಹಾಕಲು ಅನುಕೂಲವಾಗುತ್ತದೆ'.

'ಹಾಲಮ್ಮ ಅನ್ನುವ ತನ್ನ ಹೆಸರನ್ನೇ ಆಲಮ್ಮ ಅಂತ ತಪ್ಪಾಗಿ ಬರೆಯುತ್ತಾಳೆ ಕಣ್ರೀ, ಕೇಳಿದ್ರೆ, ಆಲಮ್ಮ ಅನ್ನೋದು ನಮ್ಮ ಮನೆ ದೇವರ ಹೆಸರು ಅಂತಾಳೆ'.

'ಹಾಗಂತ, ಅವರ ಮನೆ ದೇವರ ಹೆಸರನ್ನು ತಿದ್ದುಪಡಿ ಮಾಡ್ತೀಯಾ?'

'ಅಷ್ಟೇ ಅಲ್ಲಾರೀ, ಹಾಲನ್ನು ಆಲು ಅಂತಾಳೆ. ಹಸುವನ್ನು ಅಸು ಎಂದು ಕರೆಯುತ್ತಾಳೆ'.

'ಹಾಲಮ್ಮನ ಭಾಷೆ ಹಸುವಿಗೆ ಅರ್ಥ ಆಗುತ್ತೆ. ಹಾಲಮ್ಮ ಕರೆದರೆ ಹಸುನೂ ಬರುತ್ತೆ, ಅದರ ಹಾಲೂ ಬರುತ್ತದೆ ಬಿಡು'.

'ಕನ್ನಡದ ಉಚ್ಚಾರಣೆ ಸ್ವಚ್ಛವಾಗಿರಬೇಕು ಅಲ್ವೇನ್ರೀ?'

'ಇರಬೇಕು, ಏನು ಮಾಡೋದು. ಕೊರೊನಾವನ್ನು ಕೊರಾನ, ಕರೋನ ಅಂತ, ಅದರ ರೂಪಾಂತರಿ ವೈರಸ್ಸನ್ನು ಓಮೈಕ್ರಾನ್, ಒಮಿಕ್ರಾನ್, ಒಮೈಕ್ರೋನ್ ಅಂತ ಒಬ್ಬೊಬ್ಬರು ಒಂದೊಂದು ರೀತಿ ಉಚ್ಚರಿಸುತ್ತಾರೆ. ಉಚ್ಚಾರಣೆ ವ್ಯತ್ಯಾಸವಾದರೂ ರೋಗ ಬಾಧೆಯಲ್ಲಿ ವ್ಯತ್ಯಾಸವಾಗದು'.

'ಅವು ಇಂಗ್ಲಿಷ್ ಪದಗಳು, ಹೇಗಾದರೂ ಕರೆದುಕೊಳ್ಳಲಿ, ನಮ್ಮ ಕನ್ನಡ ಸ್ವಚ್ಛವಾಗಿರಬೇಕು ಕಣ್ರೀ. ಕನ್ನಡಿಗರೇ ಕನ್ನಡವನ್ನು ನೆಟ್ಟಗೆ ಮಾತನಾಡದಿದ್ದರೆ ಪರಭಾಷಿಗರು ಸ್ವಚ್ಛಗನ್ನಡ ಮಾತನಾಡಲು ಸಾಧ್ಯನಾ?'

'ಹಾಗಂತ ಹಾಲಮ್ಮನ ಕನ್ನಡ ತಿದ್ದಲು ಹೋಗಬೇಡ, ಅದು ಆಕೆಯ ನುಡಿಗನ್ನಡ, ಮನೆಗನ್ನಡ. ಅದರಿಂದ ಕನ್ನಡಕ್ಕೇನೂ ಹಾನಿಯಾಗುವುದಿಲ್ಲ... ಕಿಚನ್, ಬಾತ್‌ರೂಂ, ಲಂಚ್, ವಾಟರ್, ರೈಸ್, ವೆಜಿಟೆಬಲ್ಸ್ ಅನ್ನು ಕನ್ನಡ ಪದಗಳು ಅಂದುಕೊಂಡು ಮಾತನಾಡುವ ನಮ್ಮ ಮಕ್ಕಳ ಭಾಷೆ ಬದಲಾಯಿಸು. ಮನೆಯಿಂದಲೇ ಸರಿಗನ್ನಡ ಶುರುವಾಗಲಿ' ಎಂದ ಶಂಕ್ರಿ.

## ದಿನದ ಟ್ವೀಟ್

### ಜೀವಜಲದ ಬಗ್ಗೆ ನಿರ್ಲಕ್ಷ್ಯವೇಕೆ?

ಭಾರತದ 18 ರಾಜ್ಯಗಳಲ್ಲಿನ ಶೇ 77ರಷ್ಟು ಪ್ಯಾಕೇಜ್ಡ್ ಕುಡಿಯುವ ನೀರಿನ ಘಟಕಗಳು ನಿರಾಕ್ಷೇಪಣಾ ಪ್ರಮಾಣಪತ್ರಗಳಿಲ್ಲದೇ ಕಾರ್ಯ ನಿರ್ವಹಿಸುತ್ತಿವೆ.

**ರಂಜನ್ ಪಾಂಡಾ,** ಸಂಶೋಧಕ, ಪರಿಸರ ಕಾರ್ಯಕರ್ತ

## ಕಿಡಿನುಡಿ

ಎಲ್ಲ ಉಪದೇಶಗಳನ್ನೂ ಯಾವಾಗಲೂ ಬರೀ ಹುಡುಗಿಯರಿಗೇ ನೀಡುವುದೇಕೆ? ಸಂತ್ರಸ್ತರಿಗೆ ಬದಲಾಗಿ ಕಿರುಕುಳ ನೀಡುವವರಿಗೆ ಪಾಠ ಕಲಿಸಬೇಕಾದ ಸಮಯ ಇದಾಗಿದೆ. ಜೆಎನ್‌ಯು ಹೊರಡಿಸಿರುವ ಸ್ತ್ರೀದ್ವೇಷದ ಸುತ್ತೋಲೆಯನ್ನು ವಾಪಸ್ ಪಡೆಯಬೇಕು. ಆಂತರಿಕ ದೂರು ಸಮಿತಿಯ ನಿಲುವು ಸಂತ್ರಸ್ತಕೇಂದ್ರಿತ ಆಗಿರಬೇಕೇ ವಿನಾ ಇತರ ವಿಷಯಗಳ ಬಗ್ಗೆ ಅಲ್ಲ.

**ರೇಖಾ ಶರ್ಮಾ,** ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ

## 25 ವರ್ಷಗಳ ಹಿಂದೆ

ಭಾನುವಾರ, 29-12-1996

• **ಕೆಎಸ್‌ನಗೆ ಪಂಪ ಪ್ರಶಸ್ತಿ ಪ್ರದಾನ**

**ಬನವಾಸಿ, ಡಿ. 28–** ಕಾವ್ಯವು ಕವಿಯ ಕಾಲಮಾನದಲ್ಲಿ ಹುಟ್ಟಿದ ಅಮೂಲ್ಯ ಮತ್ತು ಸುಂದರ ಭಾವನೆಗಳನ್ನು ಒಳಗೊಂಡಿರುತ್ತದೆ. ಕಾರಣ, ನಾವು ಕಾವ್ಯವನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅಭಿಪ್ರಾಯಪಟ್ಟರು.

1995ರ ಪಂಪ ಪ್ರಶಸ್ತಿಯನ್ನು ನಾಡಿನ ಹಿರಿಯ ಕವಿಗಳಾದ ಡಾ. ಕೆ.ಎಸ್. ನರಸಿಂಹಸ್ವಾಮಿ ಅವರ 'ದುಂಡು ಮಲ್ಲಿಗೆ' ಕವನ ಸಂಕಲನಕ್ಕೆ ನೀಡಿ ಇಂದು ಗೌರವಿಸಲಾಯಿತು. ಪಟೇಲ್ ಅವರು ನರಸಿಂಹಸ್ವಾಮಿ ಅವರಿಗೆ ಶಾಲು ಮತ್ತು ಪ್ರಶಸ್ತಿಪತ್ರ ನೀಡಿ ಗೌರವಿಸಿದರು.

• **ಸಿಪಿಪಿ ನಾಯಕತ್ವಕ್ಕೆ ಸ್ಪರ್ಧೆ ರಾವ್ ಬಣದ ಪಟ್ಟು**

**ನವದೆಹಲಿ, ಡಿ. 28 (ಪಿಟಿಐ, ಯುಎನ್‌ಐ)–** ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕನ ಸ್ಥಾನಕ್ಕೆ ಚುನಾವಣೆಯೇ ನಡೆಯಬೇಕು ಎಂದು ನರಸಿಂಹ ರಾವ್ ಬಣದ ಹತ್ತು ಸಂಸತ್ ಸದಸ್ಯರು ಹಾಗೂ ಕಾರ್ಯಕಾರಿಣಿ ಸದಸ್ಯ ರಾಜೇಶ್ ಪೈಲಟ್ ಅವರು ಇಂದು ಪ್ರತ್ಯೇಕ ಹೇಳಿಕೆ ನೀಡಿದ್ದು, ಸರ್ವಾನುಮತದ ಆಯ್ಕೆಯ ಯತ್ನಗಳಿಗೆ ಹಿನ್ನಡೆ ಉಂಟಾಗಿದೆ.

## 50 ವರ್ಷಗಳ ಹಿಂದೆ

ಬುಧವಾರ, 29-12-1971

• **ಹಠಾತ್ ಪಾಕ್ ಷೆಲ್ ದಾಳಿ ಭೀಕರ ಕದನ**

**ಜೈಪುರ, ಡಿ. 28–** ರಾಜಸ್ಥಾನದಲ್ಲಿ ಗಂಗಾನಗರ ವಿಭಾಗದ ನಗ್ಗಿ ಪ್ರದೇಶದಲ್ಲಿ ಇಂದು ಭಾರತ ಮತ್ತು ಪಾಕಿಸ್ತಾನದ ಸೇನೆಗಳ ನಡುವೆ ಭೀಕರ ಘರ್ಷಣೆ ಸಂಭವಿಸಿ, ಭಾರತೀಯ ಸೇನೆಯ ಇಬ್ಬರು ಮೇಜರ್‌ಗಳು ಮತ್ತು 6 ಮಂದಿ ಯೋಧರು ಸೇರಿ ಒಟ್ಟು 8 ಮಂದಿ ಸತ್ತರೆಂದು ಅಧಿಕೃತ ಮೂಲಗಳು ತಿಳಿಸಿವೆ.

ಡಿ. 17ರಂದು ಕದನವಿರಾಮ ಏರ್ಪಟ್ಟ ನಂತರ ಉಭಯ ಸೇನೆಗಳ ನಡುವೆ ನಡೆದ ಮೊತ್ತಮೊದಲ ಭೀಕರ ಹೋರಾಟ ಇದು.

• **ಅಧೈರ್ಯದ ಅವಿವೇಕ**

**ಚಂಡೀಗಡ, ಡಿ. 28–** ಕೆಲವು ಬಾರಿ ಮಿತಿ ಮೀರಿದ ಸಹಾಯ ಪ್ರವೃತ್ತಿ ಜನತೆಯ ಧೈರ್ಯ ಗುಂದಿಸಬಹುದು.

ಯುದ್ಧ ನಡೆಯುತ್ತಿದ್ದಾಗ ಅಮೃತಸರದಲ್ಲಿ ಇಂಥ ಘಟನೆ ನಡೆದಿದೆ. ನಮ್ಮ ಯೋಧರು ಗಡಿಯಲ್ಲಿ ಪಾಕಿಸ್ತಾನಿ ಸೈನ್ಯಕ್ಕೆ ಭಯಂಕರ ಪೆಟ್ಟು ಕೊಡುತ್ತಿದ್ದಾಗ ಇತ್ತ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಅಮೃತಸರ ಶಾಖೆಯ ಅಧಿಕಾರಿಯೊಬ್ಬರು ಸ್ಥಳೀಯ ವ್ಯಕ್ತಿಯೊಬ್ಬರಿಗೆ ಬ್ಯಾಂಕಿನ ಲಾಕರ್‌ನಲ್ಲಿಟ್ಟಿರುವ 'ನಿಮ್ಮ ಸಂಪತ್ತನ್ನು ತೆಗೆದುಕೊಂಡು ಹೋಗಿ, ಅದರಲ್ಲಿರುವ ಹಣ ಅಥವಾ ಒಡವೆ ವಸ್ತುಗಳು ಹಾಳಾದಲ್ಲಿ ನಾವು ಜವಾಬ್ದಾರರಲ್ಲ' ಎಂದು ಸಲಹೆ ಮಾಡಿದರು.

ಇದರಿಂದ ಬ್ಯಾಂಕಿನ ಲಾಕರ್ ಸೌಲಭ್ಯ ಪಡೆದಿದ್ದ ಖಾತೆದಾರನಿಗೆ ಚಿಂತೆ ಹತ್ತಿತ್ತು. ಏನಾದರಾಗಲಿ ಅಮೃತಸರದ ಹೊರಕ್ಕೆ ನನ್ನ ಸಂಪತ್ತನ್ನು ವರ್ಗಾಯಿಸುವುದಿಲ್ಲ ಎಂದು ಆಖೈರು ನಿರ್ಧಾರ ತಾಳಿದ.

## ಸಂಗತ

# 'ಹೊಸತು' ಎಂಬ ಪುಳಕ

ಕಷ್ಟಗಳು ಬಾರದೆ ವರ್ಷಪೂರ್ತಿ ಸುಖ, ಸಮೃದ್ಧಿಯೇ ಇಟ್ಟಾಡಲಿ ಎಂಬ ಹಾರೈಕೆ ಸರಿಯೇ?

• ಬಿ.ಎಸ್.ಭಗವಾನ್

'ನಿಮ್ಮ ಮುಂದಿನ ಜೀವನ ಸಂತೋಷದಾಯಕವಾಗಿರಲಿ'- ಪ್ರಸಕ್ತ ವರ್ಷ ಸಂಪನ್ನಗೊಳ್ಳಲು ಇನ್ನೂ ವಾರವಿರುವಾಗಲೇ ನನ್ನ ಮಿತ್ರರೊಬ್ಬರಿಗೆ ಬಂದ ಸಂದೇಶವಿದು. ಮೇಲ್ನೋಟಕ್ಕೆ, ಸಂತೋಷ ಸದ್ಯಕ್ಕಲ್ಲ, ಏನಿದ್ದರೂ ಮುಂದಿನ ದಿನಗಳಲ್ಲಿ ಪ್ರಾಪ್ತವಾಗಲೆಂಬ ಆಶಯವಿದ್ದಂತೆ ತೋರುತ್ತದೆ. ಆದರೆ ಸೂಕ್ಷ್ಮವಾಗಿ ಅವಲೋಕಿಸಿದಾಗ, ಒಕ್ಕಣೆಯಲ್ಲಿ ಅವಿತ ಸಂದೇಶ ತೆರೆದುಕೊಳ್ಳುವುದು. ವರ್ತಮಾನವನ್ನು ಸಮರ್ಥವಾಗಿ ವ್ಯಯಿಸಿ ಭವಿತವ್ಯ ಸೊಗಸಾಗಿಸಿಕೊಳ್ಳಬೇಕೆಂಬ ಹಿತನುಡಿ ಅದು.

ಹೊಸ ವರ್ಷಕ್ಕೆ ಆಪ್ತೇಷ್ಟರಿಂದ ಶುಭಾಶಯ, ಹಾರೈಕೆಗಳ ಮಹಾಪೂರವೆ. ಕಷ್ಟಗಳು ಬಾರದೆ ವರ್ಷಪೂರ್ತಿ ಸುಖ, ಸಮೃದ್ಧಿಯೇ ಇಟ್ಟಾಡಲಿ ಎಂಬ ಹಾರೈಕೆ ಪ್ರಶ್ನಾರ್ಹವೇ ತಾನೆ? ನೋವು, ನಲಿವು ಎರಡೂ ಉಂಟು, ಸಮವಾಗಿ ಕಾಣು ಎಂಬ ಆಶಯವೇ ಹೆಚ್ಚು ತೂಕದ್ದು. ಆ ವೃತ್ತಾಂತವು ಹೊನ್ನಿನ ಮಳೆ ಸುರಿದರೆ ಏನಾಗುವುದೆಂದು ಸ್ವಾರಸ್ಯವಾಗಿ ಬಿಂಬಿಸುತ್ತದೆ.

ಬಂಧುಮಿತ್ರರ ಬಯಕೆಯಂತೆ ಅವನ ಪಾಲಿಗೆ ಹೊಲದಲ್ಲಿ ಸುವರ್ಣ ನಾಣ್ಯಗಳ ವರ್ಷಧಾರೆಯೇ ಆಗುವುದು. ಅವನಿಗೆ ಎರಡೇ ದಿನಕ್ಕೆ ಅದು ಸಾಕಾಗುತ್ತದೆ. ಮಳೆ ಅಪರೂಪವಾದರೂ ಸರಿ, ಎಂದಿನಂತಿರಲಿ ಅಂತ ನಿಸರ್ಗದ ಮೊರೆ ಹೋಗುತ್ತಾನೆ. ತಾಪತ್ರಯಗಳ ಪರಿಚಯವಾಗದೆ ನಿರಾಳ, ನೆಮ್ಮದಿಯ ಮೌಲ್ಯ ಅನುಭವಕ್ಕೆ ಸಲ್ಲುವುದು ಹೇಗೆ?

ಹೊಸ ವರ್ಷದ ದಿನಮಾನಗಳು ಹಿಂದಿನಂತೆಯೇ ಇರುತ್ತವೆ ಎನ್ನುವುದು ಅನುಭವಜನ್ಯ. ನಾವು ಸುಧಾರಿಸದ ಹೊರತು ಕಾಲ ಸುಧಾರಿಸಲು ಹೇಗೆ ಸಾಧ್ಯ? ನವ ವರ್ಷದ ಮೊದಲ ದಿನವೇಕೆ, ಎಲ್ಲ ದಿನಗಳಿಂದಲೂ ಪ್ರಭಾವಿತರಾಗಬಹುದು. ಒಂದೊಂದು ಸೂರ್ಯೋದಯವೂ ಬದುಕಿನ ಉಳಿದ ಬಾಳಿನ ಹೊಸ ಅಧ್ಯಾಯ. ಭೂತಕಾಲ ಕಳೆಯಿತು, ಭವಿಷ್ಯತ್ತು ಹೇಗೋ ಏನೋ, ಹಾಗಾಗಿ ವರ್ತಮಾನ ಮಾತ್ರವೇ ನಮ್ಮ ಹಿಡುವಳಿಗಿರುವುದು. 'ಇದೀಗ' ಎನ್ನುವುದಕ್ಕೆ ನಮ್ಮ ಕೆಲಸ ಕಾರ್ಯಗಳು ಶ್ರುತಿಗೂಡಬೇಕು. ನಿನ್ನೆ ಬಗೆಗಿನ ವೃಥಾ ಕೊರಗು, ನಾಳೆಯ ಬಗ್ಗೆಯ ಕಲ್ಪಿತ ಕುತೂಹಲ, ಆತಂಕದಿಂದ ಇಂದಿನ ದಿನದೊಂದಿಗಿನ ಅನುಸಂಧಾನಕ್ಕೆ ಅಡೆತಡೆಯಾದೀತು. ಇಂದಿನ ದಿನವನ್ನು ಸಮರ್ಥವಾಗಿ ಬಳಸಿಕೊಂಡರೆ 'ಸಾಧಿಸಬೇಕು' ಎನ್ನುವುದು 'ಸಾಧಿಸುವೆ' ಆಗುತ್ತದೆ. ನಾಳೆಯ ಸಮಸ್ಯೆಗಳು(?) ಇನ್ನೂ ವಕ್ಕರಿಸಿಯೇ ಇಲ್ಲ! ಆ ಕುರಿತು ಒತ್ತಡಕ್ಕೊಳಗಾದರೆ ಈ ಗಳಿಗೆಗಳು ಬಳಲುತ್ತವೆ.

ಆದ ಪ್ರಮಾದಗಳಿಂದ ಪರಿಣಮಿಸುವ ಕೀಳರಿಮೆ, ವ್ಯಾಕುಲದಿಂದ ಹೊರಬರಲು ಮತ್ತೆ ವರ್ತಮಾನದತ್ತ ಮನಸ್ಸು ಕೇಂದ್ರೀಕರಿಸುವುದೇ ಮದ್ದು. ಎಸಗಿದ ತಪ್ಪುಗಳಿಂದ ಕಲಿತ ಪಾಠಗಳೇ ದೀವಟಿಗೆಗಳಾಗಿ ಮುನ್ನಡೆಸಬಲ್ಲವು. ಸೇಡು, ಕೋಪ, ತಾಪಗಳೇ ಆಯ್ಕೆಯಾದರೆ ಖಿನ್ನತೆ ಮತ್ತೂ ನಮ್ಮನ್ನಾಳಿ ಪರಿಸ್ಥಿತಿ ಬಿಗಡಾಯಿಸುವುದು. ಕಲಹಪ್ರಿಯ ಯಾರೊಡನೆಯೂ ಜಗಳವಾಡುವುದಿಲ್ಲ, ತನ್ನೊಡನೆ ತಾನೆ!

ಹೊಸ ವರ್ಷದ ಹಾದಿ ಸುಗಮವೋ ದುರ್ಗಮವೋ ನಮ್ಮ ಮನಃಸ್ಥಿತಿಯನ್ನು ಅವಲಂಬಿಸಿದೆ. ಅಧಿಕ ಸಮಯ ಕುಟುಂಬದವರೊಡನೆ, ಗೆಳೆಯರೊಡನೆ ಕಳೆತರೆ ಲಾಭವಿದೆ. ಕುಟುಂಬದವರು ಜವಾಬ್ದಾರಿಯನ್ನು, ಗೆಳೆಯರು ಕಾರುಣ್ಯ, ಸಹಾನುಭೂತಿಯನ್ನು ಕಲಿಸುತ್ತಾರೆ. ಬೆಳಗ್ಗೆ ಬೇಗ ನಿದ್ದೆಯಿಂದ ಎಚ್ಚರಗೊಳ್ಳುವ ನಿರ್ಧಾರವನ್ನು ಹಲವು ಒಳ್ಳೆಯ ಅಭ್ಯಾಸಗಳೂ ಹಿಂಬಾಲಿಸಿರುತ್ತವೆ. ಶಿಸ್ತು ಶಿಸ್ತನ್ನು ಪೋಣಿಸಿಕೊಳ್ಳುತ್ತದೆ. ಇಡೀ ಮನೆಯಲ್ಲಿ ಸಂಚಲನ ಮೂಡುವುದು. ಕುಟುಂಬದ ಇತರರೂ ಪ್ರೇರಿತರಾಗುತ್ತಾರೆ. ಕಚೇರಿಗೆ, ಶಾಲೆಗೆ ಸಮಯಪಾಲನೆ ಸಾಧ್ಯವಾಗುತ್ತದೆ.



ಹೊಸದರಲ್ಲಿ ಏನೋ ಅಂದ, ಉತ್ಕೃಷ್ಟ ಇರುವುದೆಂಬ ಭರವಸೆ ಸಹಜ. 4,000 ವರ್ಷಗಳ ಹಿಂದೆಯೇ ಬ್ಯಾಬಿಲೋನಿಯನ್ನರು ಅವರ ಹೊಸವರ್ಷ ಸಡಗರಿಸಿದ್ದಕ್ಕೆ ಪುರಾವೆಗಳಿವೆ. ದಿನ, ವಾರ, ಮಾಸ, ವರ್ಷ- ಇವು ನಮ್ಮ ಆವಾಸವಾದ ಭೂಮಿಗಷ್ಟೇ ಸಂಬಂಧಿಸಿದವು. ಭೂಮ್ಯತೀತ ಅಂತರಿಕ್ಷದಲ್ಲಿ, ಅಲ್ಲಿನ ಕಾಯಗಳಲ್ಲಿ ಈ ಕಾಲಮಾನಗಳಿಗೆ ಅರ್ಥವಿಲ್ಲ. ಅಷ್ಟೇಕೆ ಹಗಲು ಮತ್ತು ಇರುಳು ಅಕ್ಷರಶಃ ಭೂಮಿಯಾದ್ಯಂತ ಒಂದೇ ಇಲ್ಲ. ಭಾರತಕ್ಕೆ ಹೋಲಿಸಿದರೆ ವರ್ಷಾರಂಭವು ಪೂರ್ವದ ದೇಶಗಳಲ್ಲಿ ಬೇಗ, ಪಶ್ಚಿಮ ದೇಶಗಳಲ್ಲಿ ತಡ. ಹಾಗಾಗಿ ಹೊಸ ವರ್ಷದ ಉದಯದ ಮುಹೂರ್ತವೇ ಸಾಪೇಕ್ಷ.

ತೊಡುವ ಸತ್ ಸಂಕಲ್ಪಗಳು ಸಂಕಲ್ಪಗಳಾಗಿಯೇ ತುಕ್ಕು ಹಿಡಿದರೆ ಹೊಸ ವರ್ಷ ಒಂದು ಕ್ರಮಸಂಖ್ಯೆ ಏರುವುದಷ್ಟೆ! ಮಹಾಕವಿ ಕಾಳಿದಾಸ ತನ್ನ 'ರಘುವಂಶಮ್' ಮಹಾಕಾವ್ಯದಲ್ಲಿ ರಘು ವಂಶದ ರಾಜರ ಗುಣಗಳನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾನೆ. ದಿಲೀಪ ದೊರೆ 'ಫಲಾನುಮೇಯಾಃ ಪ್ರಾರಂಭಾಃ' ನಿಲುವಿಗೆ ಬದ್ಧನಾಗಿದ್ದ. ಅಂದರೆ ಯಾವುದನ್ನೂ ಅವನು ಮೊದಲೇ ಪ್ರಕಟಿಸುತ್ತಿರಲಿಲ್ಲ. ಕಾರ್ಯಸಾಧನೆಯ ನಂತರವಷ್ಟೇ ಅವನ ಯೋಜನೆ, ಯತ್ನದ ವಿವರ ಜನರಿಗೆ ತಿಳಿಯುತ್ತಿತ್ತು. ಈ ಆದರ್ಶ ಸರ್ವಕಾಲಕ್ಕೂ ಸಲ್ಲುತ್ತದೆ. ಆರಂಭಶೂರತ್ವ, ಉತ್ತಮರಾಗಲು ಮತ್ತು ಉಪಕಾರಿಯಾಗಲು ನಿರ್ಧರಿಸಿ ಹಾಕಿಕೊಂಡ ರೀತಿ, ನೀತಿಗಳ ಉಪೇಕ್ಷೆ ಆತ್ಮವಂಚನೆ. ನಡೆ, ನುಡಿ ಬೇರೆಯಾದಾಗ ಜನಪದರು 'ಅಯ್ಯೋ, ನಿನ್ನ ಮಾತು ನಿನಗೇನೆ ಇಲ್ಲವಾಯ್ತಲ್ಲ', 'ನಿನ್ನ ನಾಲಿಗೆ ಹೋಯ್ತು' ಎಂದು ಕೆಣಕುತ್ತಾರೆ. ಭೂತ ಮತ್ತು ಭವಿಷ್ಯತ್ತಿನಲ್ಲಿ ಮುಳುಗಿದರೆ ವರ್ತಮಾನ ದೂರ ಸರಿಯುತ್ತದೆ.

ಹರಿವ ನದಿಗೆ ಮೈಯೆಲ್ಲ ಕಾಲುಗಳು. ಅದು ಪ್ರತಿಯೊಂದು ಕ್ಷಣವನ್ನೂ ಹರಿಯಲು ಮುಡಿಪಿಟ್ಟಾಗ ಮಾತ್ರ ಅದರ ನೀರು ಕೆಡದೆ ಇರಲು ಸಾಧ್ಯ. ಅಂತೆಯೇ ಮನುಷ್ಯ ಕ್ಷಣಕ್ಷಣವನ್ನೂ ಪೋಲಾಗಿಸದೆ ಕರ್ತವ್ಯನಿಷ್ಠನಾಗಿ ಬಳಸಿಕೊಂಡರೆ ಮಾತ್ರ ಅವನ ಅಸ್ಮಿತೆಯ ಸಾರ್ಥಕ್ಯ.

## ವಾಚಕರ ವಾಣಿ

### 'ಸಮಾನತೆಯ ಕಡೆಗೆ' ಮರುಪ್ರಸಾರವಾಗಲಿ

ರಾಜ್ಯ ಸಮಾಜ ಕಲ್ಯಾಣ ಇಲಾಖೆಯು ಅಸ್ಪೃಶ್ಯತೆ ನಿವಾರಣೆ ಮತ್ತು ಅಂತರ್ಜಾತಿ ವಿವಾಹದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ 'ಸಮಾನತೆಯ ಕಡೆಗೆ' ಎಂಬ ಕನ್ನಡ ಚಲನಚಿತ್ರವನ್ನು ಇತ್ತೀಚೆಗೆ 'ಚಂದನ' ವಾಹಿನಿಯಲ್ಲಿ ಪ್ರಸಾರ ಮಾಡಿತು. ಬಹಳ ಅರ್ಥಪೂರ್ಣವಾದ ಕಾರ್ಯಕ್ರಮ ಇದಾಗಿತ್ತು. ದೇಶದ ಅಭಿವೃದ್ಧಿಗೆ ಮಾರಕವಾಗಿರುವ ಸಂಗತಿಗಳಲ್ಲಿ ಅಸ್ಪೃಶ್ಯತಾ ಆಚರಣೆಯೂ ಒಂದು. ಈ ಅನಿಷ್ಟ ಪದ್ಧತಿ ನಾಶವಾಗಬೇಕಿದೆ.

ಇದಕ್ಕೆ ಪೂರಕವಾಗಿ, ಚಂದನ ವಾಹಿನಿಯಲ್ಲಿ ಮೂಡಿಬಂದ ಕಾರ್ಯಕ್ರಮವನ್ನು ರಾಜ್ಯ ಸರ್ಕಾರವು ವಾರ್ತಾ ಇಲಾಖೆ ಮೂಲಕ ನಾಡಿನ ಎಲ್ಲ ಶಾಲಾ ಕಾಲೇಜುಗಳಲ್ಲಿ ಮರುಪ್ರಸಾರ ಮಾಡಿ, ವಿದ್ಯಾರ್ಥಿಗಳು, ಯುವಸಮೂಹದಲ್ಲಿ ಜಾಗೃತಿ ಮೂಡಿಸಬೇಕು.

**ಡಾ. ಎಸ್.ನಾಗರಾಜು,** ಬೆಂಗಳೂರು

### ಈ 'ಬಂದ್' ನ್ಯಾಯವೇ?

ದಶಕಗಳ ಹಿಂದೆ ಪಶ್ಚಿಮ ಬಂಗಾಳವನ್ನು 'ಬಂದ್'ಗಳ ರಾಜ್ಯ ಎಂದು ಹೇಳಲಾಗುತ್ತಿತ್ತು. ಆ ರಾಜ್ಯದಲ್ಲಿ 'ಬಂದ್' ವಿರುದ್ಧ 'ಬಂದ್'ಗೆ ಕರೆ ನೀಡಲಾಗುತ್ತದೆ ಎಂದು ಲೇವಡಿ ಮಾಡಲಾಗುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ಈ ದೌರ್ಭಾಗ್ಯ ಕರ್ನಾಟಕಕ್ಕೆ ಅಂಟಿಕೊಂಡಂತಿದೆ. ಮಹಾರಾಷ್ಟ್ರ ಏಕೀಕರಣ ಸಮಿತಿಯ (ಎಂಇಎಸ್) ಪುಂಡಾಟಿಕೆ ವಿರುದ್ಧದ ಪ್ರತಿಭಟನೆಗೆ ಅರ್ಥವಿದ್ದರೂ ಜನಜೀವನವನ್ನು ಅಸ್ತವ್ಯಸ್ತಗೊಳಿಸಿ, ಕೊರೊನಾದಿಂದಾಗಿ ಎರಡು ವರ್ಷಗಳಿಂದ ಆರ್ಥಿಕ ಸಂಕಷ್ಟದಲ್ಲಿರುವ ಜನರ ಬದುಕನ್ನು ಇನ್ನಷ್ಟು ಹೈರಾಣಗೊಳಿಸುವುದು ಯಾವ ನ್ಯಾಯ? ಸದಾ ಕಿರುಕುಳ ನೀಡುವ ಎಂಇಎಸ್ ಅನ್ನು ನಿಯಂತ್ರಿಸುವಲ್ಲಿ ಸರ್ಕಾರ ವಿಫಲವಾಗಿರುವುದರ ವಿರುದ್ಧ ವಿಧಾನಸೌಧದ ಮುಂದೆ ಶಾಂತಿಯುತ ಪ್ರತಿಭಟನೆ ಮಾಡಬೇಕೇ ವಿನಾ ರಾಜ್ಯವನ್ನು ಬಂದ್ ಮಾಡಿ ಜನಸಾಮಾನ್ಯರಿಗೆ ತೊಂದರೆ ನೀಡುವುದಲ್ಲ.

**ರಮಾನಂದ ಶರ್ಮಾ,** ಬೆಂಗಳೂರು

### ಸೋಂಕು ಹರಡಲು ಸರ್ಕಾರದ ರತ್ನಗಂಬಳಿ

'ರಾತ್ರಿ ಕರ್ಫ್ಯೂ, ಹಗಲು ರ‍್ಯಾಲಿ ಯಾಕೆ' ಎಂಬ ಸಂಸದ ವರುಣ್ ಗಾಂಧಿ ಅವರ ಪ್ರಶ್ನೆ (ಪ್ರ.ವಾ., ಡಿ. 28) ಸರ್ವಸಮ್ಮತವಾದದ್ದು. ಹಗಲಿನಲ್ಲಿ ಆಡಳಿತಾರೂಢ ಪಕ್ಷಗಳೇ ಚುನಾವಣಾ ರ‍್ಯಾಲಿಗಳನ್ನು ಆಯೋಜಿಸುತ್ತಿವೆ. ಇದರಿಂದ ಜನಸಂದಣಿ ಉಂಟಾಗಿ, ಸೋಂಕು ಹರಡಲು ಸರ್ಕಾರವೇ ರತ್ನಗಂಬಳಿ ಹಾಸಿಕೊಟ್ಟಂತೆ ಆಗುವುದಿಲ್ಲವೇ?

ಹೆಚ್ಚಿನ ಕೆಲಸ ಕಾರ್ಯಗಳನ್ನು ಆನ್‌ಲೈನ್ ಮೂಲಕವೇ ಮಾಡುವಂತೆ ಶಿಕ್ಷಣ ಸಂಸ್ಥೆಗಳು, ಐ.ಟಿ., ಬಿ.ಟಿ. ಕಂಪನಿಗಳಿಗೆ ಸರ್ಕಾರ ಒತ್ತಡ ಹೇರುತ್ತಿರುವಾಗ, ಚುನಾವಣಾ ಪ್ರಚಾರದ ರ‍್ಯಾಲಿಗಳನ್ನೂ ಹೀಗೇ ಯಾಕೆ ಮಾಡಬಾರದು? ನಿಮ್ಮ ಸಾಧನೆಗಳನ್ನು ಅಬ್ಬರದ ಪ್ರಚಾರದ ಮೂಲಕವೇ ಏಕೆ ಮಾಡಬೇಕು? ಮನ್ ಕಿ ಬಾತ್, ಕೋವಿಡ್ ಸಂದೇಶಗಳು, ಸಭೆಗಳು, ಲಾಕ್‌ಡೌನ್‌ಗೆ ಸಂಬಂಧಿಸಿದ ಬ್ರೇಕಿಂಗ್ ಸುದ್ದಿಗಳನ್ನು ಆನ್‌ಲೈನ್ ಮೂಲಕವೇ ಇಡೀ ದೇಶಕ್ಕೆ ತಲುಪಿಸಿರುವಾಗ, ಆಯಾ ರಾಜ್ಯದ ಚುನಾವಣಾ ಪ್ರಚಾರವನ್ನೂ ಆನ್‌ಲೈನ್ ಮೂಲಕವೇ ಮಾಡುವಂತೆ ಆಗಬೇಕು. ಇದರಿಂದ ದೇಶಕ್ಕೂ ಕ್ಷೇಮ ಮತ್ತು ಹಣ ಉಳಿತಾಯ.

**ಅಶ್ವತ್ಥ ಕಲ್ಲೇದೇವರಹಳ್ಳಿ,** ಕುಂಕಾನಾಡು, ಕಡೂರು

### ನಡೆ– ನುಡಿ ಒಂದಾಗಿಲ್ಲದವರ ಮಾತೆಂದರೆ...

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಗ್ರಾಮವೊಂದರ ಪ್ರೌಢಶಾಲಾ ವಿದ್ಯಾರ್ಥಿಗಳ ಪುಂಡಾಟಿಕೆಯನ್ನು ಆಧಾರವಾಗಿಟ್ಟುಕೊಂಡು ಎರಡು ಲೇಖನಗಳನ್ನು ಬರೆಯಲಾಗಿದೆ (ಸಂಗತ, ಡಿ. 24 ಮತ್ತು 25). ವಿದ್ಯಾರ್ಥಿಗಳ ಇಂತಹ ವರ್ತನೆಗೆ ಹಲವು ಕಾರಣಗಳಿವೆ. ಅವುಗಳಲ್ಲಿ ಒಂದು, ವಿದ್ಯಾರ್ಥಿಗಳು ತಮ್ಮ ಬಗ್ಗೆ ಭಯ-ಭಕ್ತಿಯಿಂದ ಇರಬೇಕು ಎಂದು ಶಿಕ್ಷಕರು ಬಯಸುವುದು. ಆದರೆ ಶಿಕ್ಷಕರ ಬಗ್ಗೆ ವಿದ್ಯಾರ್ಥಿಗಳಲ್ಲಿ ಭಯ ಇರಬಾರದು, ಗೌರವ ಇರಬೇಕು. ಇದು ತೋರಿಕೆಯ ಗೌರವವಾಗಬಾರದು. ಈ ರೀತಿಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳನ್ನು ಪ್ರಭಾವಿಸಬೇಕು. ಆದರೆ ನಡೆ-ನುಡಿ ಒಂದಾಗಿಲ್ಲದ ಶಿಕ್ಷಕ ಎಷ್ಟೇ ನೀತಿ, ಮೌಲ್ಯಗಳನ್ನು ಹೇಳಿದರೂ ವಿದ್ಯಾರ್ಥಿಗಳು ಅದನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ.

ಯಾವುದು ಸರಿ ಯಾವುದು ತಪ್ಪು ಎಂದು ವಿವೇಚಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ಹೊಂದಿರುವುದಿಲ್ಲ. ಸಾಮಾಜಿಕ ಜಾಲತಾಣಗಳು ಅವರ ಮೇಲೆ ಪ್ರಭಾವ ಬೀರುತ್ತಿವೆ. ಇಂತಹವುಗಳಿಂದ ವಿದ್ಯಾರ್ಥಿಗಳನ್ನು ದೂರ ಇರಿಸುವುದು ಪೋಷಕರು ಹಾಗೂ ಶಿಕ್ಷಕರಿಗೆ ಸವಾಲಿನ ವಿಷಯವಾಗಿದೆ.

**ಶಿವಕುಮಾರ್ ಎಸ್.,** ಊರುಕೆರೆ, ತುಮಕೂರು

### ಕುವೆಂಪು ತತ್ವಾದರ್ಶದ ದರ್ಶನವಾಗಲಿ

ಕುವೆಂಪು ಅವರ ಜನ್ಮದಿನವಾದ ಡಿ. 29 ಅನ್ನು 'ವಿಶ್ವ ಮಾನವ ದಿನ' ಎಂದು ರಾಜ್ಯ ಸರ್ಕಾರವು 2015ರಿಂದಲೂ ಆಚರಿಸಿಕೊಂಡು ಬರುತ್ತಿದೆ. ವಿಶ್ವ ಮಾನವ ಸಂದೇಶ ಸಾರಿದ ದಾರ್ಶನಿಕರಲ್ಲಿ ಕವಿತ್ವವನ್ನು ಮಾತ್ರವೇ ಕಂಡ ಅಲ್ಪಮತಿಗಳಾದ ನಾವು, ಇಂದಾದರೂ ಅವರ ತತ್ವಾದರ್ಶಗಳು, ಚಿಂತನೆಗಳ ಬಗ್ಗೆ ತಿಳಿಯುವ ಔದಾರ್ಯ ಹೊಂದಬೇಕು.

ತೇಜಸ್ವಿಯವರು ಕುವೆಂಪು ಅವರ ಕುರಿತು 'ಕುವೆಂಪುರವರ ಸಾಮಾಜಿಕ ಕಳಕಳಿ, ಸುಧಾರಣಾ ದೃಷ್ಟಿ, ವಿಚಾರಶೀಲತೆ ಮೊದಲಾದ ಕ್ರಾಂತಿಕಾರಿ ವ್ಯಕ್ತಿತ್ವವನ್ನು ಮರೆತು ಅವರನ್ನು ಕೇವಲ ಕವಿ ಹಾಗೂ ಕಲಾವಿದ ಎನ್ನುವ ನೆಲೆಗಟ್ಟಿನಲ್ಲೇ ನಾವು ಗುರುತಿಸುತ್ತಾ ಹೋದರೆ ಅವರ ಅಂತಃಸತ್ವವನ್ನು ತಪ್ಪಾಗಿ ಪ್ರತಿನಿಧಿಸಿದಂತೆ' ಎಂದು ಹೇಳಿದ್ದರು. ತೇಜಸ್ವಿಯವರು ತೀರಿಹೋಗಿ 14 ವರ್ಷಗಳು ಕಳೆದರೂ ಕುವೆಂಪು ಅವರ ತತ್ವಾದರ್ಶಗಳು ನಮಗೆ ನಿಗೂಢವಾಗಿಯೇ ಉಳಿದಿವೆ. ಕುವೆಂಪು ಪ್ರತಿಪಾದಿಸಿದ ವಿಶ್ವಮಾನವ ಸಂದೇಶವು ಬಹು ದೊಡ್ಡ ಚಿಂತನೆಯಾಗಿದೆ. ಈಗಿರುವ ಧರ್ಮಾಂಧತೆ, ಜಾತೀಯತೆಯಿಂದ ಹೊರಬಂದು ಮನುಜಮತವೊಂದೇ ಸಾಕು ಎಂಬ ಹೆಬ್ಬಯಕೆ ಅದರಲ್ಲಿ ಅಡಕವಾಗಿದೆ. ಕುವೆಂಪು ಅವರು ಪ್ರಕೃತಿ ಕುರಿತು ರಚಿಸಿದ ಕವನಗಳನ್ನು ಇಂದು ಪಠ್ಯದಲ್ಲಿ ಕಾಣುತ್ತಿದ್ದೇವೆಯೇ ವಿನಾ ಅವರ ವಿಚಾರಗಳು ಅಥವಾ ಚಿಂತನಶೀಲ ವಿಚಾರಧಾರೆಗಳನ್ನಲ್ಲ. ಅವರ ವಿಚಾರಧಾರೆಗಳು ಆದಷ್ಟು ಬೇಗ ಯುವಪೀಳಿಗೆಯನ್ನು ತಲುಪುವಂತಾಗಲಿ.

**ಈರಣ್ಣ ಎನ್.ವಿ.,** ಶಿರಾ

Printed and published by B A Ravi on behalf of The Printers (Mysore) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ಎಎಪಿ, ಟಿಎಂಸಿ ನೆಲೆ ವಿಸ್ತರಣೆ
# ಕಾಂಗ್ರೆಸ್‌ಗೆ ಬವಣೆ

• ಹಮೀದ್ ಕೆ., ಜಯಸಿಂಹ ಆರ್., ಅಮೃತಕಿರಣ್ ಬಿ.ಎಂ.

2014ರಲ್ಲಿ ಆರಂಭವಾದ ಇಳಿಜಾರು ಹಾದಿಯ ಜಾರುವಿಕೆಯ ಪಥ ಬದಲಿಸಿಕೊಳ್ಳಲು ಕಾಂಗ್ರೆಸ್ ಪಕ್ಷಕ್ಕೆ ಈವರೆಗೆ ಸಾಧ್ಯವಾಗಿಲ್ಲ. ಸವಾಲುಗಳ ಸಾಲು ಸಾಲು ಆ ಪಕ್ಷದ ಮುಂದಿನಿಂದ ಮರೆಯಾದದ್ದೇ ಇಲ್ಲ. ನಾಯಕತ್ವ ದುರ್ಬಲ, ಪಕ್ಷವು ಚುನಾವಣೆ ಗೆಲ್ಲುತ್ತಿಲ್ಲ, ದೊಡ್ಡ ದೊಡ್ಡ ಮುಖಂಡರೆಲ್ಲ ಪಕ್ಷ ತೊರೆದರು, ಇರುವ ನಾಯಕರ ನಡುವೆ ಮನಸ್ತಾಪ, ಪೈಪೋಟಿ, ಜನರ ಮನಗೆಲ್ಲಬಲ್ಲ ಗಟ್ಟಿ ಸಿದ್ಧಾಂತವೊಂದನ್ನು ರೂಪಿಸಿಕೊಳ್ಳಲು ಸಾಧ್ಯವಾಗಿಲ್ಲ... ಹೀಗೆ ಪಟ್ಟಿ ಮುಗಿಯುವುದಿಲ್ಲ. ಅದೇನೇ ಇದ್ದರೂ ರಾಷ್ಟ್ರವ್ಯಾಪಿ ಹೆಜ್ಜೆ ಗುರುತು ಇರುವ ಕಾರಣಕ್ಕೆ ಕೇಂದ್ರದಲ್ಲಿ ವಿರೋಧ ಪಕ್ಷಗಳ ನಾಯಕತ್ವದ ಅವಕಾಶವು ತಾನೇ ತಾನಾಗಿ ಆ ಪಕ್ಷದ ಮಡಿಲಿಗೆ ಬಿದ್ದಿದೆ. ಆದರೆ, ಈಗ ಈ ಅವಕಾಶವು ಕೂಡ ಕೈ ತಪ್ಪುವ ಸುಳಿವುಗಳು ರಾಜಕೀಯ ದಿಗಂತದಲ್ಲಿ ಕಾಣಿಸಿಕೊಳ್ಳತೊಡಗಿವೆ. ಕಾಂಗ್ರೆಸ್ ಈಗ ಇರುವ ಸ್ಥಾನವನ್ನು ಆಕ್ರಮಿಸಿಕೊಳ್ಳಲು ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ಅರವಿಂದ ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಾರ್ಟಿ (ಎಎಪಿ) ಯೋಜಿತ ಪ್ರಯತ್ನಗಳನ್ನು ನಡೆಸುತ್ತಿವೆ.

ಬಲಶಾಲಿ ಬಿಜೆಪಿಯನ್ನು ಹೀನಾಯವಾಗಿ ಸೋಲಿಸಿದ ಹೆಗ್ಗಳಿಕೆ ಈ ಎರಡೂ ಪಕ್ಷಗಳಿಗೆ ಇದೆ. ದೆಹಲಿಯ 70 ವಿಧಾನಸಭಾ ಕ್ಷೇತ್ರಗಳ ಪೈಕಿ 67ರಲ್ಲಿ ಎಎಪಿ ಶಾಸಕರಿದ್ದಾರೆ. ಪಶ್ಚಿಮ ಬಂಗಾಳದ 294 ಕ್ಷೇತ್ರಗಳ ಪೈಕಿ 215ರಲ್ಲಿ ಟಿಎಂಸಿ ಗೆದ್ದಿದೆ. ಪ್ರಧಾನಿ ನರೇಂದ್ರ ಮೋದಿ ಅವರೇ ಪ್ರತಿಷ್ಠೆ ಪಣಕ್ಕಿಟ್ಟು ಮುಂಚೂಣಿಯಲ್ಲಿ ನಿಂತು ಪ್ರಚಾರ ನಡೆಸಿದರೂ ಬಿಜೆಪಿ ಗೆದ್ದದ್ದು 77 ಕ್ಷೇತ್ರಗಳಲ್ಲಿ ಮಾತ್ರ. ಎಎಪಿ, ಟಿಎಂಸಿ ಗೆಲುವಿನ ಹೊಳಪಿನ ಮುಂದೆ ಕಾಂಗ್ರೆಸ್ ಪಕ್ಷವು ಪೇಲವವಾಗಿ ಕಾಣಿಸುವುದು ಸಹಜವೇ ಆಗಿದೆ. ಸ್ಥಾಪನೆಯ 137ನೇ ವರ್ಷಾಚರಣೆಯನ್ನು ಕಾಂಗ್ರೆಸ್ ಪಕ್ಷವು ಮಂಗಳವಾರ ಮಾಡಿದೆ. ಆದರೆ, ಈ ಹೊತ್ತಿಗೆ ಅತ್ಯಂತ ಹಳೆಯ ಪಕ್ಷದ ಬೇರುಗಳು ಸಡಿಲವಾಗಿವೆ. ಸುದೀರ್ಘ ಕಾಲ ಈ ದೇಶದಲ್ಲಿ ಅಧಿಕಾರದಲ್ಲಿದ್ದ ಪಕ್ಷವು ಸ್ವಂತ ಬಲದಲ್ಲಿ ಈಗ ಮೂರು ರಾಜ್ಯಗಳಲ್ಲಿ (ರಾಜಸ್ಥಾನ, ಛತ್ತೀಸಗಡ, ಪಂಜಾಬ್) ಮಾತ್ರ ಅಧಿಕಾರದಲ್ಲಿದೆ. ಮಹಾರಾಷ್ಟ್ರ, ಜಾರ್ಖಂಡ್ ಮತ್ತು ತಮಿಳುನಾಡಿನಲ್ಲಿ ಸರ್ಕಾರದ ಭಾಗವಾಗಿದ್ದರೂ, ಕಿರಿಯ ಪಾಲುದಾರನ ಸ್ಥಾನವಷ್ಟೇ ಇದೆ.

ತ್ರಿಪುರಾ, ಅಸ್ಸಾಂ ಮತ್ತು ಗೋವಾದಲ್ಲಿ ತನ್ನ ಬೇರೂರಲು ಟಿಎಂಸಿ ಪ್ರಯತ್ನ ನಡೆಸಿದೆ. ಪಂಜಾಬ್, ಹರಿಯಾಣ, ಉತ್ತರಾಖಂಡ, ಉತ್ತರ ಪ್ರದೇಶ, ಗುಜರಾತ್ ಮತ್ತು ಗೋವಾದಲ್ಲಿ ನೆಲೆಯೂರಲು ಎಎಪಿ ಯೋಜನೆಗಳನ್ನು ರೂಪಿಸಿದೆ. ಈ ರಾಜ್ಯಗಳಲ್ಲಿ ತಕ್ಷಣಕ್ಕೆ ಅಧಿಕಾರಕ್ಕೆ ಬರಬಹುದು ಎಂಬ ನಂಬಿಕೆ ಈ ಪಕ್ಷಗಳಿಗೆ ಇದ್ದಂತಿಲ್ಲ. 2024ರ ಲೋಕಸಭೆಯ ಚುನಾವಣೆಯ ಮೇಲೆ ಕಣ್ಣಿಟ್ಟುಕೊಂಡೇ ಕಾರ್ಯತಂತ್ರ ಹೆಣೆಯಲಾಗುತ್ತಿದೆ.

2024ರಲ್ಲಿ ಬಿಜೆಪಿಯ ವಿರುದ್ಧ ವಿರೋಧ ಪಕ್ಷಗಳೆಲ್ಲವೂ ಒಟ್ಟಾಗಬೇಕು ಎಂಬ ಪ್ರಸ್ತಾವ ಗಟ್ಟಿಗೊಳ್ಳುತ್ತಿದೆ. ಹಾಗೆ ಒಟ್ಟಾದರೆ ಅದರ ನಾಯಕತ್ವ ತಮ್ಮದಾಗಬೇಕು ಎಂಬುದು ಮಮತಾ ಲೆಕ್ಕಾಚಾರ. ಬಿಜೆಪಿಯನ್ನು ಸೋಲಿಸಲು ತಮಗೆ ಮಾತ್ರ ಸಾಧ್ಯ ಎಂಬ ಭಾವನೆ ಅವರಲ್ಲಿ ಇದೆ. ಹಲವು ರಾಜ್ಯಗಳಲ್ಲಿ ನೆಲೆ ಇದ್ದರೆ, ವಿರೋಧ ಪಕ್ಷಗಳ ಕೂಟದ ಸೀಟು ಹಂಚಿಕೆಯಲ್ಲಿ ಚೌಕಾಸಿ ಸಾಮರ್ಥ್ಯ ಹೆಚ್ಚುತ್ತದೆ ಎಂಬ ಯೋಚನೆ ಎಎಪಿಯಲ್ಲಿ ಇದೆ.

ಕಾಂಗ್ರೆಸ್‌ನಿಂದ ಸಿಡಿದು ಹೋಗಿ ರೂಪುಗೊಂಡ ಪಕ್ಷಗಳೆಲ್ಲ ಒಗ್ಗಟ್ಟಾಗುವ ಇನ್ನೊಂದು ಪ್ರಸ್ತಾವವೂ ಇದೆ. ಶರದ್ ಪವಾರ್ ನೇತೃತ್ವದ ಎನ್‌ಸಿಪಿ, ಮಮತಾ ಅವರ ಟಿಎಂಸಿ, ಜಗನ್ ಮೋಹನ್ ರೆಡ್ಡಿ ನೇತೃತ್ವದ ವೈಎಸ್‌ಆರ್ ಕಾಂಗ್ರೆಸ್ ತಮ್ಮ ತಮ್ಮ ರಾಜ್ಯಗಳಲ್ಲಿ ಬಲವಾಗಿವೆ. ಇವೆಲ್ಲ ಒಂದಾದರೆ, ವಿರೋಧ ಪಕ್ಷಗಳ ನಾಯಕತ್ವ ಅವಕಾಶವು ಕಾಂಗ್ರೆಸ್‌ನಿಂದ ಜಾರುತ್ತದೆ.

ವಿರೋಧ ಪಕ್ಷಗಳ ಒಕ್ಕೂಟದ ನಾಯಕತ್ವವು ದೇಶದ ಎಲ್ಲೆಡೆಯೂ 'ಅಸ್ತಿತ್ವ' ಇರುವ ಕಾಂಗ್ರೆಸ್ ಪಕ್ಷದ್ದೇ ಆಗಿರಬೇಕು. ಇಲ್ಲವಾದರೆ ಬಿಜೆಪಿಯನ್ನು ಸೋಲಿಸಲಾಗದು ಎಂಬುದು ಕಾಂಗ್ರೆಸ್ ಪಕ್ಷದ ಪ್ರತಿಪಾದನೆ. ಗೋವಾದಂತಹ ಬಿಜೆಪಿ–ಕಾಂಗ್ರೆಸ್ ನೇರ ಹೋರಾಟ ಇರುವ ರಾಜ್ಯದಲ್ಲಿ ಎಎಪಿ ಮತ್ತು ಟಿಎಂಸಿಯ ಪ್ರಯತ್ನವು ಬಿಜೆಪಿಗೆ ನೆರವಾಗುತ್ತದೆ ಎಂದು ಕಾಂಗ್ರೆಸ್ ಹೇಳುತ್ತಿದೆ. ಗೋವಾ ಇರಲಿ ಪಂಜಾಬ್ ಇರಲಿ ಎಲ್ಲೆಡೆಯೂ ಎಎಪಿ, ಟಿಎಂಸಿಯ ವಿಸ್ತರಣೆ ಪ್ರಯತ್ನವು ಕಾಂಗ್ರೆಸ್ ಮತಬುಟ್ಟಿಗೇ ಕೈ ಹಾಕುತ್ತದೆ ಎಂಬುದರಲ್ಲಿ ಅನುಮಾನ ಇಲ್ಲ. ಇದರಿಂದಾಗಿ, ಮೊದಲೇ ದುರ್ಬಲವಾಗಿರುವ ಕಾಂಗ್ರೆಸ್ ಇನ್ನಷ್ಟು ಶಿಥಿಲವಾಗಬಹುದು.

## ಕಾಂಗ್ರೆಸ್ ಮತಬುಟ್ಟಿಗೆ ಎಎಪಿ ಕೈ

**ಚಂಡೀಗಡ** ಮಹಾನಗರಪಾಲಿಕೆಗೆ ಇತ್ತೀಚೆಗೆ ನಡೆದ ಚುನಾವಣೆಯ ಫಲಿತಾಂಶವನ್ನು ಗಮನಿಸಿದರೆ, ಆಮ್ ಆದ್ಮಿ ಪಕ್ಷದಿಂದ ನಿಜಕ್ಕೂ ದೊಡ್ಡ ಪೆಟ್ಟು ಬಿದ್ದಿರುವುದು ಬಿಜೆಪಿಗೆ ಅಲ್ಲ, ಕಾಂಗ್ರೆಸ್ ಪಕ್ಷಕ್ಕೆ ಎಂಬುದು ಸ್ಪಷ್ಟ. ಎಎಪಿ ಹೋದ ಕಡೆಯಲ್ಲೆಲ್ಲಾ ಕಾಂಗ್ರೆಸ್ ಮತ ಗಳಿಕೆ ಪ್ರಮಾಣ ಹಾಗೂ ಸೀಟುಗಳು ಕುಸಿಯುತ್ತಿವೆ. ಸ್ಥಳೀಯಾಡಳಿತ ಸಂಸ್ಥೆ, ವಿಧಾನಸಭೆಗಳ ಮೇಲಿನ ಹಿಡಿತದ ಮೂಲಕ ಲೋಕಸಭೆಗೆ ರಹದಾರಿ ಮಾಡಿಕೊಳ್ಳುವ ಉದ್ದೇಶ ಎಎಪಿಯದ್ದು.

ಚಂಡೀಗಡ ಪಾಲಿಕೆ ಚುನಾವಣೆಯಲ್ಲಿ ಎಎಪಿ ತೋರಿದ ಪ್ರದರ್ಶನವು ಗಮನಾರ್ಹ. ಬಿಜೆಪಿಯ ಮೇಯರ್ ಅವರನ್ನೇ ಸೋಲಿಸಿದ ಎಎಪಿ 35ರ ಪೈಕಿ 14 ಸ್ಥಾನಗಳನ್ನು ಗೆದ್ದಿದ್ದು, 2022ರಲ್ಲಿ ನಡೆಯಲಿರುವ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಭಾರಿ ಪೈಪೋಟಿಯ ಮುನ್ಸೂಚನೆ ನೀಡಿದೆ. ಬಿಜೆಪಿ ಹಾಗೂ ಕಾಂಗ್ರೆಸ್ ಅನ್ನು ಎರಡು ಹಾಗೂ ಮೂರನೇ ಸ್ಥಾನಕ್ಕೆ ಎಎಪಿ ತಳ್ಳಿದೆ.

ಪಂಜಾಬ್ ವಿಧಾನಸಭೆಗೆ 2017ರಲ್ಲಿ ನಡೆದ ಚುನಾವಣೆಯಲ್ಲಿಯೇ ಎಎಪಿ ಗೆಲ್ಲಲಿದೆ ಎಂದು ವಿಶ್ಲೇಷಿಸಲಾಗಿತ್ತು. ಎಎಪಿ 100 ಸ್ಥಾನ ಗೆಲ್ಲಲಿದೆ ಎಂದು ಸಮೀಕ್ಷೆಗಳೂ ಅಂದಾಜಿಸಿದ್ದವು. ಕಾಂಗ್ರೆಸ್‌ನಲ್ಲಿದ್ದ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರು ಎಎಪಿಗೆ ಈ ಅವಕಾಶ ನೀಡಲಿಲ್ಲ. ಆದರೂ, 20 ಶಾಸಕರು ಆಯ್ಕೆಯಾಗುವ ಮೂಲಕ ಶೇ 23.8ರಷ್ಟು ಮತಗಳನ್ನು ಗಳಿಸಿತ್ತು.

ಈಗ, ಪಂಜಾಬ್‌ನ ರಾಜಕೀಯ ಚಿತ್ರಣ ಬದಲಾಗಿದೆ. ಕಾಂಗ್ರೆಸ್‌ನಿಂದ ಕ್ಯಾಪ್ಟನ್ ಹೊರಬಂದಿದ್ದಾರೆ. ನೆಲೆಗೆ ಹುಡುಕಾಡುತ್ತಿರುವ ಬಿಜೆಪಿ ಜೊತೆ ಅವರು ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಮುಖ್ಯಮಂತ್ರಿ ಬದಲಾವಣೆ, ರಾಜ್ಯಾಧ್ಯಕ್ಷರ ಬದಲಾವಣೆ, ರಾಜೀನಾಮೆ ಪ್ರಹಸನ ಮೊದಲಾದ ಕಾರಣಗಳಿಂದ ಕಾಂಗ್ರೆಸ್ ಬಿಕ್ಕಟ್ಟಿನಲ್ಲಿದೆ. ಇದರ ನೇರ ಲಾಭ ಸಿಗುವುದು ಎಎಪಿಗೆ ಎಂದು ರಾಜಕೀಯ ತಜ್ಞರು ಅಭಿಪ್ರಾಯಪಡುತ್ತಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ತವರು ರಾಜ್ಯ ಗುಜರಾತ್‌ನಲ್ಲಿಯೂ ಎಎಪಿ ಅಸ್ತಿತ್ವ ಇದೆ. 2021ರ ಮಾರ್ಚ್‌ನಲ್ಲಿ ಪ್ರಕಟವಾದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿ ಮೇಲುಗೈ ಸಾಧಿಸಿದರೂ, ರಾಜ್ಯದ ಪ್ರಮುಖ ಪ್ರತಿಪಕ್ಷವಾದ ಕಾಂಗ್ರೆಸ್‌ಗೆ ಎಎಪಿ ಅಡ್ಡಿಯಾಗಿದ್ದು ಸುಳ್ಳಲ್ಲ. 44 ವಾರ್ಡುಗಳಲ್ಲಿ ಎಎಪಿ ಗೆದ್ದಿದೆ. 2022ರ ಕೊನೆಯಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗೆ ಸಜ್ಜಾಗುತ್ತಿರುವ ಕಾಂಗ್ರೆಸ್‌ಗೆ ಪೈಪೋಟಿ ನೀಡುವ ಸ್ಪಷ್ಟ ಸಂದೇಶವನ್ನು ಈ ಫಲಿತಾಂಶದ ಮೂಲಕ ಎಎಪಿ ರವಾನಿಸಿತ್ತು.

ಗಾಂಧಿನಗರ ಪಾಲಿಕೆಯಲ್ಲಿ ಬಿಜೆಪಿ ಗೆದ್ದಿದ್ದು 41 ಸ್ಥಾನ. ಕಾಂಗ್ರೆಸ್ ಎರಡು ವಾರ್ಡ್‌ಗಳಲ್ಲಿ, ಎಎಪಿ ಒಂದು ವಾರ್ಡ್‌ನಲ್ಲಿ ಗೆದ್ದಿವೆ. ಎಎಪಿಯ ಸ್ಪರ್ಧೆಯಿಂದಾಗಿ ಕಾಂಗ್ರೆಸ್‌ನ ಮತ ಪ್ರಮಾಣ ಶೇ 21ಕ್ಕೆ ಕುಸಿದಿದೆ. ಹಾಗೆಯೇ ಫೆಬ್ರುವರಿಯಲ್ಲಿ ನಡೆದ ಸೂರತ್ ಪಾಲಿಕೆ ಚುನಾವಣೆಯಲ್ಲಿ ಎಎಪಿ ಶೇ 28ರಷ್ಟು ಮತಗಳನ್ನು ಬುಟ್ಟಿಗೆ ಹಾಕಿಕೊಂಡಿದ್ದು, ಪಕ್ಷ ಭದ್ರವಾಗಿ ನೆಲೆಯೂರುತ್ತಿರುವ ಸೂಚನೆ ಇದು.

2017ರಿಂದಲೂ ಗೋವಾದಲ್ಲಿ ಅಸ್ತಿತ್ವಕ್ಕಾಗಿ ಹುಡುಕಾಡುತ್ತಿರುವ ಆಮ್ ಆದ್ಮಿ ಪಕ್ಷವು ಪ್ರಖರ ಪ್ರಚಾರದ ಹೊರತಾಗಿಯೂ ಚುನಾವಣೆಯಲ್ಲಿ ಸೋಲುಂಡಿತ್ತು. 17 ಸ್ಥಾನ ಗೆದ್ದಿದ್ದರೂ ಈಗ 2 ಸ್ಥಾನಗಳಿಗೆ ಕುಸಿದಿರುವ ಕಾಂಗ್ರೆಸ್, ಈ ಬಾರಿ ಎಎಪಿಯಿಂದ ಪ್ರಬಲ ಪ್ರತಿರೋಧ ಎದುರಿಸುವ ಸಾಧ್ಯತೆಯುದೆ. ಎಬಿಪಿ–ಸಿ ವೋಟರ್ ಸಮೀಕ್ಷೆಯು ಎಎಪಿ ಪರವಾದ ಅಲೆಯಿದೆ ಎಂಬ ಸೂಚನೆ ನೀಡಿದೆ. ಎಎಪಿ ಶೇ 22ರಷ್ಟು ಮತಗಳನ್ನು ಗಳಿಸುವ ಸಾಧ್ಯತೆಯಿದೆ. ಈ ಸಮೀಕ್ಷೆ ಪ್ರಕಾರ ಕಾಂಗ್ರೆಸ್ ಗಳಿಸಲಿರುವ ಮತ ಪ್ರಮಾಣ ಶೇ 15ರಷ್ಟು ಮಾತ್ರ.

## ಬ್ರ್ಯಾಂಡ್ ಮಮತಾ: ಟಿಎಂಸಿ ಕಸರತ್ತು

**ಪಶ್ಚಿಮ ಬಂಗಾಳದ** ಆಚೆಗೂ ತನ್ನ ನೆಲೆ ಕಂಡುಕೊಳ್ಳಲು ಟಿಎಂಸಿ ಯತ್ನಿಸುತ್ತಿದೆ. ತ್ರಿಪುರಾ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಸ್ಪರ್ಧಿಸಿ ಕೈಸುಟ್ಟುಕೊಂಡಿದೆ. ಮುಂದಿನ ವರ್ಷ ಚುನಾವಣೆ ಎದುರಿಸಲಿರುವ ಮೇಘಾಲಯ ಮತ್ತು ಗೋವಾದಲ್ಲಿ ಅದೃಷ್ಟ ಪರೀಕ್ಷೆಗೆ ಟಿಎಂಸಿ ಮುಂದಾಗಿದೆ. ಕಾಂಗ್ರೆಸ್ ಮುಖಂಡರನ್ನೇ ತನ್ನ ತೆಕ್ಕೆಗೆ ತೆಗೆದುಕೊಳ್ಳುವುದು ಟಿಎಂಸಿಯ ಒಂದು ಕಾರ್ಯತಂತ್ರ. ಅಸ್ಸಾಂ, ತ್ರಿಪುರಾ, ಗೋವಾ, ಉತ್ತರ ಪ್ರದೇಶ ಸೇರಿ ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ ಮುಖಂಡರು ಟಿಎಂಸಿ ಸೇರಿದ್ದಾರೆ.

ಟಿಎಂಸಿಯ ಚಟುವಟಿಕೆಗಳನ್ನು 'ಮಮತಾ ಬ್ಯಾನರ್ಜಿಯ ಬ್ರ್ಯಾಂಡ್ ಬಿಲ್ಡಿಂಗ್ ಕಸರತ್ತು' ಎಂದು ಒಂದು ವರ್ಗದ ರಾಜಕೀಯ ತಜ್ಞರು ವ್ಯಾಖ್ಯಾನಿಸಿದ್ದಾರೆ. ಟಿಎಂಸಿಯ ಹಲವು ನಾಯಕರೂ ಇದನ್ನು ಒಪ್ಪಿಕೊಂಡಿದ್ದಾರೆ. 'ದೇಶದಲ್ಲಿ ಬಿಜೆಪಿಯನ್ನು ಬಗ್ಗುಬಡಿಯಬಲ್ಲ ಏಕೈಕ ಪಕ್ಷ ಟಿಎಂಸಿ', ಮತ್ತು 'ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಜೋಡಿಯನ್ನು ಸಮರ್ಥವಾಗಿ ಎದುರಿಸಬಲ್ಲ ಏಕೈಕ ಪ್ರಬಲ ನಾಯಕಿ ಮಮತಾ ಬ್ಯಾನರ್ಜಿ' ಎಂಬ ಮಾತುಗಳನ್ನು ಟಿಎಂಸಿ ನಾಯಕರು ಹಲವು ಬಾರಿ ಹೇಳಿದ್ದಾರೆ. ಬೇರೆ ಪಕ್ಷಗಳಿಂದ ಟಿಎಂಸಿಗೆ ಕರೆಸಿಕೊಳ್ಳಲಾದ ನಾಯಕರಿಂದಲೂ ಈ ಮಾತುಗಳನ್ನು ಹೇಳಿಸಲಾಗಿದೆ. ಈ ಮೂಲಕ ಮಮತಾ ಬ್ಯಾನರ್ಜಿ ರಾಷ್ಟ್ರಮಟ್ಟದ ನಾಯಕಿ ಎಂದು ಬಿಂಬಿಸಲಾಗುತ್ತಿದೆ. ಈ ಕೆಲಸವನ್ನು ಟಿಎಂಸಿ ಅತ್ಯಂತ ವ್ಯವಸ್ಥಿತವಾಗಿ ಮಾಡುತ್ತಿದೆ.

ಟಿಎಂಸಿ ಒಂದು ರಾಷ್ಟ್ರೀಯ ಪಕ್ಷ ಎನಿಸಿಕೊಳ್ಳಲು, ಪಶ್ಚಿಮ ಬಂಗಾಳದ ಆಚೆಗೂ ಅದು ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳಬೇಕು. ಆದರೆ ಟಿಎಂಸಿ ಮತ್ತು ಮಮತಾ ಬ್ಯಾನರ್ಜಿ ಅವರ ರಾಜಕಾರಣದ ಸ್ವರೂಪವು ಎಲ್ಲಾ ರಾಜ್ಯಗಳಿಗೆ ಒಪ್ಪುವುದಿಲ್ಲ. ಇದಕ್ಕಾಗಿ ಪಶ್ಚಿಮ ಬಂಗಾಳದೊಂದಿಗೆ ಸಾಂಸ್ಕೃತಿಕ ಸಂಬಂಧ ಹೊಂದಿರುವ ರಾಜ್ಯಗಳಲ್ಲಿ ತನ್ನ ನೆಲೆ ಕಂಡುಕೊಳ್ಳಲು ಟಿಎಂಸಿ ಮುಂದಾಗಿದೆ. ಬಂಗಾಳಿ ಭಾಷಿಕರು ಅಧಿಕವಾಗಿರುವ ತ್ರಿಪುರಾ ಮತ್ತು ಅಸ್ಸಾಂನಲ್ಲಿ ಟಿಎಂಸಿ ತನ್ನ ಕಚೇರಿಯನ್ನು ತೆರೆದಿದೆ. ತ್ರಿಪುರಾದ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಬಿಜೆಪಿ ಎದುರು ಸ್ಪರ್ಧಿಸಿ, ಬೀದಿಕಾಳಗವನ್ನೂ ನಡೆಸಿದೆ. ಆದರೆ ಅದರ ಪ್ರತಿಫಲ ಫಲಿತಾಂಶದಲ್ಲಿ ಪ್ರತಿಬಿಂಬಿಸಲಿಲ್ಲ. ಬಂಗಾಳಿ ಭಾಷಿಕರು ಮತ್ತು ಮುಸ್ಲಿಮರು ಬಹುಸಂಖ್ಯಾತವಾಗಿರುವ ಅಸ್ಸಾಂನ ಬರಾಕ್ ಕಣಿವೆಯಲ್ಲಿ ಟಿಎಂಸಿ ಪಕ್ಷದ ಪದಾಧಿಕಾರಿಗಳನ್ನು ನೇಮಿಸಿದೆ. ಕಾಂಗ್ರೆಸ್ ನಾಯಕರನ್ನು ಪಕ್ಷಕ್ಕೆ ಸೇರಿಸಿಕೊಂಡಿದೆ.

ತಾನು ಸ್ವತಂತ್ರವಾಗಿ ನೆಲೆ ಕಂಡುಕೊಳ್ಳಲು ಸಾಧ್ಯವಿಲ್ಲದೇ ಇರುವ ರಾಜ್ಯಗಳಲ್ಲಿ, ಪ್ರಾದೇಶಿಕ ಪಕ್ಷಗಳ ಜತೆಗೆ ಕೈಜೋಡಿಸಲು ಟಿಎಂಸಿ ಮುಂದಾಗಿದೆ. ಉತ್ತರ ಪ್ರದೇಶ ಚುನಾವಣೆಯಲ್ಲಿ ಅಖಿಲೇಶ್ ಯಾದವ್ ನೇತೃತ್ವದ ಸಮಾಜವಾದಿ ಪಕ್ಷಕ್ಕೆ ಟಿಎಂಸಿ ಬೆಂಬಲ ಘೋಷಿಸಿದೆ. ಸ್ವತಃ ಮಮತಾ ಬ್ಯಾನರ್ಜಿ ಅವರು ಅಖಿಲೇಶ್ ಪರವಾಗಿ ಪ್ರಚಾರ ನಡೆಸುವುದಾಗಿ ಹೇಳಿದ್ದಾರೆ. ಇದೇ ರೀತಿಯ ಮೈತ್ರಿಯನ್ನು ಎನ್‌ಸಿಪಿ ಮತ್ತು ಶಿವಸೇನಾ ಜತೆಗೆ ಮಾಡಿಕೊಳ್ಳಲು ಟಿಎಂಸಿ ಮುಂದಾಗಿದೆ. ಆದರೆ ಆ ಎರಡು ಯತ್ನಗಳು ನಿರೀಕ್ಷಿತ ಹಂತ ಮುಟ್ಟಿಲ್ಲ.

ಈ ಎಲ್ಲಾ ಕಸರತ್ತುಗಳನ್ನು ನಡೆಸುವಾಗ ಟಿಎಂಸಿ ಒಂದು ಮಾತನ್ನಂತೂ ಒತ್ತಿ ಒತ್ತಿ ಹೇಳುತ್ತಿದೆ. 'ವಿರೋಧ ಪಕ್ಷದ ಸ್ಥಾನವನ್ನು ನಿರ್ವಹಿಸುವಲ್ಲಿ ಕಾಂಗ್ರೆಸ್ ವಿಫಲವಾಗಿದೆ' ಎಂಬುದೇ ಆ ಮಾತು. ಸ್ವತಃ ಮಮತಾ ಬ್ಯಾನರ್ಜಿ ಮಾಧ್ಯಮಗಳ ಮುಂದೆ ಬಹಿರಂಗವಾಗಿ ಇದನ್ನು ಹೇಳಿದ್ದಾರೆ. ಅವಕಾಶ ಸಿಕ್ಕಾಗಲೆಲ್ಲಾ ಕಾಂಗ್ರೆಸ್ ನಾಯಕತ್ವದ ವಿರುದ್ಧ ಮಮತಾ ಬ್ಯಾನರ್ಜಿ ಅವರು ಹರಿಹಾಯುತ್ತಿದ್ದಾರೆ. ಮಮತಾ ಬ್ಯಾನರ್ಜಿ ಅವರಂತಹ ಆಕ್ರಮಣಕಾರಿ ನಾಯಕತ್ವದಿಂದ ಮಾತ್ರವೇ ಮೋದಿ–ಶಾ ಜೋಡಿಯನ್ನು ಸೋಲಿಸಲು ಸಾಧ್ಯ ಎನ್ನಲಾಗುತ್ತಿದೆ. ಆ ಮೂಲಕ ಮಮತಾ ಬ್ಯಾನರ್ಜಿಯ ಬ್ರ್ಯಾಂಡ್ ಕಟ್ಟಲಾಗುತ್ತಿದೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 8

## ಚಂಚುಲೆಯ ವೈರಾಗ್ಯ

ದುರಾಚಾರಿಯಾದ ಗಂಡ ಬಿಂದುಗನ ಸಾವಿನ ನಂತರ ಚಂಚುಲೆ ತನ್ನ ಮಕ್ಕಳೊಡನೆ ವಾಸಮಾಡುತ್ತಾ, ಯೌವನ ಇರುವವರೆಗೂ ಕಾಮಾಸಕ್ತಳಾಗಿ ಜಾರರ ಸಹವಾಸ ಮಾಡುತ್ತಿದ್ದಳು. ಕಾಲ ಸರಿದಂತೆ, ಅವಳ ಯೌವನವು ಇಳಿಯುತ್ತಾ ಬಂತು. ಹೀಗಿರುವಾಗ ಚಂಚುಲೆಯು ಸಂಕ್ರಮಣ ದಿನ, ತನ್ನ ಬಂಧುಗಳೊಡನೆ ಗೋಕರ್ಣವೆಂಬ ತೀರ್ಥಕ್ಷೇತ್ರಕ್ಕೆ ಹೋದಳು. ಅಲ್ಲಿರುವ ಒಂದು ತೀರ್ಥಜಲದಲ್ಲಿ ಸ್ನಾನಮಾಡಿ, ಪವಿತ್ರ ಸ್ಥಳಗಳಲ್ಲೆಲ್ಲ ಸಂಚರಿಸಿದಳು. ಕೊನೆಗೆ ಅಲ್ಲಿದ್ದ ಒಂದು ದೇವಾಲಯಕ್ಕೆ ಬಂದಳು. ಅಲ್ಲಿ ಜೋಯಿಸನೊಬ್ಬ ಹೇಳುತ್ತಿದ್ದ ಪುಣ್ಯಕರವಾದ ಈಶ್ವರನ ಪುರಾಣದ ಕಥೆಯನ್ನ ಕೇಳುತ್ತಾ ನಿಂತಳು.

ಜೋಯಿಸರು ಶಿವಪುರಾಣ ಹೇಳುವಾಗ 'ಜಾರತನ ಮಾಡಿದ ಹೆಂಗಸರನ್ನ ಯಮಕಿಂಕರರು ಚೆನ್ನಾಗಿ ಕಾಯಿಸಿರುವ ಕಬ್ಬಿಣದ ಗಡಾರಿಯಲ್ಲಿಟ್ಟು, ಕಾಮದ ಮೈ ಸುಡುತ್ತಾ, ಹಿಂಸಿಸುತ್ತಾರೆ' ಅಂದಾಗ ಚಂಚುಲೆ ಭಯಭೀತಳಾದಳು. ಜೀವನದಲ್ಲಿ ಮೊದಲ ಬಾರಿ ಅವಳಿಗೆ ವೈರಾಗ್ಯ ಬಂತು. ಕಥೆಯೆಲ್ಲ ಮುಗಿದ ನಂತರ ಜನರೆಲ್ಲ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಚಂಚುಲೆ ಮಾತ್ರ ಅಲ್ಲಿಂದ ಹೋಗದೆ ಹೆದರಿಕೆಯಿಂದ ನಡುಗುತ್ತಾ ನಿಂತಿದ್ದಳು. ನಂತರ ಸಾವರಿಸಿಕೊಂಡು ಶಿವಪುರಾಣ ಹೇಳಿದ ಜೋಯಿಸರ ಬಳಿ ಬಂದು ಗುಟ್ಟಾಗಿ ತಾನು ಮಾಡುತ್ತಿದ್ದ ಪಾಪ ಕೃತ್ಯವನ್ನೆಲ್ಲಾ ಹೇಳಿದಳು. 'ಶಿವನ ಸತ್ಕಥೆಯನ್ನು ಕೇಳಿ ನನಗೆ ವಿಷಯಸುಖಗಳಲ್ಲಿ ವೈರಾಗ್ಯವುಂಟಾಗಿದೆ. ನಾನು ಅನೇಕ ಪಾಪ ಕೆಲಸಗಳನ್ನು ಮಾಡಿದ್ದೇನೆ. ಶಿವಪುರಾಣ ಕೇಳಿದ ನಂತರ ನಾನು ಮಾಡಿದ ತಪ್ಪಿನ ಅರಿವಾಗಿದೆ. ನನ್ನ ಮೇಲೆ ದಯೆ ಇಟ್ಟು, ನನ್ನನ್ನು ಪಾಪದ ಶಿಕ್ಷೆಯಿಂದ ಕಾಪಾಡಿ. ನರಕವೆಂಬ ಸಮುದ್ರದಲ್ಲಿ ಬಿದ್ದಿರುವ ನನ್ನನ್ನು ಉದ್ಧಾರಮಾಡಿ. ನನಗೆ ನೀವೇ ಗುರು, ತಂದೆ, ತಾಯಿ ಎಲ್ಲಾ. ದೀನಳಾದ ನಾನು ನಿಮ್ಮನ್ನು ನಂಬಿರುವೆ. ನನಗೆ ಪುಣ್ಯಸಂಪಾದಿಸುವ ಮಾರ್ಗ ತಿಳಿಸಿ' ಎಂದು ದುಃಖಭರಿತಳಾಗಿ ಬೇಡಿಕೊಂಡಳು.

ಶಿವಕಥೆ ಕೇಳಿದ್ದರಿಂದ ಚಂಚುಲೆಗೆ ಮನಃಪರಿವರ್ತನೆಯಾಗಿ, ಅವಳಲ್ಲಿ ತನ್ನ ಪಾಪಕೃತ್ಯಗಳಿಗೆ ಪಶ್ಚಾತ್ತಾಪ ಉಂಟಾಗಿತ್ತು. ಇದನ್ನ ಅರಿತ ಆ ಜೋಯಿಸ, ತನ್ನ ಕಾಲಿಗೆ ಬಿದ್ದ ಚಂಚುಲೆಯನ್ನು ಮೇಲಕ್ಕೆ ಎತ್ತಿ ದಯೆಯಿಂದ ಅವಳಿಗೆ ಮಾರ್ಗದರ್ಶನ ನೀಡುವುದಾಗಿ ಭರವಸೆ ನೀಡಿದರು. 'ಪವಿತ್ರವಾದ ವೈರಾಗ್ಯವನ್ನುಂಟುಮಾಡುವ ಶಿವಪುರಾಣದ ಕಥೆಯನ್ನು ಕೇಳಿ, ಸರಿಯಾದ ಸಮಯದಲ್ಲಿ ಶಿವಾನುಗ್ರಹದಿಂದ ಎಚ್ಚೆತ್ತಿರುವೆ. ಇದು ನಿನ್ನ ಅದೃಷ್ಟ. ನೀನು ಮಾಡಬಾರದ ಪಾಪ ಮಾಡಿದ್ದೀಯಾ. ಹೆದರಬೇಡ, ಈಶ್ವರನ ಮೊರೆಹೋಗು. ಅವನ ಅನುಗ್ರಹದಿಂದ ನಿನ್ನ ಪಾಪವೆಲ್ಲವೂ ತಕ್ಷಣ ನಾಶವಾಗುವುದು' ಎಂದು ಪಾಪವನ್ನೆಲ್ಲಾ ನಾಶಮಾಡಿ, ಯಾವಾಗಲೂ ಒಳ್ಳೆಯದನ್ನು ಮಾಡುವ ಪವಿತ್ರವಾದ ಶಿವನ ಕೀರ್ತನೆಯಿಂದ ಕೂಡಿದ ಶಿವಮಹಾಪುರಾಣವನನ್ನ ಹೇಳಿದ.

ಗೋಕರ್ಣದಂಥ ಪುಣ್ಯಕ್ಷೇತ್ರದಲ್ಲಿ ಚಂಚುಲೆಯು ಭಕ್ತಿ, ಜ್ಞಾನ, ವೈರಾಗ್ಯಗಳನ್ನುಂಟುಮಾಡುವ ಮತ್ತು ಮೋಕ್ಷವನ್ನು ಕೊಡುವ ಉತ್ಕೃಷ್ಟವಾದ ಶಿವಪುರಾಣದ ಕಥೆಯನ್ನು ಕೇಳಿ ಕೃತಾರ್ಥಳಾದಳು. ನಂತರ ಗೋಕರ್ಣದ ತೀರ್ಥಜಲದಲ್ಲಿ ನಿತ್ಯವೂ ಸ್ನಾನಮಾಡುತ್ತಾ, ಜಟೆಯನ್ನು ಬಿಟ್ಟು ನಾರುಬಟ್ಟೆಗಳನ್ನುಟ್ಟು, ಪರಿಶುದ್ಧವಾದ ಮನಸ್ಸಿನಿಂದ ಈಶ್ವರನ ಧ್ಯಾನದಲ್ಲಿ ನಿರತಳಾದಳು. ಮೈಗೆಲ್ಲಾ ಭಸ್ಮವನ್ನು ಲೇಪಿಸಿಕೊಂಡು, ಕೊರಳಿನಲ್ಲಿ ರುದ್ರಾಕ್ಷಿಸರವನ್ನು ಧರಿಸುತ್ತಿದ್ದಳು. ಹೆಚ್ಚು ಆಹಾರ ಬಯಸದೆ, ಮಿತವಾದ ಆಹಾರವನ್ನು ಸೇವಿಸುತ್ತಿದ್ದಳು. ಮೌನವ್ರತವನ್ನು ಕಟ್ಟುನಿಟ್ಟಾಗಿ ಆಚರಿಸುತ್ತಾ, ಈಶ್ವರನನ್ನ ಧ್ಯಾನ ಮಾಡುತ್ತಿದ್ದಳು. ಹೀಗೆ ಸುಮಾರು ವರ್ಷ ಶಿವನನ್ನ ಸ್ಮರಿಸುತ್ತಾ ಗೋಕರ್ಣ ಕ್ಷೇತ್ರದಲ್ಲಿಯೇ ಕಳೆದಳು. ಕೊನೆಗೊಂದು ದಿನ ಅವಳ ಆಯುಷ್ಯ ಮುಗಿಯಿತು. ಭಕ್ತಿ, ಜ್ಞಾನ, ವೈರಾಗ್ಯಯುಕ್ತಳಾಗಿದ್ದರಿಂದ ಅವಳಿಗೆ ಅನಾಯಾಸ ಮರಣ ಪ್ರಾಪ್ತವಾಯಿತು. ಚಂಚುಲೆಯ ಭಕ್ತಿಗೆ ಮೆಚ್ಚಿದ ಈಶ್ವರನು ವಿಮಾನವನ್ನು ತನ್ನ ಗಣಗಳೊಡನೆ ಕಳುಹಿಸಿಕೊಟ್ಟ. ಶಿವದೂತರು ಚಂಚುಲೆಯನ್ನು ಕೈಲಾಸಕ್ಕೆ ಕರೆದುಕೊಂಡು ಹೋದರು.

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ **ಉತ್ತರಾಖಂಡದ** ಹರಿದ್ವಾರದಲ್ಲಿ ಡಿ. 17, 18ರಂದು ನಡೆದ 'ಧರ್ಮ ಸಂಸತ್' ಕಾರ್ಯಕ್ರಮದಲ್ಲಿ ಕೆಲವು ಸಂತರು ಮುಸ್ಲಿಮರ ಹತ್ಯಾಕಾಂಡಕ್ಕೆ ಕರೆ ನೀಡಿದ್ದರು. ಈ ಹೇಳಿಕೆಗಳಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಖಂಡನೆ ವ್ಯಕ್ತವಾಗಿದೆ. ಅದಾದ ಬಳಿಕ ಬಿಜೆಪಿ ಸದಸ್ಯರು ಮತ್ತು ಬೆಂಬಲಿಗರು ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಓವೈಸಿ ಅವರ ವಿಡಿಯೊವನ್ನು ಜಾಲತಾಣಗಳಲ್ಲಿ ವೈರಲ್ ಮಾಡುತ್ತಿದ್ದಾರೆ. ಧರ್ಮ ಸಂಸತ್ ನಡೆದ ಬಳಿಕ ಈ ವಿಡಿಯೊವನ್ನು ಓವೈಸಿ ಚಿತ್ರೀಕರಿಸಿದ್ದಾರೆ. ಅದರಲ್ಲಿ ಹಿಂದೂಗಳಿಗೆ ನೇರವಾಗಿ ಬೆದರಿಕೆ ಒಡ್ಡುತ್ತಿದ್ದಾರೆ. ಧರ್ಮ ಸಂಸತ್ ಕಾರ್ಯಕ್ರಮದ ವಿರುದ್ಧ ಪೊಲೀಸರಿಗೆ ದೂರು ನೀಡಲು ಉತ್ತರಾಖಂಡ ಎಐಎಂಐಎಂಗೆ ಅವರು ನಿರ್ದೇಶಿಸಿದ್ದಾರೆ ಎಂದು ಆರೋಪಿಸಲಾಗಿದೆ.

✓ **ಈ ವಿಡಿಯೊ** ಚಿತ್ರೀಕರಣ ಆಗಿರುವುದು ಧರ್ಮ ಸಂಸತ್ ಕಾರ್ಯಕ್ರಮ ನಡೆಯುವುದಕ್ಕಿಂತ ಐದು ದಿನಗಳ ಮೊದಲು ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ. ಉತ್ತರ ಪ್ರದೇಶದ ಕಾನ್ಪುರದಲ್ಲಿ ನಡೆದ ಸಭೆಯೊಂದರಲ್ಲಿ ಓವೈಸಿ ಮಾತನಾಡಿದ್ದರು. ಆದರೆ ಭಾಷಣದಲ್ಲಿ ಓವೈಸಿ ಹಿಂದೂಗಳನ್ನು ಬೆದರಿಸಿಲ್ಲ. ಅವರು ಉತ್ತರ ಪ್ರದೇಶ ಪೊಲೀಸರ ಕುರಿತು ಮಾತನಾಡಿದ್ದಾರೆ. ಕಾನ್ಪುರದ ರಸೂಲಾಬಾದ್ ಪೊಲೀಸ್ ಠಾಣೆಯಲ್ಲಿ 80 ವರ್ಷ ವಯಸ್ಸಿನ ಮುಸ್ಲಿಂ ವ್ಯಕ್ತಿಯ ಮೇಲೆ ದೌರ್ಜನ್ಯ ಮಾಡಲಾಯಿತು ಎಂದು ನನಗೆ ತಿಳಿಯಿತು. ಪೊಲೀಸರು ನನ್ನ ಪದಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಿ, ನಿಮ್ಮ ಕ್ರೌರ್ಯವನ್ನು ನಾವು ಸದಾ ನೆನಪಿನಲ್ಲಿಟ್ಟುಕೊಳ್ಳುತ್ತೇವೆ. ಅಲ್ಲಾ ನಿಮ್ಮನ್ನು ಶಿಕ್ಷಿಸುತ್ತಾನೆ ಎಂದಿದ್ದಾರೆ.

## ಗುಂಡಣ್ಣ

## ಬೆರಗಿನ ಬೆಳಕು

ಗುರುರಾಜ ಕರಜಗಿ

### ಪುರುಷತೆಯ ಸೇತುವೆ

ಪರದೈವವನು ತೊರೆಯೆ ಗತಿ ನರನಿಗಿಲ್ಲ ದಿಟ |
ನರನಿಲ್ಲದಿರೆ ದೇವನನು ಕೇಳ್ವರಾರು? ||
ಪುರುಷತೆಯೆ ಸೇತುವೆ ಮೃಗತ್ವದಿಂ ದಿವ್ಯತೆಗೆ |
ಮುರಿಯದಿರು ಸೇತುವೆಯ – ಮಂಕುತಿಮ್ಮ
|| 529 ||

**ಪದ-ಅರ್ಥ:** ತೊರೆಯೆ = ಬಿಟ್ಟರೆ, ನರನಿಲ್ಲದಿರೆ = ನರನು + ಇಲ್ಲದಿರೆ, ಕೇಳ್ವರಾರು = ಕೇಳ್ವರು(ಕೇಳುವವರು) + ಯಾರು,

**ವಾಚ್ಯಾರ್ಥ:** ಭಗವಂತನನ್ನು ಬಿಟ್ಟರೆ ನರನಿಗೆ ಗತಿ ಇಲ್ಲ. ಅದು ಸರಿ. ನರನೇ ಇಲ್ಲದಿದ್ದರೆ ದೇವರನ್ನು ಕೇಳುವವರು ಯಾರು? ಪುರುಷತೆಯೆ ಮೃಗತ್ವಕ್ಕೂ, ದಿವ್ಯತೆಗೂ ಸೇತುವೆ. ಆ ಸೇತುವೆಯನ್ನು ಮುರಿಯದಿರು.

**ವಿವರಣೆ:** ದೇವರು ಎಂಬ ಕಲ್ಪನೆ ಬಹುಶಃ ಮನುಷ್ಯ ಎನ್ನುವ ಜೀವ ಭೂಮಿಗೆ ಬಂದಾಗಿನಿಂದಲೇ ಇರಬಹುದು. ನಾನೊಂದು ಮನೆಯನ್ನು ನೋಡುತ್ತೇನೆ. ಅದು ಇದೆ. ಆದ್ದರಿಂದ ಅದನ್ನು ಯಾರಾದರೂ ಕಟ್ಟಿಸಿರಲೇಬೇಕು ಎಂಬ ತೀರ್ಮಾನಕ್ಕೆ ಬರುತ್ತೇನೆ. ಅಂತೆಯೇ ಪ್ರಪಂಚದ ಪ್ರತಿಯೊಂದು ವಸ್ತುವೂ ಸೃಷ್ಟಿಯಾದ್ದರಿಂದ, ಸೃಷ್ಟಿಕರ್ತನೊಬ್ಬನಿರಲೇಬೇಕೆಂಬ ತಾರ್ಕಿಕ ತೀರ್ಮಾನಕ್ಕೆ ಮನುಷ್ಯ ಬಂದ. ಇಡೀ ಪ್ರಪಂಚವನ್ನೇ ಸೃಷ್ಟಿ ಮಾಡಿದ್ದರಿಂದ ಅವನು ಬಹಳ ದೊಡ್ಡವನು, ಅಸಾಧ್ಯ ಶಕ್ತಿವಂತನೂ ಆಗಿರಬೇಕೆಂಬ ನಂಬಿಕೆ ಬೆಳೆಯಿತು. ತಾನು ಕಲ್ಪಿಸಿಕೊಂಡ ದೇವರು ತುಂಬ ದೊಡ್ಡವನಾದ್ದರಿಂದ ಅವನ ಬಗ್ಗೆ ಗೌರವದ ಜೊತೆಗೆ ಭಯವೂ ಬಂದಿತು. ದೇವರು ರಕ್ಷಕ, ಉದ್ಧಾರಕನಾದ. ಅವನು ಭಯಕೃತ್. ಭಯನಾಶಕ. ಅಂದರೆ ಅವನು ಭಯವನ್ನು ಹುಟ್ಟಿಸುವವನೂ ಹೌದು, ಭಯನಾಶಕನೂ ಹೌದು. ಆದ್ದರಿಂದ ಗೌರವದಿಂದಾಗಲಿ, ಭಯದಿಂದಾಗಲಿ, ಅವನನ್ನು ಮನುಷ್ಯ ನೆನೆಯುತ್ತಲೇ ಇರುತ್ತಾನೆ. ಎಲ್ಲದಕ್ಕೂ ಕಾರಣನಾದ, ಸರ್ವಶಕ್ತನಾದ ಭಗವಂತನ ರಕ್ಷಣೆಯ ಅವಶ್ಯಕತೆಯನ್ನು ಮನಗಂಡ ಮನುಷ್ಯನಿಗೆ ದೇವರನ್ನು ಬಿಟ್ಟರೆ ಗತಿಯಿಲ್ಲ.

ಅದು ಸರಿ. ಮನುಷ್ಯನ ಕಲ್ಪನೆ ದೇವರು. ಮನುಷ್ಯನೇ ಇಲ್ಲದೆ ಹೋದರೆ, ದೇವರನ್ನು ಕೇಳುವವರಾರು?

ಕಗ್ಗದ ಮುಂದಿನ ಎರಡು ಸಾಲುಗಳು ತುಂಬ ಮಹತ್ವಪೂರ್ಣವಾದವು. ಮೃಗತ್ವಕ್ಕೂ, ದೇವತ್ವಕ್ಕೂ ಸೇತುವೆಯಾದದ್ದು ಪುರುಷತೆ ಎನ್ನುತ್ತದೆ. ಪುರುಷತೆ ಎನ್ನುವ ಪದ ಕೇವಲ ಪುರುಷರನ್ನುದ್ದೇಶಿಸಿದ್ದಲ್ಲ. ಅದೊಂದು ವಿಶೇಷ ಗುಣ. ಅದರಲ್ಲಿ ಶಿಸ್ತು, ಸಂಯಮ, ಪರಿಶ್ರಮ, ಚಿಂತನೆಗಳು ಸೇರಿವೆ. ಇವೆಲ್ಲ ಸೇರಿ ನೈತಿಕತೆಯಾಗುತ್ತದೆ. ನಾವು ಸಮಾಜದಲ್ಲಿ ಶಾಂತಿಯಿಂದ, ನೆಮ್ಮದಿಯಿಂದ ಸಹಬಾಳ್ವೆ ನಡೆಸುವುದಕ್ಕೆ ಇವು ಅತ್ಯಂತ ಅವಶ್ಯಕ. ನನಗೆ ಬೇಕು ಎನ್ನಿಸಿದ್ದನ್ನು ಕಸಿದುಕೊಳ್ಳುವುದು ಮೃಗೀಯ ನಡೆ. ನನ್ನ ಅಪೇಕ್ಷೆಗಳನ್ನು ತಡೆಹಿಡಿದು, ಮತ್ತೊಬ್ಬರಿಗೆ ಅದರಿಂದ ತೊಂದರೆಯಾಗದಂತೆ ನಡೆಯುವುದು ಸಂಯಮ. ನನಗಿಷ್ಟವಾಗದವರನ್ನು ಕೊಂದು ಹಾಕುವುದು ಮೃಗೀಯತೆ. ಅಂಥವರೊಡನೆಯೂ ಸಹಜೀವನ ನಡೆಸುವುದು ದಿವ್ಯತೆಯ ಲಕ್ಷಣ. ಎಲ್ಲ ಪ್ರಗತಿಯೂ ದಿವ್ಯತೆಯ ಅಭಿವ್ಯಕ್ತಿ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ, 'ಆತ್ಮದ ಅನಂತ ಶಕ್ತಿಯನ್ನು ಭೌತಿಕ ಪ್ರಪಂಚದ ಮೇಲೆ ಬೀರಿದರೆ ಭೌತಿಕ ಬೆಳವಣಿಗೆಯಾಗುತ್ತವೆ, ಅದನ್ನು ಆಲೋಚನಾ ಪ್ರಪಂಚದ ಮೇಲೆ ಬೀರಿದರೆ ಬುದ್ಧಿಯ ಬೆಳವಣಿಗೆಯಾಗುತ್ತದೆ, ಅದನ್ನು ತನ್ನ ಮೇಲೆಯೇ ಬೀರಿಕೊಂಡರೆ ಮಾನವನನ್ನು ದೇವನನ್ನಾಗಿ ಮಾಡುತ್ತದೆ'. ಈ ಆತ್ಮಶಕ್ತಿಯ ಅಭಿವ್ಯಕ್ತಿಯೇ ಪುರುಷತೆ. ಮೃಗತ್ವದಿಂದ ದೈವತ್ವಕ್ಕಿರುವ ಸೇತುವೆ ಈ ಪುರುಷತೆ. ಅದನ್ನು ಮುರಿಯಬಾರದು.

## ದಿನ ಭವಿಷ್ಯ

ಬುಧವಾರ ಡಿಸೆಂಬರ್ 29, 2021

**ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹೇಮಂತ ಋತು ಮಾರ್ಗಶಿರ (ಧನುರ್ಮಾಸ) ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಮೂಲ ದಶಮಿ ಗಂ. 11-48 (ಹ. 11-30) ಬುಧವಾರ ನಿತ್ಯ ನಕ್ಷತ್ರ ಸ್ವಾತಿ ಗಂ. 40-27 (ರಾ. 10-58) ಸುಕರ್ಮ ನಾಮ ಯೋಗ ಗಂ. 38-48 ಭದ್ರೆ ಕರಣ ಗಂ. 11-30 ವಿಶ ಶೇಷ ಗಂ. 0-34 ವಿಷ ಗಂ. 53-41 ಅಮೃತ ಗಂ. 19-15 ರಾಹುಕಾಲ:** ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 : ಸೂರ್ಯೋದಯ: 6-42 ಸೂರ್ಯಾಸ್ತ: 5-57 ಅದೃಷ್ಟ ಸಂಖ್ಯೆ 2, 7

**ಮೇಷ:** ಸಂಶೋಧನಾ ನಿರತರಿಗೆ ಅಚ್ಚರಿಯ ಫಲಿತಾಂಶ ದೊರಕಲಿದೆ. ಅನೇಕ ದಿನಗಳ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಉಣ್ಣುವ ಅವಕಾಶ ಒದಗಿ ಬರಲಿದೆ. ಗೃಹಾಲಂಕಾರ ಉದ್ಯಮದಲ್ಲಿ ತೊಡಗಿದವರಿಗೆ ಉತ್ತಮ ಲಾಭದ ನಿರೀಕ್ಷೆ.

**ವೃಷಭ:** ವಿವಾಹ ಸಂಬಂಧಿತ ಮಾತುಕತೆಗಳು ಒಂದು ನಿರ್ದಿಷ್ಟ ಹಂತ ತಲುಪಿ ನಿರಾಳವಾಗಲಿದೆ. ಮಕ್ಕಳ ವಿದ್ಯಾಭ್ಯಾಸವು ಉತ್ತಮ ರೀತಿಯಲ್ಲಿ ಸಾಗಿ ಪ್ರಗತಿ ಕಾಣುವುದು. ನಿಮ್ಮ ಇಚ್ಛೆಗಳು ನೆರವೇರಿ ಮಾನಸಿಕ ನೆಮ್ಮದಿ.

**ಮಿಥುನ:** ಆಪ್ತರಿಗೆ ಮುಖ್ಯ ಕಾರ್ಯದಲ್ಲಿ ಎದುರಾದ ಅಡಚಣೆಯನ್ನು ನಿವಾರಿಸುವ ಜವಾಬ್ದಾರಿ ನಿಮ್ಮ ಮೇಲಿದೆ. ಶುಭ ಕಾರ್ಯ ಮಾಡಿದ ಪುಣ್ಯಕ್ಕೆ ಭಾಜನರಾಗುವ ಯೋಗ. ಮನೆಯವರೆಲ್ಲರ ಪ್ರಶಂಸೆಗೆ ಪಾತ್ರರಾಗುವಿರಿ.

**ಕರ್ಕಾಟಕ:** ಆಮದು–ರಫ್ತು ವ್ಯವಹಾರದಲ್ಲಿನ ಕಾನೂನು ತೊಡಕುಗಳು ನಿವಾರಣೆಯಾಗಲಿವೆ. ಕೃಷಿ ಉತ್ಪನ್ನಗಳಲ್ಲಿ ಹೆಚ್ಚಳ ಉಂಟಾಗಿ ಲಾಭದತ್ತ ದಾಪುಗಾಲು. ವಾಹನ ಖರೀದಿಯನ್ನು ಮುಂದೂಡುವುದು ಉತ್ತಮ.

**ಸಿಂಹ:** ನ್ಯಾಯಾಲಯಕ್ಕೆ ಸಂಬಂಧಿಸಿದ ವ್ಯವಹಾರಗಳಲ್ಲಿ ಯಶಸ್ಸು. ಭೂಮಿ ಅಥವಾ ನಿವೇಶನ ಖರೀದಿ ಸಾಧ್ಯತೆ. ಭೂಮಿ ಕೊಡುಕೊಳ್ಳುವ ವ್ಯಾಪಾರಿಗಳಿಗೆ ಅಧಿಕ ಲಾಭ. ವಿದ್ಯಾರ್ಥಿಗಳಿಗೆ ಕಠಿಣ ಸಮಸ್ಯೆಯನ್ನು ಗೆಲ್ಲುವ ಅವಕಾಶ.

**ಕನ್ಯಾ:** ಗುರುದೇವತಾರಾಧನೆಯಿಂದ ದಿನದಾರಂಭ ಮಾಡುವುದರಿಂದಾಗಿ ಆಯ್ದ ಕಾರ್ಯಗಳು ಸಫಲಗೊಳ್ಳುವವು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಾಧ್ಯತೆ. ಕಲಾವಿದರಿಗೆ ಉತ್ತಮ ಅವಕಾಶಗಳು ನಿಚ್ಚಳವಾಗಿವೆ.

**ತುಲಾ:** ಸತ್ಕಾರ್ಯಗಳಿಗೆ ಸಹಾಯ ಕೋರಿ ಬರುವವರಿಗೆ ಸಹಾಯ ನೀಡುವಿರಿ. ಸಹೋದ್ಯೋಗಿಗಳೊಂದಿಗೆ ಬಾಂಧವ್ಯ ವೃದ್ಧಿಯಾಗಲಿದೆ. ನಿಮ್ಮ ಯಶಸ್ಸಿನ ಹಿಂದೆ ಬೇರೆಯವರ ಸಹಕಾರವಿದೆ ಎಂಬುದನ್ನು ಮರೆಯದಿರಿ.

**ವೃಶ್ಚಿಕ:** ಹೊಸ ಮನೆ ನಿರ್ಮಾಣದ ವಿಷಯದಲ್ಲಿ ಬಂಧುಗಳೊಂದಿಗೆ ಸಮಾಲೋಚನೆ ನಡೆಸಲಿದ್ದೀರಿ. ದೂರದ ಪ್ರಯಾಣ ಬೇಡ. ಉನ್ನತ ಶಿಕ್ಷಣಕ್ಕಾಗಿ ಹೆಚ್ಚಿನ ಮಾಹಿತಿಗಳನ್ನು ಕಲೆಹಾಕುವಿರಿ. ಆರೋಗ್ಯದ ಬಗ್ಗೆ ಗಮನವಿರಲಿ.

**ಧನು:** ಸಂಗಾತಿಯ ಕಡೆಯ ಬಂಧುಗಳ ಆಗಮನದಿಂದಾಗಿ ಮನೆಯಲ್ಲಿ ಸಂತಸ. ಮಕ್ಕಳ ವಿವಾಹ ವಿಷಯದಲ್ಲಿ ಅನುಕೂಲದಿಂದಾಗಿ ಮಾನಸಿಕ ನೆಮ್ಮದಿ ದೊರೆಯಲಿದೆ. ಹಣಕಾಸಿನ ಸಮಸ್ಯೆಗಳೂ ಪರಿಹಾರವಾಗಲಿವೆ.

**ಮಕರ:** ನಿಮ್ಮ ಒಳ್ಳೆಯತನ ದುರುಪಯೋಗವಾಗುವ ಸಾಧ್ಯತೆ ಇದ್ದು ಎಚ್ಚರಿಕೆ ಅಗತ್ಯ. ಹಣ ಅಥವಾ ಸಂಪನ್ಮೂಲಗಳು ನಿಮ್ಮನ್ನು ಅರಸಿ ಬರುವ ಸಾಧ್ಯತೆ. ಮನೆಯವರ ಮಾತಿಗೆ ಮನ್ನಣೆ ಇರಲಿ.

**ಕುಂಭ:** ಸ್ವತ್ತು ವಿವಾದಗಳಲ್ಲಿ ಬಂಧುಗಳೊಡನೆ ಸೌಹಾರ್ದ ಮಾತುಕತೆ ನಡೆಸುವುದರಿಂದ ಉತ್ತಮ ಫಲಿತಾಂಶ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸಿನ ಸಂದೇಶ. ಪದೋನ್ನತಿ ವಾ ಉದ್ಯೋಗದಲ್ಲಿನ ಬದಲಾವಣೆ ಸಾಧ್ಯತೆ.

**ಮೀನ:** ಹೊಸ ಜೀವನಶೈಲಿಗೆ ಒಗ್ಗಿಕೊಳ್ಳುವ ಅನಿವಾರ್ಯತೆ. ಅನಿರೀಕ್ಷಿತ ಮೂಲಗಳಿಂದ ಧನಾಗಮನ. ಬರಹಗಾರರಿಗೆ ಮುದ್ರಣ ಉದ್ಯಮಿಗಳಿಗೆ ಉತ್ತೇಜನ ದೊರಕಲಿದೆ. ರಾಜಕಾರಣಿಗಳು ಸವಾಲು ಎದುರಿಸಬೇಕಾದೀತು.

**ನಿಮ್ಮ ಜನ್ಮದಿನ 29-ಡಿಸೆಂಬರ್** ಇಂದು ಅತ್ಯಂತ ಶುಭದಾಯಕ. ಜೀವನ ಮಾರ್ಗದಲ್ಲಿ ಹೊಸ ಹೆಜ್ಜೆಯನ್ನಿಡುವಿರಿ. ಸರ್ಕಾರಿ ಕೆಲಸದಲ್ಲಿರುವವರಿಗೆ ಉತ್ತಮ ವರ್ಷವಾಗಿದೆ. ಅವಿವಾಹಿತರಾಗಿದ್ದಲ್ಲಿ ಕಂಕಣ ಭಾಗ್ಯ ಕೂಡಿಬರಲಿದೆ. ಹೊಸ ಮನೆಗಾಗಿ ಅಲಂಕರಣ ಸಾಮಗ್ರಿಗಳನ್ನು ಖರೀದಿಸುವ ಸಾಧ್ಯತೆ. ವಿಶೇಷ ಸಮಾರಂಭಗಳಲ್ಲಿ ಸಕ್ರಿಯ ಭಾಗವಹಿಸುವ ಸಾಧ್ಯತೆ.

## ಪದಬಂಧ 4822
– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಪರಿಶೀಲನೆಗೆ ಮುಂಚೆಯೇ ಮಾಡಿಕೊಂಡ ಅಭಿಪ್ರಾಯ (4)
3.ಸಂಸ್ಥಾನದ ಅಧಿಪತಿ (4)
5.ಕೇಸರಲ್ಲಿರುವ ಎಕ್ಕಡ ! (2)
7.ಪಕ್ಷದ ಒಂಬತ್ತನೆಯ ದಿನ (3)
8.ಹಡಗು ಇಲ್ಲದೆ (2)
10.ಪರವಶನಾಗಿದ್ದಾಗ ಹಣ ಕಂಡಿತಲ್ಲ! (2)
11.ಕರುವಿನೊಳಗೆ ಕಾಣುತ್ತಿರುವ ಬೆನ್ನೆಲುಬು (3)
13.ಮನ್ಮಥನ ಹೆಂಡತಿ (2)
15.ಮಧುರವಾದ ಧ್ವನಿ (4)
16.ಯುದ್ಧದ ನಗಾರಿ (4)

**ಮೇಲಿಂದ ಕೆಳಕ್ಕೆ**
1.ಒದಗಿಸುವಿಕೆಗೊಂದು ಪರ್ಯಾಯ ಪದ (3)
2.ಹಾಲು, ಬೆಣ್ಣೆ ಮುಂತಾದವು (3)
3.ಸಂಯಮ ಉಳ್ಳವನು (3)
4.ಜಿಂಕೆಯ ಜಾತಿಗೆ ಸೇರಿದ ಪ್ರಾಣಿ (3)
6.ಬೆಳ್ಳಿ ಹಬ್ಬವಿದು (5)
8.ನೃತ್ಯ ಅಭಿನಯಗಳನ್ನು ಪ್ರದರ್ಶಿಸುವ ಸ್ಥಳ (5)
10.ನೂರರ ಗುಂಪು (3)
11.ಪೆದ್ದ ಇಲ್ಲದ್ದಾನೆ (3)
12.ರಕ್ತವನ್ನು ಹೀಗೂ ಹೇಳುವರು (3)
14.ಕುಂಬಾರನ ಚಕ್ರ (3)



### 4821ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಪರಿಣಿತ
3.ಸಂಪ್ರತಿ 5.ಗುಣಕಥನ
7.ಶಿರ 9.ದುರ್ಗುಣ
11.ರಂಪ 13.ವಿಚಾರವಂತ
15.ಮಹಲು 16.ನವಸುಮ

**ಮೇಲಿಂದ ಕೆಳಕ್ಕೆ:**
1.ಪರದೇಶಿ 2.ತರಗು
4.ಪ್ರಧಾನ 6.ಕಲ್ಯಾಣ
8.ರಫ್ತು 9.ದುಸ್ತರ
10.ಗುರಂ 12.ಪರಂಧಾಮ
13.ವಿಗ್ರಹ 14.ತಲ್ಲೀನ

## ಸುಡೊಕು 5208

| | | | | | | | | |
|---|---|---|---|---|---|---|---|---|
| 5 | | | 8 | | 1 | 9 | | 2 |
| | | | | | | | 3 | |
| 3 | | 1 | 2 | | 9 | | 5 | 6 |
| | 1 | 7 | | | 8 | 3 | | |
| | | | | 2 | | | | 4 |
| 8 | | 3 | 9 | | | | 6 | |
| 1 | | | 7 | | 2 | 4 | | 3 |
| | | 8 | | 4 | | | 1 | |
| | 3 | | 1 | | 5 | | 7 | |

**ಆಡುವುದು ಹೇಗೆ?**
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5207 ಸುಡೊಕು

| | | | | | | | | |
|---|---|---|---|---|---|---|---|---|
| 4 | 9 | 6 | 3 | 7 | 8 | 5 | 2 | 1 |
| 8 | 5 | 3 | 2 | 1 | 9 | 4 | 7 | 6 |
| 1 | 7 | 2 | 4 | 6 | 5 | 3 | 9 | 8 |
| 6 | 1 | 9 | 7 | 2 | 3 | 8 | 4 | 5 |
| 2 | 8 | 7 | 5 | 4 | 6 | 9 | 1 | 3 |
| 3 | 4 | 5 | 8 | 9 | 1 | 2 | 6 | 7 |
| 5 | 6 | 4 | 9 | 3 | 7 | 1 | 8 | 2 |
| 7 | 2 | 8 | 1 | 5 | 4 | 6 | 3 | 9 |
| 9 | 3 | 1 | 6 | 8 | 2 | 7 | 5 | 4 |

# ‘ಆರ್‌ಎಸ್‌ಎಸ್ ಮುಖಂಡರ ಹೆಸರು ಹೇಳುವಂತೆ ಬೆದರಿಕೆ’

ಮುಂಬೈ: ‘2008ರಲ್ಲಿನ ಮಾಲೆಗಾಂವ್ ಸ್ಫೋಟ ಪ್ರಕರಣದಲ್ಲಿ ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳವು (ಎಟಿಎಸ್) ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿದ್ದು, ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಇತರ ನಾಲ್ವರು ಆರ್‌ಎಸ್‌ಎಸ್ ಮುಖಂಡರ ಹೆಸರು ಹೇಳುವಂತೆ ಎಟಿಎಸ್ ನನಗೆ ಬೆದರಿಕೆ ಒಡ್ಡಿದೆ’ ಎಂದು ಪ್ರಕರಣದ ಸಾಕ್ಷಿದಾರರೊಬ್ಬರು ಮಂಗಳವಾರ ಎನ್‌ಐಎ ವಿಶೇಷ ನ್ಯಾಯಾಲಯದಲ್ಲಿ ಆರೋಪ ಮಾಡಿದ್ದಾರೆ.

ಸುಲಿಗೆಪ್ರಕರಣಗಳಲ್ಲಿಆರೋಪಿಯಾಗಿರುವ ಮುಂಬೈನ ಮಾಜಿ ಪೊಲೀಸ್ ಆಯುಕ್ತ ಪರಮ್ ಬೀರ್ ಸಿಂಗ್ ಅವರು ಮಾಲೆಗಾಂವ್ ಸ್ಫೋಟ ಪ್ರಕರಣದ ತನಿಖೆ ನಡೆಸಿದಾಗ ಎಟಿಎಸ್‌ನ ಹೆಚ್ಚುವರಿ ಆಯುಕ್ತರಾಗಿ ನೇಮಕಗೊಂಡಿದ್ದರು.

ಈ ಪ್ರಕರಣವನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಕೈಗೆತ್ತಿಕೊಳ್ಳುವ ಮುನ್ನ, ಎಟಿಎಸ್ ಪ್ರಕರಣದ ತನಿಖೆ ನಡೆಸಿದಾಗ ಸಾಕ್ಷಿದಾರರ ಹೇಳಿಕೆಯನ್ನು ದಾಖಲಿಸಿಕೊಂಡಿತ್ತು.

‘ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಇಂದ್ರೇಶ್ ಕುಮಾರ್ ಸೇರಿದಂತೆ ಆರ್‌ಎಸ್‌ಎಸ್‌ನ ಇತರ ನಾಯಕರ ಹೆಸರನ್ನು ತೆಗೆದುಕೊಳ್ಳುವಂತೆ ಅಂದಿನ ಹಿರಿಯ ಎಟಿಎಸ್ ಅಧಿಕಾರಿ ಪರಮ್ ಬೀರ್ ಸಿಂಗ್ ಮತ್ತು ಇನ್ನೊಬ್ಬ ಅಧಿಕಾರಿ ಬೆದರಿಕೆ ಹಾಕಿದ್ದರು’ ಎಂದು ಸಾಕ್ಷಿದಾರ ಹೇಳಿಕೆ ನೀಡಿದ್ದಾರೆ.

**ಕ್ಷಮೆಗೆ ಆಗ್ರಹ:** ಸಾಕ್ಷಿದಾರರ ಹೇಳಿಕೆಯ ಹಿನ್ನೆಲೆಯಲ್ಲಿ ಮಾಜಿ ಪ್ರಧಾನಿ ಮನಮೋಹನ್ ಸಿಂಗ್, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಕ್ಷಮೆ ಕೇಳಬೇಕು ಎಂದು ಆರ್‌ಎಸ್‌ಎಸ್ ಒತ್ತಾಯಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಚಿರಸ್ಮರಣೆ

ಡಾ. ಎನ್. ಕೃಷ್ಣಪ್ಪ
ಎಂ.ಬಿ.ಬಿ.ಎಸ್, ಎಂ.ಎಸ್.(ಅರ್ಥೊ)
29–12–2008
ಇಂತಿ: ಕುಟುಂಬವರ್ಗದವರು

LOOKING TO BUILD, BUY OR SELL A PROPERTY
Please refer Classifieds on Sunday

## ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

### ಉದ್ಯೋಗಾವಕಾಶ

#### Accounts & Finance

WANTED LADIES For Accounts (Married) B.Com with Tally Knowledge in&Around Jayanagar And JP-Nagar Contact: 9980921763/ 9632201671

#### General

WORK FROM HOME ಮನೆಯಿಂದಲೇ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

TOYOTA, ಟಾಟಾಮೋಟಾರ್ಸ್, ಬಿಗ್ ಬಜಾರ್ಸ್ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

ಕಟ್ಟಡ ಸಾಮಗ್ರಿ ಟೆಸ್ಟ್ ಲ್ಯಾಬ್ ನಲ್ಲಿ ಹೆಲ್ಪರ್ ಕೆಲಸಕ್ಕೆ ಐಟಿಐ ಅಥವಾ ಪಿಯುಸಿ ಪಾಸ್/ಫೇಲ್, ಹುಡುಗರು ತಕ್ಷಣ ಬೇಕಾಗಿದ್ದಾರೆ. ತರಬೇತಿ ಅವಧಿಯಲ್ಲಿ 10,000 ಮಾಸಿಕ ವೇತನ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ: 9844137668.

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600-62000/-(ಆನ್‌ಲೈನ್ ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degreeಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100- 56,000/- ವಸತಿಯೂಟದೊಂದಿಗೆ. 7899778278, 9611715755

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸಗಳಿಗೆ ಯುವಕ ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th, SSLC, PUC, ITI, Degree Pass/ Fail ಆದವರಿಗೆ (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/ PF ನೊಂದಿಗೆ ಸಂಬಳ:16,500/ ರಿಂದ 45,000/ ದವರೆಗೆ: 9742260055, 9538133533

#### Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

GLOBAL INTERNATIONAL Friendship Club Reqd M&F Daily Earn 10,000 To 15,000 PF& ESI Benefits with Food & Room. Whatsapp 9513045046/ 7022770604

#### Marketing & Sales

V&SML ಕಂಪನಿಗೆ ಮಾರ್ಕೆಟಿಂಗ್ ಮ್ಯಾನೇಜರ್, ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ರಾಜ್ಯಾದ್ಯಂತ ಬೇಕಾಗಿದ್ದಾರೆ ವಯೋಮಿತಿ 18 ರಿಂದ 30.ಸಂಬಳ 15,000/ರಿಂದ 30,000/.ಸಂಪರ್ಕಿಸಿ: 7338368136.

#### Hospital & Medical Jobs

ಪೂರೈಕೆದಾರ ಹುಡುಗರ ಅಗತ್ಯವಿದೆ, ಫ್ರೆಶರ್ಸ್ -ಅಥವಾ ಅನುಭವ ಅಭ್ಯರ್ಥಿಗಳು ಸಂಬಳ; ರೂ. 15,000/- ಮತ್ತು ಹೆಚ್ಚಿನದು. ಅರ್ಜಿ: ರಾಮಕೃಷ್ಣ ಆಸ್ಪತ್ರೆ ನಂ. 24, 15ನೇ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು-560011 ಸಂಪರ್ಕ ಸಂಖ್ಯೆ: 080-67800131

#### Wanted

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್ ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002

ತಕ್ಷಣ_ಬೇಕಾಗಿದ್ದಾರೆ 7TH, 10th, PUC, Diploma, any Degree, ITI, Pass/ Fail ಉಚಿತ ಊಟ+ವಸತಿ. ಸಂಬಳ 16,00060,000. ಫೋ 9886639846, 7624918246.

### ಸಾರ್ವಜನಿಕ ಪ್ರಕಟಣೆ

**PUBLIC NOTICE**

IN THE COURT OF THE 63RD ADDITIONAL CITY CIVIL JUDGE AT BENGALURU
(CCH-64) P AND SC No 706 /2021
BETWEEN
SMT.S.B. TEJASWINI W/o Late Sandeep, Keshava Murthy, Aged About 35 Years, Presently residing At Flat No 006, Deccan Arcade 2, 3rd Main, 5th Stage.). 1st Phase, Rajarajeshwari Nagar, Bengaluru -98 — PETITIONER
AND
NIL — RESPONDENT

**PUBLIC NOTICE**

WHEREAS, the Above named Petitioner has filed this petition under Section 372 of Indian Succession Act for grant of Succession certificate in favour of the Petitioner, who is the wife of Late Sandeep Keshava Murthy, who died on 27.05.2021.

interested parties are herby warned to appear in this court in person or by pleader duly instructed on the day of 10.2.2022 at 11.00 Clock inform to show cause against the petitioner, failing which the Appearance will be heard and orders will be passed as per law.

**SCHEDULE**

Savings Account of Late Sandeep Keshava Murthy ( i.e. the hushand of the Petitioner) with Citibank N.A, No 5, M.G. Road, Bengaluru -560001, bearing Savings Account No 5049092816, and having a balance of Rs. 20,57,430.95 (Rupees Twenty Lakhs Fifty Seven Thousand Four Hundred Thirty and Ninety Five paise only) as on 01.05.2021

Given under my hand and seal of the court on 21st day of Dec 2021.
Sd/- By order of court Assistant Registrar
City Civil Court Bengaluru
Advocate For Petitioner
Sri. B.S.Shashi Bhushan, &
Sri C. Anil Kumar, Advocates No 42/3, Ground Floor. Sri. Yoga Shantha Narasimha Nilaya, B.W.S.S.B.I.B. Road,Thataguni, Kanakapura Main Raod, Bengaluru-82

### ಭವಿಷ್ಯ

#### Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ ಭವಿಷ್ಯ, ಖಚಿತ ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

★ನಂ.1 ಸ್ತ್ರೀಪುರುಷ★ ವಶೀಕರಣ ಸ್ಪೆಷಲಿಸ್ಟ್.ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶ್ರೀಕ್ಷೇತ್ರದಿಂದ.ಪಂಡಿತ್. ದೇವೇಂದ್ರಭಟ್ ಅವರಿಂದ ನೇರಪರಿಹಾರ ಒಮ್ಮೆ ಕರೆಮಾಡಿ,ನಿಮ್ಮ ಜೀವನ ಬದಲಾಯಿಸಿಕೊಳ್ಳಿ. 9845919804

★ವಶೀಕರಣ ಸ್ಪೆಷಲಿಸ್ಟ್★ ಗಂಡ ಹೆಂಡತಿ ಕಲಹ, ಪ್ರೇಮವಿಚಾರ, ಸಂತಾನ, ಸ್ತ್ರೀಪುರುಷ ಅನೈತಿಕ ಸಂಬಂಧ ಇನ್ನಿತರ ಸಮಸ್ಯೆಗಳಿಗೆ ಫೋನಿನ ಮುಖಾಂತರ ಪರಿಹಾರ 9538276534

### ವೈಯಕ್ತಿಕ

#### Change of Name

I, L.G. Bathu, D/o Late Anthony Joseph, Ex-HAV, #1308024, R/a #12/1, Kadiranapalya, Bangalore North, Indiranagar, Bangalore-38, have changed my name to ELIZABETH, affidavit dated 27.12.2021, Notary L. Gopalakrishna, Bangalore.

### ಸಮಾಜಸೇವೆ

#### Others

ಅಂಗವಿಕಲರಿಗೆ ಉಚಿತ ತರಬೇತಿ: ಸಮರ್ಥನಂ ಅಂಗವಿಕಲರ ಸಂಸ್ಥೆ ಅಂಗವಿಕಲರಿಗಾಗಿ ವಸತಿಯುತ ವಿಶೇಷ ಕೌಶಲ ತರಬೇತಿ ಹಾಗೂ ಉದ್ಯೋಗವಕಾಶಗಳನ್ನು ಕಲ್ಪಿಸುತ್ತಿದೆ. ಹತ್ತನೇ ತರಗತಿ ಪೂರ್ಣಗೊಳಿಸಿದ 18 ರಿಂದ 35 ವರ್ಷದೊಳಗಿನ ಆಸಕ್ತ ಅಂಗವಿಕಲರು ತರಬೇತಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 9449864693, 9480812139

### ಪ್ರವಾಸ

#### Travel

19.01.2022 ರಿಂದ 8ದಿನಗಳ ಕಾಶಿ, ಗಯಾ, ಪ್ರಯಾಗ, ಅಯೋಧ್ಯ, ನೈಮಿಶಾರಣ್ಯ ಗೊರಕ್-ಪುರ್/ 2022ರ ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ 15/20/25ದಿನಗಳ ಗಂಗೋತ್ರಿ, ಯಮುನೋತ್ರಿ, ಬದರಿನಾಥ್, ಕೇದಾರನಾಥ್, ದೆಹಲಿ, ಕಾಶಿ,ಗಯಾ, ಪೂರಿಜಗನ್ನಾಥ್, ವೈಷ್ಣೋದೇವಿ.ಶ್ರೀಸುಧಾ ಟ್ರಾವೆಲ್ಸ್ 22429289, 9019301300, 9448119290

ರಾಮ್ ಕಮಲ್ ಟೂರ್, 15-1-2022, ಕಾಶಿ, ಗಯಾ,ಅಯೋಧ್ಯ, 22-1-2022, ಹೈದರಾಬಾದ್, ಭದ್ರಾಚಲಂ, ವಿಜಯವಾಡ, 8-1-2022, ತ್ರಿರಂಗ ದರ್ಶನ.26-1-2022 ಮಂತ್ರಾಲಯ, ಶ್ರೀಶೈಲ, ಅಹೋಬಲ 9481226296, 9945476296

21-1-2022 ಕಾಶಿ, ಗಯಾ, ಅಯೋಧ್ಯ 8ದಿನ. 2-2-2022 ಕಾಶಿ, ಆಗ್ರ, ದೆಹಲಿ 13ದಿನ. 25-3-2022 ಗ್ಯಾಂಗ್ಟಾಕ್, ಡಾರ್ಜಿಲಿಂಗ್, ಕಲ್ಕತ್ತಾ, ಭುವನೇಶ್ವರ 12ದಿನ. ನಂದಿನಿ ಟೂರಿಸ್ಟ್ 9916574089.

06.04.2022, 10 ದಿನಗಳು ವೈಷ್ಣೋದೇವಿ, ದೆಹಲಿ, ಅಮೃತ್‌ಸರ್,ವೈಷ್ಣೋದೇವಿ, ಧರ್ಮಶಾಲ, ಚಂಡಿಘಡ, ಕುಲುಮನಾಲಿ, ಹರಿದ್ವಾರ್,ಋಶಿಕೇಶ್, ವಿಜಯ ಟ್ರಾವಲ್ಸ್ ಮಲ್ಲೇಶ್ವರಂ, ಬೆಂಗಳೂರು-3. 9448294477

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 9901641752 | 9845114560 | 9886213331
Email: dhclassifieds@deccanherald.co.in

### ಐಐಟಿ ಪದವೀಧರರಿಗೆ ಪ್ರಧಾನಿ ನರೇಂದ್ರ ಮೋದಿ ಕಿವಿಮಾತು

# ‘ನವ ಭಾರತ ನಿರ್ಮಾಣಕ್ಕೆ ಸಜ್ಜಾಗಿ’

ಕಾನ್ಪುರ (ಪಿಟಿಐ): ‘ಮುಂದಿನ 25 ವರ್ಷಗಳಲ್ಲಿ ಭಾರತ ಯಾವ ರೀತಿ ಅಭಿವೃದ್ಧಿ ಹೊಂದಬೇಕು ಎಂದು ಬಯಸುತ್ತಿರೋ, ಅದನ್ನು ಸಾಧಿಸುವ ನಿಟ್ಟಿನಲ್ಲಿ ಈಗಿನಿಂದಲೇ ಐಐಟಿ ಪದವೀಧರರು ಕಾರ್ಯಪ್ರವೃತ್ತರಾಬೇಕು’ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದರು.

ಐಐಟಿ–ಕಾನ್ಪುರದ 54ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಈ ವಿಷಯದಲ್ಲಿ ಈಗಾಗಲೇ ಸಾಕಷ್ಟು ಸಮಯವನ್ನು ವ್ಯರ್ಥ ಮಾಡಲಾಗಿದೆ. ನವ ಪದವೀಧರರು ಅನುಕೂಲಗಳ ಬದಲಾಗಿ ಸವಾಲುಗಳನ್ನು ಆಯ್ಕೆ ಮಾಡಿಕೊಂಡು, ದೇಶದ ಚುಕ್ಕಾಣಿ ಹಿಡಿಯಲು ಮುಂದಾಗಬೇಕು’ ಎಂದರು.

‘ಸ್ವಾತಂತ್ರ್ಯ ನಂತರ ಭಾರತವೂ ಹೊಸ ಪಯಣ ಆರಂಭಿಸಿದೆ. ಮುಂದಿನ 25 ವರ್ಷಗಳ ನಂತರ ದೇಶ ಸಂಪೂರ್ಣ ಸ್ವಾವಲಂಬಿಯಾಗಬೇಕು. ಈ ಗುರಿ ಸಾಧನೆಗೆ ಸಾಕಷ್ಟು ಕಾರ್ಯವಾಗಬೇಕಾಗುತ್ತದೆ. ಆದರೆ, ಎರಡು ಪೀಳಿಗೆಗಳನ್ನು ಕಂಡಿರುವ ದೇಶ, ಸಾಕಷ್ಟು ಸಮಯವನ್ನೂ ವ್ಯರ್ಥ ಮಾಡಿದೆ. ಇನ್ನು ಮುಂದೆ ಎರಡು ನಿಮಿಷವನ್ನು ಸಹ ನಾವು ವ್ಯರ್ಥ ಮಾಡಬಾರದು’ ಎಂದು ಅವರು ಹೇಳಿದರು.

‘ದೇಶವು ಈಗ ವಿಪುಲ ಅವಕಾಶಗಳ ಹೊಸ್ತಿಲಲ್ಲಿದೆ. ಈ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳುವ ಜವಾಬ್ದಾರಿಯನ್ನು ವಿದ್ಯಾರ್ಥಿಗಳು ಹೊತ್ತುಕೊಳ್ಳಬೇಕು’ ಎಂದೂ ಪ್ರಧಾನಿ ಹೇಳಿದರು.

ಇದೇ ವೇಳೆ ಅವರು, ಬ್ಲಾಕ್‌ಚೈನ್ ಆಧಾರಿತ ಡಿಜಿಟಲ್ ವಿಷಯಗಳ ಪದವಿ ಕೋರ್ಸ್‌ಗಳಿಗೆ ಚಾಲನೆ ನೀಡಿದರು.

ಉತ್ತರ ಪ್ರದೇಶ ರಾಜ್ಯಪಾಲರಾದ ಆನಂದಿಬೆನ್ ಪಟೇಲ್, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಇದ್ದರು.

## ಕಾನ್ಪುರ ಮೆಟ್ರೊ ರೈಲು ಯೋಜನೆಗೆ ಚಾಲನೆ

ಕಾನ್ಪುರ: ಕಾನ್ಪುರದಲ್ಲಿನ ಮೆಟ್ರೊ ರೈಲು ಯೋಜನೆಯ ಪೂರ್ಣಗೊಂಡ ಮೊದಲ ಹಂತವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಉದ್ಘಾಟಿಸಿದರು.

ಮಂಗಳವಾರ ಬೆಳಿಗ್ಗೆ ಕಾನ್ಪುರಕ್ಕೆ ಆಗಮಿಸಿದ ಪ್ರಧಾನಿ ಅವರು, ಐಐಟಿ ಕಾನ್ಪುರದಿಂದ ಮೋತಿ ಜೀಲ್‌ವರೆಗಿನ ಒಟ್ಟು 9 ಕಿ.ಮೀ. ಉದ್ದದ ಪೂರ್ಣಗೊಂಡ ಮಾರ್ಗವನ್ನು ಉದ್ಘಾಟಿಸಿದರು.

ಇದೇ ಸಂದರ್ಭದಲ್ಲಿ ಪ್ರಧಾನಿ ಅವರು ಐಐಟಿ ಮೆಟ್ರೊ ನಿಲ್ದಾಣದಿಂದ ಗೀತಾ ನಗರಕ್ಕೆ ಮೆಟ್ರೊ ರೈಲಿನಲ್ಲಿ ಪ್ರಯಾಣಿಸಿದರು. ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಕೇಂದ್ರ ಸಚಿವ ಹರ್‌ದೀಪ್ ಸಿಂಗ್ ಪುರಿ ಅವರು ಜತೆಯಲ್ಲಿದ್ದರು.

‘ನಗರದ ಸಂಪರ್ಕ ಯೋಜನೆಯು ಪ್ರಧಾನಿ ಅವರ ಆದ್ಯತಾ ಕ್ಷೇತ್ರಗಳಲ್ಲಿ ಒಂದಾಗಿದ್ದು, ಕಾನ್ಪುರ ಮೆಟ್ರೊ ಯೋಜನೆಯು ಈ ದಿಕ್ಕಿನಲ್ಲಿ ಮತ್ತೊಂದು ಹೆಜ್ಜೆಯಾಗಿದೆ. ಮೆಟ್ರೊ ರೈಲು ಯೋಜನೆಯ ಸಂಪೂರ್ಣ ಉದ್ದ 32 ಕಿ.ಮೀ. ಆಗಿದ್ದು ಇದನ್ನು ₹ 11,000 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕಾನ್ಪುರದಲ್ಲಿ ಮಂಗಳವಾರ ಮೆಟ್ರೊ ರೈಲು ಪ್ರಯಾಣದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಜನರತ್ತ ಕೈಬೀಸಿದರು. ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್; ಕೇಂದ್ರ ಸಚಿವ ಹರ್‌ದೀಪ್ ಸಿಂಗ್ ಪುರಿ ಚಿತ್ರದಲ್ಲಿದ್ದಾರೆ –ಪಿಟಿಐ ಚಿತ್ರ

### ಹೈದರ್‌ಪೋರಾ ಎನ್‌ಕೌಂಟರ್ ಪ್ರಕರಣ: ವಿದೇಶಿ ಉಗ್ರನ ಕೃತ್ಯ

# ಕಟ್ಟಡ ಮಾಲೀಕನೇ ಮಾನವ ಗುರಾಣಿ!

ಪ್ರಜಾವಾಣಿ ವಾರ್ತೆ

ಶ್ರೀನಗರ: ಇಲ್ಲಿನ ಹೈದರ್‌ಪೋರಾದಲ್ಲಿ ನ.15ರಂದು ನಡೆದ ಎನ್‌ಕೌಂಟರ್‌ನಲ್ಲಿ ನಾಲ್ವರು ಹತ್ಯೆಯಾದ ಪ್ರಕರಣ ಕುರಿತು ತನಿಖೆಯನ್ನು ಪೂರ್ಣಗೊಳಿಸಿರುವ ಪೊಲೀಸ್ ವಿಶೇಷ ತನಿಖಾ ತಂಡವು(ಎಸ್‌ಐಟಿ), ಹತ್ಯೆಯಾದ ಕಟ್ಟಡ ಮಾಲೀಕನನ್ನು ಮಾನವ ಗುರಾಣಿಯಾಗಿ ವಿದೇಶಿ ಉಗ್ರ ಬಳಸಿಕೊಂಡಿದ್ದ ಎಂದು ತಿಳಿಸಿದೆ.

ಈ ಕುರಿತು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಸ್‌ಐಟಿ ಡಿಐಜಿ ಸುಜಿತ್‌ಕುಮಾರ್ ಸಿಂಗ್, ‘ಉಗ್ರರು ಅಡಗಿದ್ದ ಕಟ್ಟಡದ ಮಾಲೀಕ ಅಲ್ತಾಫ್ ಭಟ್ ಅವರನ್ನು ವಿದೇಶಿ ಉಗ್ರ ಬಿಲಾಲ್ ಭಾಯ್ ಮಾನವ ಗುರಾಣಿಯನ್ನಾಗಿ ಬಳಸಿಕೊಂಡಿದ್ದ. ವಿದೇಶಿ ಉಗ್ರನ ಜತೆಯಿದ್ದ ಸ್ಥಳೀಯ ಯುವಕ ಅಮಿರ್ ಮಗ್ರೆ ಶ್ರೀನಗರದ ಜಾಮಲತ ದಾಳಿಯಲ್ಲಿ ಭಾಗಿಯಾಗಿದ್ದ ಎಂಬುದು ಸಿಸಿಟಿವಿ ದೃಶ್ಯ ಹಾಗೂ ಇತರೆ ಸಾಕ್ಷ್ಯಗಳಿಂದ ತಿಳಿದು ಬಂದಿದೆ. ಇದೇ ವೇಳೆ ಡಾ.ಮುದಾಸಿರ್ ಗುಲ್ ಅವರನ್ನು ಗಡಿಯಾಚೆಗಿನ ಸೂಚನೆ ಮೇರೆಗೆ ವಿದೇಶಿ ಉಗ್ರನೇ ಹತ್ಯೆ ಮಾಡಿರಬಹುದು ಎಂದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಎಂದರು.

‘ಕಟ್ಟಡದಲ್ಲಿ ಬಾಡಿಗೆಗೆ ಇದ್ದವರ ವಿವರ ಹಾಗೂ ಬಾಡಿಗೆ ಪಡೆಯುತ್ತಿದ್ದ ವಿಧಾನ ಕುರಿತು ಕಟ್ಟಡ ಮಾಲೀಕರ ಸಂಬಂಧಿಕರು ತನಿಖೆ ವೇಳೆ ಸಮರ್ಪಕ ಉತ್ತರ ನೀಡಿಲ್ಲ’ ಎಂದು ಅವರು ಮಾಹಿತಿ ನೀಡಿದರು.

‘ಘಟನಾ ಸ್ಥಳದಲ್ಲಿ ಎರಡು ಪಿಸ್ತೂಲ್, ನಾಲ್ಕು ನಿಯತಕಾಲಿಕೆಗಳು ಸೇರಿದಂತೆ ವಿವಿಧ ವಸ್ತುಗಳನ್ನು ಎಸ್‌ಐಟಿ ವಶಪಡಿಸಿಕೊಂಡಿತ್ತು. ಇದೇ ವೇಳೆ ಉಗ್ರರ ಎರಡು ಮೃತದೇಹ ಹಾಗೂ ಕಟ್ಟಡದ ಪ್ರವೇಶದ್ವಾರದಲ್ಲಿ ಕಟ್ಟಡ ಮಾಲೀಕನ ಪತ್ತೆಯಾಗಿತ್ತು’ ಎಂದು ಸುಜಿತ್ ಕುಮಾರ್ ಸಿಂಗ್ ತಿಳಿಸಿದರು.

‘ಎಸ್‌ಐಟಿ ತನಿಖಾ ವರದಿಯು ಜಮ್ಮು ಮತ್ತು ಕಾಶ್ಮೀರ ಪೊಲೀಸರ ಹಳೆಯ ಕಥೆಯ ಪುನರಾವರ್ತನೆಯಾಗಿದ್ದು, ನಾಗರಿಕರ ಆಘಾತಕಾರಿ ಹತ್ಯೆಯ ಬಗ್ಗೆ ವಸ್ತುನಿಷ್ಠವಾಗಿ ತನಿಖೆ ನಡೆಸಿಲ್ಲ. ತನಿಖೆಯು ಘಟನೆಯ ಬಗ್ಗೆ ಜನರ ಅನುಮಾನಗಳನ್ನು ನಿವಾರಿಸಿಲ್ಲ’ಎಂದು ಗುಪ್ಕಾರ್ ಒಕ್ಕೂಟ (ಪಿಎಜಿಡಿ) ಅಸಮಾಧಾನ ವ್ಯಕ್ತಪಡಿಸಿದೆ.

ನ.15ರಂದು ಪೊಲೀಸ್, ಸೇನೆ ಹಾಗೂ ಸಿಆರ್‌ಪಿಎಫ್ ನಡೆಸಿದ ಎನ್‌ಕೌಂಟರ್‌ನಲ್ಲಿ ವಿದೇಶಿ ಉಗ್ರ ಬಿಲಾಲ್ ಭಾಯ್, ನಾಗರಿಕ ಅಲ್ತಾಫ್ ಭಟ್, ವೈದ್ಯ ಡಾ.ಮುದಾಸಿರ್ ಗುಲ್, ಉಗ್ರ ಸಹಚರ ಮೊಹಮ್ಮದ್ ಮಗ್ರೆ ಹತ್ಯೆಯಾಗಿದ್ದರು. ಈ ಘಟನೆಗೆ ಕಣಿವೆಯಾದ್ಯಂತ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದ್ದಂತೆ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಮ್ಯಾಜಿಸ್ಟ್ರಿಯಲ್ ತನಿಖೆಗೆ ಆದೇಶಿಸಿದ್ದರು.

### ನೀಟ್–ಪಿಜಿ ಕೌನ್ಸೆಲಿಂಗ್ ವಿಳಂಬ ಖಂಡಿಸಿ ಪ್ರತಿಭಟನೆ

# ಮುಷ್ಕರ ಹಿಂಪಡೆಯಲು ಸ್ಥಾನಿಕ ವೈದ್ಯರಿಗೆ ಮಾಂಡವೀಯ ಒತ್ತಾಯ

ನವದೆಹಲಿ (ಪಿಟಿಐ): ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದ ಕೌನ್ಸೆಲಿಂಗ್ (ನೀಟ್–ಪಿಜಿ ಕೌನ್ಸೆಲಿಂಗ್) ವಿಳಂಬವಾಗುತ್ತಿರುವುದನ್ನು ಖಂಡಿಸಿ ಮುಷ್ಕರ ನಡೆಸುತ್ತಿರುವ ಸ್ಥಾನಿಕ ವೈದ್ಯರುಗಳ ನಿಯೋಗದ ಜೊತೆ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಮಂಗಳವಾರ ಮಾತುಕತೆ ನಡೆಸಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಮುಷ್ಕರವನ್ನು ಕೈಬಿಡುವಂತೆ ಒತ್ತಾಯಿಸಿದ್ದಾರೆ.

ಸ್ಥಾನಿಕ ವೈದ್ಯರ ಸಂಘಗಳ ಒಕ್ಕೂಟದ (ಎಫ್‌ಒಆರ್‌ಡಿಎ) ಪ್ರತಿನಿಧಿಗಳ ಜೊತೆ ಮಾತುಕತೆ ನಡೆಸಿದ ಬಳಿಕ ಮಾತನಾಡಿದ ಸಚಿವರು, ‘ಈ ವಿಷಯದ ಕುರಿತು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ. ಆರ್ಥಿಕವಾಗಿ ದುರ್ಬಲ ವರ್ಗದ (ಇಡಬ್ಲ್ಯುಎಸ್) ವರದಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ಗೆ ಪ್ರತಿಕ್ರಿಯೆ ನೀಡಲಾಗುವುದು’ ಎಂದು ಹೇಳಿದ್ದಾರೆ.

‘ಪ್ರಕರಣವು ಸುಪ್ರೀಂ ಕೋರ್ಟ್‌ನಲ್ಲಿರುವುದರಿಂದ ಕೌನ್ಸೆಲಿಂಗ್ ನಡೆಸಲು ನಮಗೆ ಸಾಧ್ಯವಿಲ್ಲ. ಜನವರಿ 6ರಂದು ನಿಗದಿಯಾಗಿರುವ ವಿಚಾರಣೆಗೂ ಮುನ್ನ ಸರ್ಕಾರವು ನ್ಯಾಯಾಲಯಕ್ಕೆ ಪ್ರತಿಕ್ರಿಯೆ ಸಲ್ಲಿಸಲಿದೆ. ಶೀಘ್ರ ಸಮಸ್ಯೆ ಪರಿಹರಿಸಿ ಕೌನ್ಸೆಲಿಂಗ್ ಆರಂಭಿಸಲು ಅನುವು ಮಾಡಿಕೊಡಬೇಕೆಂದೂ ಮನವಿ ಮಾಡಲಿದ್ದೇವೆ’ ಎಂದೂ ಸಚಿವರು ತಿಳಿಸಿದ್ದಾರೆ.

ಕೋವಿಡ್ ಬಿಕ್ಕಟ್ಟಿನ ಸಮಯದಲ್ಲಿ ಸ್ಥಾನಿಕ ವೈದ್ಯರು ಹಾಗೂ ಆರೋಗ್ಯ ಕಾರ್ಯಕರ್ತರು ಮಾಡಿರುವ ಕೆಲಸಕ್ಕೆ ಸಚಿವರು ಕೃತಜ್ಞತೆ ಸಲ್ಲಿಸಿದ್ದಾರೆ.

**ಪ್ರತಿಭಟನೆ– ಪೊಲೀಸರ ನಿಯೋಜನೆ:** ಕೌನ್ಸೆಲಿಂಗ್ ವಿಳಂಬವಾಗುತ್ತಿರುವುದನ್ನು ಖಂಡಿಸಿ ದೆಹಲಿಯ ಸಫ್ದರ್‌ಜಂಗ್ ಆಸ್ಪತ್ರೆಯ ಮುಂದೆ ಮಂಗಳವಾರ ಭಾರಿ ಸಂಖ್ಯೆಯಲ್ಲಿ ಸ್ಥಾನಿಕ ವೈದ್ಯರು ಪ್ರತಿಭಟನೆ ನಡೆಸಿದರು.

ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಮುಂಜಾಗ್ರತಾ ಕ್ರಮವಾಗಿ ಆಸ್ಪತ್ರೆ ಆವರಣದಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ.

ನೀಟ್–ಪಿಜಿ ಕೌನ್ಸೆಲಿಂಗ್ ವಿಳಂಬ ಖಂಡಿಸಿ ಸ್ಥಾನಿಕ ವೈದ್ಯರು ದೆಹಲಿಯಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು –ರಾಯಿಟರ್ಸ್ ಚಿತ್ರ

## ಜೆಎನ್‌ಯು ಸುತ್ತೋಲೆಗೆ ಆಕ್ಷೇಪ

ನವದೆಹಲಿ (ಪಿಟಿಐ): ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ಆಂತರಿಕ ದೂರು ಸಮಿತಿಯ (ಐಸಿಸಿ) ಸುತ್ತೋಲೆಯು ಆಕ್ಷೇಪಕ್ಕೆ ಕಾರಣವಾಗಿದೆ.

ವಿಶ್ವವಿದ್ಯಾಲಯದ ಆಂತರಿಕ ದೂರು ಸಮಿತಿಯು (ಐಸಿಸಿ) ಲೈಂಗಿಕ ಕಿರುಕುಳದ ಕುರಿತು ತಿಳಿವಳಿಕೆ ಮೂಡಿಸಲು ಜ. 17ರಂದು ಸಮಾಲೋಚನಾ ಸಭೆಯನ್ನು ಆಯೋಜಿಸುವುದಾಗಿ ವಿಶ್ವವಿದ್ಯಾಲಯವು ತನ್ನ ವೆಬ್‌ಸೈಟ್‌ನಲ್ಲಿ ತಿಳಿಸಿದೆ. ‘ಲೈಂಗಿಕ ಕಿರುಕುಳದಿಂದ ತಪ್ಪಿಸಿಕೊಳ್ಳಲು ಹುಡುಗಿಯರಿಗೆ ತಮ್ಮ ಮತ್ತು ಗೆಳೆಯರ ನಡುವೆ ಹೇಗೆ ಸ್ಪಷ್ಟವಾದ ಗೆರೆಯನ್ನು ಎಳೆಯಬೇಕು ಎಂಬುದು ತಿಳಿದಿರಬೇಕು’ ಎಂದು ಸುತ್ತೋಲೆಯಲ್ಲಿ ಸಲಹೆ ನೀಡಲಾಗಿದೆ.

‘ಸಮಾಲೋಚನೆ ಏಕೆ ಬೇಕು’ ಎನ್ನುವ ಶೀರ್ಷಿಕೆಯಲ್ಲಿ ಲೈಂಗಿಕ ಕಿರುಕುಳದ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದಾಗಿ ಹೇಳಿರುವ ಸುತ್ತೋಲೆಯಲ್ಲಿ ವಿದ್ಯಾರ್ಥಿನಿಯರಿಗೆ ಸಲಹೆಯನ್ನು ನೀಡಲಾಗಿದೆ. ಇದಕ್ಕೆ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘ ಮತ್ತು ರಾಷ್ಟ್ರೀಯ ಮಹಿಳಾ ಆಯೋಗ ಆಕ್ಷೇಪ ವ್ಯಕ್ತಪಡಿಸಿದೆ.

‘ಆಪ್ತ ಸ್ನೇಹಿತರ ನಡುವೆ ಲೈಂಗಿಕ ಕಿರುಕುಳದ ಹಲವು ಪ್ರಕರಣಗಳನ್ನು ಆಂತರಿಕ ದೂರು ಸಮಿತಿಯು ನೋಡಿದೆ. ಹುಡುಗರು (ಕೆಲವೊಮ್ಮೆ ಉದ್ದೇಶಪೂರ್ವಕವಾಗಿ ಮತ್ತೆ ಕೆಲವೊಮ್ಮೆ ಅಜಾಗರೂಕತೆಯಿಂದ) ಸ್ನೇಹದಲ್ಲಿ ತಮಾಷೆ ಮತ್ತು ಲೈಂಗಿಕ ಕಿರುಕುಳದ ನಡುವಿನ ತೆಳುವಾದ ಗೆರೆಯನ್ನು ದಾಟುತ್ತಾರೆ. ಲೈಂಗಿಕ ಕಿರುಕುಳದಿಂದ ತಪ್ಪಿಸಿಕೊಳ್ಳಲು ಹುಡುಗಿಯರಿಗೆ ತಮ್ಮ ಮತ್ತು ಪುರುಷರ ನಡುವೆ ಹೇಗೆ ಸ್ಪಷ್ಟವಾದ ಗೆರೆಯನ್ನು ಎಳೆಯಬೇಕು ಎಂಬುದು ತಿಳಿದಿರಬೇಕು’ ಎಂದು ಸುತ್ತೋಲೆಯಲ್ಲಿ ಸಲಹೆ ನೀಡಲಾಗಿದೆ.

‘ಸ್ನೇಹಿತರಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗದಿರಲು ಹುಡುಗಿಯರು ಸೂಕ್ತ ಗೆರೆ ಎಳೆದುಕೊಳ್ಳಬೇಕು’ ಎನ್ನುವ ಮೂಲಕ ಐಸಿಸಿ ಸಂತ್ರಸ್ತೆಯರನ್ನೇ ಹೊಣೆಯಾಗಿಸುತ್ತಿದೆ’ ಎಂದು ಜೆಎನ್‌ಯು ವಿದ್ಯಾರ್ಥಿ ಸಂಘದ ನಾಯಕಿ ಐಶೆ ಘೋಷ್ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ಸಂಕ್ಷಿಪ್ತ ಸುದ್ದಿ

### ‘ಜಲಿಯನ್‌ವಾಲಾಬಾಗ್ ಘಟನೆ: ಪ್ರತೀಕಾರಕ್ಕೆ ಯತ್ನ’

ಲಂಡನ್ (ಪಿಟಿಐ): ರಾಣಿ ಎಲಿಜಬೆತ್ II ಅವರು ಕ್ರಿಸ್‌ಮಸ್ ಆಚರಿಸುತ್ತಿದ್ದ ವಿಂಡ್ಸರ್ ಕ್ಯಾಸಲ್‌ಗೆ ನುಗ್ಗಿದ್ದ ಭಾರತ ಮೂಲದ 19 ವರ್ಷದ ಯುವಕನ ಉದ್ದೇಶ ಜಲಿಯನ್‌ವಾಲಾಬಾಗ್ ಹತ್ಯಾಕಾಂಡಕ್ಕೆ ಪ್ರತೀಕಾರ ತೀರಿಸುವುದಾಗಿತ್ತು ಎಂಬ ವಿಷಯ ತಿಳಿದ ಆತನ ಪೋಷಕರು ಹೌಹಾರಿದ್ದಾರೆ.

‘1919ರಲ್ಲಿ ಅಮೃತಸರದ ಜಲಿಯನ್‌ವಾಲಾಬಾಗ್‌ನಲ್ಲಿ ನಡೆದ ಹತ್ಯಾಕಾಂಡಕ್ಕೆ ಪ್ರತೀಕಾರ ತೀರಿಸುವ ಸಲುವಾಗಿ ರಾಣಿ ಎಲಿಜಬೆತ್ ಅವರನ್ನು ಕೊಲ್ಲುವುದು ನನ್ನ ಉದ್ದೇಶವಾಗಿತ್ತು’ ಎಂದು ಬಂಧಿತ ಯುವಕ ಜಸ್ವಂತ್ ಸಿಂಗ್ ಚೈಲ್ ಸ್ನ್ಯಾಪ್‌ಚಾಟ್ ವಿಡಿಯೊದಲ್ಲಿ ಹೇಳಿದ ಅಂಶ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಸ್ಕಾಟ್‌ಲ್ಯಾಂಡ್ ಯಾರ್ಡ್ ಪೊಲೀಸರು ಇದನ್ನು ಪರಿಶೀಲಿಸುತ್ತಿದ್ದು, ಯುವಕನ ಪೋಷಕರು ಇದೀಗ ಆತನ ಜೀವದ ಬಗ್ಗೆ ಆತಂಕದಿಂದಿದ್ದಾರೆ.

### ಬೂಕರ್ ಪ್ರಶಸ್ತಿ ಪುರಸ್ಕೃತೆ ನಿಧನ

ವೆಲ್ಲಿಂಗ್ಟನ್ (ಎಪಿ): ದಿ ಮ್ಯಾನ್ ಬೂಕರ್ ಪ್ರಶಸ್ತಿಗೆ ಪಾತ್ರರಾದ ನ್ಯೂಜಿಲೆಂಡ್‌ನ ಕಾದಂಬರಿಕಾರ್ತಿ ಕೆರಿ ಹುಲ್ಮೆ (74) ಸೌತ್ ಐಲ್ಯಾಂಡ್‌ನ ವೈಮೇಟ್‌ನಲ್ಲಿ ನಿಧನರಾದರು.

ತಮ್ಮ ಮೊದಲ ಕಾದಂಬರಿ ‘ದಿ ಬೋನ್ ಪೀಪಲ್’ಗೆ 1984ರಲ್ಲಿ ಹುಲ್ಮೆ ಅವರು ಬೂಕರ್ ಪ್ರಶಸ್ತಿ ಪಡೆದಿದ್ದರು.

ಅಮೆರಿಕದಲ್ಲಿ ತೀವ್ರ ಚಳಿ, ಹಿಮಪಾತವಾಗುತ್ತಿದ್ದು, ವಾಷಿಂಗ್ಟನ್ ರಾಜ್ಯದ ಬೆಲ್ಲಿಂಗ್‌ಹ್ಯಾಂನಲ್ಲಿ ರಸ್ತೆ, ಮನೆಗಳೆಲ್ಲ ಹಿಮದಿಂದ ಆವೃತವಾಗಿರುವುದು —ಎಪಿ / ಪಿಟಿಐ ಚಿತ್ರ

### ಅಮೆರಿಕದಲ್ಲಿ ಭಾರಿ ಚಳಿ: ಹಿಮಪಾತ

ಸಿಯಾಟಲ್ (ಅಮೆರಿಕ) (ಎಪಿ): ಪೆಸಿಫಿಕ್ ಸಾಗರದ ವಾಯವ್ಯ ಭಾಗದಿಂದ ಬೀಸುತ್ತಿರುವ ತೀವ್ರ ಚಳಿಗಾಳಿಯಿಂದಾಗಿ ಉತ್ತರ ಕ್ಯಾಲಿಫೋರ್ನಿಯಾ ಮತ್ತು ನವೇಡಾ ಭಾಗದಲ್ಲಿ ಭಾರಿ ಚಳಿ ಆವರಿಸಿದ್ದು, ಸುಮಾರು 15 ಸೆಂ.ಮೀ.ದಪ್ಪದ ಹಿಮಪಾತ ವಾಗುತ್ತಿದೆ.

ವಾಷಿಂಗ್ಟನ್‌ನ ಪಶ್ಚಿಮ ಭಾಗ ಹಾಗೂ ಒರೆಗಾನ್‌ನ ಖಾಸಗಿ ಸಂಘಟನೆಗಳು ಸಹ ತುರ್ತು ಪರಿಹಾರ ಶೆಡ್‌ಗಳನ್ನು ನಿರ್ಮಿಸಿದ್ದು, ಚಳಿಯಿಂದ ರಕ್ಷಣೆ ಪಡೆಯಲು ಸಾಧ್ಯವಿಲ್ಲದ ಜನರು ಇಲ್ಲಿ ಆಶ್ರಯ ಪಡೆಯಲು ವ್ಯವಸ್ಥೆ ಮಾಡಲಾಗಿದೆ. ಈ ವಾರಾಂತ್ಯದವರೆಗೂ ತೀವ್ರ ಚಳಿಯ ವಾತಾವರಣ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

### ಲುಧಿಯಾನ ಬಾಂಬ್: ಜರ್ಮನಿಯಲ್ಲಿ ಶಂಕಿತನ ಬಂಧನ

ನವದೆಹಲಿ (ಪಿಟಿಐ): ಪಂಜಾಬ್‌ನ ಲುಧಿಯಾನ ನ್ಯಾಯಾಲಯದಲ್ಲಿ ಇದೇ 23ರಂದು ಸಂಭವಿಸಿದ ಬಾಂಬ್ ಸ್ಫೋಟದಲ್ಲಿ ಶಾಮೀಲಾಗಿರುವ ಆರೋಪ ಹೊಂದಿರುವ ಸಿಖ್ಸ್ ಫಾರ್ ಜಸ್ಟೀಸ್ (ಎಸ್‌ಎಫ್‌ಜೆ) ಸಂಘಟನೆಗೆ ಸೇರಿದ ಜಸ್ವಿಂದರ್ ಸಿಂಗ್ ಮುಲ್ತಾನಿ ಎಂಬಾತನನ್ನು ಜರ್ಮನಿಯಲ್ಲಿ ಬಂಧಿಸಲಾಗಿದೆ ಎಂದು ಮಂಗಳವಾರ ಇಲ್ಲಿ ಅಧಿಕಾರಿಗಳು ತಿಳಿಸಿದ್ದಾರೆ.

### ಮಹದಾಯಿ ಹೋರಾಟದಲ್ಲಿ ರಾಜಿ ಇಲ್ಲ: ಗೋವಾ ಸಿಎಂ

ಪಣಜಿ: ಮಹದಾಯಿ ನೀರು ಹಂಚಿಕೆ ವಿಚಾರದಲ್ಲಿ ಕರ್ನಾಟಕದ ವಾದವನ್ನು ಸುಪ್ರೀಂ ಕೋರ್ಟ್ ಮತ್ತು ಕೇಂದ್ರ ಸರ್ಕಾರದ ಮುಂದೆ ಗಂಭೀರವಾಗಿಯೇ ವಿರೋಧಿಸಲಾಗುತ್ತಿದೆ, ಕರ್ನಾಟಕದ ಬಿಜೆಪಿ ಸರ್ಕಾರದ ಜತೆಗೆ ಕೈಜೋಡಿಸಿಲ್ಲ ಎಂದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹೇಳಿದ್ದಾರೆ.

ಉತ್ತರ ಗೋವಾದ ಗಂಜೆಂನಲ್ಲಿ ಮಂಗಳವಾರ ಬ್ಯಾರೇಜ್ ಒಂದನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದ ಪರಿಸರಕ್ಕೆ ಧಕ್ಕೆ ತರುವ ಯಾವ ಯೋಜನೆಯನ್ನಾದರೂ ಖಂಡತುಂಡವಾಗಿ ವಿರೋಧಿಸಲಾಗುವುದು ಎಂದರು.

## ಪ್ರೊ ಕಬಡ್ಡಿ ಲೀಗ್ ಟೂರ್ನಿ: ಮಿಂಚಿದ ಸಚಿನ್, ಪ್ರಶಾಂತ್ ಕುಮಾರ್

# ಪಟ್ನಾ, ಹರಿಯಾಣ ಜಯಭೇರಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಚಿನ್ ಮತ್ತು ಪ್ರಶಾಂತ್ ಕುಮಾರ್ ಅವರ ಚುರುಕಿನ ದಾಳಿಗಳಿಂದಾಗಿ ಪಟ್ನಾ ಪೈರೆಟ್ಸ್ ತಂಡವು ಪ್ರೊ ಕಬಡ್ಡಿ ಟೂರ್ನಿಯಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ವೈಟ್‌ಫೀಲ್ಡ್‌ನ ಶೆರಟಾನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಪಟ್ನಾ ತಂಡವು 38–26ರಿಂದ ಪುಣೇರಿ ಪಲ್ಟನ್ ಎದುರು ಜಯಿಸಿತು. ಸಚಿನ್ 10 ಮತ್ತು ಪ್ರಶಾಂತ್ ಕುಮಾರ್ ಐದು ಅಂಕಗಳನ್ನು ಗಳಿಸಿ ತಂಡದ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದರು.

ಪಂದ್ಯದ ಮೊದಲಾರ್ಧದಲ್ಲಿ ಉಭಯ ತಂಡಗಳೂ ಸಮಬಲದ ಹೋರಾಟ ನಡೆಸಿದವು. ರೋಚಕ ಹೋರಾಟ ಕಂಡುಬಂದಿತು. ಅದರಿಂದಾಗಿ ವಿರಾಮಕ್ಕೆ 14–14ರಿಂದ ತಂಡಗಳು ಸಮ ಸಾಧನೆ ಮಾಡಿದ್ದವು.

ಆದರೆ ವಿರಾಮದ ನಂತರದಲ್ಲಿ ಪಟ್ನಾ ದಾಳಿಗಾರರ ಆಟದ ವೇಗಕ್ಕೆ ಪುಣೇರಿ ಆಟಗಾರರು ಸಾಟಿಯಾಗಲಿಲ್ಲ. ದ್ವಿತೀಯಾರ್ಧದಲ್ಲಿ ಪೈರೆಟ್ಸ್ ತಂಡವು 24 ಅಂಕಗಳನ್ನು ಸೂರೆ ಮಾಡಿತು. ಪುಣೇರಿ ತಂಡವು ಕೇವಲ 12 ಅಂಕ ಗಳಿಸಿತು. ಇದರಿಂದಾಗಿ ಪಟ್ನಾ ಜಯದತ್ತ ಸಾಗಿತು.

ಪಟ್ನಾ ತಂಡವು ನಾಲ್ಕು ಆಲೌಟ್ ಪಾಯಿಂಟ್ಸ್ ಗಳಿಸಿತು. ಇದರಿಂದಾಗಿ ಪುಣೇರಿ ಮೇಲಿನ ಒತ್ತಡ ಹೆಚ್ಚಿತು.

**ಸ್ಟೀಲರ್ಸ್‌ಗೆ ರೋಚಕ ಜಯ:** ಇನ್ನೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡವು 39–37ರಿಂದ ತೆಲುಗು ಟೈಟನ್ಸ್ ವಿರುದ್ಧ ರೋಚಕ ಜಯ ಸಾಧಿಸಿತು.

ಆಲ್‌ರೌಂಡರ್ ಮೀಟು ಮತ್ತು ರೋಹಿತ್ ಗುಲಿಯಾ ಅವರು ಕ್ರಮವಾಗಿ 12 ಮತ್ತು 8 ಅಂಕಗಳನ್ನು ಗಳಿಸಿ ತಂಡದ ಜಯದ ರೂವಾರಿಗಳಾದರು.

ಅರ್ಧವಿರಾಮದ ವೇಳೆಗೆ ಹರಿಯಾಣ ತಂಡವು 23–19 ರಿಂದ ಮುನ್ನಡೆ ಸಾಧಿಸಿತು. ಆದರೆ ವಿರಾಮದ ನಂತರ ತೆಲುಗು ತಂಡದ ರೇಡರ್‌ಗಳು ಮಿಂಚಿನ ಆಟವಾಡಿದರು. ಸಿದ್ಧಾರ್ಥ್ ದೇಸಾಯಿ (9) ಮತ್ತು ನಾಯಕ ರಾಕೇಶ್ ಗೌಡ (7) ಅಮೋಘ ಆಟವಾಡಿ, ಕಠಿಣ ಪೈಪೋಟಿಯೊಡ್ಡಿದರು. ಈ ಅವಧಿಯಲ್ಲಿ ಟೈಟನ್ಸ್ 18 ಮತ್ತು ಸ್ಟೀಲರ್ಸ್ 16 ಅಂಕಗಳನ್ನು ಗಳಿಸಿತು. ಒಟ್ಟಾರೆ ಎರಡು ಅಂಕಗಳಿಂದ ಸ್ಟೀಲರ್ಸ್ ಗೆದ್ದಿತು.

ತೆಲುಗು ಟೈಟನ್ಸ್ ಮತ್ತು ಹರಿಯಾಣ ಸ್ಟೀಲರ್ಸ್ ಆಟಗಾರರ ಸೆಣಸಾಟ –ಟ್ವಿಟರ್

VIVO PRO KABADDI

**ಇಂದಿನ ಪಂದ್ಯ (ರಾತ್ರಿ)**

ದಬಂಗ್ ಡೆಲ್ಲಿ Vs ಬೆಂಗಾಲ್ ವಾರಿಯರ್ಸ್ 7.30

ಯುಪಿ ಯೋಧಾ – ಗುಜರಾತ್ ಜೈಂಟ್ಸ್ 8.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

**ಪಾಯಿಂಟ್ಸ್ ಪಟ್ಟಿ**

| ತಂಡ | ಪಂದ್ಯ | ಜಯ | ಸೋಲು | ಟೈ | ಪಾಯಿಂಟ್ಸ್ |
|---|---|---|---|---|---|
| ದಬಂಗ್ ಡೆಲ್ಲಿ | 3 | 2 | - | 1 | 13 |
| ಪಟ್ನಾ ಪೈರೇಟ್ಸ್ | 3 | 2 | 1 | - | 11 |
| ಬೆಂಗಾಲ್ ವಾರಿಯರ್ಸ್ | 3 | 2 | 1 | - | 11 |
| ಜೈಪುರ ಪಿಂಕ್ ಪ್ಯಾಂಥರ್ಸ್ | 3 | 2 | 1 | - | 11 |
| ಬೆಂಗಳೂರು ಬುಲ್ಸ್ | 3 | 2 | 1 | - | 10 |
| ಯು ಮುಂಬಾ | 3 | 1 | 1 | 1 | 9 |
| ಗುಜರಾತ್ ಜೈಂಟ್ಸ್ | 3 | 1 | 1 | 1 | 9 |
| ಹರಿಯಾಣ ಸ್ಟೀಲರ್ಸ್ | 3 | 1 | 2 | - | 7 |
| ಯುಪಿ ಯೋಧಾ | 3 | 1 | 2 | - | 7 |
| ತಮಿಳು ತಲೈವಾಸ್ | 3 | - | 1 | 2 | 6 |
| ತೆಲುಗು ಟೈಟನ್ಸ್ | 3 | - | 2 | 1 | 5 |
| ಪುಣೇರಿ ಪಲ್ಟನ್ | 3 | 1 | 2 | - | 5 |

(ಮಂಗಳವಾರದ ಪಂದ್ಯಗಳ ಅಂತ್ಯಕ್ಕೆ)

## ಗಂಗೂಲಿಗೆ ಕೋವಿಡ್: ಆಸ್ಪತ್ರೆಗೆ ದಾಖಲು

ಸೌರವ್ ಗಂಗೂಲಿ

**ಕೋಲ್ಕತ್ತ (ಪಿಟಿಐ):** ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷ ಸೌರವ್ ಗಂಗೂಲಿ ಅವರಿಗೆ ಕೋವಿಡ್ ಇರುವುದು ಖಚಿತವಾಗಿದೆ. ಅವರನ್ನು ಚಿಕಿತ್ಸೆಗಾಗಿ ಇಲ್ಲಿಯ ವುಡ್‌ಲ್ಯಾಂಡ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಆರೋಗ್ಯ ಸ್ಥಿರವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಅವರಿಗೆ ಮಾಡಿದ್ದ ಆರ್‌ಟಿ ಪಿಸಿಆರ್ ಪರೀಕ್ಷೆಯಲ್ಲಿ ಕೋವಿಡ್ ಇರುವುದು ಸೋಮವಾರ ರಾತ್ರಿ ಖಚಿತವಾಯಿತು. ಅವರಿಗೆ ಓಮೈಕ್ರಾನ್ ಸೋಂಕು ಇದೆಯೇ ಎಂದು ಪರಿಶೀಲಿಸಲು ಜಿನೋಮ್ ಸಿಕ್ವೆನ್ಸ್ ಪರೀಕ್ಷೆಗೆ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳಿಸಲಾಗಿದೆ.

‘ದಾಖಲಾದ ರಾತ್ರಿಯೇ ಅವರಿಗೆ ಮೊನೊಕ್ಲೋನಲ್ ಆ್ಯಂಟಿಬಾಡಿ ಕಾಕ್‌ಟೇಲ್ ಚಿಕಿತ್ಸೆ ನೀಡಲಾಗಿದೆ. ಅವರ ಆರೋಗ್ಯ ಸ್ಥಿರವಾಗಿದೆ’ ಎಂದು ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯೂ ಆಗಿರುವ ಡಾ. ರೂಪಾಲಿ ಬಸು ತಿಳಿಸಿದ್ದಾರೆ.

‘ಪರಿಣತ ವೈದ್ಯರಾದ ಸರೋಜ್ ಮಂಡಲ್, ಸಪ್ತರ್ಷಿ ಬಸು ಮತ್ತು ಸೌಥಿಕ್ ಪಂಡಾ ಅವರಿರುವ ತಂಡನಿಗಾ ವಹಿಸಿದೆ. ಅವರೊಂದಿಗೆ ಬೆಂಗ ಳೂರಿನ ಡಾ. ದೇವಿಶೆಟ್ಟಿ ಮತ್ತು ಡಾ. ಅಫ್ತಾಬ್ ಖಾನ್ ಸಲಹೆ ನೀಡುತ್ತಿದ್ದಾರೆ’ ಎಂದು ರೂಪಾಲಿ ತಿಳಿಸಿದ್ದಾರೆ.

# ಫುಟ್‌ಬಾಲ್: ಕಿಕ್‌ಸ್ಟಾರ್ಟ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎನ್. ಸೋಲೈಮಲ್ಲೈ ಗಳಿಸಿದ ಎರಡು ಗೋಲುಗಳ ನೆರವಿನಿಂದ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ 4–2ರಿಂದ ಬಿಎಫ್‌ಸಿ ತಂಡವನ್ನು ಸೋಲಿಸಿತು. ಸೋಲೈಮಲ್ಲೈ 32 ಮತ್ತು 45+2ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಪಿ. ಅಂಕಿತ್ (12ನೇ ನಿ.) ಮತ್ತು ಪ್ರಿನ್ಸ್‌ವಿಲ್‌ಎಮೆಕಾ ಒಲಿವರಿಚ್ (41ನೇ ನಿ.) ವಿಜೇತ ತಂಡದ ಪರ ಗೋಲು ಹೊಡೆದರು. ಬಿಎಫ್‌ಸಿ ತಂಡದ ಮ್ಯಾಕ್‌ಟ್ರಾನ್ ಲೂಯಿಸ್ ನಿಕ್ಸನ್ (47ನೇ ನಿ.) ಮತ್ತು ರಾಬಿನ್ ಯಾದವ್ (90ನೇ ನಿ.) ಯಶಸ್ಸು ಸಾಧಿಸಿದರು.

ಇನ್ನೊಂದು ಪಂದ್ಯದಲ್ಲಿ ಎಫ್‌ಸಿ ಡೆಕ್ಕನ್ 3–1ರಿಂದ ಯಂಗ್ ಚಾಲೆಂಜರ್ಸ್ ಎದುರು ಗೆದ್ದಿತು. ಎಂಇಜಿ ಆ್ಯಂಡ್ ಸೆಂಟರ್ ಎಫ್‌ಸಿ– ಜವಾಹರ್ ಯೂನಿಯನ್ ನಡುವಣ ಪಂದ್ಯ ಗೋಲುರಹಿತ ಡ್ರಾ ಆಯಿತು. ಬುಧವಾರ ನಡೆಯುವ ಪಂದ್ಯಗಳಲ್ಲಿ ಬೆಂಗಳೂರು ಈಗಲ್ಸ್ ಎಫ್‌ಸಿ– ಬೆಂಗಳೂರು ಇಂಡಿಪೆಂಡೆಂಟ್ಸ್ ಮತ್ತು ಕೊಡಗು ಎಫ್‌ಸಿ– ಬೆಂಗಳೂರು ಡ್ರೀಮ್ ಯುನೈಟೆಡ್ ಸೆಣಸಲಿವೆ.

ಜವಾಹರ್ ಯೂನಿಯನ್ ಎಫ್‌ಸಿಯ ಬ್ಯಾರಿ ಆನಂದ್ ಫ್ರಾನ್ಸಿಸ್ (ಎಡ) ಮತ್ತು ಎಂಇಜಿ ಆ್ಯಂಡ್ ಸೆಂಟರ್ ಎಫ್‌ಸಿಯ ಅಮಲ್ ಎಂ. ನಡುವೆ ಚೆಂಡಿಗಾಗಿ ಪೈಪೋಟಿ – ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

## ಐಎಸ್‌ಎಲ್: ಒಗ್ಬೆಚೆ ಮಿಂಚು; ಹೈದರಾಬಾದ್ ಎಫ್‌ಸಿಗೆ ಜಯ

**ಬ್ಯಾಂಬಲಿಮ್ (ಪಿಟಿಐ):** ಬಾರ್ತೊಲೊಮಿವ್ ಒಗ್ಬೆಚೆ ಗಳಿಸಿದ ಎರಡು ಗೋಲುಗಳ ನೆರವಿನಿಂದ ಹೈದರಾಬಾದ್ ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ 6–1ರಿಂದ ಒಡಿಶಾ ಎಫ್‌ಸಿ ವಿರುದ್ಧ ಗೆದ್ದಿತು. ಒಗ್ಬೆಚೆ 39 ಮತ್ತು 60ನೇ ನಿಮಿಷಗಳಲ್ಲಿ ಗೋಲು ಗಳಿಸಿದರೆ ಎಡು ಗಾರ್ಸಿಯಾ (54ನೇ ನಿ.), ಜೇವಿಯರ್ ಸಿವೆರಿಯೊ (72ನೇ ನಿ.) ಮತ್ತು ಜೊವಾ ವಿಕ್ಟರ್ (86ನೇ ನಿ.) ತಂಡದ ಪರ ಗೋಲು ಹೊಡೆದರು. ಇನ್ನೊಂದು ಗೋಲು ಉಡುಗೊರೆ ರೂಪದಲ್ಲಿ ಎದುರಾಳಿ ತಂಡದ ಹೆಕ್ಟರ್ ರೊಡಾಸ್ (9ನೇ ನಿ.) ಅವರಿಂದ ಬಂದಿತು. ಒಡಿಶಾ ತಂಡಕ್ಕೆ ಹೈದರಾಬಾದ್‌ನ ಜುವನನ್ (16ನೇ ನಿಮಿಷ) ‘ಉಡುಗೊರೆ’ ನೀಡಿದರು.

ಮಡಗಾಂವ್‌ನಲ್ಲಿ ಬುಧವಾರ ನಡೆಯಲಿರುವ ಪಂದ್ಯದಲ್ಲಿ ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ತಂಡವು ಎಫ್‌ಸಿ ಗೋವಾ ಸವಾಲು ಎದುರಿಸಲಿದೆ.

**ಮೈಸೂರು ರೇಸ್**

## ವಿಂಡ್ ಪವರ್ ಗೆಲ್ಲುವ ನಿರೀಕ್ಷೆ

**ಡಾ.ರಾಜೇಂದ್ರ ಪ್ರಸಾದ್ ಮೆಮೋರಿಯಲ್ ಕಪ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ವಿಂಡ್ ಪವರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:**

1ನೇ ರೇಸ್: ಸ್ವಿಸ್ ಬೇ 4, ಹೈಲ್ಯಾಂಡ್ ಪಾರ್ಕ್ 3, ಚಿಕಾಗೊ ಬುಲ್ 2
2ನೇ ರೇಸ್: ರಾಯಲ್ ಕಮಾಂಡ್ 3, ಸೆಲೆಸ್ಟಿಯಲ್ ಲೈಟ್ 2, ಅನ್‌ಇಮಾಜಿನಬಲ್ 6
3ನೇ ರೇಸ್: ಸೂಪರ್‌ಬ್ರಾಟ್ 8, ಹೀ ಈಸ್ ಡನ್ ಇಟ್ 1, ಹೀರೊಯಿಸ್ಮ್ 3
4ನೇ ರೇಸ್: ವಿಂಡ್ ಪವರ್ 11, ಮಾರಿಗೋಲ್ಡ್ 2, ಥಿಯಾಸ್ ಗ್ಲೋರಿ 10
5ನೇ ರೇಸ್: ಗೋಲ್ಡ್ ಕ್ರೆಸ್ಟ್ 2, ಎವಾಂಡರ್ 6, ಮಾರ್ಚ್ ಟು ವಿಕ್ಟರಿ 5
6ನೇ ರೇಸ್: ಅರಾಕ್ 1, ಅಕ್ವಿಲಾ ಡಿ’ಒರೊ 3, ಕಮ್ ಅಲೈವ್ 3

**ಉತ್ತಮ ಬೆಟ್: ಸೂಪರ್‌ಬ್ರಾಟ್**

| ಜಾಕ್‌ಪಾಟ್ | ಟ್ರಿಬಲ್ |
|---|---|
| 2,3,4,5,6 | 4,5,6 |

# ಹಾಕಿ: ಅವಿನಾಶಿಲಿಂಗಂ ವಿ.ವಿ ತಂಡಕ್ಕೆ ಗೆಲುವು

**ಗೋಣಿಕೊಪ್ಪಲು (ಕೊಡಗು):** ಕೊಯಮತ್ತೂರಿನ ಅವಿನಾಶಿಲಿಂಗಂ ವಿಶ್ವವಿದ್ಯಾಲಯ ತಂಡವು ಇಲ್ಲಿ ನಡೆಯುತ್ತಿರುವ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಮಹಿಳಾ ಹಾಕಿ ಟೂರ್ನಿಯಲ್ಲಿ ಭರ್ಜರಿ ಜಯ ಸಾಧಿಸಿತು.

ಮಂಗಳೂರು ವಿಶ್ವವಿದ್ಯಾಲಯ ಹಾಗೂ ವಿರಾಜಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆಶ್ರಯದಲ್ಲಿ ನಡೆಯುತ್ತಿರುವ ಟೂರ್ನಿಯ ಎರಡನೇ ದಿನವಾದ ಮಂಗಳವಾರ, ಅವಿನಾಶಿಲಿಂಗಂ ವಿ.ವಿ 5–0 ಗೋಲುಗಳಿಂದ ಮದರ್ ತೆರೇಸಾ ವಿ.ವಿ ತಂಡವನ್ನು ಮಣಿಸಿತು. ವಿಜಯಿ ತಂಡದ ಪರವಾಗಿ ಎಲಕ್ಕಿಯಾ 2, ಶಿವಶಂಕರಿ 2, ಎಂ.ಐಶ್ವರ್ಯಾ 1 ಗೋಲು ದಾಖಲಿಸಿದರು. ಮತ್ತೊಂದು ಪಂದ್ಯದಲ್ಲಿ ತಿರುವಳ್ಳುವರ್ ವಿ.ವಿ ತಂಡ 2–0 ರಲ್ಲಿ ರಾಣಿಚೆನ್ನಮ್ಮ ವಿ.ವಿ ತಂಡದ ವಿರುದ್ಧ ಜಯಿಸಿತು. ಪೆರಿಯಾರ್ ವಿ.ವಿ ತಂಡ, ಅಣ್ಣಾಮಲೈ ವಿ.ವಿ ತಂಡವನ್ನು 1-0 ಗೋಲಿನಿಂದ ಪರಾಭವಗೊಳಿಸಿತು. ಮೈತಿಲೀಶ್ವರಿ ಅವರು ಪೆನಾಲ್ಟಿ ಕಾರ್ನರ್ ಮೂಲಕ ಗೋಲು ಗಳಿಸಿದರು.

ಭಾರತೀಯಾರ್ ವಿ.ವಿ ತಂಡ 2–1 ರಲ್ಲಿ ಮಹಾತ್ಮಾ ಗಾಂಧಿ ವಿ.ವಿ ವಿರುದ್ಧ ಗೆದ್ದರೆ, ಭಾರತಿದಾಸನ್ ವಿ.ವಿ 3–2 ರಲ್ಲಿ ಎಂ.ಕೆ ವಿ.ವಿ ತಂಡವನ್ನು ಮಣಿಸಿತು.

## ಪ್ರಶ್ನೋತ್ತರ



**ಯು.ಪಿ.ಪುರಾಣಿಕ್**
ಬ್ಯಾಂಕಿಂಗ್–ಹಣಕಾಸು ತಜ್ಞ
uppuranik@gmail.com
ಮೊ: 9448015300

**ಭಾಗೀರಥಿ,** ಕೊಡಗು

- **ಪ್ರಶ್ನೆ: ನಾನು ನನ್ನ ಗೆಳತಿ 2014ರಲ್ಲಿ ಜಂಟಿಯಾಗಿ ₹ 33 ಲಕ್ಷ ಕೊಟ್ಟು ನಿವೇಶನ ಕೊಂಡೆವು. ಈ ವರ್ಷ (2021ರಲ್ಲಿ) ₹ 54 ಲಕ್ಷಕ್ಕೆ ಮಾರಾಟ ಮಾಡಿದೆವು. ಬಂದ ಲಾಭದಿಂದ ಮನೆ ಮೇಲೊಂದು ಸಣ್ಣ ಮನೆ ನಿರ್ಮಿಸಿದರೆ ಬಂಡವಾಳ ವೃದ್ಧಿ ತೆರಿಗೆಯಿಂದ ವಿನಾಯಿತಿ ಪಡೆಯಬಹುದೇ? ನಾನು ನಿವೃತ್ತ ಮುಖ್ಯೋಪಾಧ್ಯಾಯಿನಿ. ಓದಿರುವುದು ಇಂಗ್ಲಿಷ್ ಸಾಹಿತ್ಯ. ನನಗೆ ಬ್ಯಾಂಕಿಂಗ್, ಕಾಮರ್ಸ್ ಬಗ್ಗೆ ಅಷ್ಟು ಅನುಭವ ಇಲ್ಲ. ನಿಮ್ಮ ಅಂಕಣದಿಂದ ಸ್ವಲ್ಪಮಟ್ಟಿಗೆ ತಿಳಿದುಕೊಳ್ಳುತ್ತಿದ್ದೇನೆ. ನೀವು ಪ್ರಶ್ನೆ ಕೇಳಿದವರಿಗೆ ಉತ್ತರದ ಜೊತೆಗೆ ಅವರ ಆಪ್ತಸಮಾಲೋಚಕರ ರೀತಿಯಲ್ಲಿಯೂ ಕೆಲವು ಮಾತುಗಳನ್ನು ಹೇಳುತ್ತೀರಿ. ಮುಖ್ಯವಾಗಿ ನಿಮಗೆ ಜನಸಾಮಾನ್ಯರ ಬಗ್ಗೆ ಇರುವ ಕಾಳಜಿ ಉತ್ತರದಲ್ಲಿ ಕಂಡುಬರುತ್ತದೆ.**

ಉತ್ತರ: ಸೆಕ್ಷನ್ 48ರ ಆಧಾರದ ಮೇಲೆ ಬಂಡವಾಳವೃದ್ಧಿ ಬರುವ ಮೊತ್ತದಲ್ಲಿ ಮನೆ ಕಟ್ಟಿಸಬಹುದು. ಹಾಗೂ ಸೆಕ್ಷನ್ 54ಇಸಿ ಆಧಾರದ ಮೇಲೆ ₹ 50 ಲಕ್ಷದ ತನಕ ಎನ್‌ಎಚ್‌ಎಐ/ಆರ್‌ಇಸಿ ಬಾಂಡ್‌ಗಳಲ್ಲಿ ಕೂಡ ಹಣ ತೊಡಗಿಸಬಹುದು. ನಿಮಗೆ ಬಂದಿರುವ ಒಟ್ಟು ಲಾಭ ₹ 21 ಲಕ್ಷ. ಹಣದುಬ್ಬರ ಕಳೆದರೆ ಇಬ್ಬರಿಂದ ₹ 9 ಲಕ್ಷ ಬರಬಹುದು. ಗಳಿಸಿದ ಲಾಭಕ್ಕಿಂತ ಮನೆ ಮೇಲೊಂದು ಕಟ್ಟಡ ನಿರ್ಮಿಸಲು ಇನ್ನೂ ಹೆಚ್ಚಿನ ಹಣ ಬೇಕಾಗುವುದರಿಂದ ನಿಮಗೆ ಬಂಡವಾಳ ವೃದ್ಧಿ ತೆರಿಗೆ ಬರುವುದಿಲ್ಲ.

**ಮಾಧವಮೂರ್ತಿ,** ಊರುಬೇಡ

- **ಪ್ರಶ್ನೆ: ನಾನು ನಿವೃತ್ತ ಸರ್ಕಾರಿ ನೌಕರ. ವಯಸ್ಸು 62 ವರ್ಷ. ನೀರು, ವಿದ್ಯುತ್, ಫೋನ್ ಬಿಲ್ ತುಂಬಲು ಆಯಾ ಕಚೇರಿಗೆ ಹೋಗಿ ಸರತಿಯಲ್ಲಿ ನಿಲ್ಲಲು ಸಾಧ್ಯವಾಗುತ್ತಿಲ್ಲ. ಆನ್‌ಲೈನ್‌ನಲ್ಲಿ ತುಂಬಲು ನನಗೆ ಬರುವುದಿಲ್ಲ. ಇದಕ್ಕೆ ಸುಲಭ ಮಾರ್ಗ ತಿಳಿಸಿ.**

ಉತ್ತರ: ನಿಮ್ಮ ಪ್ರಶ್ನೆ ಅರ್ಥಪೂರ್ಣವಾಗಿದೆ. ಮುಖ್ಯವಾಗಿ ಹಿರಿಯ ನಾಗರಿಕರಿಗೆ ಕಚೇರಿ ಮುಂದೆ ಸರತಿಯಲ್ಲಿ ನಿಂತು ತಿಂಗಳ ಬಿಲ್‌ಗಳನ್ನು ಪಾವತಿಸುವುದು ಸುಲಭದ ಕೆಲಸವಲ್ಲ. ನೀರು, ವಿದ್ಯುತ್ ಹಾಗೂ ಫೋನ್ ಬಿಲ್ ಮೊತ್ತ ಆಯಾ ಸಂಸ್ಥೆಗೆ ಸಕಾಲದಲ್ಲಿ ಪಾವತಿಯಾಗಲು ಬ್ಯಾಂಕ್‌ನಲ್ಲಿ ಇಸಿಎಸ್ (ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸಿಸ್ಟಂ) ಮಾಡಿಸಿರಿ. ಇಸಿಎಸ್ ಮಾಡಲು ನೀವು ಆಯಾ ಕಚೇರಿಗೆ ಹೋಗಿ ಅವರು ಪ್ರಸ್ತುತಪಡಿಸಿದ ಫಾರಂ ತುಂಬಬೇಕು. ನಿಮ್ಮ ಬ್ಯಾಂಕ್ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ಕೋಡ್ ಇತ್ಯಾದಿ ಫಾರಂನಲ್ಲಿ ಭರ್ತಿ ಮಾಡಬೇಕು. ಇದು ಸುಲಭದ ಕೆಲಸ. ಮುಂದೆ, ಈ ಸಂಸ್ಥೆಗಳು ನಿಮ್ಮ ತಿಂಗಳ ಬಿಲ್ ಮೊತ್ತವನ್ನು ಬ್ಯಾಂಕ್‌ಗೆ ಕಳುಹಿಸಿ ನಿಮ್ಮ ಖಾತೆಗೆ ಖರ್ಚು ಹಾಕಿಸಿ ನೇರವಾಗಿ ಬಿಲ್ ಮೊತ್ತ ಪಡೆಯುತ್ತವೆ. ಹೀಗೆ ಮಾಡಿದಲ್ಲಿ ನೀವು ಕಚೇರಿಗಳಲ್ಲಿ ಸರತಿಯಲ್ಲಿ ನಿಲ್ಲುವುದು ತಪ್ಪಲಿದೆ. ಇಸಿಎಸ್ ಬೇಡವಾದಲ್ಲಿ ರದ್ದುಪಡಿಸುವ ಹಕ್ಕೂ ನಿಮಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಿದ್ದರೆ ಕರೆ ಮಾಡಿರಿ.

**ರಶ್ಮಿ ರಾಘವೇಂದ್ರ,** ಚಾಮರಾಜಪೇಟೆ, ಬೆಂಗಳೂರು

- **ಪ್ರಶ್ನೆ: ನಾನು ಸರ್ಕಾರಿ ಉದ್ಯೋಗಿ. ವಯಸ್ಸು 52 ವರ್ಷ. ತಿಂಗಳ ಸಂಬಳ ₹ 72,200. ತೆರಿಗೆ ಉಳಿಸಲು ಸೆಕ್ಷನ್ 80ಸಿ ಆಧಾರದ ಮೇಲೆ ಸಹಕಾರ ಬ್ಯಾಂಕ್‌ಗಳಲ್ಲಿ ಠೇವಣಿ ಇರಿಸಬಹುದೇ? ಭದ್ರತೆ, ಅವಧಿ, ಬಡ್ಡಿದರ ಎಲ್ಲವನ್ನೂ ವಿವರವಾಗಿ ತಿಳಿಸಿ.**

ಉತ್ತರ: ಸೆಕ್ಷನ್ 80ಸಿ ಆಧಾರದ ಮೇಲೆ ₹ 1.50 ಲಕ್ಷ ಬ್ಯಾಂಕ್ ಠೇವಣಿ ಮಾಡಬಹುದು. ಅವಧಿ 5 ವರ್ಷ. ಈ ಅವಧಿಯಲ್ಲಿ ಠೇವಣಿ ಮುರಿದು ವಾಪಸ್ ಪಡೆಯುವಂತಿಲ್ಲ ಹಾಗೂ ಠೇವಣಿ ಮೇಲೆ ಸಾಲ ಪಡೆಯುವಂತಿಲ್ಲ. ಬಡ್ಡಿ ದರವನ್ನು ಆಯಾ ಬ್ಯಾಂಕ್‌ಗಳು ನಿರ್ಧರಿಸುತ್ತವೆ. ತೆರಿಗೆ ವಿನಾಯಿತಿ ಪಡೆಯಲು ಕಡ್ಡಾಯವಾಗಿ ಶೆಡ್ಯೂಲ್ಡ್ ಬ್ಯಾಂಕ್‌ಗಳಲ್ಲಿಯೇ ಠೇವಣಿ ಮಾಡಬೇಕು. ಸಹಕಾರ ಬ್ಯಾಂಕ್‌ಗಳಲ್ಲಿಯೂ ಶೆಡ್ಯೂಲ್ಡ್ ಬ್ಯಾಂಕ್‌ಗಳಿವೆ. ಉದಾ: ಸಹಕಾರ ಅಪೆಕ್ಸ್ ಬ್ಯಾಂಕ್, ಶ್ಯಾಮರಾವ್ ವಿಠಲ್ ಬ್ಯಾಂಕ್ ಇತ್ಯಾದಿ. ಠೇವಣಿದಾರರು ವಾಣಿಜ್ಯ ಅಥವಾ ಸಹಕಾರ ಬ್ಯಾಂಕ್‌ಗಳಲ್ಲಿ ಠೇವಣಿ ಇರಿಸುವಾಗ ಓರ್ವ ವ್ಯಕ್ತಿಯ ಹೆಸರಿನಲ್ಲಿ ಗರಿಷ್ಠ ₹ 5 ಲಕ್ಷದವರೆಗೆ ಇರಿಸಲು ಭಯಪಡುವ ಅವಶ್ಯಕತೆ ಇಲ್ಲ. ಇತ್ತೀಚೆಗೆ ಕೇಂದ್ರ ಸರ್ಕಾರ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ಮಾಡಿ, ಠೇವಣಿ ಮೇಲಿನ ವಿಮೆ ಮೊತ್ತವನ್ನು ₹ 5 ಲಕ್ಷಕ್ಕೆ ಹೆಚ್ಚಿಸಿದೆ. ಒಂದು ವೇಳೆ ಯಾವುದೇ ಬ್ಯಾಂಕ್ ದಿವಾಳಿ ಆದಲ್ಲಿ, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮೊರಟೋರಿಯಂ ವಿಧಿಸಿದಲ್ಲಿ, ಠೇವಣಿದಾರರಿಗೆ 90 ದಿನಗಳಲ್ಲಿ ₹ 5 ಲಕ್ಷಗಳ ತನಕ ‘ಡಿಐಸಿಜಿಸಿ’ಯಿಂದ ಪರಿಹಾರ ದೊರೆಯುತ್ತದೆ.

**ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ**
**ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.**
**ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.**
**ಇ–ಮೇಲ್: businessdesk@prajavani.co.in**

**ಷೇರುಪೇಟೆ ವಹಿವಾಟು**





**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 17,086 |
| ಇಂದಿನ ಅಂತ್ಯ | 17,233 |
| ▲ | 147 |
| ದಿನದ ಗರಿಷ್ಠ | 17,250 |

**ವಿನಿಮಯ ದರ**

| | |
|---|---|
| $ ಡಾಲರ್ | 74.70 |
| £ ಪೌಂಡ್ | 100.41 |
| € ಯುರೊ | 86.60 |
| ¥ ಯೆನ್ (100ಕ್ಕೆ) | 65 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹515 |
| 12 ಮೊಟ್ಟೆಗೆ | ₹68 |
| ಮೈಸೂರು | |
| 100 ಮೊಟ್ಟೆಗೆ | ₹515 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1320 (1320) |
| ಸೋಯಾ (ರಿಫೈನ್ಡ್) | ₹1200 (1190) |
| ಸೂರ್ಯಕಾಂತಿ (ರಿಫೈನ್ಡ್) | ₹1260 (1250) |
| ಪಾಮೋಲಿನ್ | ₹1150 (1142) |

# ಎಂಎಫ್ ಯೋಜನೆ ಸ್ಥಗಿತಕ್ಕೆ ಹೂಡಿಕೆದಾರರ ಒಪ್ಪಿಗೆ ಅಗತ್ಯ

## ಮ್ಯೂಚುವಲ್ ಫಂಡ್ ಕಂಪನಿಗಳಿಗೆ ಸೆಬಿ ತಾಕೀತು

**ಮುಂಬೈ (ಪಿಟಿಐ):** ಮ್ಯೂಚುವಲ್ ಫಂಡ್ ಯೋಜನೆಯೊಂದನ್ನು ಸ್ಥಗಿತಗೊಳಿಸುವ ಮೊದಲು, ಅದರಲ್ಲಿ ಹೂಡಿಕೆ ಮಾಡಿದವರ ಒಪ್ಪಿಗೆ ಪಡೆಯುವುದನ್ನು ಕಡ್ಡಾಯಗೊಳಿಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಮಂಗಳವಾರ ತೀರ್ಮಾನಿಸಿದೆ. ಸೆಬಿಯ ಈ ಕ್ರಮವು ಮ್ಯೂಚುವಲ್ ಫಂಡ್‌ಗಳಲ್ಲಿ ಹಣ ಹೂಡಿಕೆ ಮಾಡಿದವರ ಹಿತಾಸಕ್ತಿಗಳನ್ನು ರಕ್ಷಿಸುವ ಉದ್ದೇಶದ್ದು ಎಂದು ವಿಶ್ಲೇಷಿಸಲಾಗಿದೆ.

ಫಂಡ್ ಸ್ಥಗಿತಗೊಳಿಸಲು ಮ್ಯೂಚುವಲ್ ಫಂಡ್ ಕಂಪನಿಯ ಟ್ರಸ್ಟಿಗಳು ಬಹುಮತದ ಆಧಾರದಲ್ಲಿ ತೀರ್ಮಾನಿಸಿದರೆ, ಆ ತೀರ್ಮಾನವನ್ನು ಅನುಷ್ಠಾನಕ್ಕೆ ತರುವ ಮೊದಲು ಫಂಡ್‌ನಲ್ಲಿ ಹೂಡಿಕೆ ಮಾಡಿದವರ (ಯೂನಿಟ್ ಹೊಂದಿರುವವರು) ಸಮ್ಮತಿ ಪಡೆದುಕೊಳ್ಳಬೇಕಾಗುತ್ತದೆ. ಯಾವುದೇ ಕ್ಲೋಸ್–ಎಂಡ್ ಮ್ಯೂಚುವಲ್ ಫಂಡ್ ಯೋಜನೆಯ ಯೂನಿಟ್‌ಗಳನ್ನು ಅವಧಿಗೆ ಮೊದಲು ನಗದಾಗಿ ಪರಿವರ್ತಿಸಿಕೊಳ್ಳಲು ಟ್ರಸ್ಟಿಗಳು ಬಹುಮತದ ಆಧಾರದಲ್ಲಿ ನಿರ್ಧಾರ ಕೈಗೊಂಡಾಗ ಕೂಡ, ಅದನ್ನು ಜಾರಿಗೆ ತರಲು ಹೂಡಿಕೆದಾರರ ಅನುಮತಿ ಪಡೆದುಕೊಳ್ಳಬೇಕಾಗುತ್ತದೆ ಎಂದು ಸೆಬಿ ತಾಕೀತು ಮಾಡಿದೆ.

‘ಟ್ರಸ್ಟಿಗಳು ಹೂಡಿಕೆದಾರರ ಸಮ್ಮತಿಯನ್ನು ಸರಳ ಬಹುಮತದ ಆಧಾರದಲ್ಲಿ ಪಡೆದುಕೊಳ್ಳಬೇಕು. ಹೂಡಿಕೆದಾರರ ಪ್ರತಿ ಒಂದು ಯೂನಿಟ್‌ಗೆ ಒಂದು ಮತವನ್ನು ನಿಗದಿ ಮಾಡಬೇಕು. ಮತದಾನದ ಫಲಿತಾಂಶವನ್ನು, ಫಂಡ್ ಸ್ಥಗಿತಗೊಳಿಸುವ ತೀರ್ಮಾನಕ್ಕೆ ಸಂಬಂಧಿಸಿದ ನೋಟಿಸ್ ಪ್ರಕಟವಾದ 45 ದಿನಗಳಲ್ಲಿ ಬಹಿರಂಗಪಡಿಸಬೇಕು. ಹೂಡಿಕೆದಾರರು ಸ್ಥಗಿತಕ್ಕೆ ಒಪ್ಪಿಗೆ ನೀಡದಿದ್ದರೆ, ಫಲಿತಾಂಶ ಪ್ರಕಟವಾದ ಮಾರನೆಯ ದಿನದಿಂದಲೇ ಆ ಫಂಡ್‌ನಲ್ಲಿ ವಹಿವಾಟು ಶುರುವಾಗಬೇಕು’ ಎಂದು ಸೆಬಿ ಹೇಳಿದೆ.

**ಐಪಿಒ ನಿಯಮ ಬದಲಾವಣೆ**

ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ಕಂಪನಿಗಳು ಸಂಗ್ರಹಿಸುವ ಬಂಡವಾಳದ ಮೊತ್ತವನ್ನು ಬೇರೆ ಕಂಪನಿಗಳ ಸ್ವಾಧೀನದಂತಹ ಚಟುವಟಿಕೆಗಳಿಗೆ ಎಷ್ಟು ಪ್ರಮಾಣದಲ್ಲಿ ಬಳಸಿಕೊಳ್ಳಬಹುದು ಎಂಬ ವಿಚಾರವಾಗಿ ಮಿತಿಗಳನ್ನು ವಿಧಿಸಲು ಕೂಡ ಸೆಬಿ ತೀರ್ಮಾನ ಮಾಡಿದೆ.

ಆ್ಯಂಕರ್ ಇನ್ವೆಸ್ಟರ್‌ಗಳು ಖರೀದಿಸುವ ಷೇರುಗಳ ಲಾಕ್–ಇನ್ ಅವಧಿಯನ್ನು ಹೆಚ್ಚಿಸಲು ನಿಯಮಗಳಲ್ಲಿ ತಿದ್ದುಪಡಿ ತರುವ ತೀರ್ಮಾನವನ್ನೂ ಸೆಬಿ ಕೈಗೊಂಡಿದೆ. ಹೊಸ ಕಾಲದ ಹಲವು ಕಂಪನಿಗಳು ಐಪಿಒ ಮೂಲಕ ಬಂಡವಾಳ ಸಂಗ್ರಹಿಸುತ್ತಿರುವ ಈ ಸಂದರ್ಭದಲ್ಲಿ ಸೆಬಿಯ ಈ ತೀರ್ಮಾನಗಳು ಮಹತ್ವ ಪಡೆದಿವೆ. ‘ಐಪಿಒ ಬೆಲೆಯನ್ನು ನಿರ್ಧರಿಸುವ ಯಾವ ಉದ್ದೇಶವೂ ಸೆಬಿಗೆ ಇಲ್ಲ’ ಎಂದು ಅಧ್ಯಕ್ಷ ಅಜಯ್ ತ್ಯಾಗಿ ಅವರು ಮಂಗಳವಾರದ ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದರು.

# ಐಪಿಒ: ₹ 1.5 ಲಕ್ಷ ಕೋಟಿ ಬಂಡವಾಳ ಸಂಗ್ರಹ ನಿರೀಕ್ಷೆ

**ನವದೆಹಲಿ (ಪಿಟಿಐ):** ಹೊಸ ವರ್ಷದಲ್ಲಿಯೂ ಪ್ರಾಥಮಿಕ ಷೇರು ಮಾರುಕಟ್ಟೆಯ (ಐಪಿಒ) ಚಟುವಟಿಕೆಯು ಉತ್ಸಾಹದಿಂದ ಕೂಡಿರಲಿದೆ ಎಂದು ಮಾರುಕಟ್ಟೆ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಕಂಪನಿಗಳು ತಮ್ಮ ಷೇರುಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುವ ಮೂಲಕ ₹ 1.5 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸುವ ನಿರೀಕ್ಷೆ ಇದೆ ಎಂದು ಅವರು ಹೇಳಿದ್ದಾರೆ.

2021ರಲ್ಲಿ ಐಪಿಒ ಮೂಲಕ ದಾಖಲೆಯ ಮಟ್ಟದಲ್ಲಿ ಬಂಡವಾಳ ಸಂಗ್ರಹ ಆಗಿದೆ. ಕೊರೊನಾ ಸಾಂಕ್ರಾಮಿಕವು ಆರ್ಥಿಕತೆಯ ಮೇಲೆ ಪರಿಣಾಮ ಉಂಟುಮಾಡಿದ್ದರೂ ಮಾರುಕಟ್ಟೆಯಲ್ಲಿ ಹೆಚ್ಚುವರಿ ನಗದು ಲಭ್ಯ ಇರುವುದು ಮತ್ತು ಸಣ್ಣ ಹೂಡಿಕೆದಾರರ ಭಾಗವಹಿಸುವಿಕೆ ಹೆಚ್ಚಾಗಿರುವುದರಿಂದ ಈ ವರ್ಷದಲ್ಲಿ ಒಟ್ಟಾರೆ ₹ 1.20 ಲಕ್ಷ ಕೋಟಿ ಬಂಡವಾಳ ಸಂಗ್ರಹ ಆಗಿದೆ.

‘ಹಣದುಬ್ಬರ ನಿಯಂತ್ರಿಸಲು ಜಾಗತಿಕ ಮಟ್ಟದಲ್ಲಿ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿದರ ಹೆಚ್ಚಿಸುವ ಸಾಧ್ಯತೆ ಇದೆ. ಇದರಿಂದಾಗಿ ಐಪಿಒ ಉತ್ಸಾಹ ತುಸು ತಗ್ಗಬಹುದಾದರೂ ಸಂಪೂರ್ಣ ಕುಸಿತ ಕಾಣುತ್ತದೆ ಎಂದು ನಾವು ನಿರೀಕ್ಷಿಸುವುದಿಲ್ಲ. ಸಾಂಕ್ರಾಮಿಕಕ್ಕೆ ಸಂಬಂಧಿಸಿದಂತೆ ಯಾವುದೇ ಬದಲಾವಣೆಗಳು ಆದರೂ ಅದು ಐಪಿಒ ಚಟುವಟಿಕೆಯ ಮೇಲೆ ಸ್ವಲ್ಪ ಮಟ್ಟಿಗಿನ ಅಡ್ಡಿಯನ್ನಂತೂ ಉಂಟುಮಾಡಲಿದೆ’ ಎಂದು ಈಕ್ವಿರಸ್ ವ್ಯವಸ್ಥಾಪಕ ನಿರ್ದೇಶಕ ವೆಂಕಟರಾಘವನ್ ಎಸ್. ಹೇಳಿದ್ದಾರೆ.

2022ರಲ್ಲಿ ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಐಪಿಒ ನಡೆಯಬೇಕಿರುವುದರಿಂದ ಒಟ್ಟಾರೆ ಬಂಡವಾಳ ಸಂಗ್ರಹವು ₹ 1.25 ಲಕ್ಷ ಕೋಟಿಗಳಿಂದ ₹ 1.5 ಲಕ್ಷ ಕೋಟಿಗಳವರೆಗೆ ಇರುವ ಅಂದಾಜು ಮಾಡಬಹುದು ಎಂದಿದ್ದಾರೆ.

ಕೇಂದ್ರೀಯ ಬ್ಯಾಂಕ್‌ಗಳು ಎಲ್ಲಿಯವರೆಗೆ ಹೊಂದಾಣಿಕೆಯ ನಿಲುವು ಅನುಸರಿಸುತ್ತವೆಯೋ ಅಲ್ಲಿಯವರೆಗೆ ಷೇರು ಮಾರುಕಟ್ಟೆಯ ಮೌಲ್ಯವು ಸ್ಥಿರವಾಗಿ ಇರಲಿದ್ದು, ಐಪಿಒ ಮಾರುಕಟ್ಟೆಗೆ ವಿಶ್ವಾಸ ತುಂಬಲಿದೆ ಎಂದು ಷೇರು ವಹಿವಾಟು ವೇದಿಕೆ ‘ರೆಕರ್ ಕ್ಲಬ್’ನ ಸ್ಥಾಪಕ ಏಕಲವ್ಯ ಹೇಳಿದ್ದಾರೆ.

## ಬೆಂಗಳೂರಿನಲ್ಲಿ 2022ರಲ್ಲಿ 5ಜಿ ಸೇವೆ

**ನವದೆಹಲಿ (ಪಿಟಿಐ):** ದೂರಸಂಪರ್ಕ ಸೇವಾ ಕಂಪನಿಗಳು ಬೆಂಗಳೂರು, ಮುಂಬೈ, ಕೋಲ್ಕತ್ತ, ಹೈದರಾಬಾದ್, ಚೆನ್ನೈ ಸೇರಿದಂತೆ ಕೆಲವು ಪ್ರಮುಖ ನಗರಗಳು ಮತ್ತು ಮಹಾನಗರಗಳಲ್ಲಿ 5ಜಿ ಸೇವೆಗೆ 2022ರಲ್ಲಿ ಪರೀಕ್ಷಾರ್ಥ ಚಾಲನೆ ನೀಡಲಿವೆ ಎಂದು ದೂರಸಂಪರ್ಕ ಇಲಾಖೆ ತಿಳಿಸಿದೆ.

ದೂರಸಂಪರ್ಕ ಸೇವಾ ಪೂರೈಕೆದಾರರಿಗೆ ಆವರ್ತನಗಳ (ಫ್ರೀಕ್ವೆನ್ಸಿ) ನಿಯೋಜನೆ ಪ್ರಕ್ರಿಯೆಯನ್ನು ಸಾಧ್ಯವಾದಷ್ಟು ಬೇಗ ಪ್ರಾರಂಭಿಸಲಾಗುವುದು ಎಂದು ಇಲಾಖೆಯು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಏರ್‌ಟೆಲ್, ಜಿಯೊ ಮತ್ತು ವೊಡಾಫೋನ್ ಐಡಿಯಾ ಕಂಪನಿಗಳನ್ನು ಒಳಗೊಂಡು ಎಲ್ಲಾ ಕಂಪನಿಗಳೂ 2022ರಲ್ಲಿ 5ಜಿ ಸೇವೆಗೆ ಪರೀಕ್ಷಾರ್ಥವಾಗಿ ಚಾಲನೆ ನೀಡಲಿವೆ ಎಂದು ತಿಳಿಸಿದೆ.

## ಅಮೆಜಾನ್, ಫ್ಲಿಪ್‌ಕಾರ್ಟ್ ವಿರುದ್ಧ ಎಸ್‌ಜೆಎಂ ನಿರ್ಣಯ

**ನವದೆಹಲಿ (ಪಿಟಿಐ):** ಅಮೆಜಾನ್ ಮತ್ತು ಫ್ಲಿಪ್‌ಕಾರ್ಟ್ ಕಂಪನಿಗಳಿಗೆ ಭಾರತದಲ್ಲಿ ಕಾರ್ಯಾಚರಿಸಲು ನೀಡಿರುವ ಅನುಮತಿಯನ್ನು ತಕ್ಷಣವೇ ಹಿಂದಕ್ಕೆ ಪಡೆಯಬೇಕು ಎಂದು ಆರ್‌ಎಸ್‌ಎಸ್‌ನ ಅಂಗಸಂಸ್ಥೆಯಾಗಿರುವ ಸ್ವದೇಶಿ ಜಾಗರಣ ಮಂಚ್ (ಎಸ್‌ಜೆಎಂ) ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಈ ಕಂಪನಿಗಳು ನಿಯಮಗಳನ್ನು ಮೀರಿ ನಡೆದುಕೊಳ್ಳುತ್ತಿವೆ ಎಂದು ಸಂಘಟನೆ ಆರೋಪಿಸಿದೆ.

ಅಮೆಜಾನ್, ಫ್ಲಿಪ್‌ಕಾರ್ಟ್ ಮತ್ತು ಇತರ ಬಹುರಾಷ್ಟ್ರೀಯ ಇ–ವಾಣಿಜ್ಯ ಕಂಪನಿಗಳ ಭಾರತದ ಚಟುವಟಿಕೆಗಳ ಬಗ್ಗೆ ಸಿಬಿಐ ಮೂಲಕ ತನಿಖೆ ನಡೆಸಬೇಕು. ಈ ಕಂಪನಿಗಳು ವಿದೇಶ ನೇರ ಹೂಡಿಕೆ (ಎಫ್‌ಡಿಐ) ನಿಯಮಗಳನ್ನು ಉಲ್ಲಂಘಿಸುತ್ತಿವೆ ಎಂದು ಎಸ್‌ಜೆಎಂ ಈಚೆಗೆ ಕೈಗೊಂಡಿರುವ ನಿರ್ಣಯದಲ್ಲಿ ಹೇಳಲಾಗಿದೆ.

‘ವಿದೇಶಿ ಕಂಪನಿಗಳು ದೇಶದಲ್ಲಿ ಹಣ ಸುರಿದು, ಉತ್ಪನ್ನಗಳ ಬೆಲೆಯ ಮೇಲೆ ಪ್ರಭಾವ ಬೀರುವಂತೆ ಇಲ್ಲ. ಅಮೆಜಾನ್ ಮತ್ತು ಫ್ಲಿಪ್‌ಕಾರ್ಟ್‌ನಂತಹ ಬಹುರಾಷ್ಟ್ರೀಯ ಕಂಪನಿಗಳು ನಿಯಮಗಳನ್ನು ಉಲ್ಲಂಘಿಸುತ್ತಿವೆ, ದೇಶದಲ್ಲಿ ನಿಯಂತ್ರಣವೇ ಇಲ್ಲದೆ ಕಾರ್ಯಾಚರಣೆ ನಡೆಸುತ್ತಿವೆ’ ಎಂದು ಡಿಸೆಂಬರ್ 26ರಂದು ತೆಗೆದುಕೊಳ್ಳಲಾದ ಎಸ್‌ಜೆಎಂ ನಿರ್ಣಯದಲ್ಲಿ ಹೇಳಲಾಗಿದೆ.

‘ಸರ್ಕಾರದ ಅಧಿಕಾರಿಗಳು, ಉನ್ನತ ಸ್ಥಾನಗಳಲ್ಲಿ ಇರುವವರು ಈ ಕಂಪನಿಗಳಿಂದ ನೇರವಾಗಿ ಅಥವಾ ಪರೋಕ್ಷವಾಗಿ ಲಾಭ ಪಡೆದುಕೊಂಡಿರುವುದು ಗೊತ್ತಾದಾಗ ಅವರನ್ನು ರಜೆಯ ಮೇಲೆ ಕಳುಹಿಸಬೇಕು. ಆಗ ಪ್ರಕರಣದ ನಿಷ್ಪಕ್ಷಪಾತ ತನಿಖೆ ಸಾಧ್ಯವಾಗುತ್ತದೆ’ ಎಂದು ಅದು ಹೇಳಿದೆ.

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1320 (1320) |
| ಸೋಯಾ (ರಿಫೈನ್ಡ್) | ₹1200 (1190) |
| ಸೂರ್ಯಕಾಂತಿ (ರಿಫೈನ್ಡ್) | ₹1260 (1250) |
| ಪಾಮೋಲಿನ್ | ₹1150 (1142) |

**ಮುಂಬೈ ಧಾರಣೆ**

**ಶೇಂಗಾ** 28-12-2021

| | |
|---|---|
| ಜಾವಾ 70/80(ಹೊಸ) | 10500-10550 |
| ಜಾವಾ 80/90(ಹೊಸ) | 10400-10450 |
| ದಪ್ಪ ಮಧ್ಯಪ್ರದೇಶ(ಹೊಸ) | 9850-9900 |
| ದಪ್ಪ ಗುಜರಾತ್(ಹೊಸ) | 8950-9000 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1330 (1330) |
| ಒಂದು ವಾರದ ಡೆಲಿವರಿ | 1325 (1325) |
| ಸೋಯಾ ಕಚ್ಚಾ | 1155 (1145) |
| ಪಾಮ್ ವಾರದ ಡೆಲಿವರಿ | 1140 (1140) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1180 (1180) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

| | |
|---|---|
| ಅಪರಂಜಿ ಚಿನ್ನ 10ಗ್ರಾಂ | 48,150 (47,900) |
| ಬೆಳ್ಳಿ ಕೆ.ಜಿ | 62,250 (61,400) |

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪರಸ್ಪರ ಅಂತರ ಕಾಯ್ದುಕೊಳ್ಳಿ

## ಐ.ಟಿ, ಔಷಧ, ಬ್ಯಾಂಕಿಂಗ್ ಕಂಪನಿಗಳ ಷೇರುಗಳ ಗಳಿಕೆ

# ವಾರದ ಗರಿಷ್ಠ ಮಟ್ಟಕ್ಕೆ ಸೆನ್ಸೆಕ್ಸ್

**ಮುಂಬೈ (ಪಿಟಿಐ):** ಐ.ಟಿ., ಔಷಧ ಮತ್ತು ಬ್ಯಾಂಕಿಂಗ್ ವಲಯಗಳ ಷೇರುಗಳ ಮೌಲ್ಯ ಹೆಚ್ಚಳದಿಂದಾಗಿ ದೇಶದ ಷೇರುಪೇಟೆಗಳು ಮಂಗಳವಾರದ ವಹಿವಾಟಿನಲ್ಲಿ ಒಂದು ವಾರದ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 477 ಅಂಶ ಏರಿಕೆ ಕಂಡು 57,897 ಅಂಶಗಳಲ್ಲಿ ದಿನದ ವಹಿವಾಟು ಅಂತ್ಯವಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 147 ಅಂಶ ಹೆಚ್ಚಾಗಿ 17,233 ಅಂಶಗಳಿಗೆ ತಲುಪಿತು.

ಸೆನ್ಸೆಕ್ಸ್‌ನಲ್ಲಿ ಏಷ್ಯನ್ ಪೇಂಟ್ಸ್ ಷೇರು ಮೌಲ್ಯವು ಶೇಕಡ 3ರಷ್ಟು ಗಳಿಕೆ ಕಂಡುಕೊಂಡಿತು. ಸನ್ ಫಾರ್ಮಾ ಷೇರು ಮೌಲ್ಯ ಶೇ 2.59ರಷ್ಟು ಹೆಚ್ಚಾಗಿದೆ. ಎಲ್ಲಾ ವಲಯಗಳ ಸೂಚ್ಯಂಕಗಳೂ ಗಳಿಕೆ ಕಂಡಿವೆ.

ಬಿಎಸ್‌ಇ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಶೇ 1.43ರವರೆಗೂ ಏರಿಕೆ ಕಂಡವು.

ಜಾಗತಿಕ ಷೇರುಪೇಟೆಗಳಲ್ಲಿ ನಡೆಯುತ್ತಿರುವ ಸಕಾರಾತ್ಮಕ ವಹಿವಾಟು ದೇಶಿ ಷೇರುಪೇಟೆಗಳ ಮೇಲೆ ಪ್ರಭಾವ ಬೀರುತ್ತಿವೆ ಎಂದು ಕೋಟಕ್ ಸೆಕ್ಯುರಿಟೀಸ್‌ನ ಈಕ್ವಿಟಿ ಸಂಶೋಧನೆಯ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

**ರೂಪಾಯಿ ಮೌಲ್ಯ 30 ಪೈಸೆ ವೃದ್ಧಿ**

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 30 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 74.70ರಂತೆ ವಿನಿಮಯಗೊಂಡಿತು. ಒಂಭತ್ತು ದಿನಗಳ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು ಡಾಲರ್ ಎದುರು ಒಟ್ಟಾರೆ 162 ಪೈಸೆಗಳಷ್ಟು ಹೆಚ್ಚಾಗಿದೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 0.57ರಷ್ಟು ಹೆಚ್ಚಾಗಿದ್ದು ಒಂದು ಬ್ಯಾರಲ್‌ಗೆ 79.05 ಡಾಲರ್‌ಗಳಿಗೆ ತಲುಪಿದೆ.

**ದೇಶದಾದ್ಯಂತ ಮಾರುಕಟ್ಟೆ ಧಾರಣೆ**

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 500-550 |
| ನಡುಗೋಲು | 600-650 |
| ರಾಶಿ | 700-800 |
| ರಾಶಿ ಉತ್ತಮ | 800-900 |
| ಜರಡಿ | 1000-1050 |
| ಹೆರಕಿದ್ದು | 1200-1300 |
| ಹಸಿರು ಸಾಧಾರಣ | 750-850 |
| ಹಸಿರು ಉತ್ತಮ | 900-1000 |
| ಹಸಿರು ಅತಿ ಉತ್ತಮ | 1300-1400 |
| ಕಾಳು ಮೆಣಸು | 510 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 27500-45000 |
| ಹಳತು | 46000-53000 |
| **ಕಾರ್ಕಳ** | |
| ಹೊಸತು | 40000-45000 |
| ಹಳತು | 46000-53000 |
| **ಪುತ್ತೂರು** | |
| ಹೊಸತು | 27500-45000 |
| ಹಳತು | 11000-26000 |
| **ಸಿದ್ದಾಪುರ** | |
| ಬಿಳಿಗೋಟು | 24299-38899 |
| ಚಾಲಿ | 40299-48599 |
| ಕೋಕ | 25099-37999 |
| ಹೊಸಚಾಲಿ | 34899-40999 |
| ಕೆಂಪುಗೋಟು | 27799-35389 |
| ರಾಶಿ | 42099-48609 |
| ತಟ್ಟಿಬೆಟ್ಟೆ | 38109-44099 |
| **ಶಿರಸಿ** | |
| ಬೆಟ್ಟೆ | 40666-47039 |
| ಬಿಳಿಗೋಟು | 22400-43249 |
| ಚಾಲಿ | 40666-50291 |
| ರಾಶಿ | 27499-49189 |
| **ಯಲ್ಲಾಪುರ** | |
| ಬಿಳಿಗೋಟು | 30016-40342 |
| ಚಾಲಿ | 40899-49681 |
| ಕೋಕ | 22087-34899 |
| ಕೆಂಪುಗೋಟು | 31742-36699 |
| ರಾಶಿ | 45818-53985 |
| ತಟ್ಟಿಬೆಟ್ಟೆ | 38809-44899 |
| **ರಾಮನಗರ ರೇಷ್ಮೆ** | |
| ಮಿಶ್ರತಳಿ | 400-657 |
| ದ್ವಿತಳಿ | 480-782 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | --- | 15300 | 15,200 | 227.05 ಸೆಂಟ್ಸ್ |
| ಎಸಿ | --- | 6800 | 6400 | |
| ಆರ್‌ಪಿ | --- | 6500 | --- | ಲಂಡನ್ |
| ಆರ್‌ಸಿ | --- | 4000 | --- | --- ಡಾಲರ್ಸ್ |

ಮೊದಲ ಟೆಸ್ಟ್: ಶಮಿ ದಾಳಿಗೆ ತತ್ತರಿಸಿದ ದಕ್ಷಿಣ ಆಫ್ರಿಕಾ; ಒಂದೇ ದಿನ 18 ವಿಕೆಟ್ ಪತನ

# ಭಾರತಕ್ಕೆ ಮೊದಲ ಇನಿಂಗ್ಸ್ ಮುನ್ನಡೆ

**ಟೆಸ್ಟ್ ಕ್ರಿಕೆಟ್‌ನಲ್ಲಿ 200 ವಿಕೆಟ್ ಸಾಧನೆ (ಪಂದ್ಯಗಳು)**

| | |
|---|---|
| ಕಪಿಲ್‌ದೇವ್ | 50 |
| ಜಾವಗಲ್‌ಶ್ರೀನಾಥ್ | 54 |
| ಮೊಹಮ್ಮದ್‌ಶಮಿ | 55 |
| ಜಹೀರ್‌ಖಾನ್ | 63 |
| ಇಶಾಂತ್‌ಶರ್ಮಾ | 63 |

**ಬೌಲಿಂಗ್**

| 16 | 5 | 44 | 5 |
|---|---|---|---|
| ಓವರ್ | ಮೇಡನ್ | ರನ್ | ವಿಕೆಟ್ |

- ಜಸ್‌ಪ್ರೀತ್‌ಬೂಮ್ರಾ, ಶಾರ್ದೂಲ್‌ಠಾಕೂರ್‌ಗೆ ತಲಾ ಎರಡು ವಿಕೆಟ್
- ತೆಂಬಾ ಬವುಮಾ ಅರ್ಧಶತಕ

ಮೊಹಮ್ಮದ್ ಶಮಿ– ಎಎಫ್‌ಪಿ ಚಿತ್ರ

**ಸೆಂಚುರಿಯನ್:** ಸೂಪರ್ ಸ್ಪೋರ್ಟ್ ಪಾರ್ಕ್‌ನಲ್ಲಿ ಮಂಗಳವಾರ ವೇಗದ ಬೌಲರ್‌ಗಳದ್ದೇ ದರಬಾರು. ಅದರಿಂದಾಗಿ ಒಂದೇ ದಿನ 18 ವಿಕೆಟ್‌ಗಳು ಪತನವಾದವು!

ಇಲ್ಲಿ ನಡೆಯುತ್ತಿರುವ ದಕ್ಷಿಣ ಆಫ್ರಿಕಾ ಎದುರಿನ ಮೊದಲ ಟೆಸ್ಟ್ ಪಂದ್ಯದಲ್ಲಿ ಬೌಲರ್‌ಗಳ ಜಿದ್ದಾಜಿದ್ದಿಯ ನಡುವೆ ಭಾರತ ತಂಡವು 130 ರನ್‌ಗಳ ಮಹತ್ವದ ಮುನ್ನಡೆ ಗಳಿಸಿತು. ಇದಕ್ಕೆ ಕಾರಣವಾಗಿದ್ದು ಮಧ್ಯಮವೇಗಿ ಮೊಹಮ್ಮದ್ ಶಮಿಯ ಶಿಸ್ತಿನ ದಾಳಿ. ಟೆಸ್ಟ್ ಕ್ರಿಕೆಟ್‌ನಲ್ಲಿ ಆರನೇ ಬಾರಿ ಐದು ವಿಕೆಟ್‌ಗಳ ಗೊಂಚಲು ಗಳಿಸಿದರು.

ಇದರಿಂದಾಗಿ ಆತಿಥೇಯ ತಂಡದ ವೇಗಿ ಲುಂಗಿ ಗಿಡಿ (77ಕ್ಕೆ6) ಮತ್ತು ಕಗಿಸೊ ರಬಾಡ (72ಕ್ಕೆ3) ಅವರ ಶ್ರಮ ವ್ಯರ್ಥವಾಯಿತು. ಅವರಿಬ್ಬರೂ ಭಾರತ ತಂಡವನ್ನು ಮೊದಲ ಇನಿಂಗ್ಸ್‌ನಲ್ಲಿ 327 ರನ್‌ಗಳಿಗೆ ನಿಯಂತ್ರಿಸಿದರು. ಮೊದಲ ದಿನದಾಟದಲ್ಲಿ ವಿರಾಟ್ ಕೊಹ್ಲಿ ಬಳಗವು ಕೆ.ಎಲ್. ರಾಹುಲ್ ಶತಕದ ಬಲದಿಂದ ಮೂರು ವಿಕೆಟ್‌ಗಳಿಗೆ 272 ರನ್‌ಗಳಿಸಿತ್ತು. ಎರಡನೇ ದಿನದಾಟವು ಮಳೆಗೆ ಅಹುತಿಯಾಗಿತ್ತು. ಈ ಅಡಿಪಾಯದ ಮೇಲೆ ದೊಡ್ಡ ಮೊತ್ತ ಪೇರಿಸುವ ಪ್ರವಾಸಿ ಬಳಗದ ಆಸೆಗೆ ಆತಿಥೇಯ ಬೌಲರ್‌ಗಳು ಅಡ್ಡಿಯಾದರು.

ಆದರೆ ಅವರ ಸಂಭ್ರಮವೂ ಹೆಚ್ಚು ಹೊತ್ತು ಉಳಿಯಲಿಲ್ಲ. ಶಮಿ (44ಕ್ಕೆ5) ಶಿಸ್ತಿನ ದಾಳಿಗೆ ತಂಡ ತತ್ತರಿಸಿತು. 62.3 ಓವರ್‌ಗಳಲ್ಲಿ 197 ರನ್ ಗಳಿಸಿತು. ಎರಡನೇ ಇನಿಂಗ್ಸ್ ಆರಂಭಿಸಿರುವ ಭಾರತ ತಂಡವು 6 ಓವರ್‌ಗಳಲ್ಲಿ 1 ವಿಕೆಟ್‌ಗೆ 16 ರನ್ ಗಳಿಸಿದೆ. ಒಟ್ಟು 146 ರನ್‌ಗಳ ಮುನ್ನಡೆ ಹೊಂದಿದೆ.

**ಶಮಿ ಮಿಂಚು:** ದಕ್ಷಿಣ ಆಫ್ರಿಕಾ ತಂಡಕ್ಕೆ ಮೊದಲ ಓವರ್‌ನಲ್ಲಿ ಜಸ್‌ಪ್ರೀತ್ ಬೂಮ್ರಾ ಪೆಟ್ಟು ಕೊಟ್ಟರು. ಐದನೇ ಎಸೆತದಲ್ಲಿ ನಾಯಕ ಡೀನ್ ಎಲ್ಗರ್ ವಿಕೆಟ್ ಗಳಿಸಿದ ಬೂಮ್ರಾ ಸಂಭ್ರಮಿಸಿದರು. ಆತಿಥೇಯರ ಈ ಗಾಯಕ್ಕೆ ಶಮಿ ಬರೆ ಎಳೆಯುವ ಕೆಲಸ ಮಾಡಿದರು. ಏಡನ್ ಮರ್ಕರಮ್ ಮತ್ತು ಕೀಗನ್ ಪೀಟರ್ಸನ್ ವಿಕೆಟ್‌ಗಳನ್ನು ಕಿತ್ತರು. ಇನ್ನೊಂದೆಡೆ ಮೊಹ್ಮದ್ ಸಿರಾಜ್ ಬೌಲಿಂಗ್‌ನಲ್ಲಿ ವಾನ್ ಡೆರ್ ಡಸೆ ವಿಕೆಟ್ ಗಳಿಸಿದರು.

ಇದರಿಂದಾಗಿ ತಂಡವು 32 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತು. ಬೇಗನೆ ಕುಸಿಯುವ ಆತಂಕ ಎದುರಿಸಿತು. ಆದರೆ ಈ ಹಂತದಲ್ಲಿ ಒಂದಿಷ್ಟು ಜಿಗುಟುತನ ತೋರಿದ ತೆಂಬಾ ಬವುಮಾ (52; 103ಎ) ಮತ್ತು ಕ್ವಿಂಟನ್ ಡಿ ಕಾಕ್ (34; 63ಎ) ಬೌಲರ್‌ಗಳನ್ನು ಕಾಡಿದರು. ಕ್ವಿಂಟನ್ ತಾವೆದುರಿಸಿದ ಮೊದಲ ಎಸೆತದಲ್ಲಿಯೇ ಕೆ.ಎಲ್. ರಾಹುಲ್ ಕೊಟ್ಟ ಜೀವದಾನವನ್ನು ಸಮರ್ಥವಾಗಿ ಬಳಸಿಕೊಳ್ಳುವತ್ತ ಹೆಜ್ಜೆಯಿಟ್ಟರು.

5ನೇ ವಿಕೆಟ್ ಜೊತೆ ಯಾಟದಲ್ಲಿ 72 ರನ್‌ಗಳನ್ನು ಸೇರಿಸುವಲ್ಲಿ ಯಶಸ್ವಿಯಾದರು ತೆಂಬಾ ಆಕರ್ಷಕ ಬ್ಯಾಟಿಂಗ್ ಮಾಡಿದರು. ಕ್ವಿಂಟನ್ ವಿಕೆಟ್ ಗಳಿಸಿದ ಶಾರ್ದೂಲ್ ಈ ಜೊತೆಯಾಟ ಮುರಿದರು. ಅರ್ಧಶತಕ ಗಳಿಸಿದ ತೆಂಬಾ ವಿಕೆಟ್ ಪಡೆದ ಶಮಿ ಮಿಂಚಿದರು. ಮಲ್ದರ್ ಮತ್ತು ರಬಾಡ ವಿಕೆಟ್‌ಗಳನ್ನೂ ತಮ್ಮ ಬುಟ್ಟಿಗೆ ಹಾಕಿಕೊಂಡರು.

**ಬೂಮ್ರಾ ಕಾಲಿನಲ್ಲಿ ಉಳುಕು:** ಬೌಲಿಂಗ್ ಮಾಡುವಾಗ ಕಾಲು ಉಳುಕಿದ್ದರಿಂದ ಭಾರತ ತಂಡದ ಬೌಲರ್ ಜಸ್‌ಪ್ರೀತ್ ಬೂಮ್ರಾ ಸ್ವಲ್ಪ ಹೊತ್ತು ಪೆವಿಲಿಯನ್‌ನಲ್ಲಿ ವಿಶ್ರಾಂತಿ ಪಡೆದರು.

ಮಂಗಳವಾರದ ಇನಿಂಗ್ಸ್‌ನಲ್ಲಿ ಆರನೇ ಓವರ್ ಬೌಲಿಂಗ್ ಮಾಡುವ ಸಂದರ್ಭದಲ್ಲಿ ಬೂಮ್ರಾ ಬಲಪಾದವು ಉಳುಕಿತು.

## ಸ್ಕೋರ್ ಕಾರ್ಡ್

**ಭಾರತ ಮೊದಲ ಇನಿಂಗ್ಸ್ 327 (105.3 ಓವರ್)**
**(ಭಾನುವಾರ 90 ಓವರ್‌ಗಳಲ್ಲಿ 3 ವಿಕೆಟ್‌ಗೆ 272)**
ರಾಹುಲ್ ಸಿ ಡಿಕಾಕ್ ಬಿ ರಬಾಡ 123 (260ಎ, 4X17, 6X1), ರಹಾನೆ ಸಿ ಡಿಕಾಕ್ ಬಿ ಗಿಡಿ 48 (102ಎ, 4X9), ರಿಷಭ್ ಸಿ ಡಸೆನ್ ಬಿ ಗಿಡಿ 8 (13ಎ, 4X1), ಅಶ್ವಿನ್ ಸಿ ಮಹಾರಾಜ್ ಬಿ ರಬಾಡ 4 (5ಎ, 4X1), ಶಾರ್ದೂಲ್ ಸಿ ಡಿಕಾಕ್ ಬಿ ರಬಾಡ 4 (8ಎ, 4X1), ಶಮಿ ಸಿ ಡಿಕಾಕ್ ಬಿ ಗಿಡಿ 8 (9ಎ, 4X2), ಬೂಮ್ರಾ ಸಿ ಮಲ್ದರ್ ಬಿ ಜಾನ್ಸನ್ 14 (17ಎ, 4X2), ಸಿರಾಜ್ ಔಟಾಗದೆ 4 (12ಎ, 4X1))
**ಇತರೆ** (ಬೈ 4, ಲೆಗ್‌ಬೈ 4, ನೋಬಾಲ್ 11) 19
**ವಿಕೆಟ್ ಪತನ:** 4-278 (ಕೆ.ಎಲ್. ರಾಹುಲ್ 93.6), 5-291 (ಅಜಿಂಕ್ಯ ರಹಾನೆ, 96.4), 6-296 (ರವಿಚಂದ್ರನ್ ಅಶ್ವಿನ್, 97.4), 7-296 (ರಿಷಭ್ ಪಂತ್, 98.2), 8-304 (ಶಾರ್ದೂಲ್ ಠಾಕೂರ್, 99.6), 9-308 (ಮೊಹಮ್ಮದ್ ಶಮಿ, 100.5), 10-327 (ಜಸ್‌ಪ್ರೀತ್ ಬೂಮ್ರಾ, 105.3)
**ಬೌಲಿಂಗ್:** ಕಗಿಸೊ ರಬಾಡ 26–5–72–3, ಲುಂಗಿ ಗಿಡಿ 24–5–72–3, ಮಾರ್ಕೊ ಜಾನ್ಸನ್ 18.3–4–69–1, ವಿಯಾನ್ ಮಲ್ದರ್ 19–4–49–0, ಕೇಶವ್ ಮಹಾರಾಜ್ 18–2–58–0

**ದಕ್ಷಿಣ ಆಫ್ರಿಕಾ ಮೊದಲ ಇನಿಂಗ್ಸ್ 197 (62.3 ಓವರ್‌ಗಳಲ್ಲಿ)**
ಎಲ್ಗರ್ ಸಿ ಪಂತ್ ಬಿ ಬೂಮ್ರಾ 1 (2ಎ), ಮರ್ಕರಂ ಬಿ ಶಮಿ 13 (34ಎ, 4X3), ಕೀಗನ್ ಬಿ ಶಮಿ 15 (22ಎ, 4X3), ಡಸೆನ್ ಸಿ ರಹಾನೆ ಬಿ ಸಿರಾಜ್ 3 (18ಎ), ಬವುಮಾ ಸಿ ಪಂತ್ ಬಿ ಶಮಿ 52 (103ಎ, 4X10), ಡಿಕಾಕ್ ಬಿ ಶಾರ್ದೂಲ್ 34 (63ಎ, 4X3, 6X1), ಮಲ್ದರ್ ಸಿ ಪಂತ್ ಬಿ ಶಮಿ 12 (33ಎ, 4X2), ಜಾನ್ಸನ್ ಎಲ್‌ಬಿಡಬ್ಲ್ಯು ಶಾರ್ದೂಲ್ 19 (42ಎ, 4X3), ರಬಾಡ ಸಿ ಪಂತ್ ಬಿ ಶಮಿ 25 (45ಎ, 4X3, 6X1), ಕೇಶವ್ ಸಿ ರಹಾನೆ ಬಿ ಬೂಮ್ರಾ 12 (19ಎ, 4X3), ಗಿಡಿ ಔಟಾಗದೆ 0 (1ಎ)
**ಇತರೆ** (ಬೈ 4, ನೋಬಾಲ್ 7) 11
**ವಿಕೆಟ್ ಪತನ:** 1-2 (ಡೀನ್ ಎಲ್ಗರ್, 0.5), 2-25 (ಕೀಗನ್ ಪೀಟರ್ಸನ್, 7.3), 3-30 (ಏಡನ್ ಮರ್ಕರಂ, 11.5), 4-32 (ರಸ್ಸಿ ವ್ಯಾನ್ ಡರ್ ಡಸೆ, 12.5), 5-104 (ಕ್ವಿಂಟನ್ ಡಿಕಾಕ್, 34.1), 6-133 (ವಿಯಾನ್ ಮಲ್ದರ್, 42.6), 7-144 (ತೆಂಬಾ ಬವುಮಾ, 46.4), 8-181 (ಮಾರ್ಕೊ ಜಾನ್ಸನ್, 56.6), 9-193 (ಕಗಿಸೊ ರಬಾಡ, 61.5), 10-197 (ಕೇಶವ್ ಮಹಾರಾಜ್, 62.3)
**ಬೌಲಿಂಗ್:** ಜಸ್‌ಪ್ರೀತ್ ಬೂಮ್ರಾ 7.2–2–16–2, ಮೊಹಮ್ಮದ್ ಸಿರಾಜ್ 15.1–3–45–1, ಮೊಹಮ್ಮದ್ ಶಮಿ 16–5–44–5, ಶಾರ್ದೂಲ್ ಠಾಕೂರ್ 11–1–51–2, ರವಿಚಂದ್ರನ್ ಅಶ್ವಿನ್ 13–2–37–0

**ಭಾರತ ಎರಡನೇ ಇನಿಂಗ್ಸ್ 1ಕ್ಕೆ 16 (6 ಓವರ್)**
ರಾಹುಲ್ ಬ್ಯಾಟಿಂಗ್ 5 (19ಎ, 4X1), ಮಯಂಕ್ ಸಿ ಡಿಕಾಕ್ ಬಿ ಜಾನ್ಸನ್ 4 (14ಎ, 4X1), ಶಾರ್ದೂಲ್ ಬ್ಯಾಟಿಂಗ್ 4 (5ಎ, 4X1)
**ಇತರೆ** (ಬೈ 1, ನೋಬಾಲ್ 2) 3
**ವಿಕೆಟ್ ಪತನ:** 1-12 (ಮಯಂಕ್ ಅಗರವಾಲ್, 5.1)
**ಬೌಲಿಂಗ್:** ಕಗಿಸೊ ರಬಾಡ 3-0-7-0 ಲುಂಗಿ ಗಿಡಿ 2-1-4-0, ಮಾರ್ಕೊ ಜಾನ್ಸನ್ 1-0-4-1,

**ಶಮಿ ಸಾಧನೆ**

| 55 | 200 | 56ಕ್ಕೆ6 | 6 |
|---|---|---|---|
| ಟೆಸ್ಟ್ | ವಿಕೆಟ್ | ಶ್ರೇಷ್ಠ (ಇನಿಂಗ್ಸ್) | ಐದು ವಿಕೆಟ್ |

ಸ್ಕಾಟ್ ಬೊಲ್ಯಾಂಡ್ ಸಂಭ್ರಮ –ಎಪಿ ಚಿತ್ರ

# ಸ್ಕಾಟ್ ದಾಳಿಗೆ ಇಂಗ್ಲೆಂಡ್ ದೂಳೀಪಟ

## ಪ್ಯಾಟ್ ಕಮಿನ್ಸ್ ಬಳಗದ ಕೈವಶವಾದ ಆ್ಯಷಸ್ ಟ್ರೋಫಿ

**ಮೆಲ್ಬರ್ನ್ (ರಾಯಿಟರ್ಸ್):** ಪದಾರ್ಪಣೆ ಪಂದ್ಯದಲ್ಲಿಯೇ ಸ್ಕಾಟ್ ಬೊಲ್ಯಾಂಡ್ ತಮ್ಮ ವೇಗದ ಶಕ್ತಿಯ ಪರಿಚಯವನ್ನು ಕ್ರಿಕೆಟ್ ಜಗತ್ತಿಗೆ ಮಾಡಿಕೊಟ್ಟರು.

ಅವರ ಬಿರುಗಾಳಿ ವೇಗಕ್ಕೆ ಇಂಗ್ಲೆಂಡ್ ತಂಡದ ಆಟಗಾರರು ತತ್ತ-ರಿಸಿಹೋದರು. ಅದರ ಪರಿಣಾಮವಾಗಿ ಆ್ಯಷಸ್ ಸರಣಿಯು 3–0ಯಿಂದ ಅಸ್ಟ್ರೇಲಿಯಾದ ಕೈವಶವಾಯಿತು. ಸತತ ಮೂರನೇ ಪಂದ್ಯದಲ್ಲಿ ಜೋ ರೂಟ್ ಬಳಗವು ಇನಿಂಗ್ಸ್ ಮತ್ತು 14 ರನ್‌ಗಳ ಹೀನಾಯ ಸೋಲು ಅನುಭವಿಸಿತು.

ಮೆಲ್ಬರ್ನ್ ಕ್ರಿಕೆಟ್ ಅಂಗಳದಲ್ಲಿ ಸ್ಕಾಟ್ (4–1–7–6) ದಾಳಿಯ ಮುಂದೆ ಇಂಗ್ಲೆಂಡ್ ಎರಡನೇ ಇನಿಂಗ್ಸ್‌ನಲ್ಲಿ ಕೇವಲ 68 ರನ್‌ಗಳಿಗೆ ದೂಳೀಪಟವಾಯಿತು. ಮೊದಲ ಇನಿಂಗ್ಸ್‌ನಲ್ಲಿ 185 ರನ್‌ಗಳಿಸಿದ್ದ ಇಂಗ್ಲೆಂಡ್ ತಂಡದ ಎದುರು ಆಸ್ಟ್ರೇಲಿಯಾ 82 ರನ್‌ಗಳ ಅಲ್ಪ ಮುನ್ನಡೆ ಗಳಿಸಿತ್ತು. ಆದರೆ, ಎರಡನೇ ಇನಿಂಗ್ಸ್‌ನಲ್ಲಿ ಪುಟಿದೇಳುವ ಅವಕಾಶವನ್ನು ಬಳಸಿಕೊಳ್ಳದ ಇಂಗ್ಲೆಂಡ್ ಈಗ ವ್ಯಾಪಕ ಟೀಕೆಗೊಳಗಾಗಿದೆ.

ಕೇವಲ ಎರಡೂವರೆ ದಿನಗಳಲ್ಲಿಯೇ ಪಂದ್ಯ ಮುಕ್ತಾಯವಾಗಿದೆ. ಸೋಮವಾರ ಎರಡನೇ ಇನಿಂಗ್ಸ್ ಆರಂಭಿಸಿದ್ದ ಇಂಗ್ಲೆಂಡ್ 12 ಓವರ್‌ಗಳಲ್ಲಿ 31 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತ್ತು. ಮೂರನೇ ದಿನದಾಟದ ಊಟದ ವಿರಾಮಕ್ಕೂ ಮುನ್ನವೇ 37 ರನ್‌ಗಳಿಗೆ ಆರು ವಿಕೆಟ್‌ಗಳನ್ನು ಕಳೆದುಕೊಂಡಿತು. ದಿನದಾಟದಲ್ಲಿ ಆಡಿದ್ದು 15.4 ಓವರ್‌ಗಳನ್ನು ಮಾತ್ರ.

ತಮ್ಮ ತವರಿನ ಅಂಗಳದಲ್ಲಿಯೇ 32 ವರ್ಷದ ಸ್ಕಾಟ್ ಪದಾರ್ಪಣೆ ಪಂದ್ಯವನ್ನು ಅವಿಸ್ಮರಣೀಯಗೊಳಿ-ಸಿಕೊಂಡರು. ಎರಡನೇ ದಿನ ಎರಡು ವಿಕೆಟ್ ಗಳಿಸಿದ್ದ ಅವರು ಮೂರನೇ ದಿನ ದಾಟದಲ್ಲಿ ಮತ್ತೆ ನಾಲ್ಕು ವಿಕೆಟ್ ಕಿತ್ತರು.

ಅದರಲ್ಲಿ ಪ್ರಮುಖವಾಗಿ ಇಂಗ್ಲೆಂಡ್ ನಾಯಕ ರೂಟ್ (28; 59ಎ), ಜಾನಿ ಬೆಸ್ಟೊ (5 ರನ್) ಅವರ ವಿಕೆಟ್ ಉರುಳಿಸಿದ್ದು ಆತಿಥೇಯರಿಗೆ ಶೀಘ್ರ ಗೆಲುವು ಒಲಿಯಲು ಕಾರಣವಾದವು. ಅಲ್ಲದೇ ಕಡಿಮೆ ಎಸೆತಗಳಲ್ಲಿ (19) ಐದು ವಿಕೆಟ್‌ಗಳ ಗೊಂಚಲು ಗಳಿಸಿದ ದಾಖಲೆ ಮಾಡಿದರು.

2015ರ ಆ್ಯಷಸ್‌ನಲ್ಲಿ ಇಂಗ್ಲೆಂಡ್‌ನ ಸ್ಟುವರ್ಟ್ ಬ್ರಾಡ್ ಮತ್ತು 1947ರ ಟೂರ್ನಿಯಲ್ಲಿ ಆಸ್ಟ್ರೇಲಿಯಾದ ಎರ್ನಿ ತೊಷ್ಯಾಕ್ ಅವರು ಮಾಡಿದ್ದ ದಾಖಲೆಯನ್ನು ಸ್ಕಾಟ್ ಸರಿಗಟ್ಟಿದರು.

‘ನನ್ನ ಹಿಂದೆ ಯಾವಾಗಲೂ ಇಷ್ಟೊಂದು ಜನಸಮೂಹ ಇರಲಿಲ್ಲ. ವಿಕೆಟ್ ಪಡೆಯಲು ಆರಂಭಿಸಿದಾಗ ಗ್ಯಾಲರಿಯಲ್ಲಿದ್ದ ಜನರ ಚಪ್ಪಾಳೆ, ಹುರಿದುಂಬಿಸುವ ನುಡಿಗಳಿಂದ ಪುಳಕಿತನಾದೆ. ಫೈನ್ ಲೆಗ್‌ನಲ್ಲಿ ಫೀಲ್ಡಿಂಗ್ ಮಾಡುವಾಗಲೂ ಜನರ ಹುರಿದುಂಬಿಸುವಿಕೆ ಮುದ ನೀಡಿತು. ಅದೇ ಶಕ್ತಿಯಾಯಿತು’ ಎಂದು ಪಂದ್ಯದ ನಂತರ ಸ್ಕಾಟ್ ಹೇಳಿದರು.

ಆಸ್ಟ್ರೇಲಿಯಾ ತಂಡದಲ್ಲಿ ಆಡಿದ ಎರಡನೇ ಮೂಲನಿವಾಸಿ ಸ್ಕಾಟ್ ಆಗಿದ್ದಾರೆ. 2006ರಲ್ಲಿ ಜೇಸನ್ ಗಿಲೆಸ್ಪಿ ದೇಶದ ತಂಡಕ್ಕೆ ಆಡಿದ್ದ ಸ್ಥಳೀಯ ನಿವಾಸಿಯಾಗಿದ್ದರು. ಸ್ಕಾಟ್ ಗುಲಿಡ್ಜನ್ ಬುಡಕಟ್ಟು ಮೂಲದವರಾಗಿದ್ದಾರೆ.

**ಸಂಕ್ಷಿಪ್ತ ಸ್ಕೋರು:** ಇಂಗ್ಲೆಂಡ್ ಮೊದಲ ಇನಿಂಗ್ಸ್: 65.1 ಓವರ್‌ಗಳಲ್ಲಿ 185; ಆಸ್ಟ್ರೇಲಿಯಾ ಮೊದಲ ಇನಿಂಗ್ಸ್: 87.5 ಓವರ್‌ಗಳಲ್ಲಿ 267: ಇಂಗ್ಲೆಂಡ್ ಎರಡನೇ ಇನಿಂಗ್ಸ್: 27.4 ಓವರ್‌ಗಳಲ್ಲಿ 68 (ಜೊ ರೂಟ್ 28, ಬೆನ್ ಸ್ಟೋಕ್ಸ್ 11; ಮಿಚೆಲ್ ಸ್ಟಾರ್ಕ್ 29ಕ್ಕೆ 3, ಸ್ಕಾಟ್ ಬೋಲ್ಯಾಂಡ್ 7ಕ್ಕೆ 6). **ಫಲಿತಾಂಶ:** ಆಸ್ಟ್ರೇಲಿಯಾ ತಂಡಕ್ಕೆ ಇನಿಂಗ್ಸ್ ಮತ್ತು 14 ರನ್‌ಗಳ ಜಯ.

# ಆಸ್ಟ್ರೇಲಿಯಾ ಓಪನ್‌ಗೆ ಡಾಮ್ನಿಕ್ ಥೀಮ್ ಅಲಭ್ಯ

**ಮೆಲ್ಬರ್ನ್ (ಎಪಿ):** ಕಳೆದ ಬಾರಿ ರನ್ನರ್ ಅಪ್ ಆಗಿದ್ದ ಡಾಮ್ನಿಕ್ ಥೀಮ್ ಅವರು ಮಣಿಕಟ್ಟಿನ ಗಾಯದ ಕಾರಣ ಈ ವರ್ಷದ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಕಣಕ್ಕಿಳಿಯುತ್ತಿಲ್ಲ.

ಆಸ್ಟ್ರಿಯದ 28 ವರ್ಷದ ಆಟಗಾರ ಮಲ್ಲೊರ್ಕಾದಲ್ಲಿ ಜೂನ್‌ನಲ್ಲಿ ಟೂರ್ನಿ-ಯೊಂದರಲ್ಲಿ ಭಾಗವಹಿಸಿದ್ದರು. ಆ ಬಳಿಕ ಅವರು ಯಾವುದೇ ಟೂರ್ನಿಯಲ್ಲಿ ಆಡಿಲ್ಲ.

**ಮೆಲ್ಬರ್ನ್‌ಗೆ ಒಸಾಕಾ:** ಜಪಾನ್ ತಾರೆ ನವೊಮಿ ಒಸಾಕಾ ಅವರು ಮಂಗಳವಾರ ಮೆಲ್ಬರ್ನ್‌ಗೆ ಬಂದಿಳಿದಿದ್ದು, ವೃತ್ತಿಪರ ಟೆನಿಸ್‌ಗೆ ಮರಳುವ ಸೂಚನೆ ನೀಡಿದ್ದಾರೆ. ಆಸ್ಟ್ರೇಲಿಯಾ ಓಪನ್ ಹಾಲಿ ಮಹಿಳಾ ಸಿಂಗಲ್ಸ್ ಚಾಂಪಿಯನ್ ಆಗಿರುವ ಒಸಾಕಾ, ಅಮೆರಿಕ ಓಪನ್ ಟೂರ್ನಿಯ ಬಳಿಕ ಮಾನಸಿಕ ಆರೋಗ್ಯದ ಕಾರಣ ನೀಡಿ ಅನಿರ್ದಿಷ್ಟಾವಧಿ ವಿರಾಮ ತೆಗೆದುಕೊಂಡಿದ್ದರು.

ನವೊಮಿ ಒಸಾಕ

ನೊವಾಕ್ ಜೊಕೊವಿಚ್ ಅವರೂ ಟೂರ್ನಿಯಲ್ಲಿ ಕಣಕ್ಕಿಳಿಯುವ ಬಗ್ಗೆ ಸಂದೇಹವಿದೆ. ಕೋವಿಡ್ ಲಸಿಕೆ ತೆಗೆ-ದುಕೊಂಡಿರುವುದರ ಬಗ್ಗೆ ಅವರು ಇನ್ನೂ ಸಂಪೂರ್ಣ ಮಾಹಿತಿ ನೀಡಿಲ್ಲ

## ಅಂಧರ ಕ್ರಿಕೆಟ್: ಭಾರತಕ್ಕೆ ಸರಣಿ

**ಭೋಪಾಲ್:** ಡಿ. ವೆಂಕಟೇಶ್ವರ ರಾವ್ (50, 33 ಎಸೆತ, 4X10) ಗಳಿಸಿದ ಅರ್ಧಶತಕದ ನೆರವಿನಿಂದ ಭಾರತ ಅಂಧರ ಕ್ರಿಕೆಟ್ ತಂಡವು ಎರಡನೇ ಏಕದಿನ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ನಾಲ್ಕು ವಿಕೆಟ್‌ಗಳಿಂದ ಮಣಿಸಿತು. ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಸಾಧಿಸಿತು.

ಇಲ್ಲಿಯ ಫೇಥ್ ಕ್ರೀಡಾಂ-ಗಣದಲ್ಲಿ ನಡೆದ ಪಂದ್ಯವನ್ನು ಮಳೆಯ ಕಾರಣ 25 ಓವರ್‌ಗಳಿಗೆ ಸಿಮೀತಗೊಳಿಸಲಾಗಿತ್ತು. ಮೊದಲು ಬ್ಯಾಟ್ ಮಾಡಿದ ಬಾಂಗ್ಲಾದೇಶ ಮೊಹಮ್ಮದ್ ಅಸ್ಮತ್ ಅಲಿ (44) ಹಾಗೂ ಮೊಹಮ್ಮದ್ ಅಶಿಕುರ್ ರಹಮಾನ್ (31) ಅವರ ಉತ್ತಮ ಬ್ಯಾಟಿಂಗ್ ಬಲದಿಂದ ಏಳು ವಿಕೆಟ್‌ಗೆ 196 ರನ್ ಗಳಿಸಿತು.

ಗುರಿ ಬೆನ್ನತ್ತಿದ ಭಾರತ ಅಗ್ರ ಕ್ರಮಾಂಕದ ಆಟಗಾರರನ್ನು ಅಲ್ಪಮೊತ್ತಕ್ಕೆ ಕಳೆದುಕೊಂಡಿತು. ವೆಂಕಟೇಶ್ವರ ಮತ್ತು ರೋಹಿತ್ ಶರ್ಮಾ (36) ತಂಡಕ್ಕೆ ಗೆಲುವು ದೊರಕಿಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಭಾರತ 19.2 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು ಜಯದ ಗುರಿ ತಲುಪಿತು.

ಮೂರನೇ ಹಾಗೂ ಅಂತಿಮ ಪಂದ್ಯವು ಬುಧವಾರ ನಡೆಯಲಿದೆ.

# ವರ್ಷದ ಕ್ರಿಕೆಟಿಗ: ಅಶ್ವಿನ್ ನಾಮನಿರ್ದೇಶನ

**ದುಬೈ (ಪಿಟಿಐ):** ಭಾರತ ಕ್ರಿಕೆಟ್ ತಂಡದ ಅನುಭವಿ ಆಫ್‌ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅವರನ್ನು ಐಸಿಸಿ ಟೆಸ್ಟ್ ಕ್ರಿಕೆಟಿಗ ವಾರ್ಷಿಕ ಪ್ರಶಸ್ತಿಗೆ ನಾಮನಿರ್ದೇಶನ ಮಾಡಲಾಗಿದೆ.

ಈ ಪ್ರಶಸ್ತಿಗಾಗಿ ಒಟ್ಟು ನಾಲ್ವರ ಹೆಸರುಗಳನ್ನು ಪಟ್ಟಿ ಮಾಡಲಾಗಿದ್ದು ಅದರಲ್ಲಿ 35 ವರ್ಷದ ಅಶ್ವಿನ್ ಕೂಡ ಒಬ್ಬರಾಗಿದ್ದಾರೆ.

ಈ ವರ್ಷದಲ್ಲಿ ಅವರು ಎಂಟು ಟೆಸ್ಟ್‌ಗಳಲ್ಲಿ 52 ವಿಕೆಟ್‌ಗಳನ್ನು 16.23ರ ಸರಾಸರಿಯಲ್ಲಿ ಗಳಿಸಿದ್ದಾರೆ. ಅಲ್ಲದೇ 337 ರನ್‌ಗಳನ್ನೂ ಗಳಿಸಿದ್ದಾರೆ. ಅದರಲ್ಲಿ ಒಂದು ಶತಕವೂ ಸೇರಿದೆ.

ಈ ಪ್ರಶಸ್ತಿ ಪೈಪೋಟಿಯಲ್ಲಿ ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್, ನ್ಯೂಜಿಲೆಂಡ್ ವೇಗಿ ಕೈಲ್ ಜೆಮಿಸನ್ ಮತ್ತು ಶ್ರೀಲಂಕಾದ ಆರಂಭಿಕ ಬ್ಯಾಟರ್ ದಿಮುತ ಕರುಣಾರತ್ನೆ ಅವರೂ ಇದ್ದಾರೆ. ಜನವರಿ 24ರಂದು ವಿಜೇತರ ಹೆಸರನ್ನು ಘೋಷಿಸಲಾಗುವುದು.

ಆರ್. ಅಶ್ವಿನ್

‘ಭಾರತದ ಪಂದ್ಯವಿಜಯೀಗಳಲ್ಲಿ ಒಬ್ಬರಾಗಿರುವ ಆರ್. ಅಶ್ವಿನ್ 2021ರಲ್ಲಿ ಅಮೋಘವಾಗಿ ಆಡಿದ್ದಾರೆ. ಚಾಣಾಕ್ಷ ಸ್ಪಿನ್ ಬೌಲರ್ ಆಗಿರುವ ಅಶ್ವಿನ್ ಬ್ಯಾಟಿಂಗ್‌ನಲ್ಲಿಯೂ ತಂಡದ ಗೆಲುವಿಗೆ ಉಪಯುಕ್ತ ಕಾಣಿಕೆ ನೀಡಿರುವುದು ಗಮನಾರ್ಹ’ ಎಂದು ಐಸಿಸಿ ಪ್ರಕಟಣೆ-ಯಲ್ಲಿ ತಿಳಿಸಿದೆ. ವರ್ಷದ ಆರಂಭದಲ್ಲಿ ಅಶ್ವಿನ್ ಸಿಡ್ನಿ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ಎದುರು 128 ಎಸೆತಗಳಲ್ಲಿ 29 ರನ್ ಗಳಿಸಿದ್ದರು. ಹನುಮವಿಹಾರಿಯೊಂದಿಗೆ ಅವರ ತಾಳ್ಮೆಯ ಜೊತೆಯಾಟದಿಂದಾಗಿ ಆ ಪಂದ್ಯದಲ್ಲಿ ಭಾರತವು ಸೋಲು ತಪ್ಪಿಸಿಕೊಂಡಿತ್ತು. ಐತಿಹಾಸಿಕ ಡ್ರಾ ದಾಖಲಾಗಿತ್ತು.

ಭಾರತದಲ್ಲಿ ನಡೆದಿದ್ದ ಇಂಗ್ಲೆಂಡ್ ಎದುರಿನ ಸರಣಿಯಲ್ಲಿ ನಾಲ್ಕು ಪಂದ್ಯಗಳಲ್ಲಿ ಅವರು ಒಟ್ಟು 32 ವಿಕೆಟ್ ಗಳಿಸಿದ್ದರು. 189 ರನ್‌ಗಳನ್ನೂ ಗಳಿಸಿದ್ದರು.

# ಕ್ರಿಕೆಟ್: ಸೆಮಿಫೈನಲ್‌ನಲ್ಲಿ ಭಾರತಕ್ಕೆ ಬಾಂಗ್ಲಾ ಸವಾಲು

**ಶಾರ್ಜಾ (ಪಿಟಿಐ):** ಇಬ್ಬರು ಅಧಿಕಾರಿಗಳಿಗೆ ಕೋವಿಡ್–19 ದೃಢಪಟ್ಟ ಹಿನ್ನೆಲೆಯಲ್ಲಿ 19 ವರ್ಷದೊಳಗಿನ-ವರ ಏಷ್ಯಾಕಪ್ ಕ್ರಿಕೆಟ್ ಟೂರ್ನಿಯಲ್ಲಿ ಬಾಂಗ್ಲಾದೇಶ–ಶ್ರೀಲಂಕಾ ನಡುವಣ ಪಂದ್ಯವು ರದ್ದಾಗಿದೆ.

ಗುಂಪು ಹಂತದ ಕೊನೆಯ ಪಂದ್ಯವು ರದ್ದುಗೊಂಡಿದ್ದು, ಭಾರತ ತಂಡವು ಸೆಮಿಫೈನಲ್‌ನಲ್ಲಿ ಗುರುವಾರ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ.

‘ಇಬ್ಬರು ಅಧಿಕಾರಿಗಳಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಅಧಿಕಾರಿಗಳು ಆರೋಗ್ಯವಾಗಿದ್ದು, ಚಿಕಿತ್ಸೆ ಪಡೆಯುತ್ತಿ-ದ್ದಾರೆ’ ಎಂದು ಏಷ್ಯನ್ ಕ್ರಿಕೆಟ್ ಕೌನ್ಸಿಲ್ ತಿಳಿಸಿದೆ.

ಬಿ ಗುಂಪಿನ ಈ ಪಂದ್ಯದಲ್ಲಿ 32.2 ಓವರ್‌ಗಳ ಆಟ ನಡೆದಿತ್ತು. ಮೊದಲು ಬ್ಯಾಟ್ ಮಾಡಿದ್ದ ಬಾಂಗ್ಲಾ ಪಂದ್ಯ 4 ವಿಕೆಟ್‌ಗೆ 130 ರನ್ ಗಳಿಸಿತ್ತು.

## ಭಾರತೀಯಾರ್ ವಿ.ವಿಗೆ ಜಯ

**ಬೆಂಗಳೂರು:** ಭಾರತೀಯಾರ್ ವಿಶ್ವ-ವಿದ್ಯಾಲಯ ತಂಡದವರು ಅಖಿಲ ಭಾರತ ಆಹ್ವಾನಿತ ವಾಜಪೇಯಿ ಕಪ್ ವಾಲಿಬಾಲ್ ಟೂರ್ನಿಯ ಮಹಿಳೆಯರ ವಿಭಾಗದಲ್ಲಿ ಜಯ ಗಳಿಸಿದರು.

ಭಾರತೀಯಾರ್ ವಿ.ವಿ ತಂಡವು 25–16, 25–21, 25–19ರಿಂದ ಮಂಗಳೂರು ವಿ.ವಿ ಎದುರು ಗೆದ್ದಿತು.

ಪುರುಷರ ವಿಭಾಗದಲ್ಲಿ ಮಹಾತ್ಮಾ ಗಾಂಧಿ ವಿ.ವಿ ತಂಡವು 25–23, 25–14, 25–16ರಿಂದ ಬೆಂಗಳೂರು ವಿ.ವಿ ತಂಡವನ್ನು ಸೋಲಿಸಿತು.

ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ: ವಿದ್ಯಾಧರ್ ಪಾಟೀಲ, ಕಾರ್ಯಪ್ಪಗೆ ಸ್ಥಾನ

# ಕರ್ನಾಟಕ ತಂಡದಲ್ಲಿ ಹೊಸ ಪ್ರತಿಭೆಗಳು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜನವರಿಯಲ್ಲಿ ಆರಂ-ಭವಾಗಲಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಕರ್ನಾಟಕ ತಂಡದಲ್ಲಿ ಹೊಸ ಪ್ರತಿಭೆಗಳಿಗೆ ಅವಕಾಶ ನೀಡಲಾಗಿದೆ.

ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಮಿಂಚಿದ್ದ ಅಭಿನವ್ ಮನೋಹರ್, ಬೌಲರ್ ವಿದ್ಯಾಧರ್ ಪಾಟೀಲ, ಸ್ಪಿನ್ನರ್ ಕೆ.ಸಿ. ಕಾರ್ಯಪ್ಪ, ಕೆ.ವಿ. ಅನೀಶ್, ಅನೀಶ್ವರ್ ಗೌತಮ್ ಅವರಿಗೆ ತಂಡದಲ್ಲಿ ಸ್ಥಾನ ನೀಡಲಾಗಿದೆ. ಭಾರತ ಟೆಸ್ಟ್ ತಂಡದಲ್ಲಿ ಆಡುತ್ತಿರುವ ಕೆ.ಎಲ್. ರಾಹುಲ್ ಮತ್ತು ಮಯಂಕ್ ಅಗರವಾಲ್ ಅವರನ್ನೂ ಆಯ್ಕೆ ಮಾಡಲಾಗಿದೆ. ಇದೇ 13ರಿಂದ ರಣಜಿ ಟೂರ್ನಿಯು ಆರಂಭವಾಗಲಿದೆ. ದಕ್ಷಿಣ ಆಫ್ರಿಕಾದಲ್ಲಿ ನಡೆಯುತ್ತಿರುವ ಸರಣಿಯಲ್ಲಿ ಆಡುತ್ತಿರುವ ರಾಹುಲ್ ಮತ್ತು ಮಯಂಕ್ ರಣಜಿ ಟೂರ್ನಿಗೆ ಲಭ್ಯರಾ-ಗುವುದಿಲ್ಲ. ದೇಶಿ ಟಿ20 ಮತ್ತು ಏಕದಿನ ಟೂರ್ನಿಗಳಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಿದ್ದ ಮನೀಷ್ ಪಾಂಡೆ ರಣಜಿ ಟೂರ್ನಿಯಲ್ಲಿಯೂ ನಾಯಕರಾಗಿ ಮುಂದುವರಿಯುವ ಸಾಧ್ಯತೆ ಇದೆ.

ಶ್ರೇಯಸ್ ಗೋಪಾಲ್, ಮನೀಷ್ ಪಾಂಡೆ ಮತ್ತು ಆರ್. ಸಮರ್ಥ್

**ತಂಡ:** ಕೆ.ಎಲ್. ರಾಹುಲ್, ಮಯಂಕ್ ಅಗರವಾಲ್, ಮನೀಷ್ ಪಾಂಡೆ, ಕರುಣ್ ನಾಯರ್, ದೇವದತ್ತ ಪಡಿಕ್ಕಲ್, ಆರ್. ಸಮರ್ಥ್, ಡಿ. ನಿಶ್ಚಲ್, ಅಭಿನವ್ ಮನೋಹರ್, ಕೆ.ವಿ. ಸಿದ್ಧಾರ್ಥ್, ಕೆ.ವಿ. ಅನೀಶ್, ಅನೀಶ್ವರ್ ಗೌತಮ್, ವಿಶಾಲ್ ಒನತ್, ಕೃಷ್ಣಪ್ಪ ಗೌತಮ್, ಶ್ರೇಯಸ್ ಗೋಪಾಲ್, ಜೆ. ಸುಚಿತ್, ಪ್ರವೀಣ ದುಬೆ, ಕೆ.ಸಿ. ಕಾರ್ಯಪ್ಪ, ರಿತೇಶ್ ಭಟ್ಕಳ್, ಶುಭಾಂಗ್ ಹೆಗಡೆ, ಪ್ರಸಿದ್ಧ ಎಂ ಕೃಷ್ಣ, ರೋನಿತ್ ಮೋರೆ, ವೈಶಾಖ ವಿಜಯಕುಮಾರ್, ಎಂ. ವೆಂಕಟೇಶ್, ವಿದ್ಯಾಧರ್ ಪಾಟೀಲ, ಶರತ್ ಶ್ರೀನಿವಾಸ್, ಬಿ.ಆರ್. ಶರತ್, ಕೃತಿಕ್ ಕೃಷ್ಣ (ಮೂವರು ವಿಕೆಟ್ ಕೀಪರ್), ಚಿನ್ಮಯ್ ಎನ್ ಅಮ್ಮಣಗಿ.

ಯರೇ ಕೆ ಗೌಡ (ಕೋಚ್), ಎಸ್. ಅರವಿಂದ್ (ಬೌಲಿಂಗ್ ಕೋಚ್), ದೀಪಕ್ ಚೌಗುಲೆ (ಫೀಲ್ಡಿಂಗ್ ಕೋಚ್), ಜಾಬ ಪ್ರಭು (ಫಿಸಿಯೊ), ಎ.ಟಿ. ರಾಜಮಣಿ ಪ್ರಭು (ಸ್ಟ್ರೆಂಥ್–ಕಂಡಿಷನಿಂಗ್ ಕೋಚ್), ಸೋಮಸುಂದರ್ (ಮಸಾಜ್ ತಜ್ಞ), ಅನುತೋಷ್ ಪೋಳ್ (ಮ್ಯಾನೇಜರ್).